ಭಾನುವಾರ, ಮೇ 21, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಾದಕ ಬೆಡಗಿ
ಮುಂಬೈನಲ್ಲಿ ನಡೆದ
ಫ್ಲೀ-ಫೈವ್ ಐದನೇ
ವಾರ್ಷಿಕೋತ್ಸವದಲ್ಲಿ
ಬಾಲಿವುಡ್ ನಟಿ
ಸನ್ನಿ ಲಿಯೋನ್
ಪಾಲ್ಗೊಂಡಿದ್ದರು

75 ಸ್ವಾತಂತ್ರ್ಯದ ಅಮೃತಮಹೋತ್ಸವ

ಕರ್ನಾಟಕ ಸರ್ಕಾರ

G20 ಭಾರತ 2023 INDIA

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಗೃಹಲಕ್ಷ್ಮಿ
ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು
₹2000

ಗೃಹ ಜ್ಯೋತಿ
ನಿಮ್ಮ ಮನೆಗೆ 200
ಯೂನಿಟ್ ವಿದ್ಯುತ್ ಪ್ರತಿ ತಿಂಗಳು ಉಚಿತ

ಅನ್ನಭಾಗ್ಯ
10kg
ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಯುವ ನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ಉಚಿತ ಪ್ರಯಾಣ
ನಮ್ಮ ಪ್ರಮಾಣ
ಮಹಿಳೆಯರಿಗೆ ಬಸ್ ಸಂಚಾರ ಉಚಿತ

ಸನ್ಮಾನ್ಯ ಮುಖ್ಯಮಂತ್ರಿ **ಶ್ರೀ ಸಿದ್ದರಾಮಯ್ಯ** ಅವರು ಅಧಿಕಾರ ಸ್ವೀಕರಿಸಿ ಮೊದಲ ದಿನವೇ ಘೋಷಿಸಿದ್ದ **'ಪಂಚ'** ಖಾತ್ರಿ ಯೋಜನೆಗಳನ್ನು ಶೀಘ್ರವೇ ಜಾರಿಗೆ ತರುವುದಾಗಿ ಪ್ರಕಟಿಸಿದ್ದಾರೆ. ಈ ಮೂಲಕ ಮತ್ತೊಮ್ಮೆ ತಮ್ಮದು **'ನುಡಿದಂತೆ ನಡೆವ'** ಬಹುಮತದ ಜನಪರ ಸರ್ಕಾರ ಎನ್ನುವುದನ್ನು ದೃಢ ಪಡಿಸಿದ್ದಾರೆ. ನಾಡಿನ ಸರ್ವ ಜನರ ಶ್ರೇಯೋಭಿವೃದ್ಧಿಗಾಗಿ ರೂಪಿಸಿದ್ದ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿರುವ ಸ್ಥಿರ ಸರ್ಕಾರ ಎಂಬ ಹೆಮ್ಮೆಗೆ ಪಾತ್ರವಾಗಿದೆ.

5 ನುಡಿದಂತೆ ನಡೆದಿದ್ದೇವೆ
ಈಡೇರಿದ ಐದು ಭರವಸೆ

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಕರ್ನಾಟಕ ವಾರ್ತೆ
karnatakainformation.gov.in

1. ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮತ್ತು ಸಚಿವರ ಪ್ರಮಾಣವಚನ ಸಮಾರಂಭದಲ್ಲಿ ಭಾಗವಹಿಸಿದ್ದ ಕಾಂಗ್ರೆಸ್ ಪಕ್ಷದ ಅಭಿಮಾನಿಗಳು 2. ಸಮಾರಂಭದಲ್ಲಿ ಭಾಗವಹಿಸಿದ್ದ ಅಭಿಮಾನಿಗಳು ಸಿದ್ದರಾಮಯ್ಯ ಅವರ ಮುಖವಾಡ ಧರಿಸಿ ಸಂಭ್ರಮಿಸಿದರು
–ಪ್ರಜಾವಾಣಿ ಚಿತ್ರಗಳು/ಕೃಷ್ಣಕುಮಾರ್ ಪಿ.ಎಸ್

ಸುಡುವ ಬಿಸಿಲಿನಲ್ಲೂ ಕಂಠೀರವ ಕ್ರೀಡಾಂಗಣದಲ್ಲಿ ಭಾರೀ ಜನಸ್ತೋಮ • ಪಕ್ಷದ ಧ್ವಜ ಹಿಡಿದು ಕುಣಿದ ಅಭಿಮಾನಿಗಳು

ಕಾರ್ಯಕರ್ತರ ಹಬ್ಬ: ಮುಗಿಲೇರಿದ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಿದ್ದರಾಮಯ್ಯ ಎಂಬ ನಾನು...’ ಎಂದು ಸಿದ್ದರಾಮಯ್ಯ ಪ್ರಮಾಣವಚನ ಆರಂಭಿಸುತ್ತಿದ್ದಂತೆ ವೈಭೋವೋಪೇತವಾಗಿ ಸಿಂಗಾರಗೊಂಡಿದ್ದ ಕಂಠೀರವ ಕ್ರೀಡಾಂಗಣದಲ್ಲಿ ಸೇರಿದ್ದ ಬೃಹತ್ ಜನಸ್ತೋಮದ ಸಂಭ್ರಮ ಮುಗಿಲು ಮುಟ್ಟಿತ್ತು. ಇಡೀ ಪ್ರದೇಶದ ಸುತ್ತಮುತ್ತ ಹಬ್ಬದ ವಾತಾವರಣವೇ ಮನೆ ಮಾಡಿತು.

ಪಕ್ಷ ಅಧಿಕಾರದ ಗದ್ದುಗೆ ಏರುವ ಸಂಭ್ರಮದ ಕ್ಷಣವನ್ನು ಕಣ್ತುಂಬಿಕೊಳ್ಳಲು ಭಾರೀ ಸಂಖ್ಯೆಯಲ್ಲಿ ಕ್ರೀಡಾಂಗಣದ ಒಳಗೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರು ಕುಣಿದು ಕುಪ್ಪಳಿಸಿದರು. ಪಕ್ಷದ ಧ್ವಜ ಹಿಡಿದು ಕುಣಿದಾಡಿದರು. ಕೇಕೆ, ಶಿಳ್ಳೆ, ಕರತಾಡನ ಆಕಾಶದೆತ್ತರಕ್ಕೆ ಏರಿತು.

ವಿಧಾನಸೌಧದ ಮೆಟ್ಟಿಲುಗಳ ಮೇಲೆ ಅಥವಾ ರಾಜಭವನದಲ್ಲಿ ಪ್ರಮಾಣವಚನ ಕಾರ್ಯಕ್ರಮ ಆಯೋಜಿಸಿದರೆ ಜನಸಂದಣಿ ಸೇರಲು ಅವಕಾಶವಾಗುವುದಿಲ್ಲ ಎಂಬ ಕಾರಣಕ್ಕೆ ಕಂಠೀರವ ಕ್ರೀಡಾಂಗಣವನ್ನು ಆಯ್ಕೆ ಮಾಡಿಕೊಳ್ಳಲಾಗಿತ್ತು. ಅಲ್ಲದೆ, ಜನಸಂದಣಿಯನ್ನು ನಿಯಂತ್ರಿಸಲು ಸಾಧ್ಯವಾಗುವಂತೆ ಎಲ್ಲ ತಯಾರಿಗಳನ್ನು, ಬ್ಯಾರಿಕೇಡ್‌ಗಳನ್ನು ಅಳವಡಿಸಿ ವ್ಯವಸ್ಥಿತವಾದ ಪೊಲೀಸ್ ಭದ್ರತಾ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಭದ್ರತೆ ಮತ್ತು ಶಿಷ್ಟಾಚಾರದಲ್ಲಿ ಯಾವುದೇ ಲೋಪ ಆಗದಂತೆ ಎಚ್ಚರಿಕೆ ವಹಿಸಲಾಗಿತ್ತು. ಹೀಗಾಗಿ, ಕ್ರೀಡಾಂಗಣದ ದೂರದಲ್ಲೇ ವಾಹನಗಳ ನಿಲುಗಡೆ ಮಾಡಿ ಸುಮಾರು ದೂರ ನಡೆದು ಕ್ರೀಡಾಂಗಣಕ್ಕೆ ಕಾರ್ಯಕರ್ತರು ತಲುಪಿದರು.

ರಾಜ್ಯ ವಿವಿಧ ಭಾಗಗಳಿಂದ ನಗರಕ್ಕೆ ಬಂದಿದ್ದ ಕಾಂಗ್ರೆಸ್ ಕಾರ್ಯಕರ್ತರು, ಬೆಳಿಗ್ಗೆ 6 ಗಂಟೆಯಿಂದಲೇ ಕ್ರೀಡಾಂಗಣದತ್ತ ಹರಿದು ಬಂದಿದ್ದರು. ಆದರೆ, ಗಣ್ಯರಿಗೆ ಮೀಸಲಿಟ್ಟಿದ್ದ ಪ್ರವೇಶದ್ವಾರದ ಮೂಲಕ ನುಗ್ಗಲು ಯತ್ನಿಸಿದ ಕಾರ್ಯಕರ್ತರನ್ನು ತಡೆಯಲು ಪೊಲೀಸರು ಲಘು ಲಾಠಿ ಪ್ರಯೋಗ ಮಾಡಬೇಕಾಯಿತು. ಪ್ರಮಾಣವಚನ ಸಮಾರಂಭ ಆರಂಭವಾಗುವ ವೇಳೆಗೆ ಕ್ರೀಡಾಂಗಣದ ಒಳಗೆ ಸುಮಾರು 50 ಸಾವಿರ ಜನರು ಸೇರಿದ್ದರೆ, ಹೊರಭಾಗದಲ್ಲಿ 50 ಸಾವಿರಕ್ಕೂ ಹೆಚ್ಚು ಜನರು ಜಮಾಯಿಸಿದ್ದರು.

ಮಧ್ಯಾಹ್ನ 12.30ಕ್ಕೆ ಪ್ರಮಾಣ ವಚನ ಕಾರ್ಯಕ್ರಮ ಆರಂಭವಾಯಿತು. ಅದಾಗಲೇ ಇಡೀ ಕ್ರೀಡಾಂಗಣ ಕಾದ ಬಾಣಲೆಯಂತಾಗಿತ್ತು. ಆದರೆ, ಸುಡುವ ಬಿಸಿಲನ್ನೂ ಲೆಕ್ಕಿಸದೆ ಕಾರ್ಯಕರ್ತರು, ತಮ್ಮ ನಾಯಕರ ಪರ ಘೋಷಣೆಗಳನ್ನು ಕೂಗಿದರು, ಜೈಕಾರ ಹಾಕಿದರು. ಪ್ರಮಾಣವಚನ ಸ್ವೀಕರಿಸಲು ನಾಯಕರು ವೇದಿಕೆಗೆ ಬರುತ್ತಿದ್ದಂತೆ ಬೆಂಬಲಿಗರು, ಅಭಿಮಾನಿಗಳು ಕೂಗಾಡಿದರು. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಸೇರಿದಂತೆ ನಾಯಕರ ಭಾವಚಿತ್ರವಿರುವ ಬಾವುಟಗಳನ್ನು ಹಿಡಿದು ಜಯಘೋಷ ಮೊಳಗಿಸಿದರು. ಕೆಲವರು ದೇಹದ ವಿವಿಧ ಭಾಗಗಳಲ್ಲಿ ತಮ್ಮ ನಾಯಕರ ಬಣ್ಣ ಬಣ್ಣ ಚಿತ್ತಾರಗಳನ್ನು ಬಿಡಿಸಿದ್ದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಗರಿ ಗರಿ ರೇಷ್ಮೆ ಅಂಗಿ, ಪಂಚೆ ತೊಟ್ಟದ್ದರು. ಅವರು ಕ್ರೀಡಾಂಗಣದ ಒಳಗೆ ಬರುತ್ತಿದ್ದಂತೆ ಸೇರಿದ್ದ ಕಾರ್ಯಕರ್ತರು ಹರ್ಷೋದ್ಗಾರದ ಸ್ವಾಗತ ನೀಡಿದರು. ಶಿವಕುಮಾರ್ ಅವರು ಕೈ ಬೀಸಿದಾಗ, ಕಾರ್ಯಕರ್ತರ ಹರ್ಷ ಮುಗಿಲು ಮುಟ್ಟಿತ್ತು. ನಂತರ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ ಅವರು ವೇದಿಕೆಗೆ ಬಂದಾಗಲೂ ಅದೇ ಕರತಾಡನ ಕೇಳಿಸಿತು.

ನಟ ಶಿವರಾಜ್ ಕುಮಾರ್, ಗೀತಾ ಶಿವರಾಜ್ ಕುಮಾರ್, ಸಂಗೀತ ನಿರ್ದೇಶಕ ಸಾಧುಕೋಕಿಲ, ನಟಿ ರಮ್ಯಾ, ನಟ ದುನಿಯಾ ವಿಜಯ್, ಸಿನಿಮಾ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರೂ ಕಾರ್ಯಕ್ರಮಕ್ಕೆ ಆಕರ್ಷಣೆಯಾದರು. ಸಿದ್ದರಾಮಯ್ಯ ಅವರ ಮೊಮ್ಮಗ ಧವನ್ ರಾಕೇಶ್ ಮತ್ತು ಮೊಮ್ಮಗಳು ಕೂಡಾ ಇದ್ದರು.

ಪ್ರಮಾಣ ವಚನ ಸಮಾರಂಭಕ್ಕೆ ಜನಸಾಗರ ಹರಿದು ಬಂದ ಕಾರಣ ಕಂಠೀರವ ಕ್ರೀಡಾಂಗಣದ ಸುತ್ತಮುತ್ತಲ ಭಾಗಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಭರ್ಜರಿ ವ್ಯಾಪಾರ ನಡೆಸಿದರು.

ವಿಧಾನಸೌಧದ ಮೆಟ್ಟಿಲುಗಳಿಗೆ ಡಿ.ಕೆ.ಶಿವಕುಮಾರ್ ನಮಸ್ಕಾರ

ಬೆಂಗಳೂರು: ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಡಿ.ಕೆ.ಶಿವಕುಮಾರ್ ಅವರು ವಿಧಾನಸೌಧದ ಮೆಟ್ಟಿಲುಗಳಿಗೆ ಶಿರಭಾಗಿ ನಮಸ್ಕರಿಸಿ ಒಳ ಪ್ರವೇಶಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಒಂದೇ ಕಾರಿನಲ್ಲೇ ಡಿ.ಕೆ.ಶಿವಕುಮಾರ್ ಮತ್ತು ಪ್ರಿಯಾಂಕ್ ಖರ್ಗೆ ವಿಧಾನಸೌಧಕ್ಕೆ ಬಂದರು.

ಪಶ್ಚಿಮ ದ್ವಾರದಿಂದ ಸಿದ್ದರಾಮಯ್ಯ ನೇರವಾಗಿ ಒಳ ಹೋದರೆ, ಹಿಂದೆ ಇದ್ದ ಡಿ.ಕೆ.ಶಿವಕುಮಾರ್ ಅವರು ಮೆಟ್ಟಿಲುಗಳಿಗೆ ಶಿರಭಾಗಿ ನಮಸ್ಕಾರ ಮಾಡಿ ಮಾಧ್ಯಮಗಳತ್ತ ಕೈಬೀಸಿ ಬಳಿಕ ವಿಧಾನಸೌಧ ಪ್ರವೇಶಿಸಿದರು. ನಮಸ್ಕಾರ ಮಾಡಿ ಡಿ.ಕೆ.ಶಿವಕುಮಾರ್ ಮೇಲೇಳುವ ತನಕ ಪ್ರಿಯಾಂಕ್ ಖರ್ಗೆ ನಿಂತು ನೋಡಿ ಬಳಿಕ ಜತೆಯಲ್ಲೇ ಹೆಜ್ಜೆ ಹಾಕಿದರು.

ಡಿ.ಕೆ.ಶಿವಕುಮಾರ್ ಅವರು ವಿಧಾನಸೌಧದ ಮೆಟ್ಟಿಲುಗಳಿಗೆ ಶಿರಭಾಗಿ ನಮಸ್ಕರಿಸಿದರು

ಸಮಾರಂಭದಲ್ಲಿ ಕಾಣದ ಅಚ್ಚುಕಟ್ಟು

ಪ್ರಮಾಣವಚನ ಸಮಾರಂಭದ ವೇದಿಕೆಯಲ್ಲಿಯೂ ನೂಕುನುಗ್ಗಲು ಕಾಣಿಸಿತು. ಸಾಮಾನ್ಯವಾಗಿ, ರಾಜ್ಯಪಾಲರು ಮತ್ತು ಪ್ರಮಾಣವಚನ ಸ್ವೀಕರಿಸುವವರು ಮಾತ್ರ ವೇದಿಕೆಯಲ್ಲಿರುತ್ತಾರೆ. ಆದರೆ, ಸಮಾರಂಭಕ್ಕೆ ವಿಶೇಷ ಆಹ್ವಾನಿತರಾಗಿ ಬಂದಿದ್ದ ವಿವಿಧ ರಾಷ್ಟ್ರೀಯ ಪಕ್ಷಗಳ ನಾಯಕರೂ ವೇದಿಕೆಯಲ್ಲಿ ಆಸೀನರಾಗಿದ್ದರು. ಅಲ್ಲದೆ, ಆರಂಭದಲ್ಲಿ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಪ್ರಮಾಣವಚನ ಸ್ವೀಕರಿಸುವ ವೇಳೆ ಗೊಂದಲ ಉಂಟಾಯಿತು. ರಾಜ್ಯಪಾಲರ ಬಲಭಾಗದಲ್ಲಿ ನಿಂತು ಪ್ರತಿಜ್ಞಾ ವಿಧಿ ಸ್ವೀಕರಿಸಬೇಕಿದ್ದ ಸಿದ್ದರಾಮಯ್ಯ, ಎಡಭಾಗದಲ್ಲಿ ನಿಂತು ಸ್ವೀಕರಿಸಿದರು. ತಪ್ಪಿನ ಅರಿವಾಗುತ್ತಿದ್ದಂತೆ ಸರಿಪಡಿಸಿಕೊಂಡ ಶಿಷ್ಟಾಚಾರ ವಿಭಾಗದ ಸಿಬ್ಬಂದಿ, ಉಪ ಮುಖ್ಯಮಂತ್ರಿ ಮತ್ತು ಸಚಿವರಿಗೆ ರಾಜ್ಯಪಾಲರ ಬಲಭಾಗದಲ್ಲಿ ನಿಂತು ಪ್ರಮಾಣ ವಚನ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಿದರು.

ದಕ್ಷಿಣದಲ್ಲಿನ ಈ ಬದಲಾವಣೆ ಎಲ್ಲೆಡೆ ಹರಡಲಿ: ಸ್ಟಾಲಿನ್

ಚೆನ್ನೈ (ಪಿಟಿಐ): ಕಾಂಗ್ರೆಸ್ ಪಕ್ಷವು ಕರ್ನಾಟಕದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದಿರುವುದು ದೇಶದಾದ್ಯಂತ ಬಿಜೆಪಿ ವಿರುದ್ಧ ಜನರಲ್ಲಿರುವ ಅಸಮಾಧಾನವನ್ನು ಪ್ರತಿಬಿಂಬಿಸುತ್ತದೆ. ದಕ್ಷಿಣದಲ್ಲಿ ಹೊಮ್ಮಿರುವ ಬದಲಾವಣೆಯ ಈ ಬೆಳಕು ದೇಶದೆಲ್ಲೆಡೆ ಹರಡಲಿ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಶನಿವಾರ ಹೇಳಿದ್ದಾರೆ.

ಕರ್ನಾಟಕ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ.ಶಿವಕುಮಾರ್ ಪ್ರಮಾಣ ಸ್ವೀಕರಿಸಿದ ಬೆನ್ನಲ್ಲೇ ಅವರು ಈ ಟ್ವೀಟ್ ಮಾಡಿದ್ದಾರೆ.

ದೇವರ ಹೆಸರಿನಲ್ಲಿ ಸಿದ್ದರಾಮಯ್ಯ, ಇಂಗ್ಲಿಷ್‌ನಲ್ಲಿ ಜಮೀರ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಎಂಟು ಸಚಿವರು ತಮ್ಮ ನಂಬಿಕೆಯನ್ನು ಪ್ರಮಾಣ ವಚನ ಸಂದರ್ಭದಲ್ಲಿ ತೋರಿಸಿದರು. ಒಂಬತ್ತು ಮಂದಿ ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಿದರೆ, ಜಮೀರ್ ಅಹಮದ್ ಖಾನ್ ಇಂಗ್ಲಿಷ್‌ನಲ್ಲಿ ಪ್ರಮಾಣ ವಚನ ವಾಚಿಸಿದರು. ಕೆ.ಎಚ್.ಮುನಿಯಪ್ಪ, ಕೆ.ಜೆ.ಜಾರ್ಜ್, ಪ್ರಿಯಾಂಕ್ ಖರ್ಗೆ, ಎಂ.ಬಿ. ಪಾಟೀಲ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಯಾರು	ಯಾರ ಹೆಸರಿನಲ್ಲಿ
ಸಿದ್ದರಾಮಯ್ಯ	ದೇವರು
ಡಿ.ಕೆ. ಶಿವಕುಮಾರ್	ಗಂಗಾಧರ ಅಜ್ಜ
ಜಿ. ಪರಮೇಶ್ವರ	ಸಂವಿಧಾನ
ಸತೀಶ ಜಾರಕಿಹೊಳಿ	ಬುದ್ಧ, ಬಸವ, ಅಂಬೇಡ್ಕರ್
ಜಮೀರ್ ಅಹಮದ್ ಖಾನ್	ಅಲ್ಲಾಹು ಮತ್ತು ಅಮ್ಮ
ರಾಮಲಿಂಗಾರೆಡ್ಡಿ	ಶ್ರದ್ಧಾಪೂರ್ವಕ

ಬಿಜೆಪಿಯಿಂದಲೇ ರಾಜ್ಯಕ್ಕೆ ಅನ್ಯಾಯ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯಿಂದ ರಾಜ್ಯಕ್ಕೆ ಆರ್ಥಿಕವಾಗಿ ಅನ್ಯಾಯವಾಗಿದೆ. 15ನೇ ಹಣಕಾಸು ಆಯೋಗದ ಅನುದಾನದ ಹಂಚಿಕೆಯಲ್ಲಿ ತಾರತಮ್ಯ ಮಾಡಿರುವುದರಿಂದ ವಾರ್ಷಿಕ ₹ 50 ಸಾವಿರ ಕೋಟಿ ಕೈತಪ್ಪುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಶನಿವಾರ ಮೊದಲ ಸಂಪುಟ ಸಭೆ ನಡೆಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘15ನೇ ಹಣಕಾಸು ಆಯೋಗ ಅನುದಾನದಲ್ಲಿ ತೆರಿಗೆ ಪಾಲು ಮತ್ತು ನೆರವು ಸೇರಿ ವರ್ಷಕ್ಕೆ ₹ 1 ಲಕ್ಷ ಕೋಟಿ ಕರ್ನಾಟಕಕ್ಕೆ ಬರಬೇಕಿತ್ತು. ಆದರೆ, ವರ್ಷಕ್ಕೆ ₹ 50,000 ಕೋಟಿ ಮಾತ್ರ ನಿಗದಿಪಡಿಸಲಾಗಿದೆ’ ಎಂದರು.

ವರ್ಷಕ್ಕೆ ₹ 5,495 ಕೋಟಿ ವಿಶೇಷ ಸಹಾಯಧನವನ್ನು ಕರ್ನಾಟಕಕ್ಕೆ ನೀಡುವಂತೆಯೂ ಆಯೋಗ ಮಧ್ಯಂತರ ವರದಿಯಲ್ಲಿ ಶಿಫಾರಸು ಮಾಡಿತ್ತು. ಅಂತಿಮ ವರದಿಯಲ್ಲಿ ಆ ಉಲ್ಲೇಖವೇ ಇರಲಿಲ್ಲ. ಈ ಅನ್ಯಾಯದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಗಮನಹರಿಸಲಿಲ್ಲ. ಮುಖ್ಯಮಂತ್ರಿಯಾಗಿದ್ದ ಬಸವರಾಜ ಬೊಮ್ಮಾಯಿ ಅವರೂ ರಾಜ್ಯದ ನ್ಯಾಯಯುತ ಪಾಲನ್ನು ಗಟ್ಟಿ ಧ್ವನಿಯಲ್ಲಿ ಕೇಳಲಿಲ್ಲ ಎಂದು ದೂರಿದರು.

‘ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಹಂಚಿಕೆಯಲ್ಲೂ ಅನ್ಯಾಯವಾಗಿದೆ. ಬೊಮ್ಮಾಯಿ ಸ್ವತಃ ಜಿಎಸ್‌ಟಿ ಮಂಡಳಿ ಸದಸ್ಯರಾಗಿದ್ದರು. ಅವರು ಈ ಬಗ್ಗೆ ತುಟಿ ಬಿಚ್ಚಲಿಲ್ಲ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರೂ ರಾಜ್ಯಕ್ಕೆ ನ್ಯಾಯ ದೊರಕಿಸಲು ಪ್ರಯತ್ನಿಸಲಿಲ್ಲ’ ಎಂದರು.

ರಾಜ್ಯಕ್ಕೆ ಬರಬೇಕಿದ್ದ ನ್ಯಾಯಯುತ ತೆರಿಗೆ ಪಾಲು ದೊರಕಿದ್ದರೆ ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಯಾವ ಸಮಸ್ಯೆಗಳೂ ಇರಲಿಲ್ಲ. ಜಿಎಸ್‌ಟಿ ಹೇರಿಕೆಯಿಂದಾಗಿ ಬಹುತೇಕ ಇಲಾಖೆಗಳಲ್ಲಿ ಹೊಸ ತೆರಿಗೆ ವಿಧಿಸಲು ಅವಕಾಶವಿಲ್ಲ. ರಾಜ್ಯಕ್ಕೆ ಅನ್ಯಾಯವಾಗಿರುವ ಕುರಿತು ಮೋದಿ ‘ಮನ್ ಕಿ ಬಾತ್’ನಲ್ಲೂ ಮಾತನಾಡಿಲ್ಲ. ಮೋದಿಯಿಂದ ರಾಜ್ಯಕ್ಕೆ ದೊಡ್ಡ ನಷ್ಟವಾಗಿದೆ ಎಂದು ವಾಗ್ದಾಳಿ ನಡೆಸಿದರು.

‘ಕೇಂದ್ರ ಸರ್ಕಾರ ನಮ್ಮ ರಾಜ್ಯಕ್ಕೆ ತನ್ನ ವರಮಾನವನ್ನು ಕೊಡುತ್ತಿಲ್ಲ. ರಾಜ್ಯದ ಜನರು ವರ್ಷಕ್ಕೆ ₹ 4 ಲಕ್ಷ ಕೋಟಿ ತೆರಿಗೆ ಕಟ್ಟುತ್ತೇವೆ. ಅದರ ನ್ಯಾಯಯುತ ಪಾಲನ್ನು ಕೊಡಬೇಕು. ಅದನ್ನೇ ನಾವು ಕೇಳುತ್ತೇವೆ’ ಎಂದರು.

‘ಸಾಲದಲ್ಲಿ ಮೋದಿ ದಾಖಲೆ’

‘ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಡಾ. ಮನಮೋಹನ್ ಸಿಂಗ್ ಅವರ ಅಧಿಕಾರದ ಅವಧಿಯ ಕೊನೆವರೆಗೆ ಕೇಂದ್ರ ಸರ್ಕಾರದ ಒಟ್ಟು ಸಾಲ ₹ 53.11 ಲಕ್ಷ ಕೋಟಿ ಇತ್ತು. ಈಗ ಅದು ₹ 155 ಲಕ್ಷ ಕೋಟಿಗೆ ಏರಿದೆ. ನರೇಂದ್ರ ಮೋದಿ ಅವಧಿಯಲ್ಲಿ ₹ 102 ಲಕ್ಷ ಕೋಟಿ ಸಾಲ ಮಾಡಿದ್ದಾರೆ’ ಎಂದೂ ಸಿದ್ದರಾಮಯ್ಯ ಹೇಳಿದರು.

ಕರ್ನಾಟಕದಲ್ಲೂ ಬಿಜೆಪಿ ಅವಧಿಯಲ್ಲಿ ಸಾಲದಲ್ಲಿ ದಾಖಲೆ ಸೃಷ್ಟಿಯಾಗಿದೆ. ಸ್ವಾತಂತ್ರ್ಯ ಬಂದಾಗಿನಿಂದ 2018ರ ಮಾರ್ಚ್‌ವರೆಗೂ ರಾಜ್ಯ ಸರ್ಕಾರದ ಒಟ್ಟು ಸಾಲ ₹ 2.42 ಲಕ್ಷ ಕೋಟಿ ಇತ್ತು. ಈಗ ಅದು ₹ 5.64 ಲಕ್ಷ ಕೋಟಿ ತಲುಪಿದೆ. ಐದು ವರ್ಷಗಳ ಅವಧಿಯಲ್ಲಿ ₹ 3.22 ಲಕ್ಷ ಕೋಟಿ ಸಾಲ ಮಾಡಲಾಗಿದೆ ಎಂದು ದೂರಿದರು.

ನೋಟು ರದ್ದತಿಗೂ, ಜಪಾನ್‌ಗೂ ಏನು ನಂಟು?



ಪ್ರಧಾನಿ ಮೋದಿ ಅವರು ಈಗ ಮತ್ತೊಂದು ಆದೇಶ ಹೊರಡಿಸಿದ್ದಾರೆ. ಅವರು ಜಪಾನ್‌ಗೆ ತೆರಳಿದಾಗಲೆಲ್ಲಾ ನೋಟು ರದ್ದು ತೀರ್ಮಾನ ಮಾಡುತ್ತಾರೆ. ಕಳೆದ ಬಾರಿ ಜಪಾನ್‌ಗೆ ತೆರಳಿದಾಗ ₹ 500 ಹಾಗೂ ₹ 1 ಸಾವಿರ ಮುಖಬೆಲೆಯ ನೋಟು ರದ್ದು ಮಾಡಿದ್ದರು. ಈ ಬಾರಿ ₹ 2 ಸಾವಿರ ಮುಖಬೆಲೆಯ ನೋಟು ರದ್ದು ಮಾಡಿದ್ದಾರೆ. ಇದರಿಂದ ದೇಶಕ್ಕೆ ಲಾಭವೋ, ನಷ್ಟವೋ ಎನ್ನುವ ಕುರಿತೂ ಅವರು ಸ್ಪಷ್ಟನೆ ನೀಡುವುದಿಲ್ಲ. ಮೋದಿ ಅವರ ಇಂತಹ ಕೆಲಸಗಳಿಂದ ದೇಶದ ಜನರಿಗೆ ತೊಂದರೆಯಾಗುತ್ತಿದೆ.

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ.

ರಾಜ್ಯದ ಜನರ ಗೆಲುವು

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಸಿಕ್ಕಿರುವ ಜಯ ರಾಜ್ಯದ ಜನರ ಗೆಲುವು. ರಾಹುಲ್ ಗಾಂಧಿ ಅವರ ಭಾರತ ಜೋಡೋ ಯಾತ್ರೆ, ರಾಹುಲ್ ಗಾಂಧಿ, ಖರ್ಗೆ, ಪ್ರಿಯಾಂಕಾ ಹಾಗೂ ಹಲವು ನಾಯಕರ ಪ್ರಚಾರ, ಸಾಹಿತಿಗಳು, ಚಿಂತಕರು, ಸಂಘಟನೆ ನಾಯಕರ ಆಶೀರ್ವಾದ, ರಾಜ್ಯದ ಯುವಕರು, ರೈತರು, ಕಾರ್ಮಿಕರು, ಮಹಿಳೆಯರು ತೋರಿದ ಒಲವು ಗೆಲುವಿಗೆ ಪ್ರಮುಖ ಕಾರಣ.

ಸಿದ್ದರಾಮಯ್ಯ, ಮುಖ್ಯಮಂತ್ರಿ

ನಮ್ಮ ಬಳಿ ಇದ್ದದ್ದು ಬಡ ಜನರು, ಸತ್ಯ

ಕಾಂಗ್ರೆಸ್ ಪಕ್ಷ ರಾಜ್ಯದ ಬಡವರು, ರೈತರು, ಕಾರ್ಮಿಕರು, ಶೋಷಿತರು, ದಲಿತರ ಬೆನ್ನಿಗೆ ನಿಂತಿದ್ದೇ ಗೆಲುವಿಗೆ ಕಾರಣ. ನಮ್ಮ ಬಳಿ ಬಡ ಜನರು ಹಾಗೂ ಸತ್ಯವಿತ್ತು. ಬಿಜೆಪಿ ಬಳಿ ಹಣ, ಅಧಿಕಾರ, ಪೊಲೀಸ್ ಅಧಿಕಾರಿಗಳಿದ್ದರು. ಈ ಎಲ್ಲ ಶಕ್ತಿಗಳನ್ನೂ ಕರ್ನಾಟಕದ ಜನರು ಮಣಿಸಿದ್ದಾರೆ. ದ್ವೇಷವನ್ನು ಒದ್ದೋಡಿಸಿ, ಪ್ರೀತಿ ಸಾಮರಸ್ಯಕ್ಕೆ ಗೆಲುವು ತಂದುಕೊಟ್ಟಿದ್ದಾರೆ. ದ್ವೇಷದ ಮಾರುಕಟ್ಟೆಯಲ್ಲಿ ಕರ್ನಾಟಕದ ಜನರು ಪ್ರೀತಿ, ಸಾಮರಸ್ಯದ ಅಂಗಡಿ ತೆರೆದಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಪ್ರೀತಿ ಹಾಗೂ ಶಕ್ತಿ ನೀಡಿರುವ ರಾಜ್ಯದ ಎಲ್ಲಾ ಜನರಿಗೆ ಧನ್ಯವಾದ ತಿಳಿಸುತ್ತೇನೆ. ಇದು ರಾಜ್ಯದ ಜನರ ಸರ್ಕಾರ, ನಿಮ್ಮ ಸರ್ಕಾರ. ಈ ಸರ್ಕಾರ ನಿಮಗಾಗಿ ದುಡಿಯಲಿದೆ.

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಸಚಿವರ ಸಂಖ್ಯೆ 8ಕ್ಕೆ ಇಳಿಸಿದ ‘ಮಧ್ಯರಾತ್ರಿ ಕಿತ್ತಾಟ’

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮುಖ್ಯಮಂತ್ರಿ ಗಾದಿಗೆ ಏರಲು ತಂತ್ರ ಪ್ರತಿತಂತ್ರಗಳನ್ನು ಹೆಣೆದು ಮ್ಯಾರಥಾನ್ ಪೈಪೋಟಿ ನಡೆಸಿ ಕಾಂಗ್ರೆಸ್ ಹೈಕಮಾಂಡ್‌ನ ‘ಮಧ್ಯರಾತ್ರಿ ಸೂತ್ರ’ಕ್ಕೆ ಬಗ್ಗಿದ್ದ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಅವರು, ತಮ್ಮ ಸಂಪುಟದ ಸಹೋದ್ಯೋಗಿಗಳ ಆಯ್ಕೆ ವಿಚಾರದಲ್ಲಿ ಮಧ್ಯರಾತ್ರಿಯಲ್ಲಿ ‘ಕಿತ್ತಾಟ’ ನಡೆಸಿದರು. ‘ಒಟ್ಟಾಗಿ ಕೆಲಸ ಮಾಡಿ’ ಎಂಬ ಹೈಕಮಾಂಡ್‌ನ ಕಿವಿಮಾತನ್ನು ಉಭಯ ನಾಯಕರು ಒಂದೇ ದಿನದಲ್ಲಿ ಮರೆತು ಬಿಟ್ಟರು. ಇಬ್ಬರು ನಾಯಕರು ಜಿದ್ದಿಗೆ ಬಿದ್ದು ಸಂಪುಟಕ್ಕೆ ಸೇರುವವರ ಸಂಖ್ಯೆಯನ್ನು ನಡುರಾತ್ರಿಯಲ್ಲೇ ಎಂಟಕ್ಕೆ ಇಳಿಸಿದರು!

ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಜತೆಗೆ 25 ಸಚಿವರು ಮೊದಲ ಕಂತಿನಲ್ಲೇ ಸಂಪುಟಕ್ಕೆ ಸೇರ್ಪಡೆಯಾಗಬೇಕು. ಏಳು ಸ್ಥಾನಗಳನ್ನು ಖಾಲಿಯಾಗಿರಿಸಿಕೊಂಡು ಅತೃಪ್ತರನ್ನು ಸಮಾಧಾನಪಡಿಸಬೇಕು ಎಂದು ಕಾಂಗ್ರೆಸ್ ಹೈಕಮಾಂಡ್ ಸೂತ್ರ ಹೆಣೆದಿತ್ತು. ಈ ಬಗ್ಗೆ ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಅವರಿಗೆ ವರಿಷ್ಠರು ಸಂದೇಶ ರವಾನಿಸಿದ್ದರು. ತಮ್ಮ ಬಣದಿಂದ ಸಂಪುಟಕ್ಕೆ ಸೇರ್ಪಡೆಯಾಗುವವರ ಪಟ್ಟಿಗಳೊಂದಿಗೆ ನಿಯೋಜಿತ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಶುಕ್ರವಾರ ಮಧ್ಯಾಹ್ನ ವಿಶೇಷ ವಿಮಾನದಲ್ಲಿ ನವದೆಹಲಿಗೆ ಬಂದರು. ತಮ್ಮಲ್ಲಿ ಒಗ್ಗಟ್ಟು ಇದೆ ಎಂಬುದನ್ನು ತೋರ್ಪಡಿಸಿದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹಾಗೂ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಜತೆಯಲ್ಲೇ ಭೇಟಿ ಮಾಡಿ ಸುದೀರ್ಘವಾಗಿ ಸಮಾಲೋಚಿಸಿದರು.

ರಾತ್ರಿ ನಡೆದಿದ್ದೇನು?: ಸಚಿವ ಸಂಪುಟಕ್ಕೆ ಸೇರುವವರ ಪಟ್ಟಿಗೆ ಅಂತಿಮ ರೂಪ ನೀಡಲು ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ನೇತೃತ್ವದಲ್ಲಿ ರಾತ್ರಿ 9 ಗಂಟೆಗೆ ಸಭೆ ನಡೆಸಲಾಯಿತು. ಈ ಸಭೆ ರಾತ್ರಿ 12 ಗಂಟೆಯ ವರೆಗೆ ಮುಂದುವರಿದರೂ ಬಿಕ್ಕಟ್ಟು ಪರಿಹಾರವಾಗಲಿಲ್ಲ. ರಾಷ್ಟ್ರೀಯ ನಾಯಕರು ಮನವೊಲಿಸಲು ಒಪ್ಪಿದರೂ ಉಭಯ ನಾಯಕರು ಹಿಡಿದ ಪಟ್ಟು ಸಡಿಲಿಸಲಿಲ್ಲ.

ಸಿದ್ದರಾಮಯ್ಯ ತಂದ ಸಂಭಾವ್ಯರ ಪಟ್ಟಿಯಲ್ಲಿ ಎಂ.ಬಿ.ಪಾಟೀಲ, ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್, ಎಚ್.ಸಿ.ಮಹದೇವಪ್ಪ, ಜಮೀರ್ ಅಹಮದ್ ಖಾನ್ ಅವರ ಹೆಸರು ಇತ್ತು. ಜಮೀರ್ ಹೆಸರನ್ನು ಕಂಡ ಕೂಡಲೇ ಶಿವಕುಮಾರ್ ಬಲವಾಗಿ ಆಕ್ಷೇಪಿಸಿದರು. ‘ಉಪಮುಖ್ಯಮಂತ್ರಿ ಸ್ಥಾನವನ್ನು ಒಪ್ಪುವ ಸಂದರ್ಭದಲ್ಲಿ ಹಲವು ಷರತ್ತುಗಳನ್ನು ಹಾಕಿದ್ದೆ. ಜಮೀರ್, ಬಸವರಾಜ ರಾಯರಡ್ಡಿ ಹಾಗೂ ಕೆ.ಎನ್. ರಾಜಣ್ಣ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಬಾರದು ಎಂಬ ಷರತ್ತು ಅದರಲ್ಲಿ ಇತ್ತು. ಅದಕ್ಕೆ ರಾಷ್ಟ್ರೀಯ ನಾಯಕರು ಒಪ್ಪಿದ್ದರು. ಈ ವಿಷಯವನ್ನು ಸಿದ್ದರಾಮಯ್ಯ ಗಮನಕ್ಕೂ ತರಲಾಗಿತ್ತು. ಇಷ್ಟೆಲ್ಲ ಗೊತ್ತಿದ್ದು ಜಮೀರ್ ಹೆಸರನ್ನು ಸೇರಿಸಿದ್ದು ಏಕೆ’ ಎಂದು ಅವರು ಪ್ರಶ್ನಿಸಿದರು ಎಂದು ಮೂಲಗಳು ತಿಳಿಸಿವೆ.

‘ಜಮೀರ್ ಅವರು ರಾಜ್ಯದಾದ್ಯಂತ ಓಡಾಡಿ ಚುನಾವಣಾ ಪ್ರಚಾರ ನಡೆಸಿದ್ದಾರೆ. ಹಲವು ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲು ಅವರೂ ಕಾರಣ. ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳದಿದ್ದರೆ ತಪ್ಪು ಸಂದೇಶ ರವಾನಿಸಿದಂತೆ ಆಗುತ್ತದೆ’ ಎಂದು ಸಿದ್ದರಾಮಯ್ಯ ಸಮರ್ಥಿಸಿಕೊಂಡರು. ಜಮೀರ್ ಅವರು ಈ ಹಿಂದೆ ನೀಡಿದ ಹೇಳಿಕೆಗಳು ಹಾಗೂ ಹೈಕಮಾಂಡ್ ನೋಟಿಸ್ ನೀಡಿರುವುದನ್ನು ಶಿವಕುಮಾರ್ ನೆನಪಿಸಿದರು. ಹೆಚ್ಚೆಚ್ಚು ವಿವಾದಗಳನ್ನು ಸೃಷ್ಟಿಸುತ್ತಾರೆ ಎಂದೂ ಹೇಳಿದರು. ‘ಈಗಾಗಲೇ ಎರಡು ಬಾರಿ ಸಚಿವರಾಗಿದ್ದಾರೆ. ಅವರ ಬದಲು ಬೆಂಗಳೂರಿನ ಕೋಟಾದಲ್ಲಿ ಶಾಂತಿನಗರ ಶಾಸಕ ಎನ್.ಎ.ಹ್ಯಾರಿಸ್ ಅವರಿಗೆ ಅವಕಾಶ ನೀಡಬೇಕು’ ಎಂದು ಅವರು ಪಟ್ಟು ಹಿಡಿದರು. ಹ್ಯಾರಿಸ್ ಸೇರ್ಪಡೆಗೆ ಸಿದ್ದರಾಮಯ್ಯ ವಿರೋಧಿಸಿದರು. ಇಬ್ಬರ ಹೆಸರನ್ನು ಕೈಬಿಟ್ಟು ಯು.ಟಿ. ಖಾದರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳೋಣ ಎಂದು ಡಿ.ಕೆ. ಹೇಳಿದರು. ‘ಖಾದರ್ ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕರಾಗಿದ್ದವರು. ಅವರಿಗೆ ಅವಕಾಶ ನೀಡಲೇಬೇಕಾಗುತ್ತದೆ. ಆದರೆ, ಜಮೀರ್ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲೇಬೇಕು’ ಎಂದು ಸಿದ್ದರಾಮಯ್ಯ ಹಟ ಹಿಡಿದರು. ಈ ವೇಳೆ, ವೇಣುಗೋಪಾಲ್ ಹಾಗೂ ಸುರ್ಜೇವಾಲಾ ಮಧ್ಯ ಪ್ರವೇಶಿಸಿ ವಾತಾವರಣ ತಿಳಿಗೊಳಿಸಿದರು. ಜಮೀರ್ ಅವರನ್ನು ಸಚಿವರನ್ನಾಗಿ ಮಾಡಲು ಡಿ.ಕೆ. ಒಪ್ಪಿಕೊಂಡರು ಎಂದು ಮೂಲಗಳು ತಿಳಿಸಿವೆ.

‘ದಿನೇಶ್ ಗುಂಡೂರಾವ್ ಕೆಪಿಸಿಸಿ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಪಕ್ಷವು ಲೋಕಸಭಾ ಚುನಾವಣೆಯಲ್ಲಿ ಒಂದು ಸ್ಥಾನವನ್ನಷ್ಟೇ ಗೆದ್ದಿತ್ತು. ಅವರು ಈ ಚುನಾವಣೆಯಲ್ಲಿ ತಿಣುಕಾಡಿ ಗೆದ್ದಿದ್ದಾರೆ. ಅವರ ಬದಲು ಹೊಸ ಮುಖಗಳಿಗೆ ಅವಕಾಶ ಕಲ್ಪಿಸಬೇಕು’ ಎಂದು ಶಿವಕುಮಾರ್ ಪ್ರತಿಪಾದಿಸಿದರು. ಕೃಷ್ಣ ಬೈರೇಗೌಡ, ಮಹದೇವಪ್ಪ ಅವರನ್ನು ಸೇರಿಸಿಕೊಳ್ಳುವುದಕ್ಕೂ ತಕರಾರು ಎತ್ತಿದರು. ಶಿವಕುಮಾರ್ ಪಟ್ಟಿಯಲ್ಲಿದ್ದ ಕೆಲವು ಹೆಸರುಗಳಿಗೂ ಸಿದ್ದರಾಮಯ್ಯ ಆಕ್ಷೇಪ ವ್ಯಕ್ತಪಡಿಸಿದರು. ಬಿ.ಕೆ. ಹರಿಪ್ರಸಾದ್ ಸಂಪುಟಕ್ಕೆ ಬೇಡವೇ ಬೇಡ ಎಂದು ಹೇಳಿದರು. ವಿಧಾನ ಪರಿಷತ್‌ನಿಂದ ಪ್ರಕಾಶ ಹುಕ್ಕೇರಿ ಅವರನ್ನು ಸೇರಿಸಿಕೊಳ್ಳುವ ಬಗ್ಗೆ ಪ್ರಸ್ತಾಪಿಸಿದರು. ಹರಿಪ್ರಸಾದ್ ಹೆಸರು ಕೈಬಿಡಲು ಶಿವಕುಮಾರ್ ಒಪ್ಪಲಿಲ್ಲ. ಈ ವಿಷಯದಲ್ಲಿ ಉಭಯ ನಾಯಕರು ಒಮ್ಮತಕ್ಕೆ ಬರಲಿಲ್ಲ. ಸಂಪುಟದಲ್ಲಿ ಮೂಲ ಕಾಂಗ್ರೆಸ್ ನಾಯಕರಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಿವಕುಮಾರ್ ಪ್ರತಿಪಾದಿಸಿದರು ಎಂದು ಮೂಲಗಳು ತಿಳಿಸಿವೆ.

ಸುದೀರ್ಘ ಸಮಾಲೋಚನೆಯ ನಂತರ ಮಧ್ಯರಾತ್ರಿ 12 ಗಂಟೆಗೆ ಪಟ್ಟಿಗೆ ಒಂದು ರೂಪ ನೀಡಲಾಯಿತು. 14 ಸಚಿವರ ಹೆಸರನ್ನು ಅಂತಿಮಗೊಳಿಸಲಾಯಿತು. ಸಿದ್ದರಾಮಯ್ಯ ತಾವು ತಂಗಿದ್ದ ಹೋಟೆಲ್‌ಗೆ ಮರಳಿದರು. ಶಿವಕುಮಾರ್ ಅವರು ವೇಣುಗೋಪಾಲ್ ಮನೆಯಲ್ಲಿ ಉಳಿದು ಚರ್ಚಿಸಿದರು. ಸಚಿವರ ಪಟ್ಟಿಯಲ್ಲಿ ಬದಲಾವಣೆಯಾಗಲಿದೆ ಎಂಬ ಸುಳಿವು ಸಿಕ್ಕ ಸಿದ್ದರಾಮಯ್ಯ ಅವರು ಕೆಲವೇ ಕ್ಷಣಗಳಲ್ಲಿ ವೇಣುಗೋಪಾಲ್ ಮನೆಗೆ ಧಾವಿಸಿ ಬಂದರು. ರಾಷ್ಟ್ರೀಯ ನಾಯಕರ ಸಮ್ಮುಖದಲ್ಲಿ ಮತ್ತೊಂದು ಸುತ್ತಿನ ಸಭೆ ನಡೆಯಿತು. ಅಂತಿಮವಾಗಿ ಎಂಟು ಮಂದಿಯನ್ನು ಸಂಪುಟಕ್ಕೆ ಸೇರಿಸಿಕೊಳ್ಳಲು ಉಭಯ ನಾಯಕರು ಒಮ್ಮತಕ್ಕೆ ಬಂದರು. ಆಗ ರಾತ್ರಿ 2.20 ಆಗಿತ್ತು. ಸಿದ್ದರಾಮಯ್ಯ ಅವರು ಪಟ್ಟಿಯೊಂದಿಗೆ ತಡರಾತ್ರಿಯೇ ಬೆಂಗಳೂರಿಗೆ ತೆರಳಿದರು. ಶಿವಕುಮಾರ್ ಶನಿವಾರ ಬೆಳಿಗ್ಗೆ ಬೆಂಗಳೂರಿಗೆ ನಿರ್ಗಮಿಸಿದರು. ನವದೆಹಲಿಗೆ ಜತೆ ಜತೆಯಲ್ಲಿ ಬಂದಿದ್ದ ನಾಯಕರಿಬ್ಬರೂ ಪ್ರತ್ಯೇಕವಾಗಿ ತೆರಳಿದರು.

ಸಭಾಧ್ಯಕ್ಷ ಸ್ಥಾನ ಒಪ್ಪದ ಹಿರಿಯ ಶಾಸಕರು

ವಿಧಾನಸಭೆಯ ಸಭಾಧ್ಯಕ್ಷ ಸ್ಥಾನಕ್ಕೆ ಹಿರಿಯ ಶಾಸಕರಾದ ಆರ್.ವಿ.ದೇಶಪಾಂಡೆ, ಎಚ್.ಕೆ.ಪಾಟೀಲ ಅಥವಾ ಟಿ.ಬಿ. ಜಯಚಂದ್ರ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಲು ಚರ್ಚೆಗಳು ನಡೆದಿವೆ. ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿರುವ ಎಚ್.ಕೆ.ಪಾಟೀಲ, ಆರ್.ವಿ.ದೇಶಪಾಂಡೆ, ‘ಸಭಾಧ್ಯಕ್ಷ ಸ್ಥಾನ ಬೇಡವೇ ಬೇಡ. ಹಿರಿತನಕ್ಕೆ ಹೊಂದುವ ಸಚಿವ ಸ್ಥಾನ ಕೊಡಿ. ಇಲ್ಲದಿದ್ದರೆ ಶಾಸಕರಾಗಿ ಉಳಿಯುತ್ತೇವೆ’ ಎಂದು ತಿಳಿಸಿದ್ದಾರೆ. ಸಭಾಧ್ಯಕ್ಷರಾಗಲು ಜಯಚಂದ್ರ ಅವರೂ ಒಲವು ವ್ಯಕ್ತಪಡಿಸಿಲ್ಲ ಎಂದು ಮೂಲಗಳು ತಿಳಿಸಿವೆ.

‘ಗ್ಯಾರಂಟಿಗಳು ಘೋಷಣೆ ಮಾತ್ರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊದಲ ಸಚಿವ ಸಂಪುಟದ ಸಭೆ ಬಗ್ಗೆ ಜನ ದೊಡ್ಡ ನಿರೀಕ್ಷೆ ಇಟ್ಟಿದ್ದರು. ಬಸ್ ಹತ್ತಲು ಮಹಿಳೆಯರು ತಯಾರಾಗಿದ್ದರು. ಆದರೆ, ಸಿದ್ದರಾಮಯ್ಯ ಎಲ್ಲರಿಗೂ ನಿರಾಶೆ ಮಾಡಿದ್ದಾರೆ’ ಎಂದು ನಿರ್ಗಮಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲೇವಡಿ ಮಾಡಿದರು.

‘ಗ್ಯಾರಂಟಿ ಯೋಜನೆಗಳ ಘೋಷಣೆ ಮತ್ತೊಮ್ಮೆ ಆಗಿದೆ. ಯಾವಾಗ ಜಾರಿಯಾಗಲಿದೆ ಎಂಬುದನ್ನು ಹೇಳಿಲ್ಲ. ಮುಂದಿನ ಸಚಿವ ಸಂಪುಟದವರೆಗೆ ಕಾಯೋಣ. ಏನು ಹೇಳಿದ್ದಾರೆ, ಏನು ಮಾಡುತ್ತಾರೆ ನೋಡೋಣ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಐದು ಗ್ಯಾರಂಟಿ ಈಡೇರಿಕೆಗೆ ₹50 ಸಾವಿರ ಕೋಟಿ ಬೇಕಾಗುತ್ತದೆ ಎಂದು ಹೇಳಿದ್ದಾರೆ. ಹಣಕಾಸು ಒದಗಿಸಲು ಯಾವುದೇ ಪೂರ್ವ ಆಲೋಚನೆ ಇಲ್ಲ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ದಾರಿಯಲ್ಲಿ ಹೋಗುವವರಿಗೆ ಕೊಡಲು ಆಗುತ್ತಾ ಎಂದು ಡಿ.ಕೆ. ಶಿವಕುಮಾರ್ ಕೇಳಿದ್ದಾರೆ. ದಾರಿಯಲ್ಲಿದ್ದವರು, ಮನೆಯಲ್ಲಿದ್ದವರು ಎಲ್ಲರೂ ಸೇರಿಯೇ ಮತ ಹಾಕಿದ್ದಾರೆ. ಚುನಾವಣೆಯಲ್ಲಿ ಗೆದ್ದ ಬಳಿಕ ಮತದಾರರಿಗೆ ಗೌರವ ನೀಡುವುದು ಹೀಗೆಯೇ’ ಎಂದು ಪ್ರಶ್ನಿಸಿದರು.

‘ಬಿಪಿಎಲ್ ಕಾರ್ಡುದಾರರ ಬಗ್ಗೆ ರಾಜ್ಯ ಸರ್ಕಾರದ ಬಳಿ ಮಾಹಿತಿ ಇದೆ. ಮನಸ್ಸಿದ್ದರೆ ಮಾತ್ರ ಮಾರ್ಗ ಇದ್ದೇ ಇದೆ. ಮನಸ್ಸು ಮಾಡಿದರೆ ಮನೆಯ ಯಜಮಾನಿಯರ ಖಾತೆಗೆ ನಾಳೆಯೇ ₹2 ಸಾವಿರ ಪಾವತಿಸಬಹುದು. ವಿದ್ಯುತ್ ಉಚಿತ ನೀಡಲು ಕುಂಟು ನೆಪ ಹೇಳುತ್ತಿದ್ದಾರೆ. ಈ ವರ್ಷ ಪಾಸಾದ ಪದವೀಧರರಿಗೆ ಭತ್ಯೆ ಅಂತ ಹೇಳಿದ್ದಾರೆ. ನಿಜವಾದ ಕಷ್ಟದಲ್ಲಿರುವ ನಿರುದ್ಯೋಗಿಗಳಿಗೆ ಸಹಾಯ ಮಾಡುವ ಉದ್ದೇಶ ಇವರಿಗಿಲ್ಲ’ ಎಂದು ವಾಗ್ದಾಳಿ ನಡೆಸಿದರು.

‘ನಮ್ಮ ಅವಧಿಯಲ್ಲಿ ₹3 ಲಕ್ಷ ಕೋಟಿ ಸಾಲ ಮಾಡಲಾಗಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ. ಇದಕ್ಕೆ ವಿಧಾನಸಭೆಯಲ್ಲಿ ಉತ್ತರ ಕೊಟ್ಟಿದ್ದೇನೆ. ಈಗಲೂ ಅವರು ಪ್ರತಿಪಕ್ಷ ನಾಯಕನ ರೀತಿಯಲ್ಲಿ ಮಾತಾಡುತ್ತಿದ್ದಾರೆ’ ಎಂದರು.

‘ಇಡೀ ದೇಶದಲ್ಲಿ ಜಿಎಸ್‌ಟಿ ಆದಾಯದಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಉಪನಗರ ರೈಲು, ಮೆಟ್ರೊ, ರೈಲ್ವೆ ಕಾಮಗಾರಿಗಳಿಗೆ ಕೇಂದ್ರ ಸರ್ಕಾರ ಅನುದಾನ ನೀಡುತ್ತಿದೆ. ಅರ್ಧ ಮಾಹಿತಿ ಹೇಳಿ ಅರ್ಧ ಮಾಹಿತಿ ಮುಚ್ಚಿಡುವ ಕೆಲಸವನ್ನು ಮುಖ್ಯಮಂತ್ರಿ ಮಾಡಿದ್ದಾರೆ. ವಿಧಾನಸಭೆಯಲ್ಲಿ ಸಂಪೂರ್ಣ ವಿವರ ಕೊಡಲು ಸಿದ್ಧನಿದ್ದೇನೆ. ನಾವು ಧ್ವನಿ ಎತ್ತಲು ಆರಂಭ ಮಾಡಿದ್ದೇವೆ’ ಎಂದರು.

‘ಬಿಜೆಪಿ ಜಿಲ್ಲಾ ಮುಖಂಡರ ಸಭೆ ಭಾನುವಾರ ಇದೆ. ಅದರ ಬಳಿಕ ಶಾಸಕಾಂಗ ಪಕ್ಷದ ಸಭೆ ಬಗ್ಗೆ ನಿರ್ಧಾರ ಮಾಡುತ್ತೇವೆ. ವಿಪಕ್ಷ ನಾಯಕ ಸ್ಥಾನದ ಬಗ್ಗೆ ಇನ್ನೂ ಚಿಂತನೆ ಮಾಡಿಲ್ಲ’ ಎಂದು ಹೇಳಿದರು.



ಕೇಶ ವಿನ್ಯಾಸ

ಅಭಿಮಾನಿಯೊಬ್ಬರು ಸಿದ್ದರಾಮಯ್ಯ ಎಂಬ ಪದವು ಕೂದಲಿನಲ್ಲಿ ಮೂಡುವಂತೆ ಕೇಶ ವಿನ್ಯಾಸ ಮಾಡಿಸಿ ಗಮನಸೆಳೆದರು
-ಪ್ರಜಾವಾಣಿ ಚಿತ್ರ ಕಿಶೋರ್/ ಕುಮಾರ್ ಬೋಳಾರ್

ಸಿದ್ದರಾಮಯ್ಯಗೆ ₹1 ಲಕ್ಷದ ಟಗರು ಉಡುಗೊರೆ!

ಪ್ರಜಾವಾಣಿ ವಾರ್ತೆ

ಕೋಲಾರ: ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ಸಿದ್ದರಾಮಯ್ಯ ಅವರಿಗೆ ಉಡುಗೊರೆಯಾಗಿ ನೀಡಲು ಕೋಲಾರದ ಅವರ ಅಭಿಮಾನಿಗಳು ₹1 ಲಕ್ಷ ಮೌಲ್ಯದ ಟಗರು ಖರೀದಿಸಿದ್ದಾರೆ.

ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ಹಾಗೂ ಜಿಲ್ಲಾ ಕುರುಬರ ಸಂಘದ ಕಾರ್ಯಾಧ್ಯಕ್ಷ ಜೆ.ಕೆ.ಜಯರಾಂ ನೇತೃತ್ವದಲ್ಲಿ ‘ಸಿದ್ದರಾಮಣ್ಣ ಸೇನೆ’ ಅಭಿಮಾನಿಗಳು ಶನಿವಾರ ಟಗರಿನ ಮೆರವಣಿಗೆ ನಡೆಸಿದರು.

ಕೋಲಾರಮ್ಮ ದೇವಾಲಯ ಸೇರಿದಂತೆ ನಾನಾ ಕಡೆ ಪೂಜೆ ಮಾಡಿಸಿ ಸಿದ್ದರಾಮಯ್ಯ ಅವರಿಗೆ ಭಾನುವಾರ ತಲುಪಿಸಲಿದ್ದಾರೆ. ಈ ಟಗರು 67 ಕೆ.ಜಿ ತೂಕವಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉಡುಗೊರೆಯಾಗಿ ನೀಡಲು ಅವರ ಅಭಿಮಾನಿಗಳು ಖರೀದಿಸಿರುವ ಟಗರು

‘ಸಿದ್ದರಾಮಣ್ಣ ಸೇನೆ’ ಅಭಿಮಾನಿಗಳಾದ ಮುನಿ ವೆಂಕಟಪ್ಪ, ಉಷಾ ವೆಂಕಟರವಣಪ್ಪ, ಅಡ್ಡಗಲ್ ಮುನಿಯಪ್ಪ, ಟ್ರಜರಿ ಸೀನಪ್ಪ, ಗಜಲಕ್ಷ್ಮಿ ಗಜೇಂದ್ರ, ಸಿವಿಕೆ ಗಂಗಾಧರ್, ಮೇಸ್ತ್ರಿ ಸಂಪತ್, ಬೀರೇಶ್ ಗೌಡ, ವಿಭೂತಿ ಪುರ ವೆಂಕಟ ಸ್ವಾಮಿ ಇತರರು ಇದ್ದರು.

ತಪ್ಪಿದ ಸಚಿವ ಸ್ಥಾನ: ಅಸಮಾಧಾನ?

ಬೆಂಗಳೂರು: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದ ಬೆನ್ನಲ್ಲೆ, ಸಂಪುಟದಲ್ಲಿ ಸ್ಥಾನ ಸಿಗದ ಕಾರಣಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಮೊದಲ ಪಟ್ಟಿಯಲ್ಲಿಯೇ ಸಚಿವ ಸ್ಥಾನದ ನಿರೀಕ್ಷೆಯಲ್ಲಿದ್ದ ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷ ಮಧು ಬಂಗಾರಪ್ಪ, ಶನಿವಾರ ನಡೆದ ಪ್ರಮಾಣವಚನ ಕಾರ್ಯಕ್ರಮದಿಂದಲೇ ದೂರ ಉಳಿದಿದ್ದಾರೆ.

‘ತಂದೆಗೂ (ಎಸ್. ಬಂಗಾರಪ್ಪ) ಕಾಂಗ್ರೆಸ್ ಮೋಸ ಮಾಡಿದೆ. ಈಗ ನನಗೂ ಮೋಸ ಆಗಿದೆ. ಹಲವು ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲಲು ನನ್ನ ಮೂಲಕ ನಟ ಶಿವರಾಜ್‌ಕುಮಾರ್ ಅವರನ್ನು ಕಾಂಗ್ರೆಸ್ ನಾಯಕರು ಬಳಸಿಕೊಂಡರು’ ಎಂದು ಪಕ್ಷದ ನಾಯಕರ ವಿರುದ್ಧ ಮಧು ಬಂಗಾರಪ್ಪ ಸಿಡಿದೆದ್ದಿದ್ದಾರೆ ಎಂದೂ ಹೇಳಲಾಗಿದೆ.

ದಿನೇಶ್ ಗುಂಡೂರಾವ್, ಕೃಷ್ಣಭೈರೇಗೌಡ, ಯು.ಟಿ. ಖಾದರ್ ಸಹ ತಮ್ಮ ಆಪ್ತರ ಜೊತೆ ಅಸಮಾಧಾನ ತೋಡಿಕೊಂಡಿದ್ದಾರೆ ಎಂದೂ ಗೊತ್ತಾಗಿದೆ.

ಭಾನುವಾರ, ಮೇ 21, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 140 | ಪುಟ 24
• www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕರ್ನಾಟಕ ಶಾಸ್ತ್ರೀಯ ಸಂಗೀತಗಾರರ ಈ ಹೊತ್ತಿನ ಒಳದನಿ ಏನು?

ಆರ್ಥಿಕತೆ ಮೇಲಿಲ್ಲ ಪ್ರತಿಕೂಲ ಪರಿಣಾಮ: ಪನಗರಿಯಾ 9

ಸಿಇಟಿ: ರಾಜ್ಯದ 592 ಕೇಂದ್ರಗಳಲ್ಲಿ ಪರೀಕ್ಷೆ

ಸಿಖ್ ವಿರೋಧಿ ದಂಗೆ: ಟೈಟ್ಲರ್ ವಿರುದ್ಧ ಸಿಬಿಐ ಆರೋಪ ಪಟ್ಟಿ 8

ಮೊದಲ ದಿನ ಸುಸೂತ್ರ 7

ಒಳ ಪುಟಗಳು

ಸರ್ಕಾರ ಟೀಕಿಸಿದ ಶಿಕ್ಷಕ ಅಮಾನತು 7
'ಲವ್ ಜಿಹಾದ್' ವಿರುದ್ಧದ ಆತ್ಮರಕ್ಷಣೆಗಾಗಿ ಕಠಾರಿ 9
ಮಿಗ್-21 ವಿಮಾನಗಳ ಹಾರಾಟ ತಾತ್ಕಾಲಿಕ ಸ್ಥಗಿತ 9
ವಿಶ್ವಕಪ್ ಆರ್ಚರಿ: ಪ್ರಥಮೇಶ್‌ಗೆ ಚಿನ್ನ 14

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮೊದಲ ಸಂಪುಟ ಸಭೆಯಲ್ಲೇ ಜಾರಿಗೆ ತಾತ್ವಿಕ ಒಪ್ಪಿಗೆ • ಫಲಾನುಭವಿ ಆಯ್ಕೆಗೆ ಷರತ್ತು ಅನ್ವಯ • ನಾಳೆಯಿಂದ 3 ದಿನ ಅಧಿವೇಶನ

ಐದೂ ಗ್ಯಾರಂಟಿಗೆ 'ಸಿದ್ಧ'ರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೃಹತ್ ಜನಸಾಗರದ ಮಧ್ಯೆಯೇ ರಾಜ್ಯದ ಮುಖ್ಯಮಂತ್ರಿಯಾಗಿ ಎರಡನೇ ಪರ್ವ ಆರಂಭಿಸಿದ ಸಿದ್ದರಾಮಯ್ಯ, ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೇ ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ರಾಜ್ಯದ ಜನರಿಗೆ ನೀಡಿದ್ದ ಐದು 'ಗ್ಯಾರಂಟಿ' ಯೋಜನೆಗಳ ಅನುಷ್ಠಾನಕ್ಕೆ ಮೊದಲ ಸಚಿವ ಸಂಪುಟ ಸಭೆಯಲ್ಲೇ ಮುನ್ನುಡಿ ಬರೆದರು.

ಸಚಿವ ಸಂಪುಟ ಸಭೆ ಬಳಿಕ ಮಂತ್ರಿಗಳ ದಂಡಿನೊಂದಿಗೆ ಸ್ವತಃ ಸುದ್ದಿಗೋಷ್ಠಿ ನಡೆಸಿದ ಸಿದ್ದರಾಮಯ್ಯ, ಐದು ಗ್ಯಾರಂಟಿ ಹಾಗೂ ಚುನಾವಣೆ ಪ್ರಣಾಳಿಕೆಯಲ್ಲಿ ನೀಡಲಾದ ಭರವಸೆಗಳ ಅನುಷ್ಠಾನವನ್ನು ಹೇಗೆ ಮಾಡುತ್ತೇವೆ, ಅದಕ್ಕೆ ಬೇಕಾದ ಸಂಪನ್ಮೂಲವನ್ನು ಎಲ್ಲಿಂದ ಕ್ರೋಡೀಕರಿಸುತ್ತೇವೆ ಎಂದು ಸವಿಸ್ತಾರವಾಗಿ ವಿವರಿಸಿದರು.

ಸಂಜೆ ಹೊತ್ತಿಗೆ, 'ಗ್ಯಾರಂಟಿ' ಜಾರಿಗೆ ತಾತ್ವಿಕವಾಗಿ ಒಪ್ಪಿಗೆ ನೀಡಿರುವ ಅಧಿಕೃತ ಆದೇಶ ಸಂಬಂಧ ಪಟ್ಟ ಇಲಾಖೆಯಿಂದ ಹೊರಬಿದ್ದಿತು. ಕೆಲವು ಷರತ್ತುಗಳೊಂದಿಗೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು ಸರ್ಕಾರ ಆರಂಭಿಸಿದೆ. 'ಯುವ ನಿಧಿ'ಯಡಿ ನಿರುದ್ಯೋಗ ಭತ್ಯೆ ಪಡೆಯಲು 2022–23ನೇ ಶೈಕ್ಷಣಿಕ ವರ್ಷದ ಪದವೀಧರರು ಮಾತ್ರ ಅರ್ಹರಾಗುತ್ತಾರೆ ಎಂಬ ಷರತ್ತು ವಿಧಿಸಲಾಗಿದೆ. 'ಶಕ್ತಿ' ಯೋಜನೆಯಡಿ ಮಹಿಳೆಯರ ಉಚಿತ ಪ್ರಯಾಣವನ್ನು 'ಸಾಮಾನ್ಯ' ಬಸ್‌ಗಳಿಗೆ ಸೀಮಿತಗೊಳಿಸಲಾಗಿದೆ. ಉಳಿದ ಯೋಜನೆಗಳಿಗೂ ಷರತ್ತು ವಿಧಿಸುವ ಸಾಧ್ಯತೆ ಇದೆ.

ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಸಮಾರಂಭದ ಬಳಿಕ ಮುಖ್ಯಮಂತ್ರಿ ಹಾಗೂ ಸಂಪುಟ ಸದಸ್ಯರು ವಿಧಾನಸೌಧಕ್ಕೆ ಬಂದರು. ಶಿವಕುಮಾರ್ ಮೆಟ್ಟಿಲುಗಳಿಗೆ ಸಾಷ್ಟಾಂಗ ನಮಸ್ಕಾರ ಹಾಕಿ, ವಿಧಾನಸೌಧದ ಒಳ ಪ್ರವೇಶಿಸಿದರು. ಮೂರನೇ ಮಹಡಿಯಲ್ಲಿರುವ ಕಚೇರಿಗೆ ಪೂಜೆ ಸಲ್ಲಿಸಿ ಒಳ ಪ್ರವೇಶಿಸಿದ ಮುಖ್ಯಮಂತ್ರಿ, ಬಳಿಕ ಸಂಪುಟ ಸಭಾಂಗಣಕ್ಕೆ ತೆರಳಿದರು.

7ನೇ ಪುಟ ನೋಡಿ

ನೂತನ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಡಿ.ಕೆ. ಶಿವಕುಮಾರ್ ಅವರನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅಭಿನಂದಿಸಿದರು —ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಅನುಷ್ಠಾನದ ವಿವರ

ಗೃಹ ಜ್ಯೋತಿ
- ಪ್ರತಿ ಮನೆಗೆ ತಿಂಗಳಿಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್
- ಪ್ರತಿ ತಿಂಗಳಿಗೆ ₹1,200 ಕೋಟಿ ಅಂದಾಜು ವೆಚ್ಚ

ಗೃಹ ಲಕ್ಷ್ಮಿ
- ಪ್ರತಿ ಮನೆಯ ಯಜಮಾನಿಗೆ ತಿಂಗಳಿಗೆ ₹2,000 ನೆರವು

ಅನ್ನಭಾಗ್ಯ
- ಆದ್ಯತಾ (ಬಿಪಿಎಲ್) ಮತ್ತು ಅಂತ್ಯೋದಯ ಕುಟುಂಬಗಳ ಪ್ರತಿ ಸದಸ್ಯರಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ

ಯುವನಿಧಿ
- ಪದವೀಧರ ನಿರುದ್ಯೋಗಿಗಳಿಗೆ ತಿಂಗಳಿಗೆ ₹3,000
- ಡಿಪ್ಲೊಮಾ ಪದವೀಧರರಿಗೆ ತಿಂಗಳಿಗೆ ₹1,500

ಶಕ್ತಿ
- ಬಿಎಂಟಿಸಿ ಸೇರಿದಂತೆ ರಾಜ್ಯ ಸರ್ಕಾರಿ ಸ್ವಾಮ್ಯದ ಸಾರಿಗೆ ನಿಗಮಗಳ ಸಾಮಾನ್ಯ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ. ಇದಕ್ಕಾಗಿ ಪಾಸ್ ನೀಡಲಾಗುವುದು

ಐದು ವರ್ಷಗಳಲ್ಲಿ ಜನರು ಭ್ರಷ್ಟಾಚಾರ ನೋಡಿದ್ದಾರೆ. ಇನ್ನು ಅದಕ್ಕೆ ಅವಕಾಶವಿಲ್ಲ. ಭ್ರಷ್ಟಾಚಾರಮುಕ್ತ ಸರ್ಕಾರದ ವಾಗ್ದಾನ ನೀಡುತ್ತೇವೆ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ರಾಜ್ಯದಲ್ಲಿ ದ್ವೇಷ ಕಿತ್ತೊಗೆದು, ಪ್ರೀತಿ, ಸೌಹಾರ್ದ, ಸಾಮರಸ್ಯದ ವಾತಾವರಣ ಮೂಡಿಸುತ್ತೇವೆ. ನಾವು ಬಿಜೆಪಿ ರೀತಿ ಹೇಳುವುದೊಂದು ನಡೆಯುವುದೊಂದು ಮಾಡುವುದಿಲ್ಲ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಕರ್ನಾಟಕದ ಜನತೆಯ ನಿರೀಕ್ಷೆಯನ್ನು ಕಾಂಗ್ರೆಸ್ ಹುಸಿಗೊಳಿಸಿದೆ. ಗ್ಯಾರಂಟಿಗಳಿಗೆ ಖಂಡಿತವಾಗಿಯೂ ಷರತ್ತು ವಿಧಿಸುತ್ತಾರೆ. ಅದರ ಬಗ್ಗೆ ಜನ ತೀರ್ಮಾನ ಮಾಡಲಿ. ನಂತರ ನಾವು ಜನರ ಧ್ವನಿಯಾಗಿ ಕೆಲಸ ಮಾಡುತ್ತೇವೆ
ಬಸವರಾಜ ಬೊಮ್ಮಾಯಿ, ನಿರ್ಗಮಿತ ಮುಖ್ಯಮಂತ್ರಿ

ನೂತನ ಸರ್ಕಾರ ಅರ್ಪಣಾ ಮನೋಭಾವದಿಂದ ರಾಜ್ಯದ ಜನರ ಸೇವೆ ಮಾಡಲಿ. ಜನಹಿತಕ್ಕಾಗಿ ರಾಜ್ಯ ಸರ್ಕಾರ ಕೈಗೊಳ್ಳುವ ಪ್ರತಿಯೊಂದು ಕ್ರಮಕ್ಕೂ ಜೆಡಿಎಸ್ ಬೆಂಬಲ ನೀಡಲಿದೆ
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ನಾಯಕ

ಬಿಜೆಪಿಗೆ ವಿರೋಧ: ಒಗ್ಗಟ್ಟಿಗೆ ಹದ

ಬೆಂಗಳೂರು: ದಕ್ಷಿಣ ಭಾರತದ ಏಕೈಕ ರಾಜ್ಯದಲ್ಲಿದ್ದ ಬಿಜೆಪಿಯ ನಾಲ್ಕು ವರ್ಷದ ಆಧಿಪತ್ಯ ಕೊನೆಗೊಂಡಿದ್ದು, ನಾಲ್ಕು ವರ್ಷಗಳ ಬಳಿಕ ಮತ್ತೆ ಕಾಂಗ್ರೆಸ್ ಗದ್ದುಗೆಗೇರಿದೆ. ಹೊಸ ಸರ್ಕಾರಕ್ಕೆ ಅಧಿಕೃತ ಚಾಲನೆ ನೀಡುವ ಅದ್ದೂರಿ ಸಮಾರಂಭ, ಬಿಜೆಪಿಯೇತರ ಪಕ್ಷಗಳ ಒಗ್ಗಟ್ಟಿನ ಪದ ಹಾಡುವುದಕ್ಕೂ ವೇದಿಕೆಯಾಯಿತು.

ರೇಷ್ಮೆ ಜುಬ್ಬ, ಪಂಚೆ ಧರಿಸಿ ಶಾಲು ಹೊದ್ದು ಬಂದಿದ್ದ ಸಿದ್ದರಾಮಯ್ಯ, ಕಂಠೀರವ ಹೊರಾಂಗಣ ಕ್ರೀಡಾಂಗಣದಲ್ಲಿ ಕಿಕ್ಕಿರಿದು ಸೇರಿದ್ದ ಜನಸಾಗರದ ಮಧ್ಯೆ ದೇವರ ಹೆಸರಿನಲ್ಲಿ ಪ್ರಮಾಣವಚನ ತೆಗೆದುಕೊಂಡರು. ಉಪ ಮುಖಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಮತ್ತು ಸಂಪುಟ ದರ್ಜೆ ಸಚಿವರಾಗಿ ಎಂಟು ಶಾಸಕರು ಪ್ರಮಾಣವಚನ ಸ್ವೀಕರಿಸಿದರು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಪ್ರತಿಜ್ಞಾವಿಧಿ ಬೋಧಿಸಿದರು.

ಪ್ರಮಾಣವಚನ ಸ್ವೀಕರಿಸಿದವರು	
ಸಿದ್ದರಾಮಯ್ಯ–ಮುಖ್ಯಮಂತ್ರಿ	(ಕುರುಬ)
ಡಿ.ಕೆ. ಶಿವಕುಮಾರ್–ಡಿಸಿಎಂ	(ಒಕ್ಕಲಿಗ)
ಕೆ.ಜೆ. ಜಾರ್ಜ್	(ಕ್ರಿಶ್ಚಿಯನ್)
ಎಂ.ಬಿ. ಪಾಟೀಲ	(ಲಿಂಗಾಯತ)
ಸತೀಶ ಜಾರಕಿಹೊಳಿ	(ಎಸ್‌ಟಿ–ವಾಲ್ಮೀಕಿ)
ಜಿ. ಪರಮೇಶ್ವರ	(ಎಸ್‌ಸಿ–ಬಲಗೈ)
ಕೆ.ಎಚ್. ಮುನಿಯಪ್ಪ	(ಎಸ್‌ಸಿ–ಎಡಗೈ)
ಪ್ರಿಯಾಂಕ್ ಖರ್ಗೆ	(ಎಸ್‌ಸಿ–ಬಲಗೈ)
ರಾಮಲಿಂಗಾರೆಡ್ಡಿ	(ರೆಡ್ಡಿ)
ಜಮೀರ್ ಅಹಮದ್ ಖಾನ್	(ಮುಸ್ಲಿಂ)

7ನೇ ಪುಟ ನೋಡಿ

ಇಂದಿರಾ ಕ್ಯಾಂಟೀನ್‌ಗಳಿಗೆ ಮರುಜೀವ

ರಾಜ್ಯದಲ್ಲಿ ಈ ಹಿಂದೆ ಆರಂಭಿಸಿದ್ದ ಎಲ್ಲ ಇಂದಿರಾ ಕ್ಯಾಂಟೀನ್‌ಗಳನ್ನು ಪುನರಾರಂಭ ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಶನಿವಾರ ಆದೇಶಿಸಿದ್ದಾರೆ.

'ಪುನರಾರಂಭಕ್ಕೆ ಅಗತ್ಯ ಕ್ರಮಗಳ ಕುರಿತು ಸಂಪುಟದ ಮುಂದಿನ ಸಭೆಯ ವೇಳೆ ಮಾಹಿತಿ ಒದಗಿಸುವಂತೆ ಆದೇಶಿಸಿದ್ದೇನೆ' ಎಂದು ಮುಖ್ಯಮಂತ್ರಿ ತಿಳಿಸಿದರು.

ಜುಲೈನಲ್ಲಿ ಬಜೆಟ್ ಅಧಿವೇಶನ

ಜುಲೈನಲ್ಲಿ ಈ ಸರ್ಕಾರದ ಮೊದಲ ಬಜೆಟ್ ಮಂಡಿಸಲಾಗುವುದು. ಈಗ ರಾಜ್ಯದ ಬಜೆಟ್ ಗಾತ್ರ ₹3.10 ಲಕ್ಷ ಕೋಟಿಯಷ್ಟಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಪೂರಕವಾಗಿ ಬಜೆಟ್ ಗಾತ್ರವನ್ನು ₹3.25 ಲಕ್ಷ ಕೋಟಿಗೆ ಹೆಚ್ಚಿಸಲಾಗುವುದು ಎಂದು ಸಿದ್ದರಾಮಯ್ಯ ತಿಳಿಸಿದರು.

ನೇಮಕಾತಿಗೆ ಅಧಿಕಾರ: ತುರ್ತು ಅಗತ್ಯವಿರುವ ಪ್ರಮುಖ ಹುದ್ದೆಗಳಿಗೆ ನೇಮಕಾತಿಯೂ ಸೇರಿದಂತೆ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡುವ ನಿರ್ಣಯವನ್ನೂ ಸಂಪುಟ ಸಭೆ ಕೈಗೊಂಡಿದೆ.

16ನೇ ವಿಧಾನಸಭೆಯ ಮೊದಲ ಅಧಿವೇಶನ ಇದೇ 22ರಿಂದ ಮೂರು ದಿನ ನಡೆಯಲಿದೆ. ನೂತನ ಶಾಸಕರಿಗೆ ಪ್ರಮಾಣವಚನ ಸ್ವೀಕಾರವೂ ನಡೆಯಲಿದೆ.

ಅಲೋಕ್ ಮೋಹನ್‌ಗೆ ಡಿಜಿಪಿ ಹೊಣೆ

ಪ್ರಜಾವಾಣಿ ವಾರ್ತೆ

ಅಲೋಕ್ ಮೋಹನ್

ಬೆಂಗಳೂರು: ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಡಿಜಿಪಿ ಅಲೋಕ್ ಮೋಹನ್ ಅವರಿಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ–ಐಜಿಪಿ) ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಡಿಜಿ– ಐಜಿಪಿಯಾಗಿರುವ ಪ್ರವೀಣ್ ಸೂದ್ ಅವರು ಕೇಂದ್ರೀಯ ತನಿಖಾ ತನಿಖಾ ದಳದ (ಸಿಬಿಐ) ನಿರ್ದೇಶಕರಾಗಿ ನೇಮಕಗೊಂಡಿದ್ದು, ಮೇ 22ರಂದು ಡಿಜಿ– ಐಜಿಪಿ ಹುದ್ದೆಯಿಂದ ಬಿಡುಗಡೆಯಾಗಲಿದ್ದಾರೆ. ಇದರಿಂದ ತೆರವಾಗಲಿರುವ ಹುದ್ದೆಗೆ ಅಲೋಕ್ ಮೋಹನ್ ಅವರನ್ನು ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ(ಡಿಪಿಎಆರ್) ಆದೇಶ ಹೊರಡಿಸಿದೆ. ಕರ್ನಾಟಕ ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ಅಧ್ಯಕ್ಷ ಹುದ್ದೆಯ ಜವಾಬ್ದಾರಿಯನ್ನೂ ಇವರಿಗೆ ವಹಿಸಲಾಗಿದೆ.

ಅಲೋಕ್ ಅವರು ರಾಜ್ಯದ ಹಿರಿಯ ಐಪಿಎಸ್ ಅಧಿಕಾರಿ. ಬಿಹಾರ ಪಾಟ್ನಾದ ಅಲೋಕ್ ಮೋಹನ್, 1987ನೇ ಬ್ಯಾಚ್‌ನ ಇವರು ಎಂ.ಎಸ್ಸಿ ಹಾಗೂ ಎಂ.ಫಿಲ್ ವ್ಯಾಸಂಗ ಮಾಡಿದ್ದಾರೆ.. ಅತ್ಯುತ್ತಮ ಸೇವೆಗೆ ರಾಷ್ಟ್ರಪತಿ ಪದಕವನ್ನು ಪಡೆದಿದ್ದಾರೆ. ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದರು.

ಬೆಂಗಳೂರು: ಇಂದು, ನಾಳೆ ಮಳೆ ಸಾಧ್ಯತೆ

ಬೆಂಗಳೂರು: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಇಂದು ಮತ್ತು ನಾಳೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ.

ಶನಿವಾರವು ನಗರದ ವಿವಿಧ ಬಡಾವಣೆಗಳಲ್ಲಿ ಗುಡುಗು ಸಹಿತ ಅರ್ಧ ಗಂಟೆಗೂ ಹೆಚ್ಚು ಸಮಯ ಮಳೆಯಾಯಿತು. ಮಳೆ, ಗಾಳಿಗೆ ವಿವಿಧೆಡೆ ಮರಗಳು ಉರುಳಿದ್ದು, ವಾಹನ ಸಂಚಾರಕ್ಕೆ ತೊಡಕಾಯಿತು.

ನೂತನ ಸರ್ಕಾರದ ಪ್ರಮಾಣ ವಚನ ಸಮಾರಂಭ ವೀಕ್ಷಿಸಲು ಬಂದಿದ್ದವರು ತಮ್ಮ ಊರಿಗೆ ತೆರಳಲು ಕಷ್ಟಪಡಬೇಕಾಯಿತು. ಚಾಮರಾಜಪೇಟೆ, ಅಶೋಕನಗರ, ಹಲಸೂರು, ಮೆಜೆಸ್ಟಿಕ್, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ ಭಾಗದಲ್ಲಿ ಧಾರಾಕಾರವಾಗಿ ಮಳೆ ಸುರಿದಿದೆ.

ಏಕಕಾಲದಲ್ಲಿ 2 ಪದವಿಗೆ ಅವಕಾಶ

ಮೈಸೂರು: 'ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ನ್ಯಾಕ್ 'ಎ' ಪ್ಲಸ್ ಮಾನ್ಯತೆ ದೊರೆತಿದ್ದು, ಏಕಕಾಲದಲ್ಲಿ ಎರಡು ಪದವಿಯನ್ನು ವಿಶ್ವವಿದ್ಯಾಲಯ ನೀಡಬಹುದು' ಎಂದು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಅವರು ಶನಿವಾರ ತಿಳಿಸಿದರು. 7

ಮೋದಿ– ಝೆಲೆನ್‌ಸ್ಕಿ ಮಾತುಕತೆ

ಹಿರೋಷಿಮಾ (ಪಿಟಿಐ): ಪ್ರಧಾನಿ ಮೋದಿ ಅವರು ಶನಿವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜೊತೆ ಮಾತುಕತೆ ನಡೆಸಿದರು.

ಇಲ್ಲಿ ನಡೆಯುತ್ತಿರುವ ಜಿ7 ಶೃಂಗ ಸಭೆಯಲ್ಲಿ ಜಪಾನ್‌ನ ಆಹ್ವಾನದ ಮೇರೆಗೆ ಝೆಲೆನ್‌ಸ್ಕಿ ಪಾಲ್ಗೊಂಡಿದ್ದಾರೆ. 8

'ಸುಪ್ರೀಂ' ಆದೇಶ ಮರುಪರಿಶೀಲನೆ; ಕೇಂದ್ರ ಅರ್ಜಿ

ನವದೆಹಲಿ: ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ದೆಹಲಿಯ ಆಡಳಿತಾರೂಢ ಎಎಪಿ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಮತ್ತೊಂದು ಸುತ್ತಿನ ಸಂಘರ್ಷ ಆರಂಭವಾಗಿದೆ. 9



"ನಿಶ್ಚಿತ ಪಿಂಚಣಿ ನಮ್ಮ ಹಕ್ಕು"

ಕರ್ನಾಟಕ ರಾಜ್ಯ ಸರ್ಕಾರಿ NPS ನೌಕರರ ಸಂಘ (ರಿ.)

ಶ್ರೀ ರಣದೀಪ್ ಸುರ್ಜೇವಾಲಾ
ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ

ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ ಶಿವಕುಮಾರ
ಮಾನ್ಯ ಉಪ ಮುಖ್ಯಮಂತ್ರಿಗಳು

ಡಾ|| ಜಿ. ಪರಮೇಶ್ವರ
ಮಾನ್ಯ ಸಚಿವರು

ಇವರಿಗೆ

ರಾಜ್ಯದ ಸಮಸ್ತ ಸರ್ಕಾರಿ NPS ನೌಕರರು, ಎಲ್ಲಾ ನಿಗಮ ಮಂಡಳಿ, ಅನುದಾನಿತ, ವೃಂದ ಸಂಘಗಳು ಹಾಗೂ ಸ್ವಾಯತ್ತ ಸಂಸ್ಥೆಗಳ NPS ನೌಕರರ ಪರವಾಗಿ ಅಭಿನಂದನೆಗಳು

ಸರ್ಕಾರಿ ವಲಯವನ್ನು ಉತ್ತೇಜಿಸಲು ಐತಿಹಾಸಿಕ ಭದ್ರತೆ ಮೆರೆದ ಕಾಂಗ್ರೆಸ್ ಪಕ್ಷದ ಭರವಸೆಗಳು

2006 ರಿಂದ ನೇಮಕವಾದ, ಪಿಂಚಣಿಗೆ ಅರ್ಹತೆಯುಳ್ಳ ಎಲ್ಲಾ ಸರಕಾರ ಮತ್ತು ಅನುದಾನಿತ ಉದ್ಯೋಗಿಗಳನ್ನು ಹಳೆಯ ಪಿಂಚಣಿ ಯೋಜನೆಯ ಅಡಿಯಲ್ಲಿ ತರಲು ಸಹಾನುಭೂತಿಯ ನಿರ್ಧಾರ

- ಸರಕಾರದಲ್ಲಿ ಖಾಲಿ ಇರುವ ಎಲ್ಲಾ ಅನುಮೋದಿತ ಹುದ್ದೆಗಳನ್ನು ಒಂದು ವರ್ಷದಲ್ಲಿ ಭರ್ತಿ
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ಕಳೆದ 15-20 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶಗಳ ಕಾಂಗ್ರೆಸ್ ಸರಕಾರಗಳ ಆದೇಶಗಳ ಮಾದರಿಯಲ್ಲಿ ಕಾಯಂಗೊಳಿಸುವ ಪ್ರಕ್ರಿಯೆ
- ಅಂಗನವಾಡಿ ಕಾರ್ಯಕರ್ತೆಯರ ವೇತನ ರೂ 11,500/- ರಿಂದ ರೂ. 15,000/- ಹೆಚ್ಚಳ
- ಮಿನಿ ಅಂಗನವಾಡಿ ಕಾರ್ಯಕರ್ತೆಯರ ವೇತನ ರೂ 7,500/- ರಿಂದ ರೂ. 10,000/- ಹೆಚ್ಚಳ ಮತ್ತು ವಿಶ್ರಾಂತಿ ವೇತನ ರೂ. 2 ಲಕ್ಷ
- ಆಶಾ ಕಾರ್ಯಕರ್ತೆಯರಿಗೆ ಮಾಸಿಕ ನಿಶ್ಚಿತ ಗೌರವಧನ ರೂ 5,000/- ರಿಂದ ರೂ 8,000/- ಹೆಚ್ಚಳ
- ಸರಕಾರಿ ಸ್ವಾಮ್ಯದಲ್ಲಿರುವ ಸಾರಿಗೆ ನಿಗಮಗಳ ಉದ್ಯೋಗಿಗಳ ವೇತನ ಇತ್ಯಾದಿ ಸೌಲಭ್ಯಗಳನ್ನು, ಸರಕಾರಿ ಸಮಾನಾಂತರವಾದ ಹುದ್ದೆಗಳ ವೇತನಗಳಿಗೆ ಅನುಗುಣವಾಗಿ, ಆಯಾ ನಿಗಮಗಳ ಆಯವ್ಯಯಗಳ ಪತ್ರಗಳಲ್ಲಿ ಅಡಕವಾಗುವಂತೆ ಕಾರ್ಯಕ್ರಮ ರಚನೆ
- ಬಿಸಿಯೂಟದ ಅಡಿಗೆಯವರಿಗೆ ಮಾಸಿಕ ಗೌರವಧನ ರೂ 3,600ರಿಂದ ರೂ 6,000ಕ್ಕೆ ಹೆಚ್ಚಳ
- ಅತಿಥಿ ಮತ್ತು ಗುತ್ತಿಗೆಯ ಆಧಾರದ ಮೇಲೆ ಸರಕಾರದಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳಿಗೆ ಸರಕಾರಿ ನೇಮಕಾತಿಗಳಲ್ಲಿ ಆದ್ಯತೆ ಇರುವಂತೆ ಕಾನೂನುಗಳಲ್ಲಿ ತಿದ್ದುಪಡಿ
- ಒಟ್ಟು ಪೊಲೀಸ್ ಬಲದಲ್ಲಿ ಶೇ 33ರಷ್ಟು ಮಹಿಳಾ ಪೊಲೀಸ್ ಬಲ ಇರುವಂತೆ ನೇಮಕಾತಿ. ಇಲ್ಲಿ ಕನಿಷ್ಠ ಶೇ 1ರಷ್ಟು ತೃತೀಯ ಲಿಂಗಿಗಳಿಗೆ ಅವಕಾಶ
- ರಾತ್ರಿ ಪಾಳಿಯ ಸಿಬ್ಬಂದಿಗೆ ರೂ 5 ಸಾವಿರ ವಿಶೇಷ ಮಾಸಿಕ ಭತ್ಯೆ ಮತ್ತು ಎಲ್ಲಾ ಪೊಲೀಸರಿಗೆ ವರ್ಷಕ್ಕೆ ಒಂದು ತಿಂಗಳ ವೇತನ ಹೆಚ್ಚುವರಿ ಪಾವತಿ
- ಮಿಲಿಟರಿ ಕಲ್ಯಾಣ ಕೇಂದ್ರಗಳ ಮಾದರಿಯಲ್ಲಿ ಸೇವೆಯಲ್ಲಿರುವ ಮತ್ತು ನಿವೃತ್ತಿ ಹೊಂದಿರುವ ಪೊಲೀಸ್ ಸಿಬ್ಬಂದಿಯ ಯೋಗಕ್ಷೇಮಕ್ಕಾಗಿ ಪ್ರತಿ ಜಿಲ್ಲೆಯಲ್ಲೂ ಪೊಲೀಸ್ ಕಲ್ಯಾಣ ಕೇಂದ್ರ ಸ್ಥಾಪನೆ
- ಆದ್ಯತೆಯ ಮೇರೆಗೆ ಕಾಲ ಕಾಲಕ್ಕೆ ಎಲ್ಲಾ ಖಾಲಿ ಹುದ್ದೆಗಳ ಭರ್ತಿ
- ನಾಲ್ಕು ವರ್ಷದೊಳಗೆ ಎಲ್ಲಾ ಪೊಲೀಸ್ ಸಿಬ್ಬಂದಿಗೂ ವಸತಿ ಸೌಲಭ್ಯ
- ಹೊಸದಾಗಿ ಪೊಲೀಸ್ ಠಾಣೆಗಳ ನಿರ್ಮಾಣ, ಹಾಲಿ ಠಾಣೆಗಳ ನವೀಕರಣ, ಉತ್ತಮ ಸೌಲಭ್ಯ ಮತ್ತು ತಂತ್ರಜ್ಞಾನ ಪರಿಕರಗಳ ನಿಯೋಜನೆ
- ಮಕ್ಕಳ ಹಕ್ಕುಗಳ ರಕ್ಷಣಾ ರಾಷ್ಟ್ರೀಯ ಆಯೋಗದ ಮಾರ್ಗಸೂಚಿಯಂತೆ ಹಾಲಿ ಪೊಲೀಸ್ ಠಾಣೆಗಳನ್ನು ಮಕ್ಕಳ ಸ್ನೇಹಿ ಠಾಣೆಗಳಾಗಿ ಪರಿವರ್ತನೆ
- ಪ್ರತಿ ಜಿಲ್ಲೆಯಲ್ಲಿ ಸುಸಜ್ಜಿತ ಸೈಬರ್ ಪೊಲೀಸ್ ಠಾಣೆಗಳ ನಿರ್ಮಾಣ
- ಸೈಬರ್ ಮತ್ತು ಆರ್ಥಿಕ ಅಪರಾಧಗಳ ತನಿಖಾ ಔನ್ನತ್ಯದ ಸಂಶೋಧನೆಗಾಗಿ ರೂ 2,00 ಕೋಟಿಗಳ ಮೂಲನಿಧಿ

ವಿಶೇಷ ಸಹಕಾರ ನೀಡಿದ

ಶ್ರೀ ರಣದೀಪ್ ಸುರ್ಜೇವಾಲಾ,
ಎ.ಐ.ಸಿ.ಸಿ. ಪ್ರಧಾನ ಕಾರ್ಯದರ್ಶಿ ಹಾಗೂ ಕರ್ನಾಟಕ ಉಸ್ತುವಾರಿ

ಡಾ|| ಜಿ ಪರಮೇಶ್ವರ, ಅಧ್ಯಕ್ಷರು ಪ್ರಣಾಳಿಕೆ ಸಮಿತಿ

ಪ್ರೊ.ಕೆ.ರಾಧಾಕೃಷ್ಣ, ಉಪಾಧ್ಯಕ್ಷರು, ಪ್ರಣಾಳಿಕೆ ಸಮಿತಿ

ಶ್ರೀ ಮಧುಬಂಗಾರಪ್ಪ, ಉಪಾಧ್ಯಕ್ಷರು, ಪ್ರಣಾಳಿಕೆ ಸಮಿತಿ

ಇವರುಗಳಿಗೆ ವಿಶೇಷ ಧನ್ಯವಾದಗಳು

ಈ ಎಲ್ಲಾ ಬೇಡಿಕೆಗಳನ್ನು ಶ್ರೀ ಸಿದ್ದರಾಮಯ್ಯ, ಶ್ರೀ ಡಿ.ಕೆ.ಶಿವಕುಮಾರ ನೇತೃತ್ವದ ಘನ ಸರ್ಕಾರವು ಕಾಲಮಿತಿಯಲ್ಲಿ ಈಡೇರಿಸಿ ಸಮಸ್ತ ಸರ್ಕಾರಿ ನೌಕರರ ಹೃದಯದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿ ಎಂದು ಹಾರೈಸುತ್ತೇವೆ.

ಶಾಂತಾರಾಮ
ರಾಜ್ಯಾಧ್ಯಕ್ಷರು, ಕ.ರಾ.ಸ NPS ನೌ.ಸಂಘ

ಸಿದ್ದಪ್ಪ ಸಂಗಣ್ಣನವರ
ರಾಜ್ಯ ಹಿರಿಯ ಉಪಾಧ್ಯಕ್ಷರು, ಕ.ರಾ.ಸ NPS ನೌ.ಸಂಘ

ರಾಜ್ಯ ಪದಾಧಿಕಾರಿಗಳು ಹಾಗೂ ರಾಜ್ಯ ಸಮಿತಿ ಸದಸ್ಯರು ಕ.ರಾ.ಸ NPS ನೌ.ಸಂಘ, ಜಿಲ್ಲಾಧ್ಯಕ್ಷರು ಹಾಗೂ ಜಿಲ್ಲಾ ಪದಾಧಿಕಾರಿಗಳು ಕ.ರಾ.ಸ NPS ನೌ.ಸಂಘ
ತಾಲ್ಲೂಕು ಅಧ್ಯಕ್ಷರು, ತಾಲ್ಲೂಕು ಪದಾಧಿಕಾರಿಗಳು ಕ.ರಾ.ಸ NPS ನೌ.ಸಂಘ ಹಾಗೂ ಸಮಸ್ತ NPS ನೌಕರರು
ಎಲ್ಲಾ ನಿಗಮ ಮಂಡಳಿ, ಅನುದಾನಿತ, ವೃಂದ ಸಂಘಗಳು ಹಾಗೂ ಸ್ವಾಯತ್ತ ಸಂಸ್ಥೆಗಳ NPS ನೌಕರರು

ಐಪಿಎಲ್ ಪಂದ್ಯ ವೀಕ್ಷಣೆ ರೋಗಿಗಳಿಗೆ ಅವಕಾಶ

ಬೆಂಗಳೂರು: ಮಣಿಪಾಲ್ ಆಸ್ಪತ್ರೆಗಳ ಸಮೂಹವು ಕ್ಯಾನ್ಸರ್ ರೋಗಿಗಳಿಗೆ ವಿಶೇಷ ಅನುಭವ ಒದಗಿಸಲು ಭಾನುವಾರ ಐಪಿಎಲ್ ಕ್ರಿಕೆಟ್ ಪಂದ್ಯ ವೀಕ್ಷಣೆಗೆ ಅವಕಾಶ ಕಲ್ಪಿಸಿದೆ. ಆರ್‌ಸಿಬಿ ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿದೆ.

ವೈದ್ಯಕೀಯ ಸೇವೆಗೆ ಸಂಬಂಧಿಸಿದಂತೆ ಆರ್‌ಸಿಬಿ ತಂಡದ ಜತೆಗೆ ಆಸ್ಪತ್ರೆ ಒಪ್ಪಂದ ಮಾಡಿಕೊಂಡಿದೆ. 20 ಕ್ಯಾನ್ಸರ್ ಪೀಡಿತರಿಗೆ ಪಂದ್ಯ ವೀಕ್ಷಣೆಗೆ ಆಸ್ಪತ್ರೆ ಅವಕಾಶ ಕಲ್ಪಿಸಲಿದೆ. ವಿಶ್ರಾಂತಿ ಮತ್ತು ಮನೋರಂಜನೆ ಕಲ್ಪಿಸುವುದು ಈ ಕ್ರಮದ ಮುಖ್ಯ ಉದ್ದೇಶವಾಗಿದೆ.

ಕ್ರೀಡಾಂಗಣಕ್ಕೆ ತೆರಳುವ ಮೊದಲು ರೋಗಿಗಳ ಆರೋಗ್ಯದ ತಪಾಸಣೆ ಆಗಲಿದೆ ಎಂದು ಆಸ್ಪತ್ರೆ ತಿಳಿಸಿದೆ.

ಬೈಯಪ್ಪನಹಳ್ಳಿ–ಕೆ.ಆರ್.ಪುರ ಮೆಟ್ರೊ ಜುಲೈ 15ರಿಂದ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್‌ಗೆ ನೇರ ಮೆಟ್ರೊ ರೈಲು ಸಂಚಾರಕ್ಕೆ ತೊಡಕಾಗಿರುವ ಬೈಯಪ್ಪನಹಳ್ಳಿ ಮತ್ತು ಕೆ.ಆರ್.ಪುರ ನಡುವಿನ ಬಾಕಿ ಕಾಮಗಾರಿ ಚುರುಕಿನಿಂದ ನಡೆಯುತ್ತಿದೆ. ಜುಲೈ 15ರಿಂದ ಈ ಎರಡು ನಿಲ್ದಾಣಗಳ ನಡುವೆ ರೈಲುಗಳ ಕಾರ್ಯಚರಣೆಗೆ ಬಿಎಂಆರ್‌ಸಿಎಲ್ ಸಿದ್ಧತೆ ನಡೆಸಿದೆ.

ಬೆನ್ನಿಗಾನಹಳ್ಳಿ ಬಳಿ ಹಾದು ಹೋಗಿರುವ ಬೆಂಗಳೂರು– ಸೇಲಂ ರೈಲ್ವೆ ಮಾರ್ಗದ ಮೇಲ್ಭಾಗದಲ್ಲಿ ತೆರೆದ ವೆಬ್ ಗರ್ಡರ್ ಅಳವಡಿಕೆ ಮಾಡುವುದು ಸವಾಲಿನ ಕೆಲಸವಾಗಿತ್ತು. ಅದನ್ನು ಫೆಬ್ರುವರಿಯಲ್ಲೇ ಯಶಸ್ವಿಯಾಗಿ ಪೂರ್ಣಗೊಳಿಸಿದೆ. ವಯಡಕ್ಟ್ ಕಾಮಗಾರಿ ಪೂರ್ಣಗೊಂಡಿದ್ದು, ಹಳಿ ಅಳವಡಿಕೆ ಪ್ರಗತಿಯಲ್ಲಿದೆ. ಬೆನ್ನಿಗಾನಹಳ್ಳಿ ನಿಲ್ದಾಣದಲ್ಲಿ ಟ್ರ್ಯಾಕ್, ಸಿಗ್ನಲಿಂಗ್ ಮತ್ತು ನಿಲ್ದಾಣದ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಎಲ್ಲ ಕಾಮಗಾರಿಗಳು ಇನ್ನೊಂದು ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಹೇಳುತ್ತಾರೆ. ನಿತ್ಯ 1 ಲಕ್ಷಕ್ಕೂ ಹೆಚ್ಚು ಜನ ಈ ಮಾರ್ಗದಲ್ಲಿ ಪ್ರಯಾಣಿಸುವರು ಎಂದು ಅಧಿಕಾರಿಗಳು ಅಂದಾಜಿಸಿದ್ದರು. ಆದರೆ, ಸದ್ಯ 20 ಸಾವಿರ ಜನ ಪ್ರಯಾಣಿಸುತ್ತಿದ್ದಾರೆ ಎಂದು ಅಧಿಕಾರಿಗಳು ಹೇಳುತ್ತಾರೆ.

ಪಾದಚಾರಿ ಮಾರ್ಗ ದುರಸ್ತಿ

ಬೆಂಗಳೂರು: ಸದಾನಂದನಗರದ 8ನೇ ಮುಖ್ಯರಸ್ತೆ ಬಿಡಿಎ ಪಾರ್ಕ್‌ಗೆ ಹೊಂದಿಕೊಂಡಿರುವ ಪಾದಚಾರಿ ಮಾರ್ಗದ ದುರಸ್ತಿಯನ್ನು ಶನಿವಾರ ಕೈಗೊಳ್ಳಲಾಯಿತು.

ಈ ಮಾರ್ಗದಲ್ಲಿ 10ಕ್ಕೂ ಹೆಚ್ಚು ಗುಂಡಿಗಳು ಬಿದ್ದಿದ್ದವು. ಇದರಿಂದ ವಾಯುವಿಹಾರಿಗಳಿಗೆ ಸಮಸ್ಯೆಯಾಗುತ್ತಿತ್ತು. ಹಲವರು ಬಿದ್ದು ಗಾಯ ಮಾಡಿಕೊಂಡಿದ್ದರು.

ಮೇ 16ರ 'ಪ್ರಜಾವಾಣಿ' ಸಂಚಿಕೆಯಲ್ಲಿ 'ಸ್ಮಾರ್ಟ್ ಆಗದ ಪಾದಚಾರಿ ಮಾರ್ಗಗಳು' ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ಬಿಬಿಎಂಪಿ ಸಿಬ್ಬಂದಿ ಈ ಮಾರ್ಗದಲ್ಲಿ ಚಪ್ಪಡಿ ಕಲ್ಲುಗಳನ್ನು ಅಳವಡಿಸುವ ಕಾಮಗಾರಿ ಕೈಗೊಂಡಿದ್ದಾರೆ.

ಸಿಕ್ಕಿಂ: 400 ಮಂದಿ ರಕ್ಷಣೆ

ಗ್ಯಾಂಗ್ಟಕ್ (ಪಿಟಿಐ): ಭಾರಿ ಮಳೆಯಿಂದಾಗಿ ಸಿಕ್ಕಿಂನಲ್ಲಿ ಭೂಕುಸಿತ ಮತ್ತು ರಸ್ತೆ ತಡೆಯುಂಟಾಗಿದ್ದು, ಅತಂತ್ರರಾಗಿದ್ದ ಸುಮಾರು 400 ಪ್ರವಾಸಿಗರನ್ನು ರಕ್ಷಣೆ ಮಾಡಲಾಗಿದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, **ಮೆ॥ ಆಲ್ಫ ಡಿಸೈನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್** (ಇನ್ನುಮುಂದೆ ಇವರನ್ನು **"ಮಾಲೀಕರು"** ಎಂದು ಕರೆಯಲ್ಪಡುವ), ಇವರ ಮಾಲೀಕತ್ವದ **'ಷೆಡ್ಯೂಲ್'** ನಲ್ಲಿ ವಿವರಿಸಿರುವ ಸ್ಥಿರಾಸ್ತಿಯ ಸ್ವತ್ತು ಮತ್ತು ಇನ್ನು ಮುಂದೆ ಇದನ್ನು **"ಷೆಡ್ಯೂಲ್ ಸ್ವತ್ತು"** ಎಂದು ಕರೆಯಲ್ಪಡುವ, ಈ ಸ್ಥಿರಾಸ್ತಿ ಸ್ವತ್ತನ್ನು ನಮ್ಮ ಕಕ್ಷೀದಾರರು ಖರೀದಿಸಲು ಇಚ್ಛಿಸಿರುತ್ತಾರೆ.

ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತಿಗೆ ನಾವೇ ಏಕಮಾತ್ರ ಮಾಲೀಕರಾಗಿರುತ್ತೇವೆ ಹಾಗೂ ಷೆಡ್ಯೂಲ್ ಸ್ವತ್ತನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ. ಹಾಗೂ ಸದರಿ ಷೆಡ್ಯೂಲ್ ಸ್ವತ್ತು ಎಲ್ಲಾ ಋಣಭಾರ ಅಡಮಾನ, ಭಾಗಾಂಶ, ಬಾಕಿ ದಾವೆಗಳು ಮತ್ತು ಇತರೆ ಯಾವುದೇ ಮೂರನೇ ವ್ಯಕ್ತಿಗಳ ಹಕ್ಕು/ಆಕ್ಷೇಪಣೆಗಳಿಂದ ಮುಕ್ತವಾಗಿದೆ ಎಂಬುದಾಗಿ ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ ವ್ಯಕ್ತಿಗಳು, ಷೆಡ್ಯೂಲ್ ಸ್ವತ್ತಿನ ಸಂಬಂಧದಲ್ಲಿ ಅಥವಾ ಅದರ ಯಾವುದೇ ಭಾಗ ಅಥವಾ ಯಾವುದೇ ಸ್ವರೂಪದ ಯಾವುದೇ ಅನುಕೂಲಗಳು, ಆಕ್ಷೇಪಣೆ, ಡಿಮ್ಯಾಂಡ್, ಹಕ್ಕು ಕೇಳಿಕೆ, ಹಕ್ಕು ಬಾಧ್ಯತೆ ಮತ್ತು ಆಸಕ್ತಿ ಹೊಂದಿದ್ದರೆ, ಮೂಲ ದಾಖಲೆ ಪತ್ರಗಳ ಬೆಂಬಲದೊಡನೆ ಸದರಿ ನೋಟೀಸ್ ಪ್ರಕಟವಾದ **15 (ಹದಿನೈದು) ದಿನಗಳ** ಕಾಲಾವಧಿಯ ಒಳಗೆ ಕೆಳಗೆ ತಿಳಿಸಿರುವ ವಿಳಾಸಕ್ಕೆ ಕಳುಹಿಸಬೇಕಾಗಿ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಅಂತಹ ಯಾವುದೇ ಆಕ್ಷೇಪಣೆಗಳು ನಿಗದಿತ ಸದರಿ ಕಾಲಾವಧಿಯ ಒಳಗೆ ಬಾರದಿದ್ದರೆ, ಮೇಲೆ ತಿಳಿಸಿರುವ ಮಾಲೀಕರ ಹೊರತಾಗಿ ಬೇರೆಯಾರೂ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಯಾವುದೇ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮನ್ನು ಹೊಂದಿರುವುದಿಲ್ಲವೆಂದು ಭಾವಿಸಲಾಗುವುದು ಹಾಗೂ ಆ ಸಂದರ್ಭದಲ್ಲಿ ನಮ್ಮ ಕಕ್ಷಿದಾರರು ಸದರಿ ಮಾಲೀಕರೊಂದಿಗೆ ಉದ್ದೇಶಿತ ವ್ಯವಹಾರ ನಡೆಸಲು ಸ್ವತಂತ್ರರಾಗಿರುವರೆಂದು ತಿಳಿಯಲಾಗುವುದು. ನಿಗದಿತ ಸದರಿ ಕಾಲಾವಧಿ ಮುಗಿದ ನಂತರ ಬರುವ ಯಾವುದೇ ರೀತಿಯ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳನ್ನು ನಾವು ಸ್ವೀಕರಿಸುವುದಿಲ್ಲ ಮತ್ತು ಅಂತಹ ಆಕ್ಷೇಪಣೆಗಳು ಮತ್ತು/ಅಥವಾ ಕ್ಲೇಮುಗಳು ನಮ್ಮ ಕಕ್ಷಿದಾರರ ಮೇಲೆ ಬಂಧನೆಯಾಗುವುದಿಲ್ಲ.

ಷೆಡ್ಯೂಲ್

ಷೆಡ್ಯೂಲ್ ಸ್ವತ್ತು

ಐಟಂ ನಂ.1:

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಟಂನಲ್ಲೂರು ಗ್ರಾಮದಲ್ಲಿರುವ ಹಾಗೂ ದೊಡ್ಡಬಾನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ. 71 ಮತ್ತು 72 ರ ಸ್ಥಿರಾಸ್ತಿ ಸ್ವತ್ತಿನ ಖಾತ ನಂ. 171/171/71/72, ಇ–ಖಾತ ನಂ. 150200401300200171, ಹಳೆ ಖಾತ ನಂ. 129/171ರ ವಾಣಿಜ್ಯ ಭೂಮಿಯ ಒಟ್ಟು ವಿಸ್ತೀರ್ಣ 12,646.42 ಚದರ ಮೀಟರುಗಳು (ಅಥವಾ 1,36,125 ಚದರ ಅಡಿಗಳು ಅಥವಾ 3 ಎಕರೆ 5 ಗುಂಟೆಗಳು) ಹಾಗೂ (ಇದರಲ್ಲಿ ಕಾಡುಗೋಡಿ–ಹೊಸಕೋಟೆ ಮುಖ್ಯ ರಸ್ತೆಗೆ ವಿಸ್ತೀರ್ಣ 1 ಗುಂಟೆ ಅಥವಾ 1,089 ಚದರ ಅಡಿಯ ಕಡಿಮೆ ಜಾಗವನ್ನು ಮೀಸಲಿಟ್ಟಿದೆ) ಮತ್ತು ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವ : ಕಾಡುಗೋಡಿ–ಹೊಸಕೋಟೆ ಮುಖ್ಯ ರಸ್ತೆ;
ಪಶ್ಚಿಮ : ಸರ್ವೆ ನಂ. 70 ರ ಭೂಮಿ;
ಉತ್ತರ : ಸರ್ವೆ ನಂ. 73 ರ ಭೂಮಿ; ಮತ್ತು
ದಕ್ಷಿಣ : ಸರ್ವೆ ನಂ. 71 ರ ಉಳಿದ ಭೂಮಿ.

ಐಟಂ ನಂ.2:

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕು, ಬಿದರಹಳ್ಳಿ ಹೋಬಳಿ, ಕಾಟಂನಲ್ಲೂರು ಗ್ರಾಮದಲ್ಲಿರುವ ಹಾಗೂ ದೊಡ್ಡಬಾನಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಸರ್ವೆ ನಂ. 71ರ ಸ್ಥಿರಾಸ್ತಿ ಸ್ವತ್ತಿನ ಖಾತ ನಂ. 170/170/71, ಇ–ಖಾತ ನಂ. 150200401300200170, ಹಳೆ ಖಾತ ನಂ. 128/171ರ ವಾಣಿಜ್ಯ ಭೂಮಿಯ ಒಟ್ಟು ವಿಸ್ತೀರ್ಣ 8,296.06 ಚದರ ಮೀಟರುಗಳು (ಅಥವಾ 89,298 ಚದರ ಅಡಿಗಳು ಅಥವಾ 2 ಎಕರೆ 2 ಗುಂಟೆಗಳು) ಹಾಗೂ (ಇದರಲ್ಲಿ ಕಾಡುಗೋಡಿ–ಹೊಸಕೋಟೆ ಮುಖ್ಯ ರಸ್ತೆಗೆ ವಿಸ್ತೀರ್ಣ 11 ಗುಂಟೆಗಳು ಅಥವಾ 11,979 ಚದರ ಅಡಿಯ ಕಡಿಮೆ ಜಾಗವನ್ನು ಮೀಸಲಿಟ್ಟಿದೆ) ಮತ್ತು ಈ ಸ್ವತ್ತಿನ ಚಕ್ಕುಬಂದಿ ಈ ಕೆಳಕಂಡಂತಿರುವುದು:

ಪೂರ್ವ : ಕಾಡುಗೋಡಿ–ಹೊಸಕೋಟೆ ಮುಖ್ಯ ರಸ್ತೆ;
ಪಶ್ಚಿಮ : ಸರ್ವೆ ನಂ. 70 ರ ಭೂಮಿ;
ಉತ್ತರ : ಸರ್ವೆ ನಂ. 71 ರ ಉಳಿದ ಭೂಮಿ; ಮತ್ತು
ದಕ್ಷಿಣ : ಕೋನದಾಸಪುರ ಗ್ರಾಮದ ಗಡಿ.

ಸ್ಥಳ: ಬೆಂಗಳೂರು
ದಿನಾಂಕ: 21ನೇ ಮೇ, 2023

ಶ್ರೀಕರ ಪಿ.ಕೆ. / ವಿನೂತ್ ಗೌಡ
ಪಾಲುದಾರರು
ದುಅ ಅಸೋಸಿಯೇಟ್ಸ್,
ಅಡ್ವೊಕೇಟ್ಸ್ ಮತ್ತು ಸಾಲಿಸಿಟರ್ಸ್,
130/1, ಎರಡನೇ ಅಂತಸ್ತು, ಹಲಸೂರು ರಸ್ತೆ, ಬೆಂಗಳೂರು – 560 042
ದೂ. ಸಂ. 91–80–25588799/25589909
ಇ–ಮೇಲ್: vinuth@duaassociates.com

ಜವಾಹರಲಾಲ್ ನೆಹರು ಉನ್ನತ ವೈಜ್ಞಾನಿಕ ಸಂಶೋಧನಾ ಕೇಂದ್ರ, ಜಕ್ಕೂರು, ಬೆಂಗಳೂರು–560064

ಕರ್ನಾಟಕ, ಭಾರತ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಧೀನದ ಸ್ವಾಯತ್ತ ಸಂಸ್ಥೆ ಹಾಗೂ ಪರಿಗಣಿತ ವಿಶ್ವವಿದ್ಯಾನಿಲಯ

JNCASR · Azadi Ka Amrit Mahotsav · G20

ಜಾಹೀರಾತು ಸಂಖ್ಯೆ: ಜೆಎನ್‌ಸಿಎಎಸ್‌ಆರ್/ಎಒ/03/2023 ದಿನಾಂಕ: 19–05–2023

ಅಧಿಸೂಚನೆ

ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಧೀನದ ಸ್ವಾಯತ್ತ ಸಂಶೋಧನಾ ಸಂಸ್ಥೆ ಮತ್ತು ಪರಿಗಣಿತ ವಿಶ್ವವಿದ್ಯಾಲಯವಾಗಿರುವ ಜೆಎನ್‌ಸಿಎಎಸ್‌ಆರ್ ಸಂಸ್ಥೆಯು, ನೇರ ನೇಮಕಾತಿ ಆಧಾರದ ಮೇಲೆ, ಹತ್ತು **ಜೂನಿಯರ್ ಅಡ್ಮಿನ್ ಅಸಿಸ್ಟೆಂಟ್** ಮತ್ತು ಮೂರು **ಟೆಕ್ನಿಕಲ್ ಅಸಿಸ್ಟೆಂಟ್ ಹುದ್ದೆಗಳಿಗೆ** ಅರ್ಜಿಗಳನ್ನು ಆಹ್ವಾನಿಸಿದೆ. ಹೆಚ್ಚಿನ ವಿವರಗಳಿಗಾಗಿ ಕೇಂದ್ರದ ವೆಬ್‌ಸೈಟ್ ಪರಿಶೀಲಿಸಿರಿ: **https://www.jncasr.ac.in/openings/administrative-staff.**

ಸಹಿ/– ಆಡಳಿತಾಧಿಕಾರಿ
ಜೆಎನ್‌ಸಿಎಎಸ್‌ಆರ್

BANGALORE SHOWROOMS

SHIVAJI NAGAR • J.P.NAGAR • GANDHI BAZAR • R.T.NAGAR • HSR LAYOUT • KANAKAPURA • UTTARAHALLI • MARATHAHALLI • RAMAMURTHY NAGAR
HESARAGATTA • RAMNAGARA • NELAMANGALA • KENGERI • TUMKUR • RR NAGAR • YESHWANTHPUR • BANASHANKARI • MALLESHWARAM
JAYANAGAR • YELACHENAHALLI • KG ROAD • RAJAJI NAGAR • VIJAYANAGAR • CHINTAMANI • YELHANKA • KORAMANGALA • DEVANAHALLI

Available at Ramraj Cotton Showrooms and All Leading Textile Shops | shop online @ www.ramrajcotton.in

ಮಿರಾಕಲ್ ಡ್ರಿಂಕ್ಸ್ ನಿಮ್ಮ ಆರೋಗ್ಯವನ್ನು ಬೆಂಬಲಿಸುತ್ತದೆ

miracle drinks® NEO AYURVEDA Be Healthy Again

✓ ಕಣ್ಣು ದೃಷ್ಟಿ ಮಂದ ಆಗುತ್ತಿದಿಯೆ?
✓ ಶುಗರ್ ಲೆವಲ್ ನಿಯಂತ್ರಣವಿಲ್ಲವೆ?
✓ ಮೈ ಕೈ ನೋವು ಸುಸ್ತು ಇದೆಯೆ?
✓ ಗಾಯಗಳು ವಾಸಿಯಾಗುತ್ತಿಲ್ಲವೆ?
✓ ಕಿಡ್ನಿ (CKD) ರೋಗವಿದೆಯೆ?

ಚಿಂತಿಸಬೇಡಿ
ಶುಗರ್‌ಕೇರ್ ನಿಮ್ಮ ಆರೋಗ್ಯದಲ್ಲಿ ಬದಲಾವಣೆಗಳನ್ನು ತರುತ್ತದೆ.

ಟೆಸ್ಟಿಮೋನಿಯಲ್

ಮಿರಾಕಲ್ ಡ್ರಿಂಕ್ಸ್ ಆಯುರ್ವೇದಿಕ್ ಕ್ಲಿನಿಕ್:
ಮೈಸೂರು । ಮಂಗಳೂರು । ಹುಬ್ಬಳ್ಳಿ । ಕೋಲಾರ । ಹಾಸನ । ಶಿವಮೊಗ್ಗ । ತುಮಕೂರು । ವಿಜಯಪುರ, ಬೆಂಗಳೂರು (ವೈಟ್ ಫೀಲ್ಡ್, ಆರ್.ಟಿ ನಗರ, ಜೆ.ಪಿ ನಗರ, ಎಚ್.ಎಸ್.ಆರ್ ಲೇಔಟ್, ನಾಗರಬಾವಿ) ಶ್ರೀ ವಿದ್ಯಾ ಹೆಲ್ತ್ & ವೆಲ್ನೆಸ್ ಜಿಗಣಿ, ಬೆಂಗಳೂರು.

ಉಚಿತ ಆರೋಗ್ಯ ಸಮಾಲೋಚನೆಗಾಗಿ: 080-6904 3800 ಡಿಸ್ಟ್ರಿಬ್ಯೂಷನ್ ವಿಚಾರಣೆಗಾಗಿ ಸಂಪರ್ಕಿಸಿ: +91-91089 96002

Whatsapp on: +91-91089 96005
www.miracledrinks.in
FDA U.S. FOOD & DRUG ADMINISTRATION REGISTERATION No. 14900359152
AYUSH Premium

*Conditions apply. • To locate your nearest store and know more on 6366920017. Buy online at tanishq.co.in or Download our App

Showrooms at **Bangalore:** Dickenson Road, Koramangala, Kamanahalli, E-City, Marathahalli, HSR Layout, Phoenix Mall, Nexus Shantiniketan Mall, Bannerghata, Jaynagar, Banashankari, Vijayanagar, Kanakapura Road, Basaveshwaranagar, New BEL Road, **New Stores at Whitefield** Tel: 080 22633335, KR Puram; Subhash Nagar Batarahalli. Tel: 9611730802, RR Nagar-BEML Layout, Jawaharlal Nehru Road. Tel: 080 47574666, Relocated to New Premises at Malleswaram-Sampige Road. Tel: 9164326100; Yelahanka, Opp. to The Galleria Mall. Tel: 080 43364336 **Mysore:** No. 2927, Bangalore -Nilgiri Road, Near Suburban Bus Stand. Tel: 821 428 0074; **Tumkur:** ADR Complex, Ground Floor, General Kariyappa Road, K R Extension. Tel: 816 4041666

ಭಾನುವಾರ ಉಷ್ಣಾಂಶ: 33° ಗರಿಷ್ಠ, 23° ಕನಿಷ್ಠ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ ಮಳೆಯಾಗುವ ಸಾಧ್ಯತೆ ಇದೆ

ಮುನ್ಸೂಚನೆ	ಸೋಮವಾರ	ಮಂಗಳವಾರ	ಬುಧವಾರ
	33° 22°	33° 22°	33° 22°

ನಾಳೆಯಿಂದ ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ವಹಣಾ ಕಾರ್ಯದ ಹಿನ್ನೆಲೆಯಲ್ಲಿ ನಗರದ ವಿವಿಧೆಡೆ ಇದೇ 22ರಿಂದ 26ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಕೆಪಿಟಿಸಿಎಲ್ ಪ್ರಕಟಿಸಿದೆ.

22ಕ್ಕೆ: ಶೋಭಾ ಫಾರೆಸ್ಟ್ ಅಪಾರ್ಟ್‌ಮೆಂಟ್, ತಲಘಟ್ಟಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವ್ಯತ್ಯಯವಾಗಲಿದೆ.

23ಕ್ಕೆ: ಮಂತ್ರಿ ಅಪಾರ್ಟ್‌ಮೆಂಟ್, ತಲಘಟ್ಟಪುರ, ರಘುವನಹಳ್ಳಿ, ಗುಬ್ಬಲಾಳ, ಕುವೆಂಪು ನಗರ, ವಿ.ವಿ. ನಗರ, ವಿ.ವಿ. ಲೇಔಟ್, ಬಾಲಾಜಿ ಲೇಔಟ್, ರಾಯಲ್ ಫಾರಂ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಮಧ್ಯಾಹ್ನ 3 ಗಂಟೆವರೆಗೆ ವ್ಯತ್ಯಯವಾಗಲಿದೆ.

24ಕ್ಕೆ: ಲಕ್ಷ್ಮಿ ಲೇಔಟ್, ಸೌತ್‌ಸಿಟಿ ಅಪಾರ್ಟ್‌ಮೆಂಟ್‌ಗಳು, ಕಮ್ಮನಹಳ್ಳಿ, ಶಾಂತಿ ನಿಕೇತನ, ಪಾಂಡುರಂಗ ನಗರ ಲೇಔಟ್, ಬಿಡಬ್ಲ್ಯುಎಸ್‌ಎಸ್‌ಬಿ ಕ್ವಾರ್ಟರ್ಸ್, ಮೋಹನ್ ಕಾಂಪೌಂಡ್, ಅರಕೆರೆ ಮೈಕೊ ಲೇಔಟ್, ಸಿಂಡಿಕೇಟ್ ಬ್ಯಾಂಕ್ ಕಾಲೋನಿ, ತಿಮ್ಮಪ್ಪ ರೆಡ್ಡಿ ಲೇಔಟ್, ಬೃಂದಾವನ ಲೇಔಟ್, ವಿಜಯಶ್ರೀ ಲೇಔಟ್, ಓಂಕಾರ ನಗರ, ರಾಮಯ್ಯ ಸಿಟಿ, ಎನ್‌ಕ್ಲೇವ್, ಕ್ಲಾಸಿಕ್ ಆರ್ಚರ್ಡ್, ವೆಂಕಟೇಶ್ವರ ಬಿಡಿಎ ಲೇಔಟ್, ಬಿ.ಕೆ. ವೃತ್ತ, ಏಂಜಲ್ ಸವಾರಿ ದಿನ್ನೆ, ಗೊಟ್ಟಿಗೆರೆ, ಪದ್ಮನಾಭ ನಗರ, ಬಿಡಬ್ಲ್ಯುಎಸ್‌ಎಸ್‌ಬಿ, ಐಶ್ವರ್ಯ, ಎಚ್‌ಎಸ್‌ಆರ್ 5ನೇ ಸೆಕ್ಟರ್ ಬಟರ್‌ಫ್ಲೈ ಕಾಲೋನಿ, ಗ್ರೀನ್‌ಫ್ ಅಪಾರ್ಟ್‌ಮೆಂಟ್ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವ್ಯತ್ಯಯವಾಗಲಿದೆ.

26ಕ್ಕೆ: ಅವಲಹಳ್ಳಿ, ನಂದಿ ಗಾರ್ಡನ್ ಅಪಾರ್ಟ್‌ಮೆಂಟ್ಸ್, ಅಂಜನಾಪುರ ಗ್ರಾಮ, ರಾಯಲ್ ಲೇಕ್ ಫ್ರಂಟ್ ವಿವ್ ರೆಸಿಡೆನ್ಸಿ, ಬ್ರೂಕ್ಸ್ ಲೇಔಟ್, ದೀಪಕ್ ಲೇಔಟ್, ವಡ್ಡರಪಾಳ್ಯ, ಅವಲಹಳ್ಳಿ ಸ್ಲಂ, ಅವಲಹಳ್ಳಿ ಬಿಡಿಎ ಲೇಔಟ್, ರಾಯಲ್ ಪಾರ್ಕ್, ಶ್ರೀನಿವಾಸ್ ರೆಡ್ಡಿ ಲೇಔಟ್, ಬ್ಯಾಂಕ್ ಆಫೀಸರ್ಸ್ ಲೇಔಟ್, ನಾರಾಯಣ ನಗರ 1 ಮತ್ತು 2ನೇ ಬ್ಲಾಕ್, ವಜ್ರಹಳ್ಳಿ, ಬಿಡಿಎ 6ನೇ ಹಂತ, ಶೋಭಾ ಅಪಾರ್ಟ್‌ಮೆಂಟ್, ಬಿಡಿಎಸ್ 8ನೇ ಹಂತ ಬಿಡಿಎ ಲೇಔಟ್, ರಾಘವಪಾಳ್ಯ, ಗುಂಡು ತೋಪು, ವೇವರ್ ಕಾಲೋನಿಯ 10ರಿಂದ 9ನೇ ಕ್ರಾಸ್‌ವರೆಗೂ, ಮಾರುತಿನಗರ, ಪಿಳ್ಳಗಾನಹಳ್ಳಿ, ಗೊಟ್ಟಿಗೆರೆ, ಎಂಎಲ್‌ಎ ಲೇಔಟ್, ಭೂಪಾ ಲೇಔಟ್, ಆಶ್ರಮ ರಸ್ತೆ, ಹಿಮಗಿರಿ ಮಿಡೋಸ್, ಕಮ್ಮನಹಳ್ಳಿ, ಬಾಲಾಜಿ ಗಾರ್ಡನ್ ಲೇಔಟ್, ಬಸವಪುರ, ನೋಬೆಲ್ ರೆಸಿಡೆನ್ಸಿ, ನಂದಿ ವುಡ್ ಅಪಾರ್ಟ್‌ಮೆಂಟ್, ಎಸ್.ಎಲ್.ಎನ್ ರಾಜ್ ಲೇಕ್ ವಿವ್ ಅಪಾರ್ಟ್‌ಮೆಂಟ್, ಮೈಲಸಂದ್ರ, ಹೊಮ್ಮದೇವನಹಳ್ಳಿ ಪ್ರದೇಶಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. SBC-GSU-ENGG-2023-15 ದಿನಾಂಕ: 16.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಹೊಸೂರು ಯಾರ್ಡ್	ರೂ. 2,59,00,284/-

ಮರುರೂಪಿಸುವಿಕೆ: ಪಾಯಿಂಟ್ ಮತ್ತು ಕ್ರಾಸಿಂಗ್‌ಗಳ ಜೋಡಣೆ ಸೇರಿದಂತೆ ಟ್ರ್ಯಾಕ್‌ನ ಲಿಂಕ್ ಮಾಡುವುದು, ರಿಗ್ರೇಡಿಂಗ್ ಕೆಲಸ, ನಿಲುಭಾರದ ಸಂಗ್ರಹಣೆ, ಪೂರೈಕೆ ಮತ್ತು ಡಂಪಿಂಗ್ ಮತ್ತು ಇತರ ವಿವಿಧ ಕಾಮಗಾರಿಗಳು.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07-06-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಮುಖ್ಯ ಯೋಜನಾ ವ್ಯವಸ್ಥಾಪಕರು / ಗತಿ ಶಕ್ತಿ ಬೆಂಗಳೂರು

PUB/103/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/12/2023 ದಿನಾಂಕ: 11.05.2023 ಗೆ ತಿದ್ದುಪಡಿ

ಮೇಲಿನ ಟೆಂಡರ್ ನೋಟೀಸ್‌ನಲ್ಲಿ ಮಾರ್ಪಡಿಸಿದ ಕೆಲಸದ ಹೆಸರನ್ನು ಕೆಳಗೆ ನಮೂದಿಸಲಾಗಿದೆ:

ಮಾರ್ಪಡಿಸಿದ ಕೆಲಸದ ಹೆಸರು: ಗದಗ-ವಾಡಿ ಹೊಸ ಬಿಜಿ ಲೈನ್:- ಲಿಂಗನಬಂಡಿ-ಹನುಮಾಪುರ ನಡುವೆ ಕಿ.ಮೀ. 41.00 ರಿಂದ ಕಿ.ಮೀ. 44.600 ವರೆಗೆ ಸೂಕ್ತವಾದ ಲಂಗರು ಹಾಕುವ ವ್ಯವಸ್ಥೆಗಳೊಂದಿಗೆ ಹೆಚ್ಚಿನ ಸಾಮರ್ಥ್ಯದ ಸ್ಟೀಲ್ ವೈರ್ ರೋಪ್ ನೆಟ್ ಮತ್ತು ಟರ್ಫ್ ಬಲವರ್ಧನೆಯ ಮ್ಯಾಟ್ ಒದಗಿಸುವ ಮೂಲಕ ಕಟಿಂಗ್ ಸ್ಲೋಪ್ ನಲ್ಲಿ ರಾಕ್ ಫಾಲ್ ರಕ್ಷಣೆ ಮತ್ತು ಇಳಿಜಾರು ಸ್ಥಿರೀಕರಣ.

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್/ನಿರ್ಮಾಣ/ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್

PUB/104/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 13/2023 ದಿನಾಂಕ: 16.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ವಸ್ತುಗಳ ಸರಬರಾಜಿಗಾಗಿ ಐಆರ್‌ಇಪಿಎಸ್ ಮುಖಾಂತರ ಮಾತ್ರ ಇ-ಟೆಂಡರ್ ಆಹ್ವಾನಿಸಿದ್ದಾರೆ. ಟೆಂಡರ್ ಮುಕ್ತಾಯ ಸಮಯ: 10:30 ಗಂಟೆಗಳು

ಕ್ರ	ಟೆಂಡರ್ ಸಂ.	ಸಂಕ್ಷಿಪ್ತ ವಿವರಣೆ (ಇ-ಓಪನ್ ಟೆಂಡರ್‌ಗಳು)	ಪ್ರಮಾಣ	ಟೆಂಡರ್ ಕೊನೆಯ ದಿನಾಂಕ
1	29231002	WAP-7/WAG-9 ಲೋಕೋಸ್‌ಗಾಗಿ ಸ್ಟೀಲ್ ಲಾಕ್ ನಟ್ಸ್	40 ಸೆಟ್ಸ್	12.06.2023
2	33231324	ನಿಯಂತ್ರಣ ಶಸ್ತ್ರಾಸ್ತ್ರಗಳ ಒಂದು ಕೋಚ್ ಸೆಟ್	63 ಸೆಟ್ಸ್	08.06.2023
3	45231496A	ಡಿಜಿ ಸೆಟ್‌ಗೆ ಸೂಕ್ತವಾದ ಬಿ ಚೆಕ್ ಕಿಟ್	137 ಸೆಟ್ಸ್	05.06.2023
4	45231503A	ಡಿಜಿ ಸೆಟ್‌ಗೆ ಸೂಕ್ತವಾದ ಸಿ ಚೆಕ್ ಕಿಟ್	104 ಸೆಟ್ಸ್	05.06.2023
5	11231457	ಇಂಧನ ಪಂಪ್ ಮೋಟಾರ್	24 ಸಂ.	08.06.2023
6	17231586	ಬುಶಿಂಗ್ ಟ್ರಾಕ್ಷನ್ ರಾಡ್	1272 ಸಂ.	15.06.2023
7	16231058	ಇಎಂಡಿ ಭಾಗ ಸಂಖ್ಯೆ 8442226 ಗೆ ಬೇರಿಂಗ್ ಇನ್ಸರ್ಟ್	345 ಸಂ.	14.06.2023
8	16231030	ಕ್ಲಚ್ ಡ್ರೈವ್ ಅಸೆಂಬ್ಲಿ	25 ಸಂ.	12.06.2023
9	45231261	ವಿಆರ್‌ಎಲ್‌ಎ ಬ್ಯಾಟರಿ 1100 ಎಎಚ್	18 ಸೆಟ್ಸ್	05.06.2023
10	77231002	ಪೇಂಟ್ ಎನಾಮೆಲ್ ಸ್ಮೋಕ್ ಗ್ರೇ	50150 ಲೀಟರ್	09.06.2023
11	11221097	ಸಿಬಿಸಿ ಗಾಗಿ ಮಾರ್ಪಡಿಸಿದ ಟ್ರಾನ್ಸಿಶನ್ ಸ್ಕ್ರೂ ಕಪ್ಲಿಂಗ್	240 ಸಂ.	12.06.2023
12	29231047	ಆಯಿಲ್ ಕೂಲರ್ ವೆಂಟಿಲೇಟರ್‌ಗಾಗಿ ಫಿಲ್ಟರ್ ಅಸೆಂಬ್ಲಿ	07 ಸೆಟ್ಸ್	08.06.2023
13	56235066A	ರಿಲೇ, QNA1, 24V DC, 8F-8B.	1000 ಸಂ.	03.06.2023
14	56231089	ಪಿವಿಸಿ ಪವರ್ ಕೇಬಲ್ 2ಸಿx35 ಚ.ಮಿಮೀ	200 ಕಿಮೀ	19.06.2023

ತಿದ್ದುಪಡಿ

ಟೆಂಡರ್ ನಂ. 60225041B ಸೂಚನೆ ಸಂಖ್ಯೆ 11/2023, ಅಂತಿಮ ದಿನಾಂಕವನ್ನು 17.05.2023 ರಿಂದ 26.05.2023 ಕ್ಕೆ ಬದಲಾಯಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ www.ireps.gov.in ವೆಬ್‌ಸೈಟ್‌ಗೆ ಲಾಗಿನ್ ಆಗಿ

PUB/102/AAV/PRB/SWR/2023-24 ಪ್ರಧಾನ ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕರು, ಹುಬ್ಬಳ್ಳಿ

S.W.Railways sw_rly SWRRLY southwesternrailway SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. 07/SBC/23 ದಿನಾಂಕ: 15.05.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	ಯಶವಂತಪುರ: ಉತ್ತಮ ಸ್ಥಿತಿಯಲ್ಲಿರುವ ಜಿಎಲ್‌ಆರ್ ಪಂಪ್‌ನ ಔಟ್‌ಲೆಟ್‌ಗೆ ಅಸ್ತಿತ್ವದಲ್ಲಿರುವ ನೀರಿನ ಮರುಬಳಕೆ ಘಟಕಕ್ಕೆ ಬಳಕೆ ಪೂರೈಕೆ ಸೇರಿದಂತೆ ಕಾರ್ಯಾಚರಣೆ ಮತ್ತು ದೈನಂದಿನ ನಿರ್ವಹಣೆ. ಎರಡು ವರ್ಷಗಳ ಅವಧಿಗೆ (ಕೋಚ್ ಕ್ಲೀನಿಂಗ್‌ಗೆ ನೀರು ಬೇಕಾಗುತ್ತದೆ).	ರೂ. 36,56,272/-
2	ವೈಟ್‌ಫೀಲ್ಡ್ – ಟೈಪ್-II ಕ್ವಾರ್ಟರ್‌ಗಳ (8 ಘಟಕಗಳು) ಪ್ರಸ್ತಾವಿತ ನಿರ್ಮಾಣ. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 1,82,07,925/-
3	ಬಂಗಾರಪೇಟೆ – ಬಂಗಾರಪೇಟೆ ನಿಲ್ದಾಣದಲ್ಲಿ ಕೋಚ್ ನೀರಿನ ಸೌಲಭ್ಯಗಳಿಗೆ ಪ್ರಸ್ತಾವಿತ ಸುಧಾರಣೆಗಳು. ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 1,26,44,342/-
4	ಹಿಂದೂಪುರ – ಸಹಾಯಕ ವಿಭಾಗೀಯ ಇಂಜಿನಿಯರ್ / ಹಿಂದೂಪುರ ಉಪ-ವಿಭಾಗದ ಹಿಂದೂಪುರದಲ್ಲಿ ಟೈಪ್ – III ಕ್ವಾರ್ಟರ್ಸ್ (4 ಘಟಕಗಳು) ಉದ್ದೇಶಿತ ನಿರ್ಮಾಣ. ನಿರ್ವಹಣೆ ಅವಧಿ 12 ತಿಂಗಳುಗಳು.	ರೂ. 1,17,70,571/-
5	ಚಿಕ್ಕ ಬಾಣಾವರ–ಹಾಸನ ವಿಭಾಗ: ಬಿ.ಜಿ.ನಗರ–ಹಿರೀಸಾವೆ ಭಾಗದ ನಡುವೆ ಕಿ.ಮೀ 93/500–800ರಲ್ಲಿ ಟೋ ಗೋಡೆ ನಿರ್ಮಾಣಕ್ಕೆ ಪ್ರಸ್ತಾವನೆ. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದ ಅವಧಿ.	ರೂ. 1,65,59,825/-
6	**ಉಪ ಕಾಮಗಾರಿ I:** ಯಲಹಂಕ – ಬಂಗಾರಪೇಟೆ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ ಬಂಗಾರಪೇಟೆ ಉಪವಿಭಾಗದಲ್ಲಿ ಕೋಲಾರ – ಬಂಗಾರಪೇಟೆ ನಿಲ್ದಾಣಗಳ ನಡುವೆ ಕಿಮೀ 136/000–100 ರಲ್ಲಿ ಆರ್‌ಯುಬಿ ನಂ. 21/A ಗಾಗಿ ಆರ್‌ಸಿಸಿ ಸಂಪ್‌ನ ಉದ್ದೇಶಿತ ನಿರ್ಮಾಣ ಮತ್ತು ಸ್ವಯಂಚಾಲಿತ ಪಂಪಿಂಗ್ ಅನ್ನು ಒದಗಿಸುವುದು ಮತ್ತು ಚಿಂತಾಮಣಿ – ಕೋಲಾರ ನಿಲ್ದಾಣಗಳ ನಡುವೆ 82/A, 75/A, 72/A ನಲ್ಲಿ ಸಂಪ್‌ಗಳಿಗೆ ಕವರ್ ಒದಗಿಸುವುದು. **ಉಪ ಕಾಮಗಾರಿ II:** ಯಲಹಂಕ – ಬಂಗಾರಪೇಟೆ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ ಬಂಗಾರಪೇಟೆ ಉಪವಿಭಾಗದಲ್ಲಿ ಆರ್‌ಯುಬಿಗಳು 103/A, 86/A, 68/A, 54/A, 37/A ಮತ್ತು 12/B ಗಳ ಅನುಸಂಧಾನ ರಸ್ತೆಗಳಿಗೆ ಪ್ರಸ್ತಾವಿತ ಸುಧಾರಣೆಗಳು ಮತ್ತು ಆರ್‌ಯುಬಿ ಸಂಖ್ಯೆ 70/A ರ ಮಳೆ ನೀರು ಸಂಗ್ರಹಿಸುವ ಟ್ಯಾಂಕ್. **ಉಪ ಕಾಮಗಾರಿ III:** ಯಲಹಂಕ – ಬಂಗಾರಪೇಟೆ ವಿಭಾಗ : ಕೋಲಾರ ಮತ್ತು ಶ್ರೀನಿವಾಸಪುರ ನಿಲ್ದಾಣಗಳ ನಡುವೆ ಕಿಮೀ 128/800–900 ನಲ್ಲಿ ಆರ್‌ಯುಬಿ ಸಂಖ್ಯೆ 33/A ಗೆ ಒಳಚರಂಡಿಯ ಪ್ರಸ್ತಾವಿತ ಸುಧಾರಣೆಗಳು. **ಉಪ ಕಾಮಗಾರಿ IV:** ಕೆಎಸ್ ಆರ್ ಬೆಂಗಳೂರು – ಜೋಲಾರ್‌ಪೇಟ್ಟೈ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ ಬಂಗಾರಪೇಟೆ ಉಪವಿಭಾಗದಲ್ಲಿ ಕಿಮೀ 128/300–400 ನಲ್ಲಿ ಆರ್‌ಯುಬಿ ಸಂಖ್ಯೆ 34/A ನಲ್ಲಿ ಒಳಚರಂಡಿ ವ್ಯವಸ್ಥೆಗೆ ಸುಧಾರಣೆಗಳು. **ಉಪ ಕಾಮಗಾರಿ V:** ಯಲಹಂಕ – ಬಂಗಾರಪೇಟೆ ವಿಭಾಗ: ಸಹಾಯಕ ವಿಭಾಗೀಯ ಇಂಜಿನಿಯರ್/ ಬಂಗಾರಪೇಟೆ ಉಪವಿಭಾಗದಲ್ಲಿ ಕಿಮೀ 126/700–800 ನಲ್ಲಿ ಆರ್‌ಯುಬಿ ಸಂಖ್ಯೆ 37/B ಗಾಗಿ ಆರ್‌ಸಿಸಿ ಸಂಪ್‌ನ ಪ್ರಸ್ತಾವಿತ ನಿರ್ಮಾಣ ಮತ್ತು ಕಿಮೀ 107/400–500 ನಲ್ಲಿ ಆರ್‌ಯುಬಿ 75/A ಗಾಗಿ ಸ್ವಯಂಚಾಲಿತ ಪಂಪಿಂಗ್ ಅನ್ನು ಒದಗಿಸುವುದು.	ರೂ. 4,31,58,288/-
7	ಕೆಎಸ್‌ಆರ್‌ಬೆಂಗಳೂರು ವಿಭಾಗ: ಹಿರಿಯ ವಿಭಾಗೀಯ ಇಂಜಿನಿಯರ್/ಡಬ್ಲ್ಯೂ/ ಕೆಎಸ್‌ಆರ್ ಬೆಂಗಳೂರು ವಿಭಾಗದಲ್ಲಿ 13/500–30/100 ಅಪ್, 31/800–45/000 ರಿಂದ, ರಾಮನಗರ (ರೋಡ್1 ಮತ್ತು ರೋಡ್4), ಶೆಟ್ಟಿಹಳ್ಳಿ (ರೋಡ್1 ಮತ್ತು ರೋಡ್4), ಹನಕೆರೆ (ರೋಡ್1 ಮತ್ತು ರೋಡ್4) ಮತ್ತು ವೈ (ರೋಡ್ 1 ಮತ್ತು ರೋಡ್ 4) ರಲ್ಲಿ 37.00 ಕಿಮೀ ಉದ್ದಕ್ಕೆ ಮತ್ತು ಕಿಮೀ 129/000–130/000 ಅಪ್ ಲೈನ್, ಪಾಂಡವಪುರ (ರೋಡ್ 1 ಮತ್ತು 4) ಮತ್ತು ನಾಗನಹಳ್ಳಿ (ರೋಡ್ 1 ಮತ್ತು 4) ನಿಂದ 4.600 ಕಿಮೀ ಉದ್ದಕ್ಕೆ ಥ್ರೂ ಬ್ಯಾಲೆಸ್ಟ್ ರಿಕೌಪ್‌ಮೆಂಟ್ ಕೆಲಸಕ್ಕೆ ಸಂಬಂಧಿಸಿದಂತೆ ನಿಲುಭಾರದ ಸಂಗ್ರಹಣೆ ಮತ್ತು ಪೂರೈಕೆ.	ರೂ. 5,13,63,840/-
8	**ಉಪ ಕಾಮಗಾರಿ I:** ಕೆಎಸ್‌ಆರ್ ಬೆಂಗಳೂರು – ಮೂರನೇ ಮಹಡಿ, ಹಿರಿಯ ಡಿಪಿಒ ಕಛೇರಿ ಮತ್ತು ವಿಭಾಗೀಯ ಕಛೇರಿಯಲ್ಲಿ ಅಧಿಕಾರಿಗಳ ಕೊಠಡಿಗಳಲ್ಲಿ ಪ್ರಸ್ತಾವಿತ ಸುಧಾರಣೆಗಳು. **ಉಪ ಕಾಮಗಾರಿ II:** ಎಂ ಜಿ ಕಾಲೋನಿಯಲ್ಲಿನ ಸಿಬ್ಬಂದಿ ಕ್ವಾರ್ಟರ್ಸ್ ಮತ್ತು ಆಫೀಸರ್ ಕ್ವಾರ್ಟರ್‌ಗಳ ಹೊರಭಾಗದ ವೈಟನಿಂಗ್ (637 ಘಟಕಗಳು). ನಿರ್ವಹಣೆ ಅವಧಿ 6 ತಿಂಗಳುಗಳು.	ರೂ. 4,53,28,238/-
9	ಚಿಕ್ಕ ಬಾಣಾವರ – ಹಾಸನ ವಿಭಾಗ : ಯಡಿಯೂರು ಮತ್ತು ಬಿ.ಜಿ.ನಗರ ನಿಲ್ದಾಣದ ನಡುವೆ ಕಿಮೀ 85/700–800 ಸೇತುವೆ ಸಂಖ್ಯೆ 266 ಕ್ಕೆ ಪ್ರಸ್ತಾವಿತ ಸುಧಾರಣೆಗಳು. ನಿರ್ವಹಣೆ ಅವಧಿಯು 6 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಯಾವುದು ನಂತರದ ಅವಧಿ.	ರೂ. 1,81,16,193/-
10	ಕೆಎಸ್‌ಆರ್ ಬೆಂಗಳೂರು – ಕೆಎಸ್‌ಆರ್ ಬೆಂಗಳೂರು ನಿಲ್ದಾಣದಲ್ಲಿ 2 ವರ್ಷಗಳವರೆಗೆ ಎಲ್ಲಾ ಪಿಎಫ್‌ಗಳು ಮತ್ತು ಪಿಟ್ ಲೈನ್‌ಗಳ ನೀರು ಸರಬರಾಜು ಮತ್ತು ನೀರಿನ ಹೈಡ್ರಾಂಟ್‌ಗಳ ಪ್ರಸ್ತಾವಿತ [illegible]	ರೂ. 31,29,390/-
11	[illegible]	ರೂ. 69,46,882/-
12	[illegible]	ರೂ. 2,28,66,908/-
13	[illegible]	ರೂ. 84,67,688/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07-06-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/101/AAV/PRB/SWR/2023-24

S.W.Railways sw_rly SWRRLY southwesternrailway SWRRLY

ಕಾರಿನ ಮೇಲೆ ಬಿದ್ದ ಮರ, ಪ್ರಯಾಣಿಕರು ಪಾರು: ಜನಜೀವನ ಅಸ್ತವ್ಯಸ್ತ

ಧಾರಾಕಾರ ಮಳೆ: ಉರುಳಿದ ಮರಗಳು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮರಗಳು ಉರುಳಿ ಹಲವು ವಾಹನಗಳು ಜಖಂ
- ತಗ್ಗುಪ್ರದೇಶಗಳಿಗೆ ನೀರು, ನಿವಾಸಿಗಳು ಹೈರಾಣ
- ಹಲವೆಡೆ ನೀರುನಿಂತು ಸಂಚಾರ ಅಸ್ತವ್ಯಸ್ತ

ಬೆಂಗಳೂರು: ನಗರದ ವಿವಿಧೆಡೆ ಶನಿವಾರ ಸಂಜೆ ಅರ್ಧ ಗಂಟೆಗೂ ಹೆಚ್ಚು ಕಾಲ ಗುಡುಗು ಸಹಿತ ಧಾರಾಕಾರ ಮಳೆಯಾಗಿದ್ದು, ಹಲವೆಡೆ ಮರಗಳು ಧರೆಗುರುಳಿವೆ.

ಮಳೆಯಿಂದ ತಗ್ಗುಪ್ರದೇಶಗಳಿಗೆ ನೀರು ನುಗ್ಗಿದ್ದು ಜನಜೀವನವನ್ನು ಅಸ್ತವ್ಯಸ್ತಗೊಳಿಸಿತು. ಚರಂಡಿಗಳಲ್ಲಿ ಮಳೆಯ ನೀರು ಉಕ್ಕಿ ಹರಿಯಿತು. ರಾತ್ರಿ ವೇಳೆಯೂ ಮತ್ತೆ ಸುರಿಯಿತು.

ತಗ್ಗು ಪ್ರದೇಶದ ಬಡಾವಣೆಗಳಿಗೆ ರಾಜಕಾಲುವೆಯ ನೀರು ನುಗ್ಗಿದ್ದು ನಿವಾಸಿಗಳು ಜಾಗರಣೆ ಮಾಡುವಂತೆ ಮಾಡಿತು. ದಿನವಿಡೀ ಬಿಸಿಲಿನ ವಾತಾವರಣ ಕಂಡುಬಂತು.

ಮನೆಗೆ ತೆರಳುತ್ತಿದ್ದವರು ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪ್ರಮಾಣ ವಚನ ಸ್ವೀಕಾರ ಸಮಾರಂಭ ವೀಕ್ಷಿಸಲು ನಗರಕ್ಕೆ ಬಂದಿದ್ದವರು ಸಂಜೆ ಸುರಿದ ಮಳೆಯಿಂದಾಗಿ ಊರಿಗೆ ತೆರಳಲು ಪರದಾಡಿದರು. ಮೆಜೆಸ್ಟಿಕ್‌ನಲ್ಲೂ ನೂರಾರು ಮಂದಿ ಸಿಲುಕಿಕೊಂಡಿದ್ದರು.

ಮೈಸೂರು ಬ್ಯಾಂಕ್ ವೃತ್ತದಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆಯೇ ಮರದ ಕೊಂಬೆಗಳು ಉರುಳಿದ್ದು ಪ್ರಯಾಣಿಕರು ಪಾರಾಗಿದ್ದಾರೆ. ರೇಸ್ ಕೋರ್ಸ್ ರಸ್ತೆ ಸೇರಿದಂತೆ 20 ಕಡೆ ಮರಗಳು ಉರುಳಿವೆ. ಇದರಿಂದ ವಾಹನಗಳು ಜಖಂಗೊಂಡಿವೆ.

ಅಲ್ಲಲ್ಲಿ ಉರುಳಿದ ಮರಗಳನ್ನು ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಮರಗಳನ್ನು ತೆರವುಗೊಳಿಸಿದರು. ಮೆಜೆಸ್ಟಿಕ್ ಪ್ರದೇಶದ ಗಾಂಧಿನಗರ ಕಾಳಿದಾಸ ಮಾರ್ಗದಲ್ಲಿ ಭಾರಿ ಗಾತ್ರದ ಮರ ಬಿದ್ದಿದ್ದು, ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು.

ನಗರದ ಕೆಳಸೇತುವೆಗಳಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹಗೊಂಡಿತ್ತು. ವಾಹನ ಸವಾರರು ಪರದಾಡಿದರು. ನೀರಿನಲ್ಲೇ ವಾಹನಗಳು ಸಾಗಿದವು. ಮೆಜೆಸ್ಟಿಕ್ ಸುತ್ತಮುತ್ತ ರಸ್ತೆಗಳಲ್ಲಿ ಎರಡು ಅಡಿಯಷ್ಟು ರಸ್ತೆಯಲ್ಲಿ ನೀರು ಹರಿಯಿತು. ಬಿರುಗಾಳಿ ಅಬ್ಬರಕ್ಕೆ ಜನರು ಆತಂಕಗೊಂಡಿದ್ದರು.

ಚಾಮರಾಜಪೇಟೆ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ, ಕೆ.ಆರ್.ಮಾರುಕಟ್ಟೆ, ಚಿಕ್ಕಪೇಟೆ, ಗಾಂಧಿನಗರ, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಮಲ್ಲೇಶ್ವರ ಭಾಗದಲ್ಲಿ ಧಾರಾಕಾರ ಮಳೆಯಾಗಿದೆ. ಈ ಭಾಗದ ರಸ್ತೆಗಳು ಹೊಳೆಯಂತಾಗಿದ್ದವು.

ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ಕೆಂಗೇರಿ, ವಿಜಯನಗರ, ವಿಧಾನಸೌಧ ಸುತ್ತಮುತ್ತ, ಸದಾಶಿವನಗರ, ಯಶವಂತಪುರ, ರಾಜರಾಜೇಶ್ವರಿ ನಗರ, ರಾಜಾಜಿನಗರ, ಮಹಾಲಕ್ಷ್ಮಿಲೇಔಟ್ ಭಾಗದಲ್ಲಿ ಜೋರು ಮಳೆಯಾಗಿದೆ.

ನಗರದಲ್ಲಿ ಇನ್ನೂ ಮೂರು ದಿನ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ನಗರದಲ್ಲಿ ಶನಿವಾರ ಸಂಜೆ ಗಾಳಿ ಮಳೆಗೆ ಮೈಸೂರು ಬ್ಯಾಂಕ್ ವೃತ್ತದಲ್ಲಿ ಚಲಿಸುತ್ತಿದ್ದ ಕಾರಿನ ಮೇಲೆ ಮರವೊಂದು ಉರುಳಿಬಿದ್ದು ಕಾರಿನಲ್ಲಿದ್ದವರು ಪಾರಾಗಿದ್ದಾರೆ

ಜೇನು ಪರೀಕ್ಷಾ ಪ್ರಯೋಗಾಲಯ ಉದ್ಘಾಟನೆ

ಬೆಂಗಳೂರು: ಬೆಂಗಳೂರಿನ ಹೆಸರುಘಟ್ಟದ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಸ್ಥಾಪಿಸಿರುವ ಜೇನು ಪರೀಕ್ಷಾ ಪ್ರಯೋಗಾಲಯವನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಶನಿವಾರ ವರ್ಚುವಲ್ ವ್ಯವಸ್ಥೆ ಮೂಲಕ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಅವರು '₹ 8.2 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಪ್ರಯೋಗಾಲಯದಲ್ಲಿ ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮಾನದಂಡದ ಅನುಗುಣವಾಗಿ 17 ಪರೀಕ್ಷೆಗಳನ್ನು ಕೈಗೊಳ್ಳಬಹುದು. ದಕ್ಷಿಣ ಭಾರತದ ಜೇನು ಉತ್ಪಾದಕರು, ರಫ್ತುದಾರರಿಗೆ ಸಹಕಾರಿಯಾಗಲಿದೆ' ಎಂದರು.

ಐಐಎಚ್‌ಆರ್ ನಿರ್ದೇಶಕ ಸಂಜಯ್ ಕುಮಾರ್ ಸಿಂಗ್, ನಿಕಟಪೂರ್ವ ನಿರ್ದೇಶಕ ದಿನೇಶ್ ಶರ್ಮ, ಹಣ್ಣಿನ ಬೆಳೆಗಳ ರಾಷ್ಟ್ರೀಯ ಸಂಯೋಜಕ ಪ್ರಕಾಶ್ ಪಾಟೀಲ್, ಬೆಳೆ ಸಂರಕ್ಷಣಾ ವಿಭಾಗದ ಮುಖ್ಯಸ್ಥ ಪಿ.ವಿ.ಆರ್ ರೆಡ್ಡಿ, ಜೇನು ಪರೀಕ್ಷಾ ಪ್ರಯೋಗಾಲಯದ ಮುಖ್ಯ ವಿಜ್ಞಾನಿ ಪಾರ್ಥ ಚೌಧರಿ, ಮಾಧ್ಯಮ ಸಂಯೋಜಕ ಪಿ. ನಂದೀಶ ಇದ್ದರು.

ಮಧುಮೇಳ ಉದ್ಘಾಟನೆ ಸಮಾರಂಭದಲ್ಲಿ ಎಸ್‌.ವಿ. ಸುರೇಶ ಅಭಿಮತ

‘ಪರಾಗ ಸ್ಪರ್ಶದಿಂದ ಆಹಾರ ಉತ್ಪಾದನೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಕೃಷಿಯಲ್ಲಿ ಜೇನು ನೊಣಗಳ ಪಾತ್ರ ಮಹತ್ವದಾಗಿದೆ. ಇವುಗಳ ಪರಾಗ ಸ್ಪರ್ಶ ಮಾಡುವುದರಿಂದಲೇ ಆಹಾರ ಉತ್ಪಾದನೆಯಲ್ಲಿ ಶೇ 40ರಿಂದ 45ರಷ್ಟು ಹೆಚ್ಚಾಗುತ್ತದೆ’ ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ.ಸುರೇಶ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿಶ್ವವಿದ್ಯಾಲಯದ ಜೇನುಕೃಷಿ ವಿಭಾಗ ಹಾಗೂ ಅಖಿಲ ಭಾರತ ಸುಸಂಘಟಿತ ಜೇನು ನೊಣ ಮತ್ತು ಪರಾಗ ಸ್ಪರ್ಶಿಗಳ ಸಂಶೋಧನಾ ಪ್ರಾಯೋಜಕತ್ವದ ಸಹಯೋಗದಲ್ಲಿ ಶನಿವಾರ ನಡೆದ ‘ವಿಶ್ವ ಜೇನು ದಿನಾಚರಣೆ ಮತ್ತು ಮಧುಮೇಳ’ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕೇಲವ ಕೃಷಿಯಿಂದ ಮಾತ್ರ ರೈತರು ಆರ್ಥಿಕವಾಗಿ ಸಬಲೀಕರಣ ಆಗಲು ಸಾಧ್ಯವಿಲ್ಲ. ಜೇನು ಕೃಷಿಯಂತಹ ಉಪ ಕಸಬುಗಳನ್ನು ಅಳವಡಿಸಿಕೊಂಡಾಗ ಮಾತ್ರ ಯಶಸ್ವಿಯಾಗಲು ಸಾಧ್ಯ. ಜೇನು ಕೃಷಿಯನ್ನು ಒಂದು ಉದ್ಯಮದ ರೀತಿ ಸ್ವೀಕರಿಸಿ ಗುಣಮಟ್ಟಕ್ಕೆ ಒತ್ತು ನೀಡಿದಾಗ ಮಾತ್ರ ಹೆಚ್ಚಿನ ಲಾಭ ಗಳಿಸಬಹುದು’ ಎಂದು ಹೇಳಿದರು.

ಜೇನು ಉದ್ಯಮಿ ಛಾಯಾ ನಂಜಪ್ಪ ಮಾತನಾಡಿ, ‘ಕಡಿಮೆ ಬಂಡವಾಳದಲ್ಲಿ ಜೇನು ಕೃಷಿ ಕೈಗೊಳ್ಳಬಹುದು. ಉದ್ದಿಮೆದಾರರು ಸಂಸ್ಕರಣೆ, ಮಾರುಕಟ್ಟೆ ಹಾಗೂ ಉತ್ಪನ್ನದ ಕಡೆ ಹೆಚ್ಚು ಗಮನ ನೀಡಬೇಕು. ದೇಸಿಯ ಮಾರುಕಟ್ಟೆಯ ಜತೆಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯತ್ತ ಗಮನಹರಿಸಬೇಕು. ನಾನು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಲಗ್ಗೆ ಇಟ್ಟಿದ್ದರಿಂದ ಹಣ, ಯಶಸ್ಸು ಮತ್ತು ಹೆಸರು ಗಳಿಸಿಲು ಸಾಧ್ಯವಾಯಿತು’ ಎಂದು ತಮ್ಮ ಅನುಭವ ಹಂಚಿಕೊಂಡರು.

ಸ್ನಾತಕೋತರ ಡೀನ್ ಎಚ್‌.ಸಿ. ಪ್ರಕಾಶ್ ಮತ್ತು ವಿಸ್ತರಣಾ ನಿರ್ದೇಶಕ ವಿ.ಎಲ್‌. ಮಧುಪ್ರಸಾದ್ ಇದ್ದರು.

ವಿಶ್ವ ಜೇನು ದಿನಾಚರಣೆ ಅಂಗವಾಗಿ ನಡೆದ ಮಧುಮೇಳದಲ್ಲಿ ಜೇನು ಉತ್ಪನ್ನಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್‌.ವಿ. ಸುರೇಶ್ ವೀಕ್ಷಿಸಿದರು.

ಆಭರಣ ಕಳವು: 48 ಗಂಟೆಯಲ್ಲೇ ಆರೋಪಿ ಸೆರೆ

ಬೆಂಗಳೂರು: ಮನೆ ಬೀಗ ಒಡೆದು ಚಿನ್ನಾಭರಣ, ನಗದು ಕಳವು ಮಾಡಿದ್ದ ಆರೋಪಿಯನ್ನು ದೂರು ದಾಖಲಾದ 48 ಗಂಟೆಯಲ್ಲಿ ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ನಗರದ ಅರೇಹಳ್ಳಿ ಆರ್ಚ್‌ನ ನಿವಾಸಿ ಮಣಿಕಂಠ ಅಲಿಯಾಸ್ ಮಣಿ (37) ಬಂಧಿತ ಆರೋಪಿ.

‘ಈತನಿಂದ ₹ 2.30 ಲಕ್ಷ ಬೆಲೆ ಬಾಳುವ ಚಿನ್ನಾಭರಣ, ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಯೋಗೇಶ್ ಉರಾಳ್ ಎಂಬುವವರ ಮನೆಯಲ್ಲಿ, ಅವರು ಊರಿಗೆ ಹೋಗಿದ್ದಾಗ ಕೃತ್ಯ ಎಸಗಿದ್ದು, ₹ 1.90 ಲಕ್ಷ ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿತ್ತು’ ಎಂದು ಪೊಲೀಸರು ಹೇಳಿದರು.

‘ಆರೋಪಿ ಮೂಲತಃ ತಮಿಳುನಾಡು ಧರ್ಮಪುರಿ ಜಿಲ್ಲೆ ಪಾಲಕ್ಕಾಡು ನಿವಾಸಿ’ ಎಂದು ಪೊಲೀಸರು ತಿಳಿಸಿದರು.

ವಿದ್ಯಾತ್ಮತೀರ್ಥ ಶ್ರೀ ನಿಧನ



ಉಡುಪಿ: ಪುತ್ತಿಗೆ ಮಠದ ಶಾಖಾಮಠವಾಗಿದ್ದ ಉತ್ತರ ಪ್ರದೇಶದ ಪ್ರಯಾಗದಲ್ಲಿರುವ ಶ್ರೀಮದ್ವ ಮಠದ ವಿದ್ಯಾತ್ಮತೀರ್ಥ ಸ್ವಾಮೀಜಿ (92) ಶುಕ್ರವಾರ ನಿಧನರಾದರು.

ಉತ್ತರ ಭಾರತದಲ್ಲಿ ಮಾಧ್ವ ತತ್ವ ಪ್ರಚಾರ ಮಾಡುವ ಉದ್ದೇಶದಿಂದ ಪಲಿಮಾರು ಮಠದ ಯತಿಗಳಾದ ವಿದ್ಯಾಧೀಶ ತೀರ್ಥ ಶ್ರೀಗಳು 2004 ರಲ್ಲಿ ಪ್ರಯಾಗದ ಶ್ರೀಮಧ್ವಮಠಕ್ಕೆ ವಿದ್ಯಾತ್ಮತೀರ್ಥ ಶ್ರೀಗಳನ್ನು ಉತ್ತರಾಧಿಕಾರಿಯನ್ನಾಗಿ ನೇಮಿಸಿದರು.

ವಿದ್ಯಾತ್ಮತೀರ್ಥರು ಉತ್ತರ ಭಾರತದಲ್ಲಿ ಸಂಚಾರ ಮಾಡುತ್ತ ಸಂಸ್ಕೃತ, ಕನ್ನಡ, ಹಿಂದಿಯಲ್ಲಿ ಧಾರ್ಮಿಕ ವಿಚಾರಗಳನ್ನು ತಿಳಿಸುವ ಕಾರ್ಯದಲ್ಲಿ ತೊಡಗಿದ್ದರು.

ಉತ್ತರ ಹಾಗೂ ದಕ್ಷಿಣ ಕರ್ನಾಟಕದಲ್ಲಿ ಅಪಾರ ಶಿಷ್ಯ ಹಾಗೂ ಭಕ್ತರನ್ನು ಹೊಂದಿರುವ ವಿದ್ಯಾತ್ಮತೀರ್ಥರ ನಿಧನ ಅತೀವ ದುಃಖ ತಂದಿದೆ ಎಂದು ಪಲಿಮಾರು ಮಠದ ವಿದ್ಯಾಧೀಶತೀರ್ಥ ಶ್ರೀಗಳು ತಿಳಿಸಿದ್ದಾರೆ.

PUBLIC NOTICE

The general public are hereby informed/ called upon that our client has negotiated for purchase of immovable property described in the Schedule hereunder from its owner **Mr. C.N. Venkateshaiah @ Mr. C.N. Venkatesh** son of Sri. C.G. Siddananjaiah (Also known as Nanjegowda), aged about 73 years, permanent resident of No.20033, Gardner Drive, Alpharetta, GA-30004, USA, also at Chikkabelavangala Village, Doddabelavangala Hobli, Doddaballapura Taluk, Bengaluru Rural District – 561 204.

Any person/s having or claiming any right, title, interest and lien with respect to Schedule Property may intimate the same to us in writing to under signed with documentary proof with in 10 (Ten) days from day of this publication notice.

In case if objections are not received within the said 10 (Ten) days, it would be deemed that all such person/s have been waived or abandoned or have no claim over the Schedule Property in any manner. In such scenario, our client will be proceeding with the conveyance of the Schedule Property, as if no valid claims are substituting against the Schedule Property in any manner.

SCHEDULE PROPERTY

All that piece and parcel of the immovable bearing Municipal No.31/18 & 19, measuring 1,03,455 Square Feet {formerly Sy. No.18/8 (old Sy. No. 18), measuring 1 Acre 23 Guntas and 32 Guntas bearing Sy. No.19/8 (Old Sy. No.19), duly converted for non agricultural industrial purposes, vide an Official Memorandum bearing No. ALN (NAY) SR/286/2007-08 dated 14.11.2008, issued by the Special Deputy Commissioner, Bangalore Distirict, Banglore}, situated at Thirumenahalli Village, Yelahanka Hobli, Bengaluru North Talk, now within the limits of Bruhat Bengaluru MahanagaraPalike (BBMP) Ward No.5 and bounded as follows:

East by : Bellahalli border
West by : Road
North by : Land in Sy. No. 18 & 19
South by : Land bearing Sy. No. 17 & 20

KIRAN. R, PARTNER
VHVK LAW PARTNERS
3 & 4 Lakeside Residency, No. 4 Annaswamy Mudaliar Road, Bangalore 560042. Ph No 9900154370
Email : rkiran@vhvklaw.com

ನೇತ್ರತಜ್ಞ ಭುಜಂಗ ಶೆಟ್ಟಿ ಪಂಚಭೂತಗಳಲ್ಲಿ ಲೀನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ನಾರಾಯಣ ನೇತ್ರಾಲಯದ ಮುಖ್ಯಸ್ಥ ಹಾಗೂ ಖ್ಯಾತ ನೇತ್ರ ತಜ್ಞ ಡಾ.ಭುಜಂಗ ಶೆಟ್ಟಿ ಅವರ ಅಂತ್ಯಸಂಸ್ಕಾರ ಇಲ್ಲಿನ ಹರಿಶ್ಚಂದ್ರ ಘಾಟ್ ರುದ್ರಭೂಮಿಯಲ್ಲಿ ಶನಿವಾರ ನಡೆಯಿತು.

ಅವರು ಶುಕ್ರವಾರ ರಾತ್ರಿ ಹೃದಯಾಘಾತದಿಂದ ಮೃತಪಟ್ಟಿದ್ದರು.

ಬಸವೇಶ್ವರ ನಗರದ ಅವರ ನಿವಾಸದಲ್ಲಿ ಶನಿವಾರ ಬೆಳಿಗ್ಗೆ 8 ಗಂಟೆಯಿಂದ 10.30ರವರೆಗೆ, 11 ಗಂಟೆಯಿಂದ ಮಧ್ಯಾಹ್ನ 2ರವರೆಗೆ ರಾಜಾಜಿನಗರದ ನಾರಾಯಣ ನೇತ್ರಾಲಯದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನದ ವ್ಯವಸ್ಥೆ ಮಾಡಲಾಗಿತ್ತು.

ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಡಾ.ರಾಜ್‌ಕುಮಾರ್ ಕುಟುಂಬದ ಸದಸ್ಯರು, ಡಾ.ಸಿ.ಎನ್. ಮಂಜುನಾಥ್, ಡಾ.ದೇವಿಪ್ರಸಾದ್ ಶೆಟ್ಟಿ, ಡಾ. ಸುದರ್ಶನ ಬಲ್ಲಾಳ್ ಸೇರಿ ವಿವಿಧ ಆಸ್ಪತ್ರೆಗಳ ವೈದ್ಯರು ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು ಅಂತಿಮ ದರ್ಶನ ಪಡೆದರು.

ಡಾ.ರಾಜ್‌ಕುಮಾರ್ ನೇತ್ರ ನಿಧಿ ಆರಂಭಿಸಿದ್ದ ಡಾ. ಭುಜಂಗಶೆಟ್ಟಿ ಅವರು ನೇತ್ರದಾನದ ಬಗ್ಗೆ ಜಾಗೃತಿ ಮೂಡಿಸುವ ಮೂಲಕ ಲಕ್ಷಾಂತರ ಜನರ ಬಾಳಿಗೆ ದೃಷ್ಟಿಯ ಬೆಳಕು ನೀಡಿದ್ದರು. ಅವರು ತಮ್ಮ ಕಣ್ಣುಗಳ ದಾನದ ಮೂಲಕ ಇಬ್ಬರಿಗೆ ನೆರವಾಗಿದ್ದಾರೆ.

ಡಾ. ಭುಜಂಗ ಶೆಟ್ಟಿ ನಿಧನದ ಕಾರಣ ರಾಜಾಜಿನಗರದ ನಾರಾಯಣ ನೇತ್ರಾಲಯ ಸೇರಿ ಬನ್ನೇರುಘಟ್ಟ, ಇಂದಿರಾನಗರ ಮತ್ತು ನಾರಾಯಣ ಹೆಲ್ತ್ ಸಿಟಿಯ ಶಾಖೆಗಳಲ್ಲಿ ಶನಿವಾರ ಹೊರ ರೋಗಿಗಳ ಸೇವೆ ಸ್ಥಗಿತಗೊಂಡಿತ್ತು.

ರೋಗಿಗಳಿಗೆ ಸಮಸ್ಯೆಯಾಗದಂತೆ ನಿಗದಿಯಾಗಿದ್ದ ಶಸ್ತ್ರಚಿಕಿತ್ಸೆಗಳನ್ನು ನಡೆಸಲಾಯಿತು.

‘ಜನರ ಬದುಕು ಹಸನಾಗಿಸುವ ವಿಚಾರ, ಅನ್ವೇಷಣೆ ಅಗತ್ಯ’

ಪ್ರಜಾವಾಣಿ ವಾರ್ತೆ

ಯಲಹಂಕ: ‘ಯುವ ಎಂಜಿನಿಯರ್‌ಗಳು ದೇಶವನ್ನು ಉನ್ನತ ಮಟ್ಟಕ್ಕೆ ಏರಿಸುವ ದೊಡ್ಡ ಕನಸಿನ ಭಾಗವಾಗಬೇಕು’ ಎಂದು ಗಾಯಕ ವಾಸುಕಿ ವೈಭವ್ ತಿಳಿಸಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿದ್ಯಾಲಯ ಶನಿವಾರ ಇಲ್ಲಿ ಆಯೋಜಿಸಿದ ರಾಷ್ಟ್ರಮಟ್ಟದ ತಂತ್ರಜ್ಞಾನ ಹಾಗೂ ಸಾಂಸ್ಕೃತಿಕ ಉತ್ಸವ ‘ಅನಾದ್ಯಂತ-2023’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಜನರ ಬದುಕು ಹಸನಾಗಿಸುವ ವಿಚಾರಗಳು ಹಾಗೂ ಅನ್ವೇಷಣೆಗಳಲ್ಲಿ ಎಂಜಿನಿಯರ್‌ಗಳು ತೊಡಗಿಸಿಕೊಳ್ಳಬೇಕು. ಯಾವುದೇ ವೃತ್ತಿಯಲ್ಲಿ ತೊಡಗಿಸಿಕೊಂಡರೂ ಆ ವೃತ್ತಿಯ ಬೃಹತ್ ಕನಸಿನ ಭಾಗವಾಗಿ ಸಾಧನೆ ಮಾಡಬೇಕು. ಆಗಷ್ಟೇ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ’ ಎಂದು ತಿಳಿಸಿದರು.

ಪ್ರಾಂಶುಪಾಲ ಎಚ್‌.ಸಿ.ನಾಗರಾಜ್, ‘ಇತ್ತೀಚಿನ ಯುವತಂತ್ರಜ್ಞರಿಗೆ ಅಪಾರ ಅರಿವು, ಸಮಾಜದ ಬಗ್ಗೆ ಕಾಳಜಿ ಹಾಗೂ ಹೊಸತನ್ನು ಅನ್ವೇಷಿಸುವ ಉತ್ಸಾಹವಿದೆ. ತಂತ್ರಜ್ಞಾನದ ಸದ್ಬಳಕೆಯಿಂದ ಮಾತ್ರ ಈ ಜಗತ್ತನ್ನು ಅಪಾಯಗಳಿಂದ ಪಾರುಮಾಡಬಹುದಾಗಿದೆ’ ಎಂದು ತಿಳಿಸಿದರು.

ಉತ್ಸವದಲ್ಲಿ ವಿವಿಧ ತಾಂತ್ರಿಕ ವಿದ್ಯಾಲಯಗಳ ಹತ್ತು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ವಿವಿಧ ತಂತ್ರಜ್ಞಾನ ಸ್ಪರ್ಧೆಗಳ ಜತೆಗೆ ಬೀದಿ ನಾಟಕ, ರಸಪ್ರಶ್ನೆ, ನೃತ್ಯ, ಚರ್ಚಾ ಸ್ಪರ್ಧೆ ಮತ್ತು ಫ್ಯಾಷನ್ ಶೋ ಸೇರಿ ವಿವಿಧ ಕಾರ್ಯಕ್ರಮಗಳು ನಡೆದವು.

ಕಾರ್ಯಕ್ರಮದಲ್ಲಿ ಕಲಾವಿದರು ಡೊಳ್ಳು ಕುಣಿತ ಪ್ರದರ್ಶನ ನೀಡಿದರು.ವಾಸುಕಿ ವೈಭವ್ ಹಾಗೂ ಎಚ್‌.ಸಿ.ನಾಗರಾಜ್ ಇದ್ದಾರೆ.

ನಗರದಲ್ಲಿ ಇಂದು

‘ಸಾಮೂಹಿಕ ಉಪನಯನ’: ಆಯೋಜನೆ: ಬಿ.ಇ.ಸ್ವಕುಳ, ಸ್ಥಳ: ಚಂದ್ರಮೌಳೇಶ್ವರ ಭವನ, ಗಾಂಧೀನಗರ, ಬೆಳಿಗ್ಗೆ 8.30

‘ಬ್ರಹ್ಮೋಪದೇಶ’ (ಉಪನಯನ): ಅಧ್ಯಕ್ಷತೆ: ದಿನೇಶ್ ಅರಸ್, ಅತಿಥಿಗಳು: ಕಪಡಿ ಮಂಟೇಸ್ವಾಮಿ, ಎಂ.ಎಲ್.ವರ್ಚಸ್ವಿ ಶ್ರೀಕಂಠ ಸಿದ್ಧಲಿಂಗ ರಾಜೇ ಅರಸ್, ಕಾಮಾಕ್ಷಿ ದೇವಿ, ಇಂದ್ರಾಕ್ಷಿ ದೇವಿ, ರಾಜಾಚಂದ್ರ ರಾಜೇ ಅರಸ್, ಸೂರಜ್, ರವಿಚಂದ್ರ, ಮುನಿರಾಜು, ಶ್ರೀಧರ್ ರಾಜ್ ಅರಸ್, ಆಯೋಜನೆ: ಕರ್ನಾಟಕ ಅರಸು ಮತ್ತು ರಾಜು ಕ್ಷತ್ರಿಯ ಪ್ರತಿಷ್ಠಾನ, ಸ್ಥಳ: ಅರಮನೆ ಮೈದಾನ, ಶೃಂಗಾರ್ ಪ್ಯಾಲೇಸ್ (ಗೇಟ್ ನಂ 9), ಬೆಳಿಗ್ಗೆ 8

ದೀಪಕ್ ಶಂಕರ್ ಅವರ ‘ಇನ್‌ಟು ದಿ ವೈಲ್ಡ್’ ಏಕವ್ಯಕ್ತಿ ಛಾಯಾಚಿತ್ರಗಳ ಪ್ರದರ್ಶನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10ರಿಂದ

‘ಸಾವರ್ಕರ್ ಸಮಗ್ರ ಸಂಪುಟ-6’ ಪುಸ್ತಕ ಬಿಡುಗಡೆ: ಅತಿಥಿಗಳು: ವಿ. ನಾಗರಾಜ್, ಸಾತ್ಯಕಿ ಸಾವರ್ಕರ್, ಬಿ.ಎಲ್. ಸಂತೋಷ್, ಉಪಸ್ಥಿತಿ: ಜಿ.ಬಿ. ಹರೀಶ್, ಎಸ್.ಆರ್. ಲೀಲಾ, ಹರ್ಷ ಸಮೃದ್ಧ, ರೋಹಿತ್ ಚಕ್ರತೀರ್ಥ, ರಮೇಶ ದೊಡ್ಡಪುರ, ಆಯೋಜನೆ: ಸಾವರ್ಕರ್ ಸಾಹಿತ್ಯ ಸಂಘ, ದಿ ಮಿಥಿಕ್ ಸೊಸೈಟಿ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10.15

ಕೆ.ಮೋಹನ್ ದೇವ್ ಆಳ್ವ, ಡಾ.ಎಂ.ಕೆ.ಶೈಲಜ ಆಳ್ವ ದತ್ತಿ ನಿಧಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಕೃಷ್ಣ ಎಸ್. ದೀಕ್ಷಿತ್, ಆರ್. ದೇವದಾಸ್, ಅಧ್ಯಕ್ಷತೆ: ಎಂ. ಲಕ್ಷ್ಮೀನಾರಾಯಣ್, ಅತಿಥಿಗಳು: ಕೆ. ಮೋಹನ್‌ದೇವ್ ಆಳ್ವ, ಎಸ್.ಜಿ. ಸುಶೀಲಮ್ಮ, ದತ್ತಿನಿಧಿ ಪುರಸ್ಕೃತರು: ‘ಸಂವಿಧಾನ ಶಿಲ್ಪಿ’ ಪ್ರಶಸ್ತಿ: ಎಂ. ರಾಮಕೃಷ್ಣ, ‘ಹಸಿರು ಕ್ರಾಂತಿಯ ಹರಿಕಾರ ಪ್ರಶಸ್ತಿ: ಆರ್. ರಂಗಸ್ವಾಮಿ, ‘ಒನಕೆ ಓಬವ್ವ ಪ್ರಶಸ್ತಿ: ಡಿ. ಶಿವರುದ್ರಮ್ಮ, ಆಯೋಜನೆ: ಆದಿಜಾಂಬವ ಜಾಗೃತಿ, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಬೆಳಿಗ್ಗೆ 10.30

‘ನಟರಂಗದ ನಟರು, ನಾಟಕ ಪ್ರದರ್ಶನಗಳ ನೆನಪಿನ ಕಾರ್ಯಕ್ರಮ’: ನಾವು–ನಮ್ಮ ನಟರಂಗ: ಗಿರಿಜಾ ಲೋಕೇಶ್, ಕಾಕನಕೋಟೆ: ಜಿ.ಎನ್. ಮೋಹನ್, ತುಘಲಕ್–ಸಂಕ್ರಾಂತಿ: ಎಂ.ಕೆ. ಭಾಸ್ಕರ್ ರಾವ್, ಕಕೇಷಿಯನ್ ಚಾಕ್ ಸರ್ಕಲ್–ಚೆಗೆವಾರ: ಜಿ.ಎನ್.ರಂಗನಾಥ ರಾವ್, ಆಯೋಜನೆ: ನಟರಂಗ, ಸ್ಥಳ: ಸುಚಿತ್ರ ರಂಗಮಂದಿರ, ಬನಶಂಕರಿ, ಬೆಳಿಗ್ಗೆ 10



ಗಿರಿಜಾ ಲೋಕೇಶ್

ವಿದ್ಯಾರ್ಥಿವೇತನ ವಿತರಣಾ ಸಮಾರಂಭ: ಉದ್ಘಾಟನೆ: ಡಾ. ಜಿ.ಡಿ. ನಾರಾಯಣಪ್ಪ, ಅಧ್ಯಕ್ಷತೆ: ಎಂ. ನಾಗರಾಜ್, ಅತಿಥಿಗಳು: ಎಂ. ತಿಮ್ಮೇಗೌಡ, ಎಂ. ಗುರಪ್ಪ, ಎನ್. ನವನೀತ್ ಮೋಹನ್, ಆಯೋಜನೆ: ಬೆಂಗಳೂರು ಈಡಿಗರ ವಿದ್ಯಾರ್ಥಿನಿಲಯದ ಹಳೇ ವಿದ್ಯಾರ್ಥಿಗಳ ಸಂಘ, ಸ್ಥಳ: ಕರ್ನಾಟಕ ಪ್ರದೇಶ ಈಡಿಗರ ಸಂಘ, ಈಡಿಗ ಭವನ, ರಾಜೀವ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ಅಂತರಾ ಶ್ರೀರಾಮ್, ಆಯೋಜನೆ: ರಾಮನ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಸ್ಥಳ: ರಾಮನ ಮಹರ್ಷಿ ಹೆರಿಟೇಜ್ ಸಭಾಂಗಣ, ಸಂಜಯನಗರ, ಬೆಳಿಗ್ಗೆ 11

56ನೇ ಚಿನ್ನದ ಪದಕ ಪ್ರದಾನ ಸಮಾರಂಭ: ಉದ್ಘಾಟನೆ: ಡಿ.ಎಸ್. ಅರುಣ್, ಅತಿಥಿ: ವೆಂಕಟೇಶ್ವರಲು, ಅಧ್ಯಕ್ಷತೆ: ಬಿ.ಎಸ್. ಅರುಣ್ ಕುಮಾರ್, ಆಯೋಜನೆ ಮತ್ತು ಸ್ಥಳ: ವಾಸವಿ ಯೂನಿಯನ್ ಚಾರಿಟಬಲ್ ಟ್ರಸ್ಟ್, ವಾಣಿವಿಲಾಸ ರಸ್ತೆ, ವಿ.ವಿ. ಪುರ, ಬೆಳಿಗ್ಗೆ 11

‘ಸಂಸ್ಥಾಪನಾ ದಿನ’, ‘ಎಂ.ಪಿ.ಎಲ್. ಶಾಸ್ತ್ರಿ’ ಸ್ಮಾರಕ ದತ್ತಿ ಉಪನ್ಯಾಸ: ‘ಭಾರತೀಯ ಇತಿಹಾಸಕ್ಕೆ ಧ್ರುವನ ಕಥೆ ಒಂದು ಆಧಾರಸ್ತಂಭ’: ಆರ್.ಎನ್. ಅಯ್ಯಂಗಾರ, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಡಾಲಿ ಮೆಮೋರಿಯಲ್ ಹಾಲ್, ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11.30

‘ಸಮರ್ಪಣಾ’ ಪ್ರವಚನ: ಹರೇಶ್ ಮಿರ್‌ಪುರಿ, ಆಯೋಜನೆ ಮತ್ತು ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ವೈಟ್‌ಫೀಲ್ಡ್, ಸಂಜೆ 4

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ರಿಶಾ ಪ್ರಶಾಂತ್ ಕುಮಾರ್, ಅತಿಥಿಗಳು: ಪೂರ್ಣಿಮಾ ಗುರುರಾಜ್, ಸುನಿಲ್ ಕುಮಾರ್, ಆಯೋಜನೆ: ಉಷಾಸ್ ಫೌಂಡೇಷನ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

‘ಸಂಗೀತ ಸಂಭ್ರಮ’: ಅತಿಥಿ: ಪಿ.ಪ್ರದೀಪ್ ಕುಮಾರ್, ಗಾಯನ: ರಿತೇಶ ಮಿಶ್ರಾ, ರಜನೀಶ್ ಮಿಶ್ರಾ, ಹಾರ್ಮೋನಿಯಂ: ವ್ಯಾಸಮೂರ್ತಿ ಕಟ್ಟಿ, ತಬಲಾ: ಗುರುಮೂರ್ತಿ ವೈದ್ಯ, ಪಿಟೀಲು: ಎನ್. ರಾಜಂ, ರಾಗಿಣಿ ಶಂಕರ್, ತಬಲಾ: ರವೀಂದ್ರ ಯಾವಗಲ, ಆಯೋಜನೆ: ಸಪ್ತಕ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 5

ರಿತೇಶ್ ಮಿಶ್ರಾ, ರಜನೀಶ್ ಮಿಶ್ರಾ

‘ಮರೆತ ದಾರಿ’ ಪುಸ್ತಕ ಬಿಡುಗಡೆ: ಅಗ್ನಿ ಶ್ರೀಧರ್, ಪುಸ್ತಕದ ಕುರಿತು: ಚಂದ್ರಶೇಖರ ನಂಗಲಿ, ಉಪಸ್ಥಿತಿ: ಲಕ್ಷ್ಮೀಪತಿ ಕೋಲಾರ, ಚೆ ಬಾಲು, ನಾಟಕ ಪ್ರದರ್ಶನ: ನಿರ್ದೇಶನ: ಉದಯ್ ಸೋಸಲೆ, ಸಹ ನಿರ್ದೇಶನ: ವಾಸವಿ, ಸಂಗೀತ ನಿರ್ದೇಶನ: ಹನುಮಂತ್ ಮಂಡ್ಯ, ದುರ್ಗ ಬುಡ್ಡಿದೀಪ, ಆಯೋಜನೆ: ದ್ರಾವಿಡ ಪ್ರಕಾಶನ, ಆರ್‌ಡಿಎಸ್ ಅಕ್ಷರ ವಿಭಾಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5.30

‘ಬೀಚಿ ರಸಾಯನ’ ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಎನ್.ಸಿ. ಮಹೇಶ್, ಆಯೋಜನೆ: ಡ್ರಾಮಾಟ್ರಿಕ್ಸ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ನಗರದಲ್ಲಿ ಇಂದೂ ವಾಹನ ದಟ್ಟಣೆ ಸಾಧ್ಯತೆ • ಬೆಳಿಗ್ಗೆ 5.30ರಿಂದ ಬೆಳಿಗ್ಗೆ 9 ಗಂಟೆಯವರೆಗೆ ನಡೆಯುವ ಮ್ಯಾರಥಾನ್

ಟೆನ್ ಕೆ ಓಟ: ವಾಹನ ಸಂಚಾರ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಹಲಸೂರು ಗೇಟ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕಂಠೀರವ ಕ್ರೀಡಾಂಗಣದಿಂದ ಭಾನುವಾರ ಬೆಳಿಗ್ಗೆ ವಿಶ್ವ ಟೆನ್ ಕೆ ಓಟ ನಡೆಯುತ್ತಿದ್ದು ಹಲವು ರಸ್ತೆಗಳಲ್ಲಿ ವಾಹನ ಸಂಚಾರದಲ್ಲಿ ಮಾರ್ಗ ಬದಲಾವಣೆ ಮಾಡಲಾಗಿದೆ.

ಬೆಳಿಗ್ಗೆ 5.30ರಿಂದ ಬೆಳಿಗ್ಗೆ 9 ಗಂಟೆ ತನಕ ಮ್ಯಾರಥಾನ್ ನಡೆಯಲಿದೆ. ಈ ಅವಧಿಯಲ್ಲಿ ವಾಹನ ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ. ಪರ್ಯಾಯ ಮಾರ್ಗದಲ್ಲಿ ತೆರಳಬೇಕು ಎಂದು ಸಂಚಾರ ಪೊಲೀಸರು ಚಾಲ-ಕರು,ಸವಾರರಿಗೆ ಮನವಿ ಮಾಡಿದ್ದಾರೆ.

ಮಾರ್ಗ ಬದಲಾವಣೆ: ಜೆ.ಸಿ ರಸ್ತೆ ಕಡೆಯಿಂದ ವಿಧಾನಸೌಧ, ಶಿವಾಜಿನಗರ, ರಾಜಭವನ ರಸ್ತೆ ಕಡೆಗೆ ಹೋಗುವ ವಾಹನಗಳು ಪೊಲೀಸ್ ಕಾರ್ನರ್, ಕೆ.ಜಿ ರಸ್ತೆ, ಹಳೇ ಅಂಚೆ ಕಚೇರಿ ರಸ್ತೆ ಮೂಲಕ ಕೆ.ಆರ್. ವೃತ್ತ ಅಥವಾ ಪ್ಯಾಲೇಸ್ ರಸ್ತೆ ಮಾರ್ಗವಾಗಿ ಬಸವೇಶ್ವರ ವೃತ್ತದ ಕಡೆಗೆ ಸಂಚರಿಸಬಹುದು ಎಂದು ಪೊಲೀಸರು ಕೋರಿದ್ದಾರೆ.

ಜೆ.ಸಿ.ರಸ್ತೆ ಕಡೆಯಿಂದ ಹಳೆ ಮದ್ರಾಸ್ ರಸ್ತೆ, ಎಂಜಿ ರಸ್ತೆ, ಹಲಸೂರು, ಮಾರತ್‌ಹಳ್ಳಿ ಕಡೆಗೆ ಹೋಗುವವರು ಭರತ್ ಜಂಕ್ಷನ್ ಬಳಿ ಬಲಕ್ಕೆ ತಿರುವು ಪಡೆದುಕೊಂಡು ಎಚ್.ಸಿದ್ದಯ್ಯ ರಸ್ತೆ, ಊರ್ವಶಿ ಜಂಕ್ಷನ್, ಕೆ.ಎಚ್. ಜಂಕ್ಷನ್, ಕೆ.ಎಚ್.ರಸ್ತೆ, ರಿಚ್‌ಮಂಡ್ ಮೇಲ್ಸೇತುವೆ, ರೆಸಿಡೆನ್ಸಿ ರಸ್ತೆ, ಕ್ಯಾಷ್ ಫಾರ್ಮಸಿ, ಅಪೇರಾ ಜಂಕ್ಷನ್, ಮೇಯೊಹಾಲ್, ಕಮಿಷನರೇಟ್ ರಸ್ತೆ, ಗರುಡಾ ಮಾಲ್ ಮೂಲಕ ತೆರಳಬಹುದು.

ಸಿಟಿ ಮಾರುಕಟ್ಟೆ ಮತ್ತು ಟೌನ್‌ಹಾಲ್ ಕಡೆಯಿಂದ ಹಳೆ ಮದ್ರಾಸ್ ರಸ್ತೆ, ಎಂಜಿ ರಸ್ತೆ, ಹಲಸೂರು, ಮಾರತ್‌ಹಳ್ಳಿ ಕಡೆಗೆ ಹೋಗುವವರು ಎನ್‌ಆರ್ ಜಂಕ್ಷನ್, ಪಿ.ಕಾಳಿಂಗರಾವ್ ರಸ್ತೆ, ಮಿಷನ್ ರಸ್ತೆ, ರಿಚ್‌ಮಂಡ್ ಮೇಲ್ಸೇತುವೆ, ರೆಸಿಡೆನ್ಸಿ ರಸ್ತೆ, ಕ್ಯಾಷ್ ಫಾರ್ಮಸಿ, ಅಪೇರಾ ಜಂಕ್ಷನ್, ಮೇಯೊಹಾಲ್, ಕಮಿಷನರೇಟ್ ರಸ್ತೆ, ಗರುಡಾ ಮಾಲ್, ಹಾಸ್‌ಮ್ಯಾಟ್ ಆಸ್ಪತ್ರೆ ಮೂಲಕ ಮುಂದೆ ಹೋಗಬಹುದಾಗಿದೆ. ನೃಪತುಂಗಾ ರಸ್ತೆ ಕಡೆಯಿಂದ ಹಳೆ ಮದ್ರಾಸ್ ರಸ್ತೆ, ಎಂಜಿ ರಸ್ತೆ, ಹಲಸೂರು, ಮಾರತ್‌ಹಳ್ಳಿ ಕಡೆಗೆ ಹೋಗುವವರು ಹಡ್ಸನ್ ವೃತ್ತದಲ್ಲಿ ಕಡ್ಡಾಯವಾಗಿ ಬಲಕ್ಕೆ ತಿರುವು ಪಡೆದು ದೇವಾಂಗ ರಸ್ತೆ, ದೇವಾಂಗ ಜಂಕ್ಷನ್, ಮಿಷನ್ ರಸ್ತೆ ಮೂಲಕ ತೆರಳಬೇಕು.

ಹಲಸೂರು ಮತ್ತು ಹಳೇ ವಿಮಾನ ನಿಲ್ದಾಣ ರಸ್ತೆ ಕಡೆಯಿಂದ ಬರುವ ದ್ವಿಚಕ್ರ ಮತ್ತು ನಾಲ್ಕು ಚಕ್ರದ ವಾಹನಗಳು ಟ್ರಿನಿಟಿ ವೃತ್ತದ ಮೂಲಕ ಎಂ.ಜಿ.ರಸ್ತೆಯಲ್ಲಿ ಸಂಚರಿಸಬಹುದು. ಇತರೆ ಭಾರಿ ವಾಹನಗಳು ಟ್ರಿನಿಟಿ ವೃತ್ತದ ಮೂಲಕ ಬೇಗಂ ಮಹಲ್ ವೃತ್ತ, ಗುರುದ್ವಾರ ಜಂಕ್ಷನ್ ಮೂಲಕ ಸಂಚರಿಸಬೇಕು ಎಂದು ಪೊಲೀಸರು ಕೋರಿದ್ದಾರೆ.

ವಾಹನ ನಿಲುಗಡೆಗೆ ಸ್ಥಳಗಳು: ಪಾಸ್ ಹೊಂದಿರುವ ಓಟಗಾರರು ಯು.ಬಿ.ಸಿಟಿ ಪಾವತಿ ಮತ್ತು ನಿಲುಗಡೆ ಸ್ಥಳದಲ್ಲಿ ತಮ್ಮ ವಾಹನಗಳನ್ನು ನಿಲುಗಡೆ ಮಾಡಬೇಕು

ಕ್ಯಾಬ್ ಪಿಕ್ ಅಪ್ ಸ್ಥಳಗಳು: ಆರ್‌ಆರ್‌ಎಂಆರ್ ರಸ್ತೆ, ಕೆ.ಜಿ ರಸ್ತೆ, ಪೊಲೀಸ್ ಕಾರ್ನರ್ ಬಳಿ, ಸೇಂಟ್ ಮಾರ್ಕ್ಸ್ ರಸ್ತೆ, ಎಸ್‌ಬಿಐ ವೃತ್ತದ ಬಳಿ, ಕ್ವೀನ್ಸ್ ವೃತ್ತದ ಬಳಿ ಪ್ರಯಾಣಿಕರನ್ನು ಹತ್ತಿಸಿಕೊಂಡು ತೆರಳಬಹುದು.

ಐಪಿಎಲ್: ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮೇ 21ರಂದು (ಭಾನುವಾರ) ಬೆಂಗಳೂರು ರಾಯಲ್ ಚಾಲೆಂಜರ್ಸ್ ಹಾಗೂ ಗುಜರಾತ್ ಟೈಟಾನ್ಸ್ ನಡುವೆ ಐಪಿಎಲ್ ಪಂದ್ಯ ನಡೆಯುತ್ತಿದ್ದು, ಹಲವು ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಅಂದು ಮಧ್ಯಾಹ್ನ 2ರಿಂದ ರಾತ್ರಿ 10ರ ತನಕ ಕ್ವಿನ್ಸ್ ರಸ್ತೆ, ಎಂಜಿ ರಸ್ತೆ, ಕಬ್ಬನ್ ರಸ್ತೆ, ರಾಜ ಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂ ರಸ್ತೆ, ಕಸ್ತೂರ ಬಾ ರಸ್ತೆ, ಟ್ರಿನಿಟಿ ವೃತ್ತ, ಲ್ಯಾವೆಲ್ಲಿ ರಸ್ತೆ, ವಿಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

ಕಿಂಗ್ಸ್ ರಸ್ತೆ, ಕಂಠೀರವ ಸ್ಟೇಡಿಯಂ, ಯುಬಿ ಸಿಟಿ ಪಾರ್ಕಿಂಗ್ ಸ್ಥಳ, ಬಿಎಂಟಿಸಿ ಬಸ್ ನಿಲ್ದಾಣದ ಮೊದಲನೇ ಮಹಡಿ ಹಾಗೂ ಓಲ್ಡ್ ಕೆಜಿಐಡಿ ಬಿಲ್ಡಿಂಗ್‌ನಲ್ಲಿ ವಾಹನ ನಿಲುಗಡೆ ಗೆ ವ್ಯವಸ್ಥೆ ಮಾಡಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ವಾಹನ ನಿಲುಗಡೆ ನಿಷೇಧಿತ ಸ್ಥಳಗಳು

- ಕಸ್ತೂರಬಾ ರಸ್ತೆ: ಹಡ್ಸನ್ ವೃತ್ತದಿಂದ ಕ್ವಿನ್ಸ್ ವೃತ್ತದವರೆಗೆ
- ಎಂ.ಜಿ ರಸ್ತೆ: ಕ್ವಿನ್ಸ್ ವೃತ್ತದಿಂದ ವೆಬ್ಸ್ ಜಂಕ್ಷನ್ ವರೆಗೆ
- ಕಬ್ಬನ್ ರಸ್ತೆ: ಮಣಿಪಾಲ್ ಸೆಂಟರ್‌ನಿಂದ ಸಿಟಿಒ ವೃತ್ತದ ವರೆಗೆ
- ಕಾಮರಾಜ ರಸ್ತೆ
- ಸೆಂಟ್ರಲ್ ಸ್ಟ್ರೀಟ್
- ಕ್ವಿನ್ಸ್ ರಸ್ತೆ: ಬಾಳೇಕುಂದ್ರಿ ವೃತ್ತದಿಂದ ಕ್ವಿನ್ಸ್ ವೃತ್ತದ ವರೆಗೆ ರಸ್ತೆಯ ಎರಡು ಕಡೆ
- ರಾಜಭವನ ರಸ್ತೆ: ಸಿಟಿಒ ವೃತ್ತದಿಂದ ರಾಜಭವನ ಜಂಕ್ಷನ್ ವರೆಗೆ
- ಡಾ.ಬಿ.ಆರ್. ಅಂಬೇಡ್ಕರ್ ರಸ್ತೆ: ಬಾಳೇಕುಂದ್ರಿ ವೃತ್ತದಿಂದ ಕೆ.ಆರ್ ವೃತ್ತದ ವರೆಗೆ
- ಕಬ್ಬನ್ ಉದ್ಯಾನದ ಒಳಭಾಗದ ರಸ್ತೆಗಳು
- ಮಲ್ಯ ಆಸ್ಪತ್ರೆ ರಸ್ತೆ: ಸಿದ್ದಲಿಂಗಯ್ಯ ವೃತ್ತದಿಂದ ಆರ್‌ಆರ್‌ಎಂಆರ್ ವೃತ್ತದ ವರೆಗೆ
- ಆರ್‌ಆರ್‌ಎಂಆರ್ ರಸ್ತೆ: ಆರ್‌ಆರ್‌ಎಂಆರ್ ಜಂಕ್ಷನ್‌ನಿಂದ ಹಡ್ಸನ್ ವೃತ್ತದ ವರೆಗೆ
- ವಿಠಲ್ ಮಲ್ಯ ರಸ್ತೆ: ಸಿದ್ದಲಿಂಗಯ್ಯ ವೃತ್ತದಿಂದ ಕಾಫಿ ಡೇ ಜಂಕ್ಷನ್‌ವರೆಗೆ

ಮಹೇಶ್ವರಮ್ಮ ಜಾತ್ರೆ ನಾಳೆಯಿಂದ

ಪೀಣ್ಯ ದಾಸರಹಳ್ಳಿ: ಮಹೇಶ್ವರಮ್ಮ ಜಾತ್ರಾ ಮಹೋತ್ಸವ ಇದೇ 22ರಿಂದ 25ರವರೆಗೆ ದಾಸರಹಳ್ಳಿ ಗ್ರಾಮದಲ್ಲಿ ನಡೆಯಲಿದೆ. 22ರಂದು ಬೆಳಿಗ್ಗೆ 8 ಗಂಟೆಗೆ ಮುತ್ತರಾಯ ಸ್ವಾಮಿ ಮತ್ತು ಬಸವಣ್ಣದೇವರಿಗೆ ಬೆಲ್ಲದ ಆರತಿ, 11ಕ್ಕೆ ಚಿಕ್ಕಮ್ಮ ಮತ್ತು ದೊಡ್ಡಮ್ಮ ದೇವರಿಗೆ ಆರತಿ, ಪೂಜಾ ಕಾರ್ಯಕ್ರಮ ನಡೆಯಲಿದೆ.

‘23ರಂದು ಬೆಳಿಗ್ಗೆ 10 ಗಂಟೆಗೆ ಧನಿನ ಮಾರಮ್ಮ ಮತ್ತು ಮಹೇಶ್ವರಮ್ಮ ದೇವರಿಗೆ ಆರತಿ ಹಾಗೂ ಪೂಜೆ, ರಥೋತ್ಸವ ನಡೆಯಲಿದೆ.25ರ ಬೆಳಿಗ್ಗೆ 10 ಗಂಟೆಗೆ ಕಲಾ ತಂಡಗಳೊಂದಿಗೆ ಮಹೇಶ್ವರಮ್ಮ ದೇವರ ಮೆರವಣಿಗೆ ಹಾಗೂ ಭಕ್ತಾದಿಗಳಿಗೆ ಪ್ರಸಾದ ವಿತರಣೆ ನಡೆಯಲಿದೆ’ ಎಂದು ಮಹೇಶ್ವರಮ್ಮ ಜೀರ್ಣೋದ್ಧಾರ ಸೇವಾ ಸಮಿತಿ ಅಧ್ಯಕ್ಷ ಡಿ.ಎಂ.ವೆಂಕಟೇಶ್ ಅವರು ತಿಳಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ: ಉತ್ತಮ ಫಲಿತಾಂಶ

ಬೆಂಗಳೂರು: ಬ್ಯಾಡರಹಳ್ಳಿ ಕೆಂಪೇಗೌಡನಗರದ ಸೇಂಟ್ ಯಶ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಕುಮುದಾ ಪಿ.ಎಸ್ (ಶೇ 97.76), ಮೌಲ್ಯಾ (ಶೇ 96.16) ಲಿಖಿತ್ ಎ. (ಶೇ 96), ನಿಖಿಲ್ ಗೌಡ ಎನ್. (ಶೇ 95.68) ಮತ್ತು ಜ್ಯೋತಿ ವಿ. (ಶೇ 95.04) ಅಂಕ ಪಡೆದುಕೊಂಡಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ADITYA PUBLIC HIGH SCHOOL
#607, 19th Cross, Laxman Rao Nagar, Koramangala 1st Stage, Viveknagar (Post), Bengaluru - 47
REQUIRED
Required Teacher's to teach all subjects from **LKG to X Std** with English Fluency
Qualification : SSLC, NTT, D.Ed, B.Ed with Degree
Contact Immediately:
7892131659
9972931542
9481255196

BANGALORE PUBLIC SCHOOL, ICSE
Domlur, HAL 2nd Stage Bangalore-560071
9481617879
9739593919
Require Suitably qualified Teachers for the following subjects
- MATHEMATICS
- PHYSICS
- P.T.

Resume to: bangalore publicschool22@gmail.com

WANTED TEACHERS
Wanted trained and experienced teachers with good command of English for a reputed school in **Whitefield.**
Primary - Social Science and English.
High School - Computer Science and English.
Send your resume to
st.thomaswfd@gmail.com
Ph: 080-28452484

GE KAY Convent High School Requires Graduate Primary/ Nursery/ High School English and Science Teachers Immediately Contact Principal: 9880800758

THE MYSORE EDUCATION SOCIETY
"Brahmi", KISHORA KENDRA, 10th MAIN, 15th CROSS, MALLESWARAM, BANGALORE – 560 003
Website: www.mesinstitutions.in

Invites Applications for the following Posts:

A. Assistant Teachers for Pre-Primary School : Pay Scale: Rs. 11650-32950/-
Qualification: Graduate with a minimum of 55% marks from a recognized university and NTT or Montessori Training
Desirable: Passion to teach children with care.

B. Teachers (State & ICSE Syllabus) Pay Scale: Rs. 18050-45500/-
a) For Primary School, Subjects: Science (PCM/CBZ)
b) For High School
Subjects: English & Social Science/Social Science & Economics/ Science (PCM/CBZ)
Qualification: Graduate / Post Graduate with a minimum of 55 % marks from a recognized university and B.Ed., with teaching methods in relevant subject(s)
Desirable: Proficient in English

C. Lady Physical Education Teacher Pay Scale: Rs. 14750-39850/-
Qualification: Graduate with a minimum of 55 % marks from a recognized university and B.PEd.,
Desirable: Basic Computer Skills.

D. Lecturers for PU Colleges : Pay Scale: Rs. 23450-56750/-
Subjects: Hindi/English//Mathematics/Biology/Computer Science/ Statistics/Psychology/ Economics/History
Qualification: Master's Degree in relevant subject from a recognized university with a minimum of 55% Marks and B.Ed., with teaching methods in relevant subject(s).

E. Assistant Professors for Degree Colleges: Pay Scale: Rs. 23450-56750/-
Subjects: Kannada/Sanskrit/Hindi/ English /Mathematics/Zoology/Computer Science/ Statistics/ Commerce/Psychology/Political Science/History/Economics
Qualification: Master's Degree in relevant subject from a recognized university with a minimum of 55% Marks and qualified in NET/SLET or PhD (with course work included as part of the doctoral programme)

F. Assistant Professors for P.G. Mathematics at Degree College: Pay Scale: Rs. 27550-56750/-
Qualification: Master's Degree in relevant subject from a recognized university with a minimum of 55% Marks and PhD.,(with course work included as part of the doctoral programme)
Desirable: Post-doctoral experience & Research Publications

G. Computer Technician: Pay Scale: Rs. 12850-36850/-
Qualification: Bachelor's Degree in Computer Science /Computer Applications from a recognized university with a minimum of 55% Marks or Bachelor's Degree from a recognized university with a minimum of 55 % marks and Diploma in Hardware Maintenance / Computer
Desirable: i) previous experience of working in computer lab/hardware maintenance in educational institution(s) ii) knowledge of software applications

H. Office Assistants (Accounts) Pay Scale: Rs. 11650-32950/-
Qualification: B.Com with Tally (ERP 9.0) operations and proficient in MS Office and other computer applications. Previous experience in office procedure & accounting and correspondence in Kannada and English.

I. Counsellor Consalidated salary of Rs. 35,000/-
Qualification: Master's Degree in Counseling Psychology / Clinical Psychology from a recognized university with a minimum of 55% Marks, **Desirable:** Basic Computer Skills.

1. The posts carry scales of pay and allowances such as HRA at 25%, Interim allowance 60%. Besides this, contribution towards PF and Gratuity as terminal benefit.
2. Applications with BIO-DATA and copies of certificates of their qualifications and experience etc., should reach the Chief Executive, MES at the above address on or before 25.05.2023 duly superscribing the envelope with "Application for the post of ______________". (Download application from www.mesinstitutions.in)
3. Candidates with experience are preferred.
4. Competency in ICT enabled teaching is desirable.
5. All posts are tenable in any of the MES Institutions and are transferable.
6. Decision of the selection committee is final.
7. Resorting to any sort of influence will be deemed as a disqualification of the candidature.

Advt. No. MES/19/ADM-1/2023 Dated 17.05.2023 CHIEF EXECUTIVE

WANTED IMMEDIATELY on Part-Time Basis with experience (1) ASSISTANT PROFESSOR in English: M.A in English, studied as optional in UG level to TEACH B.Com/ BBA Students (2) LECTURER- M.Com to TEACH Commerce Subjects For PU STUDENTS (3) LECTURER in Computer Science: M.Sc in Computer Science or MCA to Teach Computer Science to Degree students (4) HIGH-SCHOOL TEACHERS- (2) B.Ed to Teach Chemistry, Biology, Social-Science & Hindi to both English and Kannada medium students. Apply on or before 24/05/2023 with passport size photo. To The Secretary, BHARATHAMATHA EDUCATION SOCIETY (R) Hanumanthanagar, Bangalore-19 Phone: 080-26672836, 9110669225 Email: bharathamatha.edusoc@gmail.com

REQUIRED EXPERIENCED & Trained Teachers to handle Primary & High School classes. A) English- Qualification: B.A/M.A.,B.Ed/M.Ed (B)P.E.Teachers (C)DTP Operator. Interested candidates contact Max Muller Public School, Mahalakshmi Layout, Bangalore-96. Ph:23376050. E-mail: maxmullerpublicschool.mlayout@gmail.com

ST LAWRENCE SCHOOL Avalahalli Mysore Road (Near Satellite busstop/ Girinagar) Bangalore-26 Mob 97401-54959/ 80738-57671. Wanted HighSchool MATHS Salary 25K- 38K, DRAWING, PHYSICAL EDUCATION LADY 15K- 25K. WALK-IN on 22/05/2023 Between 10- 3

RMS PU COLLEGE Invites application from applicants with 3 years experience for Mathematics & Basic Maths (Part time) Physics & Computer Science (Full time) rmspucollege@gmail.com CALL: 6361975098

WANTED POST Graduate Teachers For English medium School with Minimum 5years Experience,Good fluency in English for Highschool, Primary and Nursery with B Ed, and NTT for Maths, Science Social, English and Hindi Freshers & Retd Teachers can also apply Walk-in-interview between 10am to 12.30pm Apply to The principal/secretary Pt Jawaharlal Nehru Memorial school 6/23/1, 4th Main Road,9th cross,Chamarajpet, Near TR mill,Bangalore-18 Contact-9632315392

"WANTED EXPERIENCED Subject Teachers for 1st to-10th Standard English Medium School at Kumarakrupa Road- Attractive Salary. Contact: 9900999528/ 9900096610"

TEACHERS REQUIRED for KG, Primary Hindi and High School Kannada. Contact: Sinclairs High School Chelekere. Bangalore Ph: 080-25443745. Email: info@sinclairsschool.com

BRILLIANCE ENGLISH SCHOOL Jayanagar 3rd Block Bangalore-11 Required B.Ed Teachers For High School: Science,English & Social Science Call 080-26630237 9845178331

ST.ANN'S English School
Veerabhadranagar, Opp. PESIT, BSK 3rd Stage, Bangalore-85
REQUIRED
TEACHERS for **English & Social For High School.**
Walk-in: 18 to 22.05.2023
M: 9449834541, 7348894111
stannspublic2004@gmail.com

WANTED PAINTING TEACHER with Oil Painting expertise as Home tutor. Contact: 95917 57765

GOODWILL PU COLLEGE, Bangalore-91 Wanted Experienced LECTURERS for Chemistry & Computer Science. Walk-in from 22/5/2023. Excellent Salary. Contact: 9449252533, 8747966822

SRI RAMAKRISHNA HOTEL
No. 262, S.C.Road, Gandhinager, Bengaluru 560009
Contact No. 080-22263041

CASHIER
4 to 5 years experience in Hotel and Lodging, with Accounting & Computer knowledge.

ELECTRICIAN
ITI / Diploma in Electrical with 4 years experience

PLUMBER / PAINTER
Well Trained Plumbers and Painter for Monthly Salary

Attractive salary. Interested Candidates can send their updated CV, Qualification & Experience certificate by email with the position applied in the subject line to: sriramakrishnalodgeltd@gmail.com
Contact: Vishnu: 9901081044
Nandish: 9901434156, Suresh: 8431782204
RKL-23401

Engg/ Production Technical

"WANTED BE Candidate from ECE, EEE and CSE, with Experience of 0/2Years only. Contact:'Yukthi Datasoft Pvt.Ltd.' 7795734869/ 9986934382"

Drivers

WANTED EXPERIENCED DRIVER aged about 40- 45 years to drive Manual and Automatic High-end Cars with good reference who stays in and around Vittal Mallya Road. Forward resume to: enquiries@farahgroup.in

Hospital & Medical Jobs

URGENTLY REQUIRED NURSES IN HOSPITAL
7th Cross Road, Dasarahalli Circle, 5th Main Road, 775, 8th Cross Road, Near Veeresh Theater, MC Layout, Vijayanagar, Bengaluru - 560 040

Post	No.of Post	Qualification	Experience Required	Salary
"Staff Nurse" in Govt. (BBMP Bengaluru) on Contract	62	B.Sc. Nursing Recognized from Karnataka Nursing Council	Freshers eligible (No Experience Required)	Monthly CTC Rs. 23, 500/- P.M.,

OTHER BENEFITS: Salary revisions every 6-months, Only 8-hours Shift, Overtime Extra, **Date of Interview - 19-05-2023 to 31-05-2023, Contact (Call or Whatsapp): Santosh - 8884398469, Mohd Shuaib - 7090608608, Madhav - 8073905797, Email ID-madhavmac@yahoo.co.in. Contract on M/s GA Digital Web Word Pvt.Ltd.(GAD), Bengaluru.**

C B BHANDARI JAIN HIGH SCHOOL & PU COLLEGE
No.9, Kilari Road, Bengaluru-53. Tel. 41323029 / 22287485
TEACHING STAFF REQUIRED

Principal	Post Graduate with B.Ed having the Knowledge of departmental work
Vice-principal	Post Graduate with B.Ed having the Knowledge of departmental work.
English Teacher	B.A, B.Ed in English to teach in Primary School
Hindi Teacher	B.A / M.A, B.Ed in Hindi or Shikshak trainning to teach in High School
Administrator	A well experienced academician with the knowledge of Financial Management & departmental work

Call or Mail to cbbjhs@gmail.com Near Metro Stations & Mysore Bank Circle.

THIRUMALA VIDYA NIKETHAN SCHOOL
#29, G.D Park Extn, Vyalikaval, Bangalore-560003
Ph: 080-23447560 / 23447570
Email:-tvns1984@gmail.com
Requires
Trained Science & Arts Graduate/ Post Graduate with B.Ed teachers to teach the following subjects:-
Maths for High School English, Social Science & Science for Higher Primary
The applications with relevant qualification and good communication skill in English are required.
Please mail/submit the resume with recent photograph to the principal within 7 days from the date of advertisement.

WANTED TRAINED LADY TEACHERS to teach All Subjects in Lower Primary, MATHS and COMPUTER in English Medium Primary and High Schools. Wanted Trained Male/ Female PHYSICAL EDUCATION and SANSKRIT TEACHER for Primary and High School. Walk-in Interview on 22.05.2023, Monday between 1.00PM and 3.00PM at PRATHIBHA SHIKSHANA SAMITHI, #9, 18th Main, BSK II Stage, Bangalore-70. Ph: 080- 26710170/ 74833-77387

NISARGA HIGH SCHOOL, Opposite to Government Hospital, Hegganahalli Bangalore-91 requires Trained TEACHERS for English Hindi, Kannada Maths Science Computer Science, Lady PE for Primary, Middle and High School. Good Communication skill is must, minimum two years of experience. OFFICE ASSISTANT with Computer Knowledge. CO ORDINATOR: Highly Organised, excellent communication and problem solving skills & HOUSE KEEPING. Walk-in Interview on 21/5/2023 between 10 am to 12 pm. Contact: 080-28362314 7012724659 9844754318 Email: nisargahighschool@gmail.com

REPUTED ENGLISH Medium School requires experienced trained LADY TEACHERS for Nursery/ Primary/ Higher Secondary for teaching English, Maths, Science, E.V.S, P.E Teacher. Walk-in interview. 10.00 AM to 2:00 PM. Good salary. New Oxford English School, #129, 6th cross, Gandhinagar, Bangalore-09, Ph: 22261590/ 8884440214.

NEW FLORENCE English School, 8th main, Shivanagar, Rajajinagar, Bengaluru-10, requires lady teachers to handle Nursery, Higher Primary (English, Science, Social), High school (Social, English), Ayahs: 9620396782 /9845346754

FRANK PUBLIC HIGH SCHOOL, JP.Nagar 6thPhase, requires ENGLISH, HINDI, PE TEACHERS. rumysud@gmail.com WhatsApp7019301626

WANTED DEDICATED fluent Teachers for St Patriot Convent Graduates, PUC, Part time Computer teacher Near Lalbagh Main gate Contact: 6364581097

WANTED ENGLISH MEDIUM TRAINED Lady Teachers for Primary to teach all the subjects and Trained Male/ Female Graduates for High School to teach Maths/ Science/ Hindi/ Computer Science. Lady Graduates Interested in teaching can also apply. Age limit below 40 years. Attractive Salary with PF and ESI Facilities. Accommodation for out station candidates will be arranged. Contact in person (10.00 am- 3.00 pm on all working days)- Secretary, Deccan Educational Society®, No.95, 3rd Cross, Srirampuram, Bengaluru- 560021 (Near Sampige Theater, Malleswaram).

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 holyangels.highschoolrpclayout@gmail.com Requires Experienced Trained Teachers to handle Kannada, English, Science for Primary & Higher Primary and Computer Teacher for High School for Academic year 2023-2024. STATE & ICSE. Qualification: B.A./B.Sc.,B.Ed, M.A/M.Sc.,M.Ed. Only English medium candidates need apply.

KLV EDUCATION & Rural Development Seva Trust (R) Bagalagunte, Bangalore Wanted: Kindergarten, Mother Teachers for Primary, English & Social Teacher for High-School. Apply with relevant qualifications. Call: 9611781163 Email: klveducation@gmail.com

ENGLISH, SOCIAL TEACHERS HIGH/ MIDDLE SCHOOL/ NURSERY TEACHERS English medium Yeshwantpur/ Madanayakanahalli Bengaluru. WhatsApp resume. 8088201545/ 9342816044.

ENGLISH, PT TEACHERS FOR A REPUTED SCHOOL NEAR YELLACHENAHALLI METRO STATION. APPLY WhatsApp CV 9980944566

MORE Classifieds IN SUPPLEMENT

"GURUKULA VIDYA KENDRA SCHOOL (ICSE: KA417), NEAR DRAVID PADUKONE CENTRE FOR SPORTS EXCELLENCE, BANGALORE NORTH-562157, REQUIRES TEACHERS FOR HIGH SCHOOL, ENGLISH (MONTHLY SALARY: 35 THOUSAND PLUS) HINDI (MONTHLY SALARY: 20 THOUSAND PLUS), AYAS/ HELPERS HAVING ENGLISH KNOWLEDGE, SEND RESUME TO SECRETARY, prashy.r7779@gmail.com Ph: 9945107779"

REQUIRE TRAINED & Exp Lady Teachers for Primary for All Subjects, Hebbal, Kempapura Call:080-22330003, 9008981637 svsres21@gmail.com

REQUIRE ENGLISH Language Teacher with MA/ BA, B.Ed to teach in Primary school section. Librarian with M.L.Sc/ B.L.Sc. & Part time Music Teacher with Classical background. Apply immediately to Hon. Secretary, Poornaprajna Education Centre, CA Site No. 48, New Thippasandra, HAL 3rd Stage, Bangalore- 75. Ph: 080-25292930 poornaprajnants@gmail.com

WANTED EXPERIENCED High School Science Teacher and Computer knowledge with office work teachers, NEW CAMBRIDGE HIGH SCHOOL Bommanahalli, Bangalore-68, Salary- Upto 20000-25000/ 9448312549, 7899992107

GURUKULA INTERNATIONAL School Requires, NURSERY, NTT, English, Maths, EVS and Computer Teachers for Primary, 9th Cross, Near Magadi Road Metro Station, Bangalore-23, 7829338292 7676676629

CAMLIN HIGH SCHOOL 6th 'C' Main Hampinagara Vijayanagar 2nd Stage, Bangalore. Requires TEACHERS MATHS, ENGLISH, SOCIAL, COMPUTER SCIENCE, DRAWING, Contact for Immediate appointment. 080-23301363

REQUIRED PHYSICAL Education Teacher with B.A.,B. P.Ed. or B.A. C.P.Ed.,for Higher Primary School. Contact immediately Hon. Secretary, SriVinayaka Education Society (R) #218, Banappa Park,Cubbonpet, Bengaluru-560002. Ph:22210459 / 7406222209.

WANTED EXPERIENCED_HM and Academic co-ordinator,High School Social and English Teacher.SRI SHANTINIKETAN SCHOOL,Uttarahalli. Contact:9008709749

WANTED TEACHERS for High School. Sub: English, Maths, Science. Jyothi Vidyalaya, Hesaraghatta, Bangalore-88. Ph. No. 080- 28466379/ 9008802868.

WANTED SCIENCE, English, Social Science, Computer Teachers, Clerks, Manager, Primary/ High School, J.P.Nagar: 9845042249, 9844021116.

QUWATHUL ISLAM HIGH SCHOOL #8 Bore Bank Road Benson Town Bengaluru-46. Requires Qualified and experienced TEACHERS in URDU, MATHS (PCM), SCIENCE (CBZ) and OFFICE ASSISTANT- Graduate with knowledge of Computers and SATS, apply immediately.

WANTED TEACHERS, Nursery, Primary and High-school classes for all the subjects including P.E. and Computer. 'SRI VIDYA KENDRA' Peenya 1st stage, Bengaluru-58 Phone: 9900708182, 28398833, 41179155

WANTED EXPERIENCED SCIENCE, B.Sc., B.Ed., & PE TEACHERS for New Pioneers Highschool, ByraveshwaraNagar, Nagarabhavi Road, Bangalore-72.Interview on 22-05-2023. Call:9343761488

BG NATIONAL Public School,Jakkur Layout,Opp GKVK Campus. Requires HEAD MISTRESS, Academic Co-Ordinator, Female Office Assistant, TEACHERS for Higher Primary English,Maths. Contact: 9740619796/ 8050088907 Mail: bgnps2015@gmail.com

DH DECCAN HERALD ಪ್ರಜಾವಾಣಿ
JOB CORNER

BOOK JOB ADS ON WEEKDAY + SUNDAY
@ 803/-* Per Sqcm Single Column
@ 825/-* Per Sqcm Multi Column
conditions apply
For More Details Contact:
9731810277 | 9901641752
9845114560 | 9886213331
080- 45557163 | 45557164

Factory

"WANTED DRIVER,COOK, MACHINE OPERATOR, HOUSEKEEPING HELPER, ELECTRICIAN for a Manufacturing company located in Bommanahalli, near BTM.Layout/ H.S.R.Layout, Bangalore-68. Send-CV-to: uppbangalore@gmail.com /Contact: 9449817703"

***WANTED* SSLC,** PUC,ITI, Diploma for CNC Machine Operator Company. Contact:DAS CNC Products Pvt Ltd. 9845159737

WANTED VMC operator, programmer cum setter with 2 years experience at Kadabagere contact 9845334909

Wanted

HEALTH BLOOM POLICLINIC
MULTI -SPECIALTY HOSPITAL , BANGALORE
REQUIRES

1.ASST MANAGER/EXECUTIVE - HOSPITAL MGMT & BUSINESS DEVT
Candidates with Degree / PG in Hospital Mgmt with min 2years experience also in business Devt in a hospital of repute, to head the hospital Management /Marketing

2.ASST MANAGER/EXECUTIVE - PHARMA SALE
Candidates with B.Pharm with min 3 years of pharma sales experience also with e pharmacy exposure in reputed firms,to head sales team of hospital pharmacy & e pharma sale through e com website.**www.healthbloom.in.** Should have registered with Karnataka Pharmacy Council

3.DUTY MEDICAL OFFICER - PART TIME
Those with MBBS with min of 2 years experience in hospital / clinic and keen to work for 4 hrs duty in Morning / evening shifts

4.PHARMA SALES ASSISTANTS
Those with Min +2 pass with spoken Kannada and English with min One year experience in Pharma counter sales

5.X RAY TECHNICIAN
Those with Min +2 pass with x-ray technician qualification with min 2 years experience in reputed lab/hospital

6.ACCOUNTANT CUM SYSTEM OPERATOR
Those with B.Com (IT) with 2 years experience of operating e.com back office with Tally, Accounts & Purchase knowledge
SAA

Attractive Salary Offered with good growth prospects for performers & those fulfilling job specs ,may apply in 10days of this advt to
radicalreality@live .com / contact@healthbloomclinics.com
97 4133 3222 & 99 1694 1694

Cook

WANTED FEMALE South Indian Food Cooks For PG in Chandra Layout. Contact: 8892222381.

A 27 year old Co. is looking for
AC Technicians
who have 3-4 years experience in Break down Service and Repairs
Qualification must be ITI or MRAC equivalent with atleast 3 years independent hands on experience in Service / Repairs of ACs like VRF, Split ACs all types etc.
Send CV to WhatsApp :
99724 37094

General

A LEADING Real Estate Developer is looking for Experienced/ Retired/ Senior/ Independent capacity, 100% Dedicated Dynamic & Aggressive, Liaison and In-house Advocate. Candidates to take care of Revenue, Legal Works. Kindly mail your resumes to : associates.blr10@gmail.com

EXECUTIVE APPAREL Processors, Tumkur Road, Bangalore requires experienced DATA-ENTRY OPERATOR- Male Candidates around Peenya, Yeshwanthpur preferred Contact: 9845034556 executiveapparels@gmail.com

WANTED SECURITY Guards and Kitchen Workers Contact: MGP College, Kanmanikai, Kengeri, Mysore Road, Bangalore. Phone: 9886236341.

REQUIRED COMPUTER Operator for billing & cheque handling job. In and around Herohalli Extn Magadi Road. 7760896930/ 9964343227.

ENGINEER/DIPLOMA HOLDERS one year experience on technical support for CAD/CAM softwares with flair for mould design. Email: aftc@advancedforming.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Walk-in

We are Hiring. . .
Fizikem® Caring for Health Since 1988
Medical Sales Executives
for all over Bangalore
Candidates must have prior experience in **Generics, OTC & Ayurvedic Sales.**
Good fluency in English, Kannada
Candidates must have 2 Wheeler
Walk-In-Interview
22-05-2023-10 AM to 2 PM
#673, G-floor, 12th Cross, 7th Block, Jayanagar, Bangalore - 560082
Send your CV's to
ishanpharmalabs@gmail.com
99456 12866

Marketing & Sales

WANTED MARKETING Executive for Bangalore & Davangere area Fresher or Experienced Candidate Needed Min. qualification: Any Degree Two wheeler Must Interested People Can Send Their Resume to bangalore@agsar.net or Call: 9900091609

WANTED EXPERIENCED SALES BOYS/ GIRLS for Exclusive Baby Store. Contact- Kidskingdom, Malleshwaram. PH- 9341943491

WANTED SALES Executive for Mumbai Based Solvent Cement Company.Salary 40-50 thousand .Call 7498911130

Multiple Vacancy

REQUIRED EXPERIENCED Accounts Assistants/ Billing assistants/ Delivery Boys/ Helpers for Reputed Pharmaceutical Company at Nayandahalli off Mysore Road Bangalore. Contact: Prajwal 9845051220/ Divya 9019184151. Email: valmopharmaceuticals@gmail.com Valmo Pharmaceuticals Pvt Ltd No 2, Royal tower 3rd cross Aziz Sait industrial estate, Nanyandahalli, Bangalore -560039.

Receptionist/ Secretary

REQUIRED MALE / Female Receptionist with Computer knowledge. Contact: Bhagwan Mahaveer Jain Netralay, Platform road, Sheshadripuram Bengaluru-20. Ph 080-41162611.

ಪ್ರಮಾಣ ವಚನ ಸಮಾರಂಭ: ನಗರದ ಹಲವು ರಸ್ತೆಗಳಲ್ಲಿ ಸಂಚಾರ ದಟ್ಟಣೆ– ಬಸವಳಿದ ಪ್ರಯಾಣಿಕರು

ನಡಿಗೆಯಲ್ಲೇ ಸ್ಥಳ ತಲುಪಿದ ಅಭಿಮಾನಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ನಡೆದ ಪ್ರಮಾಣ ವಚನ ಸಮಾರಂಭ ವೀಕ್ಷಿಸಲು ರಾಜ್ಯದ ವಿವಿಧೆಡೆಯಿಂದ ಕಾಂಗ್ರೆಸ್ ಕಾರ್ಯಕರ್ತರು, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ನೂತನ ಸಚಿವರ ಅಭಿಮಾನಿಗಳು ಹಲವು ವಾಹನಗಳಲ್ಲಿ ಬಂದಿದ್ದರು.

ಇದರಿಂದ ನಗರಕ್ಕೆ ಪ್ರವೇಶ ಕಲ್ಪಿಸುವ ರಸ್ತೆಗಳಲ್ಲಿ ದಟ್ಟಣೆಯಾಗಿ ಜನರು ಹೈರಾಣಾದರು. ಬಳ್ಳಾರಿ ರಸ್ತೆ, ತುಮಕೂರು ರಸ್ತೆ, ಮೈಸೂರು ರಸ್ತೆಯಲ್ಲಿ 9 ಗಂಟೆಯಿಂದ ಮಧ್ಯಾಹ್ನ 3 ಗಂಟೆ ತನಕ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮಾರುಕಟ್ಟೆ ಮೇಲ್ಸೇತುವೆ, ಗೊರಗುಂಟೆಪಾಳ್ಯ ಫ್ಲೈಓವರ್‌ನಲ್ಲೂ ವಾಹನಗಳು ನಿಂತಿದ್ದವು.

ಕ್ರೀಡಾಂಗಣದ ಸುತ್ತಮುತ್ತಲ ರಸ್ತೆಗಳಲ್ಲೂ ಗಣ್ಯರ ವಾಹನಗಳು ದಟ್ಟಣೆಯಲ್ಲಿ ಸಿಲುಕಿಕೊಂಡಿದ್ದವು. ನಿರೀಕ್ಷೆಗೂ ಮೀರಿ ಜನರು ಬಂದಿದ್ದರಿಂದ ನಿಯಂತ್ರಣವೂ ಕಷ್ಟವಾಯಿತು. ಕ್ರೀಡಾಂಗಣದ ಸುತ್ತಲಿನ ಪರ್ಯಾಯ ಮಾರ್ಗಗಳಲ್ಲೂ ಸಮಸ್ಯೆ ಕಂಡುಬಂತು. ಕ್ವೀನ್ಸ್ ರಸ್ತೆ, ಕಬ್ಬನ್ ರಸ್ತೆ, ಕಸ್ತೂರ ಬಾ ರಸ್ತೆ, ಮ್ಯೂಸಿಯಂ ರಸ್ತೆಗಳಲ್ಲಿ ಜನಸಾಗರವೇ ನೆರೆದಿತ್ತು. ವಾಹನ ಸಂಚಾರ ನಿರ್ಬಂಧಿಸಿದ್ದರಿಂದ ಕ್ರೀಡಾಂಗಣದತ್ತ ಜನರು ನಡೆದೇ ಸಾಗಿದರು.

ಕ್ರೀಡಾಂಗಣದ ದ್ವಾರದ ಬಳಿ ಒಳಹೊಗಲು ನೂಕುನುಗ್ಗಲು ಉಂಟಾಗಿತ್ತು. ಆಗ ಪೊಲೀಸ್ ಲಾಠಿ ಬೀಸಿ ಜನರನ್ನು ಚದುರಿಸಿದರು. ವ್ಯಕ್ತಿಯೊಬ್ಬ ಕೆಳಕ್ಕೆ ಬಿದ್ದುಗಾಯಗೊಂಡರು. ಅವರನ್ನು ಆಟೊದಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು.

ಕ್ವೀನ್ಸ್ ರಸ್ತೆಯಲ್ಲಿರುವ ಕಾಂಗ್ರೆಸ್ ಪಕ್ಷದ ಮುಖ್ಯ ಕಚೇರಿ, ವಿಧಾನಸೌಧ, ಕಂಠೀರವ ಕ್ರೀಡಾಂಗಣ ಬಳಿ ಜನರದಟ್ಟಣೆಯಿತ್ತು. ಕ್ವೀನ್ಸ್ ವೃತ್ತದಿಂದ ಸಿದ್ದಲಿಂಗಯ್ಯ ವೃತ್ತ, ಬಾಳೆಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತ, ಸಿಟಿಒ ವೃತ್ತದಿಂದ ಕ್ವೀನ್ಸ್ ವೃತ್ತ, ಹಲಸೂರು ಗೇಟ್ ಕಡೆಯಿಂದ ಸಿದ್ದಲಿಂಗಯ್ಯ ವೃತ್ತವರೆಗೆ ಸಂಚಾರ ನಿರ್ಬಂಧಿಸಲಾಗಿತ್ತು.

ನಗರದಾದ್ಯಂತ ಬ್ಯಾನರ್, ಕಟೌಟ್‌ಗಳು ಹಾಗೂ ಫ್ಲೆಕ್ಸ್‌ಗಳು ರಾರಾಜಿಸುತ್ತಿದ್ದವು. ಫ್ಲೆಕ್ಸ್‌ಗಳಲ್ಲಿ ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅವರ ಭಾವಚಿತ್ರಗಳು ಪ್ರಮುಖವಾಗಿ ಕಂಡುಬಂದವು.

ಪ್ರಮಾಣವಚನ ಕಾರ್ಯಕ್ರಮ ಹಿನ್ನೆಲೆಯಲ್ಲಿ ವಿಠ್ಠಲಮಲ್ಯ ರಸ್ತೆಯಲ್ಲಿ ಜನದಟ್ಟಣೆ ಕಂಡುಬಂತು (ಎಡಚಿತ್ರ). ಪಿ.ಕಾಳಿಂಗರಾವ್ ವೃತ್ತದಲ್ಲಿ ವಾಹನ ದಟ್ಟಣೆ ಉಂಟಾಗಿತ್ತು. –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಮುಗಿಲು ಮುಟ್ಟಿದ ಸಂಭ್ರಮ

ನೂತನ ಸಂಪುಟದ ಪ್ರಮಾಣವಚನ ಸಮಾರಂಭಕ್ಕಾಗಿ ರಾಜ್ಯದ ವಿವಿಧೆಡೆಗಳಿಂದ ಭಾರಿ ಸಂಖ್ಯೆಯಲ್ಲಿ ಜನರು ಆಗಮಿಸಿದ್ದು, ಕಂಠೀರವ ಕ್ರೀಡಾಂಗಣದ ಹೊರಗೆ, ಒಳಗೆ ಸಂಭ್ರಮ ಮುಗಿಲುಮುಟ್ಟಿತ್ತು.

ಮೈಸೂರು, ರಾಮನಗರ ಜಿಲ್ಲೆಗಳಿಂದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ರಾಹುಲ್, ಪ್ರಿಯಾಂಕಾ ಗಾಂಧಿ ನೋಡಲು ಮುಖಂಡರು, ಕಾರ್ಯಕರ್ತರು, ಅಭಿಮಾನಗಳ ಸಾಗರವೇ ಸೇರಿತ್ತು.

ಕಾರ್ಯಕ್ರಮಕ್ಕೂ ಕೆಲ ನಿಮಿಷ ಮೊದಲು ಆಗಮಿಸಿದ ಇಬ್ಬರನ್ನು ಕಂಡು ಘೋಷಣೆಗಳನ್ನು ಕೂಗಿದರು. ತಮಿಳುನಾಡು ಮುಖ್ಯಮಂತ್ರಿ ಸ್ಟಾಲಿನ್ ಅವರನ್ನು ನೋಡಲು ತಮಿಳಿಗರು ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು. ಪ್ರಮಾಣವಚನ ಸ್ವೀಕರಿಸಿದ ಇತರೆ ಎಂಟು ಸಚಿವರ ಬೆಂಬಲಿಗರೂ ಜಮಾಯಿಸಿದ್ದರು.

ಕ್ರೀಡಾಂಗಣದ ಹೊರಗೆ ಡೊಳ್ಳಿನ ಸದ್ದು, ಕಲಾವಿದರ ಕುಣಿತ ಗಮನ ಸೆಳೆದವು. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಪರ ಘೋಷಣೆಗಳು ಕೇಳಿಬಂದವು. ಕೆಲವರು ಜನರಿಗೆ ಉಚಿತ ಉಪಾಹಾರ, ನೀರು ವಿತರಿಸಿದರು. ಕುರುಬ ಸಮುದಾಯದವರು ಹಾಲುಮತದ ಸಾಂಪ್ರದಾಯಿಕ ನೇಯ್ದ ಬಟ್ಟೆ ಪ್ರದರ್ಶಿಸಿದರು.

ಸಿದ್ದರಾಮಯ್ಯ ಪರವಾಗಿ ಕುರುಬ ಸಮುದಾಯದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಕಂಬಳಿ, ಕಂಬಳಿ ಶಾಲು ಸೇರದಂತೆ ಹಾಲುಮತದ ಸಾಂಪ್ರದಾಯಿಕ ಸಾಮಗ್ರಿಗಳನ್ನು ಮಾರಾಟ ಮಾಡಲು ಹಾವೇರಿ ಸೇರಿದಂತೆ ವಿವಿಧ ಭಾಗಗಳಿಂದ ಬಂದಿದ್ದರು.

ಒಳಪ್ರವೇಶಿಸಲು ಸಾಮಾನ್ಯರ ಪರದಾಟ: ಕ್ರೀಡಾಂಗಣ ಪ್ರವೇಶಿಸಲಾಗದೇ ಹಲವರು ಪರಿತಪಿಸಿದರು. ವಿಳಂಬವಾಗಿ ಬಂದವರಿಗೆ ಪಾಸ್ ಇದ್ದರೂ ಕ್ರೀಡಾಂಗಣ ಭರ್ತಿಯಾಗಿದೆ ಎಂದು ಪೊಲೀಸರು ಪ್ರವೇಶ ನಿರಾಕರಿಸಿದರು. ಪಾಸ್ ಇಲ್ಲದವರು ಒಳಬಿಡುವಂತೆ ವಿನಂತಿಸುತ್ತಿದ್ದುದು ಕಂಡುಬಂತು. ಅವಕಾಶ ಸಿಗದಾದಾಗ ಕ್ರೀಡಾಂಗಣ ಸುತ್ತಿದ್ದ ಭಾಗ್ಯ ಎಂದು ಮರಳಿದರು.

ಬಿಸಿಲಿನ ತಾಪಕ್ಕೆ ಬಸವಳಿದರು: ಸಮಾರಂಭ ಮಧ್ಯಾಹ್ನ 12.30ಕ್ಕೆ ಇದ್ದರೂ, ಬೆಳಿಗ್ಗೆಯಿಂದಲೇ ಕ್ರೀಡಾಂಗಣದ ಬಳಿ ಜನರು ನೆರೆದಿದ್ದರು. ಪ್ರೇಕ್ಷಕರ ಗ್ಯಾಲರಿ ಹೊರತುಪಡಿಸಿ ಕ್ರೀಡಾಂಗಣದ ಒಳಗೆ ಬಿಸಿಲಿನ ತಾಪಕ್ಕೆ ಹೈರಾಣಾದರು. ಹೊರಗೆ ತಂಪುಪಾನೀಯಗಳು, ಸೌತೆಕಾಯಿ, ಮಜ್ಜಿಗೆ ಮಾರಾಟ ಜೋರಿತ್ತು.

ಮುಖ್ಯಮಂತ್ರಿ ಕಾರ್ಯಾಲಯದ 191 ಗುತ್ತಿಗೆ ನೌಕರರ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯವರ ಸಚಿವಾಲಯದಲ್ಲಿ ಸ್ಥಳ ನಿಯುಕ್ತಿ, ನಿಯೋಜನೆ, ಒಪ್ಪಂದ, ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿದ್ದ 191 ಅಧಿಕಾರಿ ಮತ್ತು ನೌಕರರನ್ನು ಬಿಡುಡೆ ಮಾಡಲಾಗಿದೆ.

ಬಾಕಿ ಇರುವ ಲ್ಯಾಪ್‌ಟಾಪ್, ಲೇಖನಿ ಸಾಮಗ್ರಿಗಳು ಸೇರಿದಂತೆ ಎಲ್ಲ ಭೌತಿಕ ಕಡತಗಳು, ಸ್ವೀಕೃತಿ, ವಾಹನ ಪಾಸ್, ಗುರುತಿನ ಚೀಟಿಗಳನ್ನು ಇಲಾಖೆಯ ಕಾರ್ಯದರ್ಶಿಗೆ ಹಿಂದಿರುಗಿಸಬೇಕು. ಯಾವುದೇ ಸಾಮಗ್ರಿಗಳು ವ್ಯತ್ಯಾಸವಾದರೆ, ಕಳೆದುಹೋಗಿದ್ದರೆ ಸಚಿವಾಲಯದ ಆಪ್ತ ಕಾರ್ಯದರ್ಶಿಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ಹೇಳಿದೆ.

‘ಗ್ಯಾರಂಟಿಯ ಸರ್ಕಾರ ನಮ್ಮದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವ ಪಕ್ಷವಾಗಿದೆ. ಮಾತಿಗೆ ಬದ್ಧವಾಗಿದ್ದು, ಚುನಾವಣಾ ಸಂದರ್ಭದಲ್ಲಿ ರಾಜ್ಯದ ಜನತೆಗೆ ಪಂಚ ಗ್ಯಾರಂಟಿಗಳನ್ನು ನೀಡಿದ್ದೆವು’ ಎಂದು ಶಾಸಕ ಹಾಗೂ ಕೆಪಿಸಿಸಿ ಮಾಧ್ಯಮ ವಿಭಾಗ ಉಪಾಧ್ಯಕ್ಷ ದಿನೇಶ ಗೂಳಿಗೌಡ ತಿಳಿಸಿದ್ದಾರೆ.

‘ಐದು ಗ್ಯಾರಂಟಿಗಳನ್ನು ಸಚಿವ ಸಂಪುಟದ ಮೊದಲನೇ ಸಭೆಯಲ್ಲಿ ಈಡೇರಿಸುವುದಾಗಿ ಪಕ್ಷದ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಭರವಸೆ ನೀಡಿದ್ದರು. ಅದರಂತೆಯೇ ನಡೆದುಕೊಳ್ಳಲಾಗಿದೆ’ ಎಂದು ಹೇಳಿದ್ದಾರೆ.

ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ ಡಾ.ಜಿ.ಪರಮೇಶ್ವರ ಅವರನ್ನು ಕಾಂಗ್ರೆಸ್ ಮುಖಂಡ ಬಿ.ವಿ.ಜಯರಾಮು ಅಭಿನಂದಿಸಿದರು. ಕೆಪಿಸಿಸಿ ಕಾರ್ಯದರ್ಶಿ ಕೇಶವಮೂರ್ತಿ, ಮುಖಂಡರಾದ ಜಗದೀಶ್ ಮತ್ತು ಜಯಚಂದ್ರ ಇದ್ದರು.

ಟರ್ಮಿನಲ್‌2: ಹೊರಗೆ ಥಳಕು, ಒಳಗೆ ಹುಳುಕು!

ಪೂರ್ಣಗೊಳ್ಳದ ಕಾಮಗಾರಿ • ಜಾಲತಾಣಗಳಲ್ಲಿ ಅಸಮಾಧಾನ ತೋಡಿಕೊಂಡ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ –2 ಉದ್ಘಾಟನೆಯಾಗಿ ಆರು ತಿಂಗಳು ಕಳೆದರೂ ಉತ್ತಮ ಸೇವೆ ನೀಡುವಲ್ಲಿ ವಿಫಲವಾಗಿದೆ. ಇಲ್ಲಿಯ ಅವ್ಯವಸ್ಥೆ ಪ್ರಯಾಣಿಕರ ಟೀಕೆ, ಆಕ್ರೋಶಕ್ಕೆ ಗುರಿಯಾಗಿದೆ.

ಕಾಮಗಾರಿ ಪೂರ್ಣ ಮುಗಿಯದಿದ್ದರೂ ತರಾತುರಿಯಲ್ಲಿ ಪ್ರಧಾನಿ ಮೋದಿ ಅವರಿಂದ ಟರ್ಮಿನಲ್-2 ಉದ್ಘಾಟನೆ ಮಾಡಿಸಲಾಯಿತು. ಪರಿಸರ ಸ್ನೇಹಿ ಎನ್ನಲಾಗಿದ್ದ ಟರ್ಮಿನಲ್–2 ಬಣ್ಣ ಈಚೆಗೆ ಸುರಿದ ಮಳೆ ವೇಳೆ ಬಯಲಾಯಿತು. ಮಳೆ ನೀರು ಚಾವಣಿಯಿಂದ ಸೋರಿ ಲಾಂಜ್‌ನಲ್ಲಿ ಸಂಗ್ರಹವಾಗಿತ್ತು.

ಚಾವಣಿಯಿಂದ ನೀರು ತೊಟ್ಟಿಕ್ಕುವ ಮತ್ತು ಸಂಗ್ರಹವಾಗಿದ್ದ ನೀರನ್ನು ಹೊರ ಹಾಕುವ ಚಿತ್ರ ಮತ್ತು ವಿಡಿಯೊಗಳನ್ನು ಪ್ರಯಾಣಿಕರು ಮತ್ತು ಕಾಂಗ್ರೆಸ್ ಪಕ್ಷದ ವಕ್ತಾರರು ಜಾಲತಾಣಗಳಲ್ಲಿ ಹಂಚಿಕೊಂಡು ಲೇವಡಿ ಮಾಡಿದ್ದರು. ಇದರಿಂದ ವಿಮಾನ ನಿಲ್ದಾಣ ಆಡಳಿತ ಮುಜುಗರಕ್ಕೆ ಒಳಗಾಗಿತ್ತು.

ಟರ್ಮಿನಲ್‌ನ ಹಲವು ನ್ಯೂನತೆಗಳನ್ನು ಪ್ರಯಾಣಿಕರು ಟ್ವಿಟರ್‌ನಲ್ಲಿ ಹಂಚಿಕೊಳ್ಳುತ್ತಿದ್ದು, ಅಪೂರ್ಣ ಕಾಮಗಾರಿ, ಅವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಪ್ರತಿ ಬಾರಿ ಆರೋಪ ಬಂದಾಗ ಅಧಿಕಾರಿಗಳು ಸರಿಪಡಿಸುವ ಭರವಸೆ ನೀಡುತ್ತಿದ್ದಾರೆ.

ದೇವನಹಳ್ಳಿ ವಿಮಾನ ನಿಲ್ದಾಣದ ಟರ್ಮಿನಲ್‌2ರಲ್ಲಿ ಕಾಮಗಾರಿ ಪ್ರಗತಿಯಲ್ಲಿರುವುದು

ಆದರೆ, ಮಳೆ ಬಂದಾಗಲೊಮ್ಮೆ ಬಣ್ಣ ಬಯಲಾಗುತ್ತದೆ.

‘ಟರ್ನಿನಲ್-2ರಲ್ಲಿ ಅಳವಡಿಸಿರುವ ಕಲಾಕೃತಿ ಮಾದರಿಯ ವೆಂಟಿಲೇಟರ್ ಮತ್ತು ಹವಾನಿಯಂತ್ರಿತ ವ್ಯವಸ್ಥೆ ಕೆಲಸ ಮಾಡುತ್ತಿಲ್ಲ. ಅಗತ್ಯ ಉಪಕರಣ ಅಳವಡಿಸಿಲ್ಲ. ವಿಮಾನ ನಿಲ್ದಾಣದ ಸಿಬ್ಬಂದಿಯೇ ಇದನ್ನು ಒಪ್ಪಿಕೊಳ್ಳುತ್ತಾರೆ. ಇದು ಆಶ್ಚರ್ಯಕರ ಸಂಗತಿ’ ಎಂದು ಅಭಿರುತ್ ಗುಪ್ತ ಎಂಬುವರು ಟ್ವೀಟ್ ಮಾಡಿದ್ದಾರೆ.

‘ಉತ್ತಮ ಗುಣಮಟ್ಟದ ತಿಂಡಿ, ತಿನಿಸುಗಳು ಲಭಿಸುತ್ತಿಲ್ಲ. ಮೊಬೈಲ್ ಚಾರ್ಜ್ ಮಾಡಿಕೊಳ್ಳಲು ಅವಕಾಶವಿಲ್ಲ. ಶೌಚಾಲಯ, ಕುಡಿಯುವ ನೀರಿನ ಸೌಲಭ್ಯ ಪೂರ್ಣ ಹದಗೆಟ್ಟಿದೆ.... ಹೀಗೆ ಪ್ರಯಾಣಿಕರ ದೂರು ಮತ್ತು ಕುಂದುಕೊರತೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

‘ಹಳೆ ಟರ್ಮಿನಲ್ ಎಷ್ಟೋ ವಾಸಿ’

ಬೆಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ನಿಜಕ್ಕೂ ನಿರಾಸೆ ಮೂಡಿಸುತ್ತದೆ. ಮೊದಲು ವಿಮಾನ ನಿಲ್ದಾಣ ಸರಿಯಾಗಿ ಕಾರ್ಯಚರಣೆ ಮಾಡಬೇಕು. ಇಲ್ಲಿರುವ ಶೌಚಾಲಯಗಳ ನಿರ್ವಹಣೆ ಸಮರ್ಪಕವಾಗಿಲ್ಲ.

‘ಕಸದ ಬುಟ್ಟಿಗಳೇ ಕಾಣುವುದಿಲ್ಲ. ಹಸಿವು ತಣಿಸಲು ತಕ್ಷಣ ಆಹಾರ ಸಿಗಲ್ಲ. ಇದಕ್ಕಿಂತ ಹಳೆಯ ಟರ್ಮಿನಲ್ 1 ಎಷ್ಟೇ ವಾಸಿ’ ಎಂದು ಕ್ಯಾರೋನಾ ಮಹಾಪಾತ್ರ ಎಂಬ ಪ್ರಯಾಣಿಕರು ಸಾಮಾಜಿಕ ಜಾಲತಾಣದಲ್ಲಿ ಬೇಸರ ವ್ಯಕ್ತಪಡಿಸಿದ್ದಾರೆ.

‘ಟರ್ಮಿನಲ್-2ನಲ್ಲಿ ಸಿಗುವ ಆಹಾರ ಎರಡೂ ರೂಪಾಯಿ ಕೊಡಲೂ ಯೋಗ್ಯವಾಗಿಲ್ಲ’ ಎಂದು ರಿಶಬ್ ಶ್ರೀವಾತ್ಸವ್ ಎಂಬುವರು ಅಸಮಾಧಾನ ಹೊರಹಾಕಿದ್ದಾರೆ.

ನೆಟ್‌ವರ್ಕ್‌ಗೆ ಪರದಾಟ!

ಆಪ್ತರನ್ನು ಬರಮಾಡಿಕೊಳ್ಳಲು ಟರ್ಮಿನಲ್-2ಕ್ಕೆ ಬರುವವರಿಗೆ ಮೊಬೈಲ್ ನೆಟ್‌ವರ್ಕ್ ದೊಡ್ಡ ಸಮಸ್ಯೆಯಾಗುತ್ತಿದೆ. ವಿಮಾನ ಲ್ಯಾಂಡ್ ಆದ ನಂತರವೂ ಮೊಬೈಲ್ ಮೂಲಕ ಪ್ರಯಾಣಿಕರನ್ನು ಸಂಪರ್ಕಿಸುವುದು ಕಷ್ಟವಾಗಿದೆ. ನೆಟ್‌ವರ್ಕ್ ಸಿಗದ ಕಾರಣ ಸಾಕಷ್ಟು ಅಸಮಾಧಾನ ಕೇಳಿ ಬರುತ್ತಿವೆ.

ಕುಟುಂಬ ಸದಸ್ಯರನ್ನು ನಿಲ್ದಾಣದಿಂದ ಮನೆಗೆ ಕರೆದೊಯ್ಯಲು ಬಂದ ಸಪ್ನ ಎಂಬುವವರಿಗೆ ಶುಕ್ರವಾರ ಮಧ್ಯಾಹ್ನ ಸತತ 2 ತಾಸು ನೆಟ್‌ವರ್ಕ್ ಸಿಗದೆ ಪರದಾಡಿದರು. ತಮಗಾದ ಕಹಿ ಅನುಭವವನ್ನು ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಟರ್ಮಿನಲ್–2ರಲ್ಲಿ 5ಜಿ ಪ್ಲಸ್ ನೆಟ್‌ವರ್ಕ್ ಸೇವೆ ಒದಗಿಸುತ್ತಿದ್ದೇವೆ ಎಂದು ವಿಮಾನ ನಿಲ್ದಾಣದ ವ್ಯವಸ್ಥಾಪಕ ನಿರ್ದೇಶಕ ಹರಿಮಾರನ್ ಭರವಸೆ ನೀಡಿ ಆರು ತಿಂಗಳು ಕಳೆದರೂ ನೆಟ್‌ವರ್ಕ್ ಸಿಗುತ್ತಿಲ್ಲ ಎಂಬುದು ದೊಡ್ಡ ಪ್ರಶ್ನೆಯಾಗಿದೆ.

ಮೊಬೈಲ್ ನೆಟ್‌ವರ್ಕ್ ಸಮರ್ಪಕವಾಗಿ ಸಿಗುತ್ತಿಲ್ಲ ಎಂದು ನಿರಂತರವಾಗಿ ವಿಮಾನ ನಿಲ್ದಾಣ ಅಧಿಕಾರಿಗಳಿಗೆ ದೂರು ನೀಡುತ್ತಿದ್ದರೂ ಸಮಸ್ಯೆ ಮಾತ್ರ ಇನ್ನೂ ಬಗೆಹರಿದಿಲ್ಲ. ಬಗೆಹರಿಯುವ ಲಕ್ಷಣ ಕಾಣುತ್ತಿಲ್ಲ ಎಂದು ಅನೇಕರು ತರಾಟೆಗೆ ತೆಗೆದುಕೊಂಡಿದ್ದಾರೆ.

ಹೊಸ ಟರ್ಮಿನಲ್‌ನಲ್ಲಿ ಇಷ್ಟೆಲ್ಲ ಕೊರತೆಗಳು ಎದ್ದು ಕಾಣುತ್ತಿವೆ. ಹಾಗಾದರೆ ಕೋಟ್ಯಂತರ ಹಣವನ್ನು ಯಾವುದಕ್ಕೆ ಮತ್ತು ಎಲ್ಲಿ ಖರ್ಚು ಮಾಡಲಾಗಿದೆ ಎಂದು ಪ್ರಯಾಣಿಕರು ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದಾರೆ.

ಲಿಂಗಾಯತ ಪಂಚಮಸಾಲಿ ಸಮಾಜದ ಕಡೆಗಣನೆ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನೇತೃತ್ವದ ರಾಜ್ಯದ ನೂತನ ಸಚಿವ ಸಂಪುಟದಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜವನ್ನು ಕಡೆಗಣಿಸಲಾಗಿದೆ ಎಂದು ಆರೋಪಿಸಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಬೆಂಗಳೂರು ಘಟಕ, ಯುವ ಘಟಕ ಪದಾಧಿಕಾರಿಗಳು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

‘ಬಿಜೆಪಿ ಎರಡು ಬಾರಿ ಅಧಿಕಾರಕ್ಕೆ ಬರಲು ಲಿಂಗಾಯತ ಪಂಚಮಸಾಲಿ ಸಮಾಜವೇ ಕಾರಣವಾಗಿತ್ತು. ಕಡಿಮೆ ಸಂಖ್ಯೆಯಲ್ಲಿದ್ದ ಲಿಂಗಾಯತ ಉಪ ಪಂಗಡಗಳಿಗೆ ಮುಖ್ಯಮಂತ್ರಿ ಸ್ಥಾನವನ್ನು ನೀಡಿ ಬಹುಸಂಖ್ಯಾತರಾಗಿರುವ ಪಂಚಮಸಾಲಿ ಸಮಾಜಕ್ಕೆ ಪ್ರಮುಖ ಸ್ಥಾನಮಾನ ನೀಡಿರಲಿಲ್ಲ. ಬಿಜೆಪಿ ಅನ್ಯಾಯ ಮಾಡಿತ್ತು. ಕಾರಣಕ್ಕೆ ಸಮಾಜವು ಕಾಂಗ್ರೆಸ್ ಬೆಂಬಲಿಸಿದೆ. ಆದರೆ, ಸಂಪುಟದ ರಚನೆ ವೇಳೆ ಸಮಾಜಕ್ಕೆ ಆದ್ಯತೆ ನೀಡಿಲ್ಲ’ ಎಂದು ಮುಖಂಡರು ಆಕ್ರೋಶ ಹೊರಹಾಕಿದರು.

ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಸಂಪುಟದಲ್ಲಿ ಆದ್ಯತೆ ನೀಡಿಲ್ಲ ಎಂದು ಆರೋಪಿಸಿ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಬೆಂಗಳೂರು ಘಟಕ ಹಾಗೂ ಲಿಂಗಾಯತ ಪಂಚಮಸಾಲಿ ಯುವ ಘಟಕದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು

ಮುಂದಿನ ಸಂಪುಟದ ವಿಸ್ತರಣೆ ವೇಳೆ ಈ ಅನ್ಯಾಯವನ್ನು ಸರಿ ಪಡಿಸಬೇಕು. ಶಾಸಕರಾದ ವಿಜಯಾನಂದ ಕಾಶಪ್ಪನವರ, ವಿನಯ ಕುಲಕರ್ಣಿ ಸೇರಿ ಸಮಾಜದ ಐದು ಮಂದಿಗೆ ಸಚಿವ ಸಂಪುಟದಲ್ಲಿ ಸ್ಥಾನ ನೀಡಬೇಕು. ಇಲ್ಲದಿದ್ದರೆ ಮುಂಬರುವ ಚುನಾವಣೆಗಳಲ್ಲಿ ತಕ್ಕಪಾಠ ಕಲಿಸುತ್ತೇವೆ ಎಂದು ಎಚ್ಚರಿಸಿದರು.

ಮೇಕೆದಾಟು: ಸರ್ಕಾರದ ಎದುರು ಅನುಷ್ಠಾನದ ಸವಾಲು

ಪ್ರಜಾವಾಣಿ ವಾರ್ತೆ

ರಾಮನಗರ: ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಿದೆ. ಜಿಲ್ಲೆಯವರೇ ಆದ ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿಯಾಗಿದ್ದು, ದಶಕಗಳಿಂದ ನನೆಗುದಿಗೆ ಬಿದ್ದಿರುವ ಹಾಗೂ ಕುಂಟುತ್ತ ಸಾಗಿರುವ ಯೋಜನೆಗಳನ್ನು ಸಾಕಾರಗೊಳಿಸುವ ಸವಾಲು ಅವರ ಮುಂದೆ ಇದೆ.

ಮೇಕೆದಾಟು ಅಣೆಕಟ್ಟೆ ನಿರ್ಮಾಣ ಈ ಭಾಗದ ಜನರ ದಶಕಗಳ ಬೇಡಿಕೆಗಳಲ್ಲಿ ಒಂದು. ಇದು ಡಿ.ಕೆ. ಶಿವಕುಮಾರ್ ಪ್ರತಿನಿಧಿಸುವ ಕನಕಪುರ ಕ್ಷೇತ್ರದ ವ್ಯಾಪ್ತಿಯಲ್ಲೇ ಬರುವುದು ವಿಶೇಷ. ‘ಅಣೆಕಟ್ಟೆ ನಿರ್ಮಾಣಕ್ಕೆ ನಮ್ಮ ಜಮೀನು ಹೋಗುತ್ತದೆ. ಆದರೂ ಕುಡಿಯುವ ನೀರು, ನೀರಾವರಿ ಸಲುವಾಗಿ ಯೋಜನೆಗೆ ಬದ್ಧ’ ಎಂದು ಶಿವಕುಮಾರ್ ಈ ಹಿಂದೆಯೇ ಸಾರಿದ್ದರು.

ಮೇಕೆದಾಟು ಅಣೆಕಟ್ಟೆ ನಿರ್ಮಾಣಕ್ಕೆ ಒತ್ತಾಯಿಸಿ ಕಾಂಗ್ರೆಸ್ ಶಿವಕುಮಾರ್–ಸಿದ್ದರಾಮಯ್ಯರ ನೇತೃತ್ವದಲ್ಲಿ 2022ರ ಜನವರಿ–ಫೆಬ್ರುವರಿಯಲ್ಲಿ ಕಾಂಗ್ರೆಸ್ ಸಂಗಮದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಹಮ್ಮಿಕೊಂಡಿತ್ತು. ಈ ಪಾದಯಾತ್ರೆ ಕಾಂಗ್ರೆಸ್‌ನ ಚುನಾವಣೆ ತಯಾರಿಯ ಪೂರ್ವಭಾವಿ ಕಾರ್ಯಕ್ರಮದಂತಿದ್ದು, ತವರಿನಲ್ಲಿ ಡಿಕೆಶಿ ಶಕ್ತಿ ಪ್ರದರ್ಶನಕ್ಕೂ ವೇದಿಕೆ ಆಗಿತ್ತು. ಇದು ಕಾಂಗ್ರೆಸ್ ಹಾಗೂ ಬಿಜೆಪಿ ನಡುವಿನ ಮಾತಿನ ಚಕಮಕಿಗೂ ಕಾರಣವಾಗಿತ್ತು.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಜಲಸಂಪನ್ಮೂಲ ಸಚಿವರಾಗಿದ್ದರಿಂದ ಮೇಕೆದಾಟು ಯೋಜನೆಯ ಸಾಧಕ–ಬಾಧಕಗಳ ಅರಿವು ಶಿವಕುಮಾರ್ ಅವರಿಗೆ ಇದೆ. ಈ ಅಣೆಕಟ್ಟೆ ನಿರ್ಮಾಣ ಆದದ್ದೇ ಆದಲ್ಲಿ ಬೆಂಗಳೂರು ಸೇರಿದಂತೆ ಐದು ಜಿಲ್ಲೆಗಳ ಕುಡಿಯುವ ನೀರಿನ ಬವಣೆ ನೀಗಲಿದ್ದು, ನೀರಾವರಿಗೂ ಅನುಕೂಲ ಆಗಲಿದೆ.

6 ಮಂದಿಗೆ ‘ನೆರವಾದ’ ವಿದೇಶಿ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಅಪಘಾತದಲ್ಲಿ ಗಾಯಗೊಂಡು ಮಿದುಳು ನಿಷ್ಕ್ರಿಯವಾಗಿದ್ದ 40 ವರ್ಷದ ಮಹಿಳೆಯೊಬ್ಬರು ಅಂಗಾಂಗ ದಾನದ ಮೂಲಕ ಆರು ಮಂದಿಗೆ ನೆರವಾಗಿದ್ದಾರೆ. ಅವರನ್ನು ಇಲ್ಲಿನ ಸ್ಪರ್ಶ್ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ವೈದ್ಯರು ಮೇ 15ರಂದು ಘೋಷಿಸಿದರು. ಕುಟುಂಬದ ಸದಸ್ಯರ ಸಮ್ಮತಿ ಆಧರಿಸಿ ಪಿತ್ತಜನಕಾಂಗ, ಎಡ ಮೂತ್ರಪಿಂಡವನ್ನು ರೋಗಿಗಳಿಗೆ ಯಶಸ್ವಿಯಾಗಿ ಕಸಿ ಮಾಡಲಾಗಿದೆ. ಮತ್ತೊಂದು ಮೂತ್ರಪಿಂಡವನ್ನು ಐಎನ್‌ಯು ಆಸ್ಪತ್ರೆ, ಹೃದಯ ಕವಾಟವನ್ನು ನಾರಾಯಣ ಹೃದಯಾಲಯ, ಕಣ್ಣಿನ ಕಾರ್ನಿಯಾವನ್ನು ನಾರಾಯಣ ನೇತ್ರಾಲಯಕ್ಕೆ ಹಾಗೂ ಚರ್ಮವನ್ನು ವಿಕ್ಟೋರಿಯಾದ ಚರ್ಮ ಬ್ಯಾಂಕ್‌ಗೆ ಕಳುಹಿಸಲಾಗಿದೆ.

‘ಅಂಗಾಂಗ ದಾನದಿಂದ ವ್ಯಕ್ತಿಯೊಬ್ಬರ ಜೀವನವನ್ನು ಬದಲಾಯಿಸಬಹುದಾಗಿದ್ದು, ಭಾರತಕ್ಕೆ ಭೇಟಿ ನೀಡಿದ್ದ ವಿದೇಶಿ ಮಹಿಳೆಯೊಬ್ಬರು ನಿಧನರಾದರು. ಆ ನೋವಿನಲ್ಲಿ ಕುಟುಂಬದ ಸದಸ್ಯರು ಅವರ ಅಂಗಾಂಗ ದಾನ ಮಾಡಿ ಮಾನವೀಯತೆ ಮೆರೆದಿದ್ದಾರೆ’ ಎಂದು ಸ್ಪರ್ಶ್ ಆಸ್ಪತ್ರೆ ಸಮೂಹ ತಿಳಿಸಿದೆ.



‘ಹರ್ ಏಕ್ ಕಾಮ್ ದೇಶ್ ಕೆ ನಾಮ್’

BHARAT ELECTRONICS
QUALITY, TECHNOLOGY, INNOVATION

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ-ಮೇಲ್: secretary@bel.co.in, ವೆಬ್‌ಸೈಟ್: www.bel-india.in, ಫೋನ್: 080–25039300, ಫ್ಯಾಕ್ಸ್: 080–25039266

31ನೇ ಮಾರ್ಚ್ 2023ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಮತ್ತು ವಾರ್ಷಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಪರಿಶೋಧಿತ ಲೆಕ್ಕ ಫಲಿತಾಂಶಗಳ ಸಾರಾಂಶ

(₹ ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್ ಅಲೋನ್					ಕ್ರೋಢೀಕೃತ				
		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ	
		31.03.2023	31.12.2022	31.03.2022	31.03.2023	31.03.2022	31.03.2023	31.12.2022	31.03.2022	31.03.2023	31.03.2022
		(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ)		(ಪರಿಶೋಧಿತ)	(ಪರಿಶೋಧಿತ ವಲ್ಲದ)	(ಪರಿಶೋಧಿತ)	(ಪರಿಶೋಧಿತ)	
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	6,45,658	4,13,101	6,32,490	17,64,620	15,31,376	6,47,912	4,15,312	6,33,981	17,73,444	15,36,818
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	1,78,149	80,043	1,52,656	3,98,488	3,15,780	1,78,156	80,624	1,53,113	3,92,291	3,16,624
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,78,149	80,043	1,52,656	3,98,488	3,15,780	1,78,156	80,624	1,53,113	3,92,291	3,16,624
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,36,536	59,877	1,14,181	3,00,667	2,34,893	1,38,201	61,350	1,15,509	2,98,624	2,40,022
5.	ಒಟ್ಟುಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	1,17,082	60,635	93,482	2,84,043	2,19,972	1,18,768	62,108	94,814	2,82,022	2,25,105
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	73,098	24,366	73,098	24,366	73,098	73,098	24,366	73,098	24,366
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	-	-	-	12,85,101	11,74,060	-	-	-	13,13,065	12,04,227
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ (₹ ನಲ್ಲಿ)	1.86	0.82	1.56	4.11	3.21	1.90	0.83	1.58	4.09	3.28

ಟಿಪ್ಪಣಿಗಳು:

1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಅಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ **(www.bseindia.com** ಮತ್ತು **www.nseindia.com)** ಮತ್ತು ಕಂಪೆನಿಯ ವೆಬ್‌ಸೈಟ್ **(www.bel-india.in)** ನಲ್ಲಿಯೂ ಲಭ್ಯವಿದೆ.
2. 2022 ರ ಸೆಪ್ಟಂಬರ್ ತಿಂಗಳಲ್ಲಿ ಪ್ರತಿ ರೂ.1 (ಒಂದು ರೂಪಾಯಿ) ಅನ್ನು 2:1 ರ ಅನುಪಾತದಲ್ಲಿ ಅಂದರೆ ಪ್ರತಿ ಸಂಪೂರ್ಣ ಪೆಯಿಡ್ ಅಪ್ ಈಕ್ವಿಟಿ ಷೇರನ್ನು ಹೊಂದಿದವರಿಗೆ ಎರಡು ಈಕ್ವಿಟಿ ಷೇರುಗಳಂತೆ 4873185886 ಬೋನಸ್ ಷೇರುಗಳನ್ನು ವಿತರಿಸಿದ ಕಾರಣ ಪ್ರತಿ ಷೇರಿನ ಗಳಿಕೆಗಳನ್ನು(ಇಪಿಎಸ್) ಎಲ್ಲಾ ಹಿಂದೆ ವರದಿಯಾದ ಅವಧಿಗಳಿಗೆ ಹೊಂದಾಣಿಕೆ ಮಾಡಲಾಗಿದೆ.
3. ದಿನಾಂಕ 19 ಮೇ, 2023 ರಂದು ನಡೆದ ಸಭೆಯಲ್ಲಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಈ ಮೇಲಿನ ಹಣಕಾಸಿನ ಫಲಿತಾಂಶಗಳ ವಿವರಣೆಯನ್ನು ಅವಲೋಕನ ಮಾಡಲಾಯಿತು ಮತ್ತು ಅದನ್ನು ದಿನಾಂಕ 20 ಮೇ, 2023 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಯಿತು.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಭಾನು ಪ್ರಕಾಶ್ ಶ್ರೀವಾಸ್ತವ
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು (ಹೆಚ್ಚುವರಿ ಪ್ರಭಾರಿ)

ಸ್ಥಳ: ಗುವಾಹಟಿ
ದಿನಾಂಕ: 20 ಮೇ, 2023

ಇದೋ ನೋಡಿ ಸಿದ್ದರಾಮಯ್ಯ ಸಂಪುಟ

ನವ ಸರ್ಕಾರದ ದಶ ಮುಖಗಳು

ಸಿದ್ದರಾಮಯ್ಯ 1

ವಿದ್ಯಾರ್ಹತೆ	ಬಿಎಸ್‌ಸಿ, ಎಲ್‌ಎಲ್‌ಬಿ
ವಯಸ್ಸು	75 ವರ್ಷ
ಜಾತಿ	ಕುರುಬ
ಕ್ಷೇತ್ರ	ವರುಣ
ಎಷ್ಟನೇ ಬಾರಿಗೆ ಶಾಸಕ	ಒಂಬತ್ತನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಹಣಕಾಸು, ಅಬಕಾರಿ, ಪಶುಸಂಗೋಪನೆ

ಚಳವಳಿಗಳ ನೇತಾರರ ಸಖ್ಯದೊಂದಿಗೆ ಬೆಳೆದ ಸಿದ್ದರಾಮಯ್ಯ, ಶೋಷಿತರ ಪರ ಗಟ್ಟಿ ಧ್ವನಿ. ಎಸ್. ಬಂಗಾರಪ್ಪನವರ ಬಳಿಕ ಹಿಂದುಳಿದ ಸಮುದಾಯದ ಅನಭಿಷಕ್ತ ನಾಯಕರಾಗಿ ರೂಪುಗೊಂಡವರು. ಕುರಿ ಕಾಯುವವನಿಗೆ ಏನುಗೊತ್ತು ಆರ್ಥಿಕತೆ ವಿಷಯ ಎಂಬ ಹಂಗಿಸುವವರಿಗೆ ಸಡ್ಡುಹೊಡೆಯುವ ರೀತಿಯಲ್ಲಿ 13 ಬಾರಿ ಸಮತೋಲನ ಹಾಗೂ ಸಾಮಾಜಿಕ ನ್ಯಾಯದ ಪರ ಇರುವ ಬಜೆಟ್ ಮಂಡಿಸಿದವರು. 2006ರಲ್ಲಿ ಕಾಂಗ್ರೆಸ್ ಸೇರಿ, 2009ರಿಂದ ಸತತವಾಗಿ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ. ಎಂಟು ವರ್ಷ ವಿರೋಧ ಪಕ್ಷದ ನಾಯಕರಾಗಿ, ಎದುರಾಳಿ ಸರ್ಕಾರದ ಬೆವರಿಳಿಸಿದವರು.

ಡಿ.ಕೆ. ಶಿವಕುಮಾರ್ 2

ವಿದ್ಯಾರ್ಹತೆ	ಎಂ.ಎ
ವಯಸ್ಸು	61 ವರ್ಷ
ಜಾತಿ	ಒಕ್ಕಲಿಗ
ಕ್ಷೇತ್ರ	ಕನಕಪುರ
ಎಷ್ಟನೇ ಬಾರಿಗೆ ಶಾಸಕ	ಎಂಟನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಬಂದೀಖಾನೆ, ನಗರಾಭಿವೃದ್ಧಿ, ಇಂಧನ, ಜಲಸಂಪನ್ಮೂಲ

ರಾಜ್ಯದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಗೆಲುವಿನ ದಡ ಮುಟ್ಟಿಸಿದ ಸಾಧನೆಯಲ್ಲಿ ಡಿ.ಕೆ. ಶಿವಕುಮಾರ್ ಅವರ ಪಾತ್ರವೂ ಪ್ರಮುಖವಾಗಿದೆ. 'ಡಿಕೆಶಿ' ಸದ್ಯ ರಾಜ್ಯ ರಾಜಕಾರಣದ ಪ್ರಭಾವಿ ನಾಯಕರಲ್ಲಿ ಒಬ್ಬರು. ಉಪಮುಖ್ಯಮಂತ್ರಿಯಂತಹ ಉನ್ನತ ಹುದ್ದೆ ಒಲಿದು ಬಂದಿದೆ. ಈ ಹಿಂದೆ ನಾಲ್ವರು ಮುಖ್ಯಮಂತ್ರಿಗಳ ಆಡಳಿತದಲ್ಲಿ ಹಲವು ಖಾತೆ ನಿರ್ವಹಿಸಿದ ಅನುಭವ ಬೆನ್ನಿಗಿದೆ. ನೇರ ನಡೆ-ನುಡಿಯ, ಎಂತಹದ್ದೇ ಕಠಿಣ ಪರಿಸ್ಥಿತಿಯಲ್ಲೂ ಪಕ್ಷದ ಪರ ನಿಲ್ಲುವ ಅವರ ನಿಷ್ಠೆಯೇ ಇಂತಹ ಅವಕಾಶಗಳನ್ನು ತಂದುಕೊಟ್ಟಿದೆ. ಯಾವ ಅಂಜಿಕೆ, ಅಳುಕು, ಹಿಂಜರಿಕೆ, ಮುಲಾಜಿಲ್ಲದ ದಾರ್ಷ್ಟ್ಯ ವ್ಯಕ್ತಿತ್ವವೇ ಶಿವಕುಮಾರ್ ಹೆಗ್ಗುರುತು. ಪಕ್ಷ ಆಪತ್ತಿನಲ್ಲಿ ಇರುವಾಗ ಮುನ್ನುಗ್ಗುವ ಛಾತಿಯಿಂದಾಗಿಯೇ 'ಬಂಡೆ', 'ಟ್ರಬಲ್ ಶೂಟರ್' ಎಂದು ಚಿರಪರಿಚಿತ.

ಡಾ.ಜಿ.ಪರಮೇಶ್ವರ 3

ವಿದ್ಯಾರ್ಹತೆ	ಎಂ.ಎಸ್‌ಸಿ., ಪಿಎಚ್.ಡಿ
ವಯಸ್ಸು	72 ವರ್ಷ
ಜಾತಿ	ಪರಿಶಿಷ್ಟ ಜಾತಿ (ಬಲಗೈ)
ಕ್ಷೇತ್ರ	ಕೊರಟಗೆರೆ
ಎಷ್ಟನೇ ಬಾರಿಗೆ ಶಾಸಕ	ಆರನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಉಪ ಮುಖ್ಯಮಂತ್ರಿ, ಗೃಹ, ಉನ್ನತ ಶಿಕ್ಷಣ, ವೈದ್ಯಕೀಯ, ರೇಷ್ಮೆ, ಐ.ಟಿ, ಬಿ.ಟಿ, ಕ್ರೀಡೆ, ವಾರ್ತಾ ಮತ್ತು ಪ್ರಚಾರ

ಶಿಕ್ಷಣ ಹಾಗೂ ರಾಜಕೀಯ ಕ್ಷೇತ್ರವನ್ನು ಜಿ.ಪರಮೇಶ್ವರ ಸಮಚಿತ್ತದಿಂದ ನಿಭಾಯಿಸಿ, ಎರಡೂ ಕಡೆಯೂ ಸೈ ಎನಿಸಿಕೊಂಡಿದ್ದಾರೆ. ನಾಲ್ಕು ದಶಕಗಳ ಸುದೀರ್ಘ ರಾಜಕೀಯ ಜೀವನದಲ್ಲಿ ಎಂದೂ ತಮ್ಮತ್ತ ಬೆರಳು ತೋರಿಸಿಕೊಂಡವರಲ್ಲ.

ವಿದೇಶದಲ್ಲಿ ಪಡೆದ ಉನ್ನತ ಶಿಕ್ಷಣದ ಅನುಭವಗಳನ್ನು ತಾವು ಉನ್ನತ ಶಿಕ್ಷಣ ಸಚಿವರಾಗಿದ್ದಾಗ ಬಳಸಿಕೊಂಡು ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಸುಧಾರಣೆ ತಂದರು. ವಿಶ್ವವಿದ್ಯಾಲಯಗಳಿಗೆ ಕಾಯಕಲ್ಪ ಕೊಟ್ಟು, ಕೆಲವೇ ಭಾಗಕ್ಕೆ ಸೀಮಿತಗೊಂಡಿದ್ದ ವಿ.ವಿಗಳನ್ನು ಇತರೆ ಜಿಲ್ಲೆಗಳಿಗೂ ವಿಸ್ತರಿಸಲು

ಕೆ.ಎಚ್.ಮುನಿಯಪ್ಪ 4

ವಿದ್ಯಾರ್ಹತೆ	ಕಾನೂನು ಪದವೀಧರ
ವಯಸ್ಸು	75 ವರ್ಷ
ಜಾತಿ	ಪರಿಶಿಷ್ಟ ಜಾತಿ (ಎಡಗೈ)
ಕ್ಷೇತ್ರ	ದೇವನಹಳ್ಳಿ
ಎಷ್ಟನೇ ಬಾರಿಗೆ ಶಾಸಕ	ಮೊದಲ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ರಾಜ್ಯದಲ್ಲಿ ಯಾವುದೇ ಖಾತೆ ನಿರ್ವಹಿಸಿಲ್ಲ. ಕೇಂದ್ರದಲ್ಲಿ ಹಲವಾರು ಖಾತೆ ನಿರ್ವಹಿಸಿದ ಅನುಭವ

ಸತತ ಏಳು ಬಾರಿ ಸಂಸದರಾಗಿ, ಯುಪಿಎ ಸರ್ಕಾರದ ಅವಧಿಯಲ್ಲಿ ಹತ್ತು ವರ್ಷ ಕೇಂದ್ರ ಸಚಿವರಾಗಿ ಕಾರ್ಯನಿರ್ವಹಿಸಿದ ಅಪಾರ ಆಡಳಿತ ಅನುಭವ ಹೊಂದಿದವರು ಹಿರಿಯ ರಾಜಕಾರಣಿ ಕೆ.ಎಚ್. ಮುನಿಯಪ್ಪ. ತಾಯಿಯ ತವರೂರು ದೇವನಹಳ್ಳಿ ರಾಜಕೀಯ ಮರುಜನ್ಮ ನೀಡಿ, ರಾಜ್ಯ ರಾಜಕಾರಣಕ್ಕೆ ಕರೆತಂದಿದೆ. ಮುನಿಯಪ್ಪ ಅವರು ತಾಲ್ಲೂಕು ಪಂಚಾಯಿತಿ ಚುನಾವಣೆ ಮೂಲಕ ರಾಜಕೀಯ ಪ್ರವೇಶ ಮಾಡಿದ್ದರು. ಆರಂಭದಲ್ಲಿ ವಕೀಲ ವೃತ್ತಿಯಲ್ಲಿ ತೊಡಗಿದ್ದರು. ಅವರ ಪುತ್ರಿ ರೂಪಕಲಾ ಎಂ.ಶಶಿಧರ್ ಕೆಜಿಎಫ್ ಮೀಸಲು ಕ್ಷೇತ್ರದಿಂದ ಸತತ ಎರಡನೇ ಬಾರಿ ಗೆದ್ದಿದ್ದಾರೆ. ಈ ಮೂಲಕ ಅಪ್ಪ-ಮಗಳು ಜೊತೆಯಲ್ಲಿ ವಿಧಾನಸಭೆ ಪ್ರವೇಶಿಸಿದಂತಾಗಿದೆ.

ಕೆ.ಜೆ. ಜಾರ್ಜ್ 5

ವಿದ್ಯಾರ್ಹತೆ	ಬಿ.ಎ (ಅಪೂರ್ಣ)
ವಯಸ್ಸು	73 ವರ್ಷ
ಧರ್ಮ	ಕ್ರೈಸ್ತ
ಕ್ಷೇತ್ರ	ಸರ್ವಜ್ಞನಗರ
ಎಷ್ಟನೇ ಬಾರಿಗೆ ಶಾಸಕ	ಆರನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಗೃಹ ಮತ್ತು ಬೆಂಗಳೂರು ಅಭಿವೃದ್ಧಿ

ಕೆ.ಜೆ. ಜಾರ್ಜ್ ಅವರ ಪೂರ್ಣ ಹೆಸರು ಕೇಳಚಂದ್ರ ಜೋಸೆಫ್ ಜಾರ್ಜ್. ಸೋನಿಯಾ ಗಾಂಧಿ ಕುಟುಂಬಕ್ಕೆ ಆಪ್ತರಾಗಿರುವ ಕೆ.ಜೆ. ಜಾರ್ಜ್, ಕಾಂಗ್ರೆಸ್‌ನ ಪ್ರಭಾವಿ ರಾಜಕಾರಣಿ ಮತ್ತು ಉದ್ಯಮಿ. ಕೊಡಗಿನವರಾದ ಜಾರ್ಜ್ ಮೊದಲು ಟಿಂಬರ್ ವ್ಯಾಪಾರ ನಡೆಸುತ್ತಿದ್ದರು. ನಂತರ, ರಾಜಕೀಯಕ್ಕೆ ಧುಮುಕಿದ ಅವರು, ರಾಜಕೀಯದಲ್ಲಿ ಒಂದೊಂದೇ ಮೆಟ್ಟಿಲು ಏರಿದವರು. ಎಸ್. ಬಂಗಾರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗುವ ಮೂಲಕ ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬಂದರು. ಈ ಮೂಲಕ ಬೆಂಗಳೂರಿನ ಮೇಲೆ ಹಿಡಿತ ಸಾಧಿಸಿದರು. ಈ ಹಿಂದೆ ಗೃಹ ಸಚಿವರಾಗಿದ್ದ ವೇಳೆ, ಡಿವೈಎಸ್ಪಿ ಎಂ.ಕೆ. ಗಣಪತಿ ಆತ್ಮಹತ್ಯೆ ಪ್ರಕರಣದಲ್ಲಿ ರಾಜೀನಾಮೆ ನೀಡಿದ್ದರು. ನಂತರ, ಸಿಬಿಐ ತನಿಖೆಯಲ್ಲಿ ಅವರಿಗೆ 'ಕ್ಲೀನ್‌ಚಿಟ್' ದೊರೆಯಿತು.

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ

https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ

'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ಟ್ರಸ್ಟ್ ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು - 560001

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2023 ರ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ, ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಜತೆಗೆ ವಿಳಾಸ, ಮೊಬೈಲ್ ಸಂಖ್ಯೆ, ಐಎಫ್‌ಎಸ್‌ಸಿ ನಂಬರ್ ಉಳ್ಳ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿಯನ್ನು ಸಲ್ಲಿಸಬೇಕು. ಲಕೋಟೆಯ ಮೇಲೆ **'ಶೈಕ್ಷಣಿಕ ನೆರವಿಗೆ ಅರ್ಜಿ'** ಎಂದು ಬರೆಯಬೇಕು.

ಕನಸಿಗೆ ಶಕ್ತಿ ತುಂಬಿದ ಸ್ಕಾಲರ್‌ಶಿಪ್

ಶ್ರಮವನ್ನು ನಂಬಿಕೊಂಡು ಜೀವನ ಸಾಗಿಸುತ್ತಿರುವ ಕುಟುಂಬದಿಂದ ಬಂದ ನನಗೆ, ಇರುವೆಗೆ ಹುಲ್ಲುಕಡ್ಡಿ ಆಸರೆಯಾದಂತೆ 'ಪ್ರಜಾವಾಣಿ' ಪತ್ರಿಕೆ ಸಹಾಯ ಮಾಡಿ ನನ್ನ ಕನಸಿಗೆ ಶಕ್ತಿ ತುಂಬಿತು. ಇದನ್ನು ಎಂದಿಗೂ ಮರೆಯಲಾರೆ. ಪ್ರಸ್ತುತ ಶಿವಮೊಗ್ಗ ಡಿವಿಎಸ್ ಕಾಲೇಜಿನಲ್ಲಿ ವಿಜ್ಞಾನದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಬಿಸಿಎ ಆಗುವ ಕನಸು ಇದೆ. ಆ ನಿಟ್ಟಿನಲ್ಲಿ ಪ್ರಯತ್ನಕ್ಕೆ ತಯಾರಿ ನಡೆಸಿದ್ದೇನೆ.

- **ದೀಪಕ್ ವಾಗೀಶ ವಲಿ,** ಹಿರೇಕೆರೂರು

ಎಂ.ಬಿ ಪಾಟೀಲ 6

ವಿದ್ಯಾರ್ಹತೆ	ಬಿ.ಇ.(ಸಿವಿಲ್)
ವಯಸ್ಸು	59 ವರ್ಷ
ಜಾತಿ	ಲಿಂಗಾಯತ
ಕ್ಷೇತ್ರ	ಬಬಲೇಶ್ವರ
ಎಷ್ಟನೇ ಬಾರಿಗೆ ಶಾಸಕ	ಆರನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಗೃಹ, ಜಲಸಂಪನ್ಮೂಲ

ಲಿಂಗಾಯತ ಸಮುದಾಯದ ಪ್ರಭಾವಿ ಮುಖಂಡರಾಗಿರುವ ಎಂ.ಬಿ. ಪಾಟೀಲರು ಅನುಭವಿ ರಾಜಕಾರಣಿ. ವಿಜಯಪುರದ ಬಿ.ಎಲ್.ಡಿ.ಇ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿದ್ದಾರೆ. ತಂದೆಯ ಅಕಾಲಿಕ ನಿಧನದಿಂದ 1991ರಲ್ಲಿ ತೆರವಾದ ತಿಕೋಟಾ ಮತಕ್ಷೇತ್ರದಿಂದ ಪ್ರಥಮ ಬಾರಿಗೆ ಆಯ್ಕೆಯಾಗಿ ತಮ್ಮ 26ನೇ ವಯಸ್ಸಿನಲ್ಲಿಯೇ ಶಾಸಕರಾದ ಅವರು, ಹಿಂದಿರುಗಿ ನೋಡಿದ್ದಿಲ್ಲ. ಜಲಸಂಪನ್ಮೂಲ ಸಚಿವರಾಗಿದ್ದಾಗ ಹಲವು ಏತ ನೀರಾವರಿ ಯೋಜನೆಗಳಿಗೆ ಚಾಲನೆ ನೀಡಿದ್ದಾರೆ. ಸಿದ್ದರಾಮಯ್ಯ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಪಾಟೀಲರು ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟದ ಸಮಯದಲ್ಲಿ ಮುಂಚೂಣಿಯಲ್ಲಿದ್ದವರು. ರಾಜ್ಯ ಕಾಂಗ್ರೆಸ್ ಪ್ರಚಾರ ಸಮಿತಿಯ

ಸತೀಶ ಜಾರಕಿಹೊಳಿ 7

ವಿದ್ಯಾರ್ಹತೆ	ಪಿಯುಸಿ
ವಯಸ್ಸು	61 ವರ್ಷ
ಜಾತಿ	ವಾಲ್ಮೀಕಿ(ಎಸ್‌ಟಿ)
ಕ್ಷೇತ್ರ	ಯಮಕನಮರಡಿ
ಎಷ್ಟನೇ ಬಾರಿಗೆ ಶಾಸಕ	ಆರು ಬಾರಿ (ಎರಡು ಬಾರಿ ಎಂ.ಎಲ್.ಸಿ)
ಹಿಂದೆ ನಿರ್ವಹಿಸಿದ ಖಾತೆ	ಜವಳಿ, ಅಬಕಾರಿ, ಸಣ್ಣ ಕೈಗಾರಿಕೆ, ಅರಣ್ಯ

ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿರುವ ಸತೀಶ ಜಾರಕಿಹೊಳಿ, ಸಿದ್ದರಾಮಯ್ಯ ಆಪ್ತ ಬಳಗದಲ್ಲಿ ಗುರುತಿಸಿಕೊಂಡವರು. ಮಾನವ ಬಂಧುತ್ವ ವೇದಿಕೆ ಮೂಲಕ ಮೌಢ್ಯಗಳ ವಿರುದ್ಧ ಸಮರ ಸಾರಿದವರು ಸತೀಶ. ಗ್ರಹಣ, ಹುಣ್ಣಿಮೆ, ಅಮಾವಾಸ್ಯೆ ದಿನಗಳಂದು ಸ್ಮಶಾನದಲ್ಲೇ ಊಟ ಮಾಡಿ, ಮಲಗಿ ದಿನ ಕಳೆಯುವ ಕಾರ್ಯಕ್ರಮ ಕೂಡ ಮಾಡಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಅವರು ರಾಹುಕಾಲದಲ್ಲೇ ನಾಮಪತ್ರ ಸಲ್ಲಿಸುವುದು ವಾಡಿಕೆ. ಈ ಬಾರಿಯೂ ಅದನ್ನೇ ಅನುಸರಿಸಿದರು.

ಪ್ರಿಯಾಂಕ್ ಖರ್ಗೆ 8

ಪ್ರಿಯಾಂಕ್ ಖರ್ಗೆ ಜನಮುಖಿ ಚಿಂತನೆಯುಳ್ಳ ಯುವ ನಾಯಕ. ಸಮಾಜ ಕಲ್ಯಾಣ ಸಚಿವರಾಗಿದ್ದ ವೇಳೆ ಇಲಾಖೆಯಲ್ಲಿ ಹಲವು ಜನಪರ ಯೋಜನೆ ಜಾರಿಗೊಳಿಸಿದವರು. ಕೆಪಿಸಿಸಿ ಸಾಮಾಜಿಕ ಜಾಲತಾಣ ವಿಭಾಗದ ಅಧ್ಯಕ್ಷರಾಗಿರುವ ಪ್ರಿಯಾಂಕ್, ಪಿಎಸ್‌ಐ ನೇಮಕಾತಿ ಅಕ್ರಮ ಹಗರಣ, ಬಿಟ್ ಕಾಯಿನ್ ಹಗರಣ, ಸಮಾಜ ಕಲ್ಯಾಣ ಇಲಾಖೆಯ ಗಂಗಾ ಕಲ್ಯಾಣ

ವಿದ್ಯಾರ್ಹತೆ	ಡಿಪ್ಲೋಮಾ ಇನ್ ಗ್ರಾಫಿಕ್ಸ್, ಎನಿಮೇಷನ್
ವಯಸ್ಸು	44 ವರ್ಷ
ಜಾತಿ	ಪರಿಶಿಷ್ಟ ಜಾತಿ (ಬಲಗೈ)
ಕ್ಷೇತ್ರ	ಚಿತ್ತಾಪುರ
ಎಷ್ಟನೇ ಬಾರಿಗೆ ಶಾಸಕ	3ನೇ ಬಾರಿಗೆ
ಹಿಂದೆ ನಿರ್ವಹಿಸಿದ ಖಾತೆ	ಸಮಾಜ ಕಲ್ಯಾಣ, ಐಟಿ, ಬಿಟಿ, ಪ್ರವಾಸೋದ್ಯಮ

ರಾಮಲಿಂಗಾರೆಡ್ಡಿ 9

ರಾಮಲಿಂಗಾರೆಡ್ಡಿ ಎಂದ ಕೂಡಲೇ ಕಣ್ಮುಂದೆ ಬರುವುದು ಬಿಳಿ ಪ್ಯಾಂಟು, ಮೇಲೊಂದು ತುಂಬುತೋಳಿನ ಅಂಗಿ. ಇದು ಇವರ ಸಾಮಾನ್ಯ ಉಡುಗೆ. ಸಚಿವಗಿರಿಯ ಹಮ್ಮುಬಿಮ್ಮು ತೋರಿಸಿದವರಲ್ಲ. ಸರ್ಕಾರಿ ಕಾರು ಇರಲಿಲ್ಲವೆಂದರೆ ಸಿಕ್ಕಿದ ದ್ವಿಚಕ್ರ ವಾಹನದ ಹಿಂದೆ ಕುಳಿತೇ ಹೋಗುವಷ್ಟು ಸರಳ ವ್ಯಕ್ತಿತ್ವ. ಗೃಹ ಸಚಿವರಾಗಿದ್ದ ವಿಶೇಷ ಸವಲತ್ತುಗಳನ್ನು ಬಳಸಿದವರಲ್ಲ. ಬೆಂಗಳೂರನ್ನು ತಮ್ಮ ಕೈಯಲ್ಲಿಟ್ಟಿಕೊಂಡಿರುವ ಪ್ರಭಾವಿ ನಾಯಕ.

1989ರಲ್ಲಿ ಜಯನಗರ ಕ್ಷೇತ್ರದಿಂದ ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಇವರು ಸೋಲು ಕಂಡಿಲ್ಲ. ಜಯನಗರದಿಂದ ನಾಲ್ಕು ಬಾರಿ ಮತ್ತು ಬಿಟಿಎಂ ಲೇಔಟ್ ಕ್ಷೇತ್ರದಿಂದ ನಾಲ್ಕು ಬಾರಿ ಶಾಸಕರಾಗಿ ಚುನಾಯಿತರಾಗಿದ್ದಾರೆ. ಜನರ ಜತೆ ಸಾಮಾನ್ಯರಂತೆ ಬೆರೆಯುವುದು ಇವರ ವೈಶಿಷ್ಟ್ಯ. ಪಕ್ಷದಲ್ಲೂ ಹಲವು ಹುದ್ದೆಗಳನ್ನು ನಿಭಾಯಿಸಿರುವ ರಾಮಲಿಂಗಾರೆಡ್ಡಿ, ಸದ್ಯ ಕೆಪಿಸಿಸಿ ಕಾರ್ಯಾಧ್ಯಕ್ಷ. ಪಾಲಿಕೆ ಸದಸ್ಯರಾಗುವ ಮೂಲಕ ರಾಜಕೀಯ ಪ್ರವೇಶ ಮಾಡಿದವರು.

ವಿದ್ಯಾರ್ಹತೆ	ಬಿ.ಎಸ್ಸಿ
ವಯಸ್ಸು	70 ವರ್ಷ
ಜಾತಿ	ರೆಡ್ಡಿ
ಕ್ಷೇತ್ರ	ಬಿಟಿಎಂ ಲೇಔಟ್
ಎಷ್ಟನೇ ಬಾರಿಗೆ ಶಾಸಕ	ಎಂಟನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಗೃಹ, ಸಾರಿಗೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ

ಜಮೀರ್ ಅಹಮದ್ ಖಾನ್ 10

ವಿದ್ಯಾರ್ಹತೆ	ಎಸ್ಸೆಸ್ಸೆಲ್ಸಿ ಅಪೂರ್ಣ
ವಯಸ್ಸು	55 ವರ್ಷ
ಧರ್ಮ	ಮುಸ್ಲಿಂ
ಕ್ಷೇತ್ರ	ಚಾಮರಾಜಪೇಟೆ
ಎಷ್ಟನೇ ಬಾರಿಗೆ ಶಾಸಕ	ಐದನೇ ಬಾರಿ
ಹಿಂದೆ ನಿರ್ವಹಿಸಿದ ಖಾತೆ	ಹಜ್ ಮತ್ತು ವಕ್ಫ್, ಆಹಾರ

'ನ್ಯಾಷನಲ್ ಟ್ರಾವೆಲ್ಸ್' ಮೂಲಕ ಸಾರಿಗೆ ಉದ್ಯಮದಲ್ಲಿ ತೊಡಗಿಸಿಕೊಂಡಿರುವ ಜಮೀರ್ ಅಹಮದ್ ಖಾನ್, ಪ್ರಭಾವಿ ಮುಸ್ಲಿಂ ರಾಜಕಾರಣಿ. ಜೆಡಿಎಸ್‌ನಿಂದಲೇ ರಾಜಕೀಯ ಜೀವನ ಆರಂಭಿಸಿದ್ದ ಜಮೀರ್, ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್ - ಜೆಡಿಎಸ್ ಮೊದಲ ಮೈತ್ರಿ ಸರ್ಕಾರ ಅಸ್ತಿತ್ವಕ್ಕೆ ತರುವಲ್ಲಿ ಶ್ರಮ ಹಾಕಿದ್ದರು. ವಿಧಾನಸೌಧದಿಂದ ತಾವೇ ಬಸ್ ಚಲಾಯಿಸಿ ಶಾಸಕರನ್ನು ರೆಸಾರ್ಟ್‌ಗೆ ಕರೆದೊಯ್ದಿದ್ದರು. ನಂತರ, ಕುಮಾರಸ್ವಾಮಿ ಅವರ ಜತೆ ವಿರಸದಿಂದ ಕಾಂಗ್ರೆಸ್ ಸೇರಿ, ಸಿದ್ದರಾಮಯ್ಯ ಅವರ ಆಪ್ತರಾದರು. ಜಮೀರ್ ನಿರ್ಮಿಸಿರುವ ಬೃಹತ್ ಬಂಗಲೆ ಹಲವು ಬಾರಿ ಸುದ್ದಿಯಾಗುತ್ತಲೇ ಇದೆ. ಈ ಐಷಾರಾಮಿ ಬಂಗಲೆ ಮೇಲೆ ಇಡಿ, ಎಸಿಬಿ ದಾಳಿಯೂ ಕೂಡ ನಡೆದಿತ್ತು. ಚಾಮರಾಜಪೇಟೆ ಕ್ಷೇತ್ರದ ಜನರಿಗೆ ಸಹಾಯ ಹಸ್ತ ಚಾಚುವಲ್ಲಿ ಇವರು ಮುಂಚೂಣಿಯಲ್ಲಿದ್ದಾರೆ.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 21-5-1998

● **ತುಂಗಭದ್ರೆಯಲ್ಲಿ ದೋಣಿ ಮುಳುಗಿ 7 ಸಾವು**

ರಾಯಚೂರು, ಮೇ 20– ತುಂಗಭದ್ರಾ ನದಿಯಲ್ಲಿ ಹರಿಗೋಲು ಮುಗುಚಿ ಇಬ್ಬರು ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟ ದುರ್ಘಟನೆ ನಿನ್ನೆ ರಾತ್ರಿ ಮಾನ್ವಿ ತಾಲೂಕಿನ ಪೊನ್ನೂರು ಬಳಿ ನಡೆದಿದೆ.

ಮಾನ್ವಿ ತಾಲೂಕು ದದ್ದಲ ಗ್ರಾಮದ ನೀಲಮ್ಮ (30), ಲಕ್ಷ್ಮಿ (25), ಪಾರ್ವತಿ (8), ಭೀಮಯ್ಯ (12), ನಾಗೇಂದ್ರಮ್ಮ (18), ಹನುಮಂತಿ (18) ಹಾಗೂ ಹುಲಿಗೆಮ್ಮ (17) ಈ ದುರಂತದಲ್ಲಿ ಸತ್ತವರು.

ಸುದ್ದಿ ತಿಳಿದು ಸ್ಥಳಕ್ಕೆ ಹೋದ ಪೊಲೀಸರು ಈಜುಗಾರರ ನೆರವಿನಿಂದ ಎಲ್ಲ ಏಳು ಶವಗಳನ್ನು ನದಿಯಿಂದ ಹೊರತೆಗೆದಿದ್ದಾರೆ.

50 ವರ್ಷಗಳ ಹಿಂದೆ — ಸೋಮವಾರ, 21-5-1973

● **ಸಂಸತ್ ಸದಸ್ಯರೊಡನೆ ದೆಹಲಿ ಮಾತುಕತೆ ಬಗೆಗೆ ಅರಸು ತೃಪ್ತಿ**

ಬೆಂಗಳೂರು, ಮೇ 20– ದೆಹಲಿಯಲ್ಲಿ ರಾಜ್ಯದ ಕಾಂಗ್ರೆಸ್ ಸಂಸತ್ ಸದಸ್ಯರು ಮತ್ತು ತಮ್ಮ ನಡುವೆ ನಡೆದ ಮಾತುಕತೆಗಳು ತೃಪ್ತಿ ಉಂಟುಮಾಡಿವೆ ಎಂದು ರಾಜ್ಯದ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದಿಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಸುಲಭವಾಗಿ ಆಡಳಿತ ನಡೆಸುವಂತೆ ಹಾಗೂ ಆಡಳಿತವನ್ನು ಸುಧಾರಿಸಲು ತಮ್ಮೊಂದಿಗೆ ಸಹಕರಿಸಲು ಸಂಸತ್ ಸದಸ್ಯರು ಭರವಸೆ ನೀಡಿದ್ದಾರೆ ಎಂದು ನಿನ್ನೆ ನಗರಕ್ಕೆ ಆಗಮಿಸಿದ ಅರಸು ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ದಿನ ಭವಿಷ್ಯ — ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಮೇ 21, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುದ್ಧ ದ್ವಿತೀಯ ಗಂ. 22-10 ನಕ್ಷತ್ರ: ರೋಹಿಣಿ ಗಂ. 09-05, ಯೋಗ: ಸುಕರ್ಮ ಗಂ. 16-43
ಕರಣ: ಬಾಲವ ಗಂ. 09-47, ವೃಷಭ ಮಾಸದ 06 ನೇ ದಿನ
ಮಳೆನಕ್ಷತ್ರ: ಕೃತ್ತಿಕ 3. ರಾಹುಕಾಲ : ಸಾಯಂಕಾಲ 04-30 – 06-00
ಸೂರ್ಯೋದಯ : 06-07 ಸೂರ್ಯಾಸ್ತ : 06-47,
ಮುಸ್ಲಿಂ ದಿನಾಂಕ : 01 ಜುಲ್ಖಾಯದ್, ದಿನ ವಿಶೇಷ : ಅಸೆಷನ್ ಭಾನುವಾರ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 7, 10

ಮೇಷ: ಮಗಳ ಮದುವೆ ಮಾತುಕತೆಯಲ್ಲಿ ಮಾತನಾಡುವಾಗ ಬುದ್ಧಿವಂತಿಕೆಯಿಂದ ಸಮಸ್ಯೆ ಬಗೆಹರಿಸಿಕೊಳ್ಳುವಿರಿ. ನಿಮ್ಮಿಷ್ಟದ ಸಿಹಿ ಖಾದ್ಯಗಳನ್ನು ಸೇವಿಸುವ ಯೋಗ ಇದೆ. ಕುಶಲಕರ್ಮಿಗಳಿಗೆ ಉತ್ತಮವಾದ ದಿನ.

ವೃಷಭ: ಮೃತ ವ್ಯಕ್ತಿಗಳ ಆಸ್ತಿಯನ್ನು ಸೇರಬೇಕಾದವರಿಗೆಲ್ಲರಿಗೂ ಸೇರಿಸುವಂಥ ಕೆಲಸ ಮಾಡಬೇಕಾದೀತು. ಹೂವು ಹಣ್ಣು ವ್ಯಾಪಾರ ಮಾಡುವವರಿಗೆ ಲಾಭ ಹಾಗೂ ನಷ್ಟಗಳೆರೆಡರ ಮಿಶ್ರಫಲವು ಅನುಭವಕ್ಕೆ ಬರುವುದು.

ಮಿಥುನ: ಮುತುವರ್ಜಿವಹಿಸಿ ಮಾಡಿದ ಕೆಲಸ ಸಣ್ಣ ಮಕ್ಕಳಿಂದ ಹಾಳಾಗುವುದು. ನಿಮ್ಮ ಕೋಪ ಶಮನ ಮಾಡಿಕೊಳ್ಳಲು ಸಾಧ್ಯವಿಲ್ಲದಂತಾಗುವುದು. ನಿಮ್ಮ ಒಳ ಮನಸ್ಸಿಗೆ ಗೋಚರಿಸಿದ ಅವಘಡ ನಿಜವಾಗುವ ಸಂಭವವಿದೆ.

ಕರ್ಕಾಟಕ: ಸರಿಯಾದ ರೀತಿಯಲ್ಲಿ ರೂಪುರೇಷೆ ಹಾಕಿಕೊಳ್ಳದೆ ಶುರು ಮಾಡಿದ ಕೆಲಸ ಶುರುವಿನಲ್ಲಿಯೇ ಹಲವಾರು ವಿಘ್ನಗಳನ್ನು ಎದುರಿಸುವುದು. ಉದ್ಯಮಿಗಳು ಕೆಲಸಗಾರರ ಕಾರ್ಯದ ಗುಣಮಟ್ಟವನ್ನು ಪರೀಕ್ಷೆ ಮಾಡುವಿರಿ.

ಸಿಂಹ: ಭಾಗವತ ಅಥವಾ ಮಹಾಭಾರತದಂತಹ ಧಾರ್ಮಿಕ ಉಪನ್ಯಾಸಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುವ ಸಾಧ್ಯತೆ ಇದೆ. ಹಿಂದೆ ಬದುಕಿನಲ್ಲಿ ನಡೆದ ಅತ್ಯಂತ ಮುಖ್ಯಘಟ್ಟವನ್ನು ಸ್ಮರಣೆ ಮಾಡುವಿರಿ.

ಕನ್ಯಾ: ನಾಟಕ ಅಥವಾ ಸಿನಿಮಾದಲ್ಲಿ ನಟಿಸುವವರಿಗೆ ಉತ್ತಮ ಅವಕಾಶಗಳ ಜೊತೆ ಹೆಸರು ಸಹ ಬರಲಿದೆ. ಮನೆಯಲ್ಲಿ ಮಳೆಗಾಲಕ್ಕೆ ಸಹಾಯವಾಗುವಂತಹ ಸಣ್ಣಪುಟ್ಟ ಮಾರ್ಪಾಡಿನ ಕಾರ್ಯಗಳನ್ನು ನಡೆಸುವಿರಿ.

ತುಲಾ: ನಿಯತಕಾಲಿಕ ಚಿಕಿತ್ಸೆಗಳನ್ನು ತಪ್ಪಿಸದೆ ತೆಗೆದುಕೊಳ್ಳಿರಿ. ಭವಿಷ್ಯದ ನಿಮ್ಮ ಜೀವನದ ಬಗ್ಗೆ ಅತ್ಯಂತ ಗಂಭೀರವಾಗಿ ಯೋಚಿಸುವಿರಿ. ಸೂಕ್ತ ಸಮಯದಲ್ಲಿ ಕೆಲಸಗಳನ್ನು ಮಾಡಿಕೊಳ್ಳದೆ ಕಡೇ ಘಳಿಗೆಯಲ್ಲಿ ಕಷ್ಟಪಡುವಿರಿ.

ವೃಶ್ಚಿಕ: ಲಕ್ಷ್ಯಗೊಟ್ಟು ಕೇಳಿದ ವಿಷಯಗಳು ಕ್ಲುಪ್ತವಾದ ಸಮಯದಲ್ಲಿ ಪ್ರಯೋಜನಕ್ಕೆ ಬರಲಿದೆ. ಶುಭ್ರವಾದ ಉಡುಗೆ ತೊಡುಗೆಗಳು ನಿಮ್ಮ ಸ್ಥಾನಮಾನವನ್ನು ಹೆಚ್ಚಿಸುತ್ತದೆ. ವಾಹನ ಖರೀದಿಗೆ ಸ್ವಲ್ಪಕಾಲ ಕಾಯುವುದು ಒಳ್ಳೆಯದು.

ಧನು: ಮನೆಯಿಂದ ಹೊರಗೆ ಕೃತಕ ಸಂತೋಷ ಹುಡುಕುವ ಬದಲು ಮನೆಯವರೊಂದಿಗೇ ಖುಷಿಯಾಗಿರಲು ಪ್ರಯತ್ನಿಸಿ. ನಿಜವೆಂದು ತೋರುವ ಕೆಲವು ವಿಷಯಗಳು ಪರಾಮರ್ಶೆ ನಂತರ ಹುಸಿ ಎಂದು ತಿಳಿಯುವುದು.

ಮಕರ: ಪತ್ತೇದಾರಿ ಕೆಲಸದಲ್ಲಿರುವ ನಿಮ್ಮ ಗುರುತು ಹಿಡಿದು ದಾರಿ ತಪ್ಪಿಸುವ ಕೆಲಸವನ್ನು ಕೆಲವರು ಮಾಡುವರು. ಕಷ್ಟ ಕೆಲಸಗಳನ್ನು ಸರಳೀಕರಿಸಿಕೊಳ್ಳುವ ಪ್ರಯತ್ನಗಳನ್ನು ನಡೆಸುವಿರಿ. ನೃತ್ಯಗಾರರು ಹೆಚ್ಚಿನ ಸಾಧನೆ ಮಾಡುವಿರಿ.

ಕುಂಭ: ವಿದ್ಯಾರ್ಥಿಗಳು ಪರಿಶ್ರಮಕ್ಕೆ ತಕ್ಕ ಯಶಸ್ಸು ಕಾಣುವರು. ಸಂಬಂಧಿಕರೊಬ್ಬರ ಆಸ್ತಿ ಕೊಳ್ಳುವ ವಿಚಾರದಲ್ಲಿ ಮಧ್ಯಸ್ಥಿಕೆ ವಹಿಸುವ ಕೆಲಸ ಭಿನ್ನಾಭಿಪ್ರಾಯ ಮೂಡಿಸಲಿದೆ. ಕೆಲಸಗಳು ನಿರೀಕ್ಷಿತ ಹಾದಿಯಲ್ಲಿ ಸಾಗುವವು.

ಮೀನ: ಇಂಧನ ಮಾರಾಟಗಾರರಿಗೆ ಈ ದಿನ ಅನುಕೂಲವಾಗಿರುವುದು. ಸ್ಪರ್ಧಾತ್ಮಕ ಮನೋಭಾವ ಹೊಸ ಸಾಹಸಕ್ಕೆ ಕೈ ಹಾಕಲು ಪ್ರೇರೇಪಿಸುವುದು. ಇನ್ನೊಬ್ಬರ ಜೀವನದಲ್ಲಿ ನಿಮ್ಮ ಪಾತ್ರದ ಬಗ್ಗೆ ತಿಳಿದು ಸಂತೋಷವಾಗುವುದು.

ಪದಬಂಧ 5325 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೇರವಲ್ಲದ ನುಡಿ (5)
3.ತಿರುಗಿದಾಗ ಏರಿದ ನಶೆ! (3)
5.ಸುದ್ದಿ ಇಲ್ಲಿದೆ (2)
6.ಮರ್ಯಾದೆಯುಳ್ಳ ಒಡೆಯ (4)
9.ವಿದ್ಯಾರ್ಹತೆಯ ಪ್ರಶಸ್ತಿಯನ್ನು ನೀಡುವುದು (5)
12.ಮನಸ್ಸಿನ ಅಭಿಪ್ರಾಯ (4)
14.ನೆನಪಿನಿಂದ ಮಾಸದ ತಿಂಗಳು (2)
15.ಉಲ್ಟಾ ಪಲ್ಟಾ ಆಗಿರುವ ಗುಟ್ಟು (3)
16.ಲೈಬ್ರರಿಯನ್ನು ಕನ್ನಡೀಕರಿಸಿ (5)

ಮೇಲಿಂದ ಕೆಳಕ್ಕೆ
1.ಬರದಲ್ಲಿ ತೋರಿದ ಡೌಲು (4)
2.ಮಾತು ಕೇಳಿಸಿಕೊಂಡಿರುವ ಸೋದರ ಮಾವ (3)
4.ನಟನೆಯನ್ನು ಹೀಗೆನ್ನಿ (4)
7.ಜನರ ನಡುವಿರುವ ಸೇವಕ (3)
8.ಕೊತ್ತಂಬರಿಬೀಜವನ್ನು ಹೀಗೂ ಹೇಳುವರು (3)
9.ಇದು ಉತ್ತರದವರ ಮಂಚ (3)
10.ಮರ ನಡುವಿದ್ದಾಗ ಚನ್ನಾಗಿ ಬರೆಯುವುದು (4)
11.ಒಳ್ಳೆಯ ಕಾಲ (4)
13.ಕನ್ನಡಿಗ ಹಿಡಿದಿರುವ ಸ್ಪೂನ್! (3)



5324ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಂಧಕಾರ 3.ನವರಾತ್ರಿ
5.ವಾರಸು 6.ಅಪಕಾರ
8.ಮರೀಚಿಕೆ 10.ಪರಧನ
12.ಸವಕಲು 13.ವಜೀರ
16.ಪದ್ಮರಾಗ 17.ತಿದ್ದುಪಡಿ

ಮೇಲಿಂದ ಕೆಳಕ್ಕೆ:
1.ಅಂಬು 2.ರವಿವಾರ
3.ನವಸುಮ 4.ತ್ರಿಪು
7.ಪದರ 9.ಚಿಲಕ
11.ನವರಂಗ 12.ಸರಸ್ವತಿ
14.ಕೂಪ 15.ನಾಡಿ

ಸುಡೊಕು 5711

3		2	1		4		6	7
				8				
7	9		6		2	5		4
2					3			5
				4		2	9	
			9					1
	4	1	2				8	
9				7	8			
	6			5		4		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5710 ಸುಡೊಕು

5	4	6	1	7	9	3	2	8
3	8	9	2	6	4	5	1	7
7	2	1	8	5	3	4	6	9
8	9	3	5	2	1	6	7	4
1	5	2	6	4	7	8	9	3
4	6	7	3	9	8	1	5	2
9	3	5	7	8	6	2	4	1
2	1	4	9	3	5	7	8	6
6	7	8	4	1	2	9	3	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸರ್ಕಾರ ಟೀಕಿಸಿದ ಶಿಕ್ಷಕ ಅಮಾನತು

ಶಾಂತಮೂರ್ತಿ ಎಂ.ಜಿ.

ಹೊಸದುರ್ಗ: ಸರ್ಕಾರ ಟೀಕಿಸುವ ಬರಹವನ್ನು ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಮಾಡಿದ ಆರೋಪದ ಮೇಲೆ ತಾಲ್ಲೂಕಿನ ಕಾನುಬೇನಹಳ್ಳಿ ಶಿಕ್ಷಕ ಶಾಂತಮೂರ್ತಿ ಎಂ.ಜಿ. ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಎಲ್. ಜಯಪ್ಪ ಅಮಾನತು ಮಾಡಿದ್ದಾರೆ.

ಸಿದ್ದರಾಮಯ್ಯ ಅವರು ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುತ್ತಿರುವ ಸಂದರ್ಭದಲ್ಲಿ ಶಾಂತಮೂರ್ತಿ ಅವರು, 'ಎಸ್.ಎಂ. ಕೃಷ್ಣ ಅವಧಿಯಲ್ಲಿ ₹ 3,590 ಕೋಟಿ, ಧರ್ಮಸಿಂಗ್ ₹ 15,635 ಕೋಟಿ, ಎಚ್.ಡಿ. ಕುಮಾರಸ್ವಾಮಿ ₹ 3,545 ಕೋಟಿ, ಬಿ.ಎಸ್. ಯಡಿಯೂರಪ್ಪ ₹ 25,653 ಕೋಟಿ, ಸದಾನಂದಗೌಡ ₹ 9,464 ಕೋಟಿ, ಜಗದೀಶ ಶೆಟ್ಟರ್ ₹ 13,464 ಕೋಟಿ, ಸಿದ್ದರಾಮಯ್ಯ ₹ 2,42,000 ಕೋಟಿ ಸಾಲ ಮಾಡಿದರು. ಎಸ್.ಎಂ. ಕೃಷ್ಣ ಅವಧಿಯಿಂದ ಶೆಟ್ಟರ್‌ವರೆಗೆ ಮಾಡಿದ ಒಟ್ಟು ಸಾಲ ₹ 71,331 ಕೋಟಿ, ಸಿದ್ದರಾಮಯ್ಯ ಅವರು ಮಾಡಿದ ಸಾಲ ₹ 2,42,000 ಕೋಟಿ. ಹೀಗಿರುವಾಗ ಬಿಟ್ಟಿ ಭಾಗ್ಯ ಕೊಡದೆ ಇನ್ನೇನು' ಎಂದು ಬರಹದಲ್ಲಿ ಟೀಕಿಸಿದ್ದರು. ಈ ಮಾಹಿತಿಯನ್ನು ವಾಟ್ಸ್‌ಆ್ಯಪ್ ಗ್ರೂಪ್‌ಗಳಿಗೂ ಶೇರ್ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶಾಂತಮೂರ್ತಿ ಅವರನ್ನು ಕ್ಷೇತ್ರ ಶಿಕ್ಷಣಾಧಿಕಾರಿ ಅಮಾನತು ಮಾಡಿದ್ದಾರೆ.

ಮೂವರಿಗೆ ಕಸಾಪ ದತ್ತಿ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕಂಡ್ಲೂರು ಗಿರಿಜಮ್ಮ ಮತ್ತು ನರಸಿಂಹ ಜೋಗಿ ದತ್ತಿ ಪ್ರಶಸ್ತಿ'ಗೆ ರಂಗಕರ್ಮಿ ಕಾಸರಗೋಡು ಚಿನ್ನ ಸೇರಿ ಮೂವರು ರಂಗ ಕಲಾವಿದರು ಆಯ್ಕೆಯಾಗಿದ್ದಾರೆ.

ರಂಗ ಕಲಾವಿದೆ ಭಾರತಿ ಬಿಜಾಪುರ ಹಾಗೂ ಬೆಂಗಳೂರಿನ ರಂಗ ಕಲಾವಿದ ರಂಗಶ್ರೀ ರಂಗಸ್ವಾಮಿ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ. ಪ್ರಶಸ್ತಿಯು ತಲಾ ₹ 5 ಸಾವಿರ ನಗದು ಒಳಗೊಂಡಿದೆ.

ಕನ್ನಡ ರಂಗಭೂಮಿಯಲ್ಲಿ ದುಡಿಯುತ್ತಿರುವ ಕಲಾವಿದ-ರೊಬ್ಬರಿಗೆ ಪ್ರತಿ ವರ್ಷ ಈ ಪ್ರಶಸ್ತಿ ನೀಡಲಾಗುತ್ತಿದೆ.

ಮುಕ್ತ ವಿವಿಗೆ 'ಎ' ಪ್ಲಸ್ ಮಾನ್ಯತೆ: ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಮಾಹಿತಿ

ಏಕಕಾಲದಲ್ಲಿ 2 ಪದವಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಎಲ್ಲ ಜಿಲ್ಲೆಗಳಲ್ಲಿ ಪ್ರಾದೇಶಿಕ ಕೇಂದ್ರ
- ದಾಖಲಾತಿ ಪ್ರಮಾಣ ಹೆಚ್ಚಳ
- ಹಣಕಾಸಿನಲ್ಲಿ ಸ್ಥಿರತೆ ಸಾಧನೆ

ಮೈಸೂರು: 'ನಗರದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯಕ್ಕೆ ರಾಷ್ಟ್ರೀಯ ಮೌಲ್ಯಾಂಕನ ಮತ್ತು ಮಾನ್ಯತಾ ಮಂಡಳಿಯ (ನ್ಯಾಕ್) 'ಎ' ಪ್ಲಸ್ ಮಾನ್ಯತೆ ದೊರೆತಿದ್ದು, ಏಕಕಾಲದಲ್ಲಿ ಎರಡು ಪದವಿಯನ್ನು ವಿಶ್ವವಿದ್ಯಾ-ಲಯ ನೀಡಬಹುದು' ಎಂದು ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ತಿಳಿಸಿದರು.

ಮುಕ್ತ ಗಂಗೋತ್ರಿಯಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ದೇಶದಲ್ಲಿ 16 ಮುಕ್ತ ವಿಶ್ವವಿದ್ಯಾಲ-ಯಗಳಿದ್ದು, ಗುಜರಾತ್‌ನ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾಲಯಕ್ಕೆ ಎ++ ಮಾನ್ಯತೆ ಸಿಕ್ಕಿದೆ. 0.19 ಅಂಕದಲ್ಲಿ ಕೆಎಸ್‌ಒಯುಗೆ ಮೊದಲ ಸ್ಥಾನ ತಪ್ಪಿದೆ. ಆದರೆ, ರಾಜ್ಯದಲ್ಲಿ ಈ ಬಾರಿ ಎ+ ಸಾಧನೆ ಮಾಡಿದ ಮೊದಲ ವಿಶ್ವವಿದ್ಯಾ-ಲಯವೆಂಬ ಹಿರಿಮೆಗೆ ಪಾತ್ರವಾಗಿದೆ' ಎಂದರು. 'ದಾಖಲಾತಿ ಪ್ರಮಾಣ ಹೆಚ್ಚಿಸುವ ಜೊತೆಗೆ ಎ++ ಅಥವಾ ಎ+ ಮಾನ್ಯತೆಗೆ ಶ್ರಮಿಸಿದ್ದೆವು. ಮಾನ್ಯತೆ ಸಿಕ್ಕಿದ್ದರಿಂದ ಆನ್‌ಲೈನ್ ಕೋರ್ಸ್‌ಗಳನ್ನು ಆರಂಭಿಸಬಹುದು' ಎಂದರು.

> ಕೆಎಸ್‌ಒಯು ಪದವೀಧರರಿಗೆ ಉದ್ಯೋಗದ ಅವಕಾಶ ನೀಡುವಾಗ ತಾರತಮ್ಯ ಮಾಡಿದರೆ, ವಿಶ್ವವಿದ್ಯಾಲಯವೇ ಪ್ರಕರಣ ದಾಖಲಿಸಲಿದೆ
> **ಪ್ರೊ.ಶರಣಪ್ಪ ವಿ. ಹಲಸೆ,** ಕುಲಪತಿ

'ಪ್ರಸಕ್ತ ಸಾಲಿನಲ್ಲಿ ದಾಖಲಾತಿ 6,200 ರಿಂದ 18,524ಕ್ಕೆ ಹೆಚ್ಚಿದೆ. ಎಲ್ಲ ಜಿಲ್ಲೆಗಳಲ್ಲೂ ಪ್ರಾದೇಶಿಕ ಕೇಂದ್ರ ಹಾಗೂ ಹೋಬಳಿಗಳಲ್ಲೂ ಕಲಿಕಾ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ. ಇ-ಕಲಿಕೆ ವೇದಿಕೆಗಳನ್ನು 30 ರಿಂದ 150ಕ್ಕೆ ಹೆಚ್ಚಿಸಲಾಗಿದೆ' ಎಂದರು.

'ವಿಶ್ವವಿದ್ಯಾಲಯವು ಹಣಕಾಸಿನಲ್ಲಿ ಸ್ಥಿರತೆ ಸಾಧಿಸಿದ್ದು, ₹ 10 ಕೋಟಿ ತೆರಿಗೆ ರೀಫಂಡ್ ಸಿಕ್ಕಿದೆ. ₹ 40 ಕೋಟಿ ಆದಾಯವಿದೆ. ಯುಜಿಸಿ ಹಾಗೂ ರಾಜ್ಯ ಸರ್ಕಾರದಿಂದ ಅನುದಾನ ನಿರೀಕ್ಷಿಸಲಾಗಿದೆ' ಎಂದು ತಿಳಿಸಿದರು.

ತೃತೀಯ ಲಿಂಗಿಗಳು, ಕೋವಿಡ್ ಸಂತ್ರಸ್ತರಿಗೆ ಉಚಿತ ಶಿಕ್ಷಣ

'ತೃತೀಯ ಲಿಂಗಿಗಳು, ಕೋವಿಡ್ ಸಂತ್ರಸ್ತರಿಗೆ ಉಚಿತ ಶಿಕ್ಷಣ, ಮಹಿಳೆಯರಿಗೆ ಶೇ 50 ಹಾಗೂ ಕೆಎಸ್‌ಆರ್‌ಟಿಸಿ ಮತ್ತು ಕ್ಯಾಬ್ ಡ್ರೈವರ್‌ಗಳಿಗೆ ಶಿಕ್ಷಣದಲ್ಲಿ ಶೇ 15ರಷ್ಟು ರಿಯಾಯಿತಿ ನೀಡಲಾಗುತ್ತಿದೆ' ಎಂದು ಪ್ರೊ.ಶರಣಪ್ಪ ವಿ. ಹಲಸೆ ಹೇಳಿದರು.

'ದಾಖಲಾತಿ ಪ್ರಮಾಣವನ್ನು 2 ಲಕ್ಷಕ್ಕೇರಿಸುವ ಗುರಿ ಇದೆ. ದತ್ತಾಂಶ ವಿಜ್ಞಾನ, ಬಯೊಇನ್ಫಾರ್ಮೆಟಿಕ್ಸ್, ಭೂ ವಿಜ್ಞಾನ, ಸೈಬರ್ ಭದ್ರತೆ ಸೇರಿದಂತೆ 51 ಹೊಸ ಕೋರ್ಸ್‌ಗಳನ್ನು ಆರಂಭಿಸಲು ಯುಜಿಸಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದರು.

ಅಕ್ರಮ ಮತದಾನ: ದೂರು

ಕಾರ್ಕಳ (ಉಡುಪಿ ಜಿಲ್ಲೆ): ವಿದೇಶ-ದಲ್ಲಿರುವ ಸುಹಾಸ್ ಶೆಟ್ಟಿ ಎಂಬುವರ ಹೆಸರಿನಲ್ಲಿ ಅಕ್ರಮವಾಗಿ ಮತ ಚಲಾಯಿಸಿದ ಆರೋಪದ ಮೇಲೆ 17 ವರ್ಷದ ಬಾಲಕನ ಮೇಲೆ ಕಾರ್ಕಳ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇ 10ರಂದು ಕಾರ್ಕಳ ವಿಧಾನಸಭಾ ಕ್ಷೇತ್ರದ ಮಿಯಾರು ಮತಗಟ್ಟೆಯಲ್ಲಿ ಸುಹಾಸ್ ಶೆಟ್ಟಿ ಎಂಬುವರ ಹೆಸರಿನಲ್ಲಿ ಬಾಲಕ ಮತ ಹಾಕಿದ್ದಾನೆ. ಅಕ್ರಮ ಮತದಾನ ಮಾಡಲು ನವೀನ್ ಹಾಗೂ ಬಿಜೆಪಿ ಕಾರ್ಯಕರ್ತನಾದ ರೋಹಿತ್ ಶೆಟ್ಟಿ ಕುಮ್ಮಕ್ಕು ನೀಡಿದ್ದಾರೆ ಎಂದು ಕಾರ್ಕಳದ ಮಿಯಾರು ಗ್ರಾಮದ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ತಾರಾನಾಥ ಕೋಟ್ಯಾನ್ ನೀಡಿರುವ ದೂರಿನ ಅನ್ವಯ ಪ್ರಕರಣ ದಾಖಲಾಗಿದೆ.

RAJIV GANDHI UNIVERSITY OF HEALTH SCIENCES, KARNATAKA
4th 'T' Block, Jayanagara, Bengaluru – 560 041,
Ph No.080-26961928 Fax-080-26961929

No.RGU/FO,E-Bid Investment/Apr-23/2023-24 Date:20.05.2023

E-TENDER NOTIFICATION (RFP)

The Registrar Rajiv Gandhi University of Health Sciences invites E-Live bid for the Investment of Surplus Funds of Rs.1050.05 Cores. For further details:- Please Contact website: **https://kppp.karnataka.gov.in.**

Click on Department of Medical Education for help contact: 080-46010000/68948777. Requested to apply before **11:35 hrs** on **25/05/2023.**

DIPR/92/2023-24 Sd/- REGISTRAR

ಬಿಸಿಲಿನ ತಾಪ ತಗ್ಗಿಸಿದ ವರ್ಷಧಾರೆ

ಆಲಿಕಲ್ಲು ಬಿದ್ದು ಮಾವಿಗೆ ಹಾನಿ: ವಿವಿಧೆಡೆ ವಿದ್ಯುತ್ ಪೂರೈಕೆ ಅಸ್ತವ್ಯಸ್ತ

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ವಿವಿಧೆಡೆ ಶನಿವಾರ ಸಂಜೆ ಬಿರುಗಾಳಿ ಸಹಿತ ಮಳೆಯಾಗಿದ್ದು ಗಾಳಿ ಹಾಗೂ ಆಲಿಕಲ್ಲಿನ ಹೊಡೆತಕ್ಕೆ ಮಾವಿನ ಬೆಳೆಗೆ ಹಾನಿಯಾಗಿದೆ.

ರಾಮನಗರದಲ್ಲಿ ಸಂಜೆ ಭಾರಿ ಬಿರುಗಾಳಿ ಬೀಸಿದ್ದು, ಎಲ್ಲೆಡೆ ದೂಳು ಆವರಿಸಿತ್ತು. ನಂತರದಲ್ಲಿ ಮಳೆ ಕೂಡ ಆರಂಭ ಆಗಿದ್ದು, ಕೆಲ ಹೊತ್ತು ಗುಡುಗು-ಸಿಡಿಲಿನ ಆರ್ಭಟ ಇತ್ತು. ಮಾಗಡಿ ತಾಲ್ಲೂಕಿನಲ್ಲೂ ಆಲಿಕಲ್ಲು ಸಹಿತ ಮಳೆ ಸುರಿಯಿತು. ಇದರಿಂದಾಗಿ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಆಗಿತ್ತು.

ಸದ್ಯ ರಾಮನಗರ ಜಿಲ್ಲೆಯಲ್ಲಿ ಮಾವಿನ ಕೊಯ್ಲು ಜೋರಾಗಿ ನಡೆದಿದೆ. ಮಳೆ-ಗಾಳಿ ಆರ್ಭಟಕ್ಕೆ ಕಾಯಿಗಳು ಉದುರಿದ್ದು, ಆಲಿಕಲ್ಲಿನಿಂದಾಗಿ ಬೆಳೆಗೆ ಹಾನಿಯಾಗುವ ಸಾಧ್ಯತೆ ಇದೆ.

ಒಂದು ವಾರದಿಂದ ಬಿಸಿಲಿನ ತಾಪಕ್ಕೆ ತತ್ತರಿಸಿದ್ದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾ-ಪುರ ತಾಲ್ಲೂಕಿನ ಜನರು ಸಂಜೆ ಸುರಿದ ಬಿರುಗಾಳಿ ಸಹಿತ ಮಳೆಯಿಂದಾಗಿ ನಿಟ್ಟುಸಿರು ಬಿಟ್ಟಿದ್ದಾರೆ. ಒಂದು ವಾರದಿಂದ ಈಚೆಗೆ ಹೆಚ್ಚಾಗಿದ್ದ ಬಿಸಿಲಿನ ತೀವ್ರತೆ ಮಳೆಯಿಂದ ಕಡಿಮೆಯಾಗಿ ವಾತಾವರಣ ತಂಪಾಗಿದೆ. ನಗರದ ತಾಲ್ಲೂಕು ಕಚೇರಿ ರಸ್ತೆಯಲ್ಲಿ ಚರಂಡಿ ನೀರು ರಸ್ತೆಗೆ ನುಗ್ಗಿದ ಕಾರಣ ವಾಹನ ಸವಾರರು ಮತ್ತು ಪಾದಚಾರಿಗಳು ಪರದಾಡಬೇಕಾಯಿ-ತು. ಮಧ್ಯಾಹ್ನ 12 ಗಂಟೆ ನಂತರ ನೆತ್ತಿ ಸುಡುವ ಬಿಸಿಲಿನಿಂದಾಗಿ ರಸ್ತೆಗಳಲ್ಲಿ ಜನ ಸಂಚಾರ ವಿರಳವಾಗಿತ್ತು. ಮೈಸೂರು ಜಿಲ್ಲೆಯ ಹುಣಸೂರು, ಕೊಡಗಿನ ಸಿದ್ದಾಪುರದಲ್ಲೂ ಮಳೆ ಸುರಿಯಿತು.

ದೊಡ್ಡಬಳ್ಳಾಪುರದ ತಾಲ್ಲೂಕು ಕಚೇರಿಯ ರಸ್ತೆಯಲ್ಲಿ ನಿಂತಿರುವ ಮಳೆ ನೀರಿನಲ್ಲೇ ಹೋಗುತ್ತಿರುವ ಬೈಕ್ ಸವಾರರು

ದಕ್ಷಿಣ ಒಳನಾಡಿನಲ್ಲಿ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ಭಾನುವಾರ ಮತ್ತು ಸೋಮವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯ ಒಂದೆರಡು ಕಡೆ, ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ನಗರ, ಚಿತ್ರದುರ್ಗ, ಕೋಲಾರ, ಮೈಸೂರು, ಚಾಮರಾಜನಗರ, ಕೊಡಗು, ಚಿಕ್ಕಮಗಳೂರು, ತುಮಕೂರು ಜಿಲ್ಲೆಯ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗಲಿದೆ. ಉತ್ತರ ಒಳನಾಡು, ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಇಲಾಖೆ ಹೇಳಿದೆ. ಗರಿಷ್ಠ ಉಷ್ಣಾಂಶವು ಉತ್ತರ ಒಳನಾಡಿನ ಹಲವು ಕಡೆಗಳಲ್ಲಿ, ದಕ್ಷಿಣ ಒಳನಾಡು ಹಾಗೂ ಕರಾವಳಿಯ ಕೆಲವು ಕಡೆಗಳಲ್ಲಿ ಸಾಮಾನ್ಯಕ್ಕಿಂತ 2-3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗುವ ಸಾಧ್ಯತೆ ಇದೆ. ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿದೆ.

ಮಂಗಳವಾರದಿಂದ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಮಳೆ ಹೆಚ್ಚಳವಾಗುವ ಸಾಧ್ಯತೆಯಿದೆ. ಬುಧವಾರದಿಂದ ಕರಾವಳಿ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ಹೇಳಿದೆ.

ಶನಿವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ಕಲಬುರಗಿ-ಯಲ್ಲಿ ಗರಿಷ್ಠ ಉಷ್ಣಾಂಶ (41.5 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ.

ಅಂಗವಿಕಲ ಮಗನ ಕೊಂದು ತಂದೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕುಮಟಾ (ಉತ್ತರ ಕನ್ನಡ): ಇಲ್ಲಿನ ಹಳೆಮೀನು ಮಾರುಕಟ್ಟೆ ಸಮೀಪದ ಪೌರಕಾರ್ಮಿಕರ ವಸತಿ ಸಮುಚ್ಚಯದ-ಲ್ಲಿ ವಾಸವಾಗಿದ್ದ ಪೌರಕಾರ್ಮಿಕ ಶ್ರೀಧರ ಹರಿಜನ (45), ತನ್ನ ಅಂಗವಿಕಲ ಮಗ ಪ್ರೀತಮ್ (15) ಅವರನ್ನು ನೀರು ತುಂಬಿದ ಡ್ರಮ್‌ನಲ್ಲಿ ಮುಳುಗಿಸಿ ಹತ್ಯೆಗೈದು, ಬಳಿಕ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಶ್ರೀಧರ ಇಲ್ಲಿನ ಪುರಸಭೆಯಲ್ಲಿ ಪೌರಕಾರ್ಮಿಕರಾಗಿ ಕಾರ್ಯನಿರ್ವಹಿ-ಸುತ್ತಿದ್ದರು. ಮಗ ಪ್ರೀತಮ್ ದೀರ್ಘ ಕಾಲದಿಂದ ಅನಾರೋಗ್ಯ ಪೀಡಿತನಾಗಿ-ದ್ದರಿಂದ ಬೇಸತ್ತು ಈ ರೀತಿ ಮಾಡಿದ್ದಾರೆ. ನಂತರ ಅವರೂ ಮನೆಯ ತಾರಸಿಗೆ ನೇಣು ಹಾಕಿಕೊಂಡಿದ್ದಾರೆ ಎಂದು ಕುಮಟಾ ಪೊಲೀಸರು ತಿಳಿಸಿದ್ದಾರೆ.

ತಡವಾಗಿ ಬಂದ ಎಸಿ ಹೊರಕಳುಹಿಸಿದ ಜಿಲ್ಲಾಧಿಕಾರಿ!

ರಾಯಚೂರು: ಜಿಲ್ಲಾಧಿಕಾರಿ ಕಚೇರಿಯಲ್ಲಿ ಶನಿವಾರ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಗೆ ತಡವಾಗಿ ಹಾಜರಾದ ರಾಯಚೂರು ಉಪವಿಭಾಗಾಧಿಕಾರಿ ರಜನಿಕಾಂತ್ ಚೌವಾಣ್ ಅವರನ್ನು ಜಿಲ್ಲಾಧಿಕಾರಿ ಎಲ್.ಚಂದ್ರಶೇಖರ್ ನಾಯಕ 'ಗೆಟ್ ಔಟ್' ಎಂದು ಗದರಿದರು.

'ಸಭೆಗೆ ಬರಲು ಏಕೆ ತಡವಾಯಿತು' ಎಂದು ಜಿಲ್ಲಾಧಿಕಾರಿ ಪ್ರಶ್ನಿಸಿದಾಗ 'ರಜೆ ಇದೆ ಅಂದುಕೊಂಡೆ' ಎಂದು ರಜನಿಕಾಂತ್ ಪ್ರತ್ಯುತ್ತರ ನೀಡಿದರು. 'ಯಾವ ರಜೆ ಇದೆ' ಎಂದು ಮರು-ಪ್ರಶ್ನಿಸಿದಾಗ ಉತ್ತರಿಸಲಾಗದೆ ಹೊರ ಹೋದರು.

ರಜೆಯಲ್ಲಿ ತೆರಳಿದ ಡಿವೈಎಸ್‌ಪಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಪುತ್ತೂರಿನಲ್ಲಿ ಇತ್ತೀಚೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಾಗೂ ಸಂಸದ ಸದಾನಂದ ಗೌಡ ಅವರ ಭಾವಚಿತ್ರ ಇರುವ ಬ್ಯಾನರ್ ಅಳವಡಿಸಿ, ಅದಕ್ಕೆ ಚಪ್ಪಲಿ ಹಾರ ಹಾಕಿದ ಪ್ರಕರಣದ ಆರೋಪಿಗಳ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿರುವ ಡಿವೈಎಸ್‌ಪಿ ವೀರಯ್ಯ ಹಿರೇಮಠ ರಜೆ ಮೇಲೆ ತೆರಳಿದ್ದಾರೆ.

ಹಲ್ಲೆಗೊಳಗಾದ ಆರೋಪಿ ಅವಿನಾಶ್ ಅವರ ತಂದೆ ವೇಣುನಾಥ ಅವರು ಡಿವೈಎಸ್‌ಪಿ ವೀರಯ್ಯ ಹಿರೇಮಠ, ಸಂಪ್ಯ ಠಾಣೆಯ ಪಿಎಸ್‌ಐ ಶ್ರೀನಾಥ ರಡ್ಡಿ, ಕಾನ್‌ಸ್ಟೆಬಲ್ ಹರ್ಷಿತ್ ವಿರುದ್ಧ ಗುರುವಾರ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

'ದೂರು ದಾಖಲಾದ ದಿನದಿಂದಲೇ ಡಿವೈಎಸ್‌ಪಿ ರಜೆ ಮೇಲೆ ತೆರಳಿದ್ದಾರೆ. ಈಗ ಅವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಹಾಗಾಗಿ ಅವರು ಕಡ್ಡಾಯ ರಜೆಯಲ್ಲಿದ್ದಾರೆ ಎನ್ನಬಹುದು' ಎಂದು ಜಿಲ್ಲೆಯ ಪೊಲೀಸ್ ಅಧಿಕಾ-ರಿಯೊಬ್ಬರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಐದೂ ಗ್ಯಾರಂಟಿಗೆ 'ಸಿದ್ಧ'ರಾಮಯ್ಯ

ಒಂದನೇ ಪುಟದಿಂದ...

40 ನಿಮಿಷ ಸಂಪುಟ ಸಭೆ ನಡೆಯಿತು. ಕಾಂಗ್ರೆಸ್ ಘೋಷಿಸಿದ್ದ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕುರಿತು ವಿಸ್ತೃತ ಚರ್ಚೆ ನಡೆಸಿದ ಸಂಪುಟ ಸದಸ್ಯರು, ಐದು ಕಾರ್ಯಕ್ರಮಗಳ ಜಾರಿಗೆ ತಾತ್ವಿಕ ಅನುಮೋದನೆ ನೀಡಿದರು. ಸಂಪುಟದ ಮುಂದಿನ ಸಭೆಯ ವೇಳೆಗೆ ಸಂಪೂರ್ಣ ಮಾಹಿತಿಗಳೊಂದಿಗೆ ಈ ಯೋಜನೆಗಳ ಅನುಷ್ಠಾನಕ್ಕೆ ಮಾರ್ಗಸೂಚಿಗಳನ್ನು ಅಂತಿಮಗೊಳಿಸುವ ತೀರ್ಮಾನವನ್ನೂ ಕೈಗೊಂಡರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿದ್ದರಾಮಯ್ಯ, ಪ್ರಧಾನಿ ನರೇಂದ್ರ ಮೋದಿ ಮತ್ತು ನಿರ್ಗಮಿತ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು. ಬಿಜೆಪಿ ಆಡಳಿತದಿಂದ ರಾಜ್ಯದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ ಎಂದು ದೂರಿದರು.

ಕೊಟ್ಟ ಮಾತಿಗೆ ಬದ್ಧ: 'ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಅನೇಕ ಭರವಸೆಗಳನ್ನು ನೀಡಿದ್ದೇವೆ. ಐದು ವರ್ಷಗಳಲ್ಲಿ ಹಂತ ಹಂತವಾಗಿ ಅವುಗಳನ್ನು ಅನುಷ್ಠಾನಕ್ಕೆ ತರುತ್ತೇವೆ. ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸಂಪುಟ ಒಪ್ಪಿಗೆ ನೀಡಿದೆ. ಎಷ್ಟೇ ಕಷ್ಟವಾದರೂ ಈ ಯೋಜನೆಗಳ ಅನುಷ್ಠಾನಕ್ಕೆ ನಾವು ಬದ್ಧ' ಎಂದರು.

ಈ ಯೋಜನೆಗಳ ಅನುಷ್ಠಾನದಿಂದಾಗಿ ರಾಜ್ಯ ಸರ್ಕಾರದ ಮೇಲೆ ₹50,000 ಕೋಟಿಯಷ್ಟು ಆರ್ಥಿಕ ಹೊರೆ ಬೀಳಲಿದೆ. ತೆರಿಗೆ ವಸೂಲಿಯಲ್ಲಿ ಕಟ್ಟುನಿಟ್ಟಿನ ಕ್ರಮ ಮತ್ತು ಕೆಲವು ಇಲಾಖೆಗಳಲ್ಲಿ ಹೊಸ ವರಮಾನ ಸಂಗ್ರಹದಿಂದ ಈ ಮೊತ್ತವನ್ನು ಸಂಗ್ರಹಿಸಲು ಸಾಧ್ಯವಿದೆ ಎಂದು ಹೇಳಿದರು.

'ಕಾಂಗ್ರೆಸ್ ಸುಳ್ಳು ಆಶ್ವಾಸನೆಗಳನ್ನು ನೀಡಿದೆ ಎಂಬುದಾಗಿ ಜನರ ದಿಕ್ಕು ತಪ್ಪಿಸಲು ವಿರೋಧ ಪಕ್ಷಗಳು ಯತ್ನಿಸುತ್ತಿವೆ. ಹಿಂದೆ ಎಲ್ಲ ಭರವಸೆ ಈಡೇರಿಸಿದ್ದೆವು. ಈಗಲೂ ಎಲ್ಲ ಕಾರ್ಯಕ್ರಮ ಜಾರಿ ಮಾಡುತ್ತೇವೆ' ಎಂದರು.

ಘಟಾನುಘಟಿ ನಾಯಕರು ಭಾಗಿ
ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ
ಪ್ರಿಯಾಂಕಾ ಗಾಂಧಿ, ಕಾಂಗ್ರೆಸ್ ನಾಯಕಿ
ಅಶೋಕ್ ಗೆಹಲೋತ್, ರಾಜಸ್ಥಾನ ಮುಖ್ಯಮಂತ್ರಿ
ಭೂಪೇಶ್ ಬಘೇಲ್, ಛತ್ತೀಸಗಡ ಮುಖ್ಯಮಂತ್ರಿ
ಸುಖ್ವಿಂದರ್ ಸಿಂಗ್ ಸುಖು, ಹಿಮಾಚಲ ಪ್ರದೇಶ ಮುಖ್ಯಮಂತ್ರಿ
ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ, ಜೆಡಿಯು, ನಾಯಕ
ಎಂ.ಕೆ. ಸ್ಟಾಲಿನ್, ತಮಿಳುನಾಡು ಮುಖ್ಯಮಂತ್ರಿ, ಡಿಎಂಕೆ ನಾಯಕ
ತೇಜಸ್ವಿ ಯಾದವ್, ಬಿಹಾರ ಉಪ ಮುಖ್ಯಮಂತ್ರಿ, ಆರ್‌ಜೆಡಿ ಮುಖಂಡ
ಹೇಮಂತ್ ಸೊರೇನ್, ಜಾರ್ಖಂಡ್ ಮುಖ್ಯಮಂತ್ರಿ, ಜೆಎಂಎಂ ನಾಯಕ
ಶರದ್ ಪವಾರ್, ಎನ್‌ಸಿಪಿ ನಾಯಕ
ಸೀತಾರಾಮ್ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ
ಡಿ. ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ
ಡಾ. ಕಾಕೋಳಿ ದಾಸ್ ಘೋಷ್ ದಸ್ತಿದಾರ್, ಟಿಎಂಸಿ ನಾಯಕಿ
ಪ್ರಿಯಾಂಕಾ ಚತುರ್ವೇದಿ, ಅನಿಲ್ ದೇಸಾಯಿ, ಶಿವಸೇನಾದ ನಾಯಕರು
ಕಮಲ್ ಹಾಸನ್, ಮಕ್ಕಳ್ ನೀಧಿ ಮಯ್ಯಂ ನಾಯಕ
ಫಾರೂಕ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕ
ಮೆಹಮೂಬಾ ಮುಫ್ತಿ, ಪಿಡಿಪಿ ನಾಯಕಿ

ಬಿಜೆಪಿಗೆ ವಿರೋಧ: ಒಗ್ಗಟ್ಟಿಗೆ ಹದ

ಒಂದನೇ ಪುಟದಿಂದ...

ರಾಜಭವನ ಮತ್ತು ವಿಧಾನಸೌಧ ಮುಂಭಾಗ ಹೊರತುಪಡಿಸಿ ಬೃಹತ್ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸಮಾರಂಭ ನಡೆದದ್ದು ಇದು ಎರಡನೇ ಬಾರಿ. 2013ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ, ಇದೇ ಕ್ರೀಡಾಂಗಣದಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ, ಸಿದ್ದರಾಮಯ್ಯ ಒಟ್ಟಿಗೆ ವೇದಿಕೆಗೆ ಬಂದರು. ಗಣ್ಯರು ಕುಳಿತಿದ್ದ ಕಡೆ ತೆರಳಿದ ಸಿದ್ದರಾಮಯ್ಯ, ಎಲ್ಲರಿಗೂ ಹಸ್ತಲಾಘವ ನೀಡಿದರು. ಶಾಸಕರುಗಳಿಂದಲೂ ಅಭಿನಂದನೆ ಸ್ವೀಕರಿಸಿದರು. ನಂತರ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಪರಸ್ಪರ ಕೈಹಿಡಿದುಕೊಂಡು ಒಗ್ಗಟ್ಟು ಪ್ರದರ್ಶಿ-ಸಿದರು. ಅದೇ ವೇಳೆಗೆ ಅಲ್ಲಿಗೆ ಬಂದ ರಾಹುಲ್ ಗಾಂಧಿ ಅವರಿಬ್ಬರ ಮಧ್ಯೆ ನಿಂತು, ಇಬ್ಬರ ಕೈ ಹಿಡಿದುಕೊಂಡು ಮತ್ತೊಮ್ಮೆ ಒಗ್ಗಟ್ಟಿನ ಸಂದೇಶ ರವಾನಿಸಿದರು. ಸಭೆಯತ್ತ ಕೈಬೀಸಿದಾಗ ಭಾರಿ ಕರತಾಡನ, ಜಯ ಘೋಷ ಮೊಳಗಿತು.

12.37ಕ್ಕೆ ರಾಷ್ಟ್ರಗೀತೆಯೊಂದಿ-ಗೆ ಆರಂಭಗೊಂಡ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ, 1.15ಕ್ಕೆ ಸಮಾಪ್ತಿಗೊಂಡಿತು. ವಿವಿಧ ಪಕ್ಷಗಳ ರಾಷ್ಟ್ರೀಯ ಪಕ್ಷಗಳ ನಾಯಕರೂ ಪ್ರಮಾಣವಚನ ಸ್ವೀಕಾರ ಕಾರ್ಯಕ್ರಮದ ವೇಳೆ ವೇದಿಕೆಯಲ್ಲಿಯೇ ಕುಳಿತಿದ್ದರು.

ಪ್ರಮಾಣವಚನ ಸಮಾರಂಭದ ನಂತರ ರಾಜ್ಯಪಾಲರು ನಿರ್ಗಮಿಸುತ್ತಿದ್ದಂತೆ-ಯೇ, ವೇದಿಕೆಯು ರಾಜಕೀಯ ಭಾಷಣಕ್ಕೆ ತೆರೆದುಕೊಂಡಿತು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಾಗೂ ರಾಜ್ಯದ ಬಿಜೆಪಿ ಆಡಳಿತವನ್ನು ಟೀಕಿಸಿದ ನಾಯಕರು, ಸರ್ಕಾರದ ನಡೆಗೆ ಕುಟುಕಿದರು. ಎಐಸಿಸಿ ನಾಯಕರು ಸೇರಿದಂತೆ ಕಾಂಗ್ರೆಸ್ ಹಾಗೂ ತೃತೀಯ ರಂಗದ ನಾಯಕರು ಪರಸ್ಪರ ಕೈ ಕೈ ಹಿಡಿದು ವೇದಿಕೆ ಮೇಲೆ ಒಗ್ಗಟ್ಟು ಪ್ರದರ್ಶಿಸಿದರು. ಆ ನೋಟ, 2024ರಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಯನ್ನು ಒಗ್ಗಟ್ಟಿನಿಂದ ಎದುರಿಸಿ, ಬಿಜೆಪಿಯೇತರ ಸರ್ಕಾರ ರಚಿಸುವ ದಿಸೆಯಲ್ಲಿ ರಾಷ್ಟ್ರ ರಾಜಕಾರಣಕ್ಕೆ ದಿಕ್ಸೂಚಿಯಂತೆ ಬಿಂಬಿತವಾಯಿತು.

ಈ ಹಿಂದೆ, 2018ರ ಮೇ 23ರಂದು ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಮುಖ್ಯ-ಮಂತ್ರಿಯಾಗಿ ಎಚ್.ಡಿ. ಕುಮಾರಸ್ವಾಮಿ, ಉಪ ಮುಖ್ಯಮಂತ್ರಿಯಾಗಿ ಕಾಂಗ್ರೆಸ್‌ನ ಜಿ. ಪರಮೇಶ್ವರ ಅವರು ವಿಧಾನಸೌಧದ ಮೆಟ್ಟಿಲುಗಳ ಮೇಲೆ ಪ್ರಮಾಣವಚನ ಸ್ವೀಕರಿಸಿದಾಗ ಇದೇ ರೀತಿಯಲ್ಲಿ ರಾಷ್ಟ್ರೀಯ ನಾಯಕರು ಒಗ್ಗಟ್ಟು ಪ್ರದರ್ಶಿಸಿದ್ದರು. ಎಐಸಿಸಿ ನಾಯಕಿ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷರಾಗಿದ್ದ ರಾಹುಲ್ ಗಾಂಧಿ, ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಉತ್ತ-ರಪ್ರದೇಶದ ಮಾಯಾವತಿ, ಅಖಿಲೇಶ್ ಯಾದವ್, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಸೀತಾರಾಮ್ ಯೆಚೂರಿ, ಪುದುಚೇರಿಯ ವಿ. ನಾರಾಯಣಸ್ವಾಮಿ, ಅಜಿತ್ ಸಿಂಗ್, ಶರದ್ ಪವಾರ್, ಶರದ್ ಯಾದವ್, ಹೇಮಂತ್ ಸೊರೇನ್ ಸೇರಿದಂತೆ ತೃತೀಯ ರಂಗದ ಹಲವರು ಭಾಗವಹಿಸಿದ್ದರು.

ಸಿಇಟಿ: ರಾಜ್ಯದ 592 ಕೇಂದ್ರಗಳಲ್ಲಿ ಪರೀಕ್ಷೆ

ಮೊದಲ ದಿನ ಸುಸೂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಹಾಗೂ ಇತರೆ ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದಿಂದ ಕಂಠೀರವ ಕ್ರೀಡಾಂಗಣದ ಸುತ್ತಮುತ್ತಲ ಪ್ರದೇಶಗಳಲ್ಲಿ ಸಂಚಾರ ಸಮಸ್ಯೆಗಳ ಹೊರತಾಗಿ ಶನಿವಾರ ನಡೆದ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆ (ಕೆಸಿಇಟಿ) ರಾಜ್ಯದ 592 ಕೇಂದ್ರಗಳಲ್ಲೂ ಸುಸೂತ್ರವಾಗಿ ನೆರವೇರಿತು.

ಹೆಸರು ನೋಂದಾಯಿಸಿಕೊಂ-ಡಿದ್ದ 2,61,610 ಅಭ್ಯರ್ಥಿಗಳಲ್ಲಿ 2,00,457 (82.53%) ಜೀವ ವಿಜ್ಞಾನ ಹಾಗೂ 2,39,716 (93.78%) ಅಭ್ಯರ್ಥಿಗಳು ಗಣಿತ ವಿಷಯದಲ್ಲಿ ಪರೀಕ್ಷೆ ಬರೆದರು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದರು.

ಕೆಇಎ ಸೂಚನೆಯಂತೆ ಅಭ್ಯರ್ಥಿಗಳು ಎರಡು ಗಂಟೆ ಮುಂಚಿತವಾಗಿ ಬೆಂಗಳೂರಿನ ಸಿಇಟಿ ಕೇಂದ್ರಗಳಿಗೆ ತಲುಪಿದರು. ಅವರಿಗೆ ಕಾಲೇಜು ಆಡಳಿತ ಮಂಡಳಿಗಳು ಅಲ್ಲೇ ಉಪಹಾರದ ವ್ಯವಸ್ಥೆ ಮಾಡಿದ್ದವು. ಎಲ್ಲೂ ಅಹಿತಕರ ಘಟನೆಗಳು ವರದಿಯಾಗಿಲ್ಲ. ಆದರೆ, ಪ್ರಮಾಣ ವಚನ ಸ್ವೀಕಾರ ಸಮಾರಂಭ ನಡೆದ ಕಂಠೀರವ ಕ್ರೀಡಾಂಗಣ ಎದುರಿನ ವಿಠಲಮಲ್ಯ ರಸ್ತೆಯ ಸೇಂಟ್ ಜೋಸೆಫ್, ಇಂಡಿಯನ್ ಕಾಂಪೋಸಿಟ್ ಪಿಯು ಕಾಲೇಜು ಕೇಂದ್ರಗಳ ಅಭ್ಯರ್ಥಿಗಳು ಹೊರಗಿನ ಶಬ್ದ ಮಾಲಿನ್ಯದಿಂದ ತೊಂದರೆ ಅನುಭವಿಸಿದರು. ಕೆಲ ಕೇಂದ್ರಗಳಲ್ಲಿ ಅಲ್ಪ ಸಮಯದ ವಿದ್ಯುತ್ ವ್ಯತ್ಯಯದಿಂದ ಬೆಳಕಿನ ಸಮಸ್ಯೆಯಾ-ಗಿತ್ತು.

ಗಣಿತ ವಿಷಯದ ಪ್ರಶ್ನೆಗಳು ಸ್ವಲ್ಪ ಕಠಿಣವಾಗಿದ್ದವು ಎಂದು ವಿದ್ಯಾರ್ಥಿಗಳು ಅಭಿಪ್ರಾಯ ವ್ಯಕ್ತಪಡಿಸಿ-ದರು. ಭಾನುವಾರ ಭೌತ ವಿಜ್ಞಾನ ಮತ್ತು ರಸಾಯನ ವಿಜ್ಞಾನ ವಿಷಯಗಳಿಗೆ ಪರೀಕ್ಷೆ ನಡೆಯಲಿದೆ.

ಸಂಚಾರ ದಟ್ಟಣೆ ಕಾರಣ ಬೆಂಗಳೂರಿನ ಕಂಠೀರವ ಕ್ರೀಡಾಂಗಣದ ಬಳಿಯ ಸಿಇಟಿ ಕೇಂದ್ರಕ್ಕೆ ಶನಿವಾರ ನಡೆದುಬಂದ ಅಭ್ಯರ್ಥಿಗಳು

Karnatak University, Dharwad
KARNATAK ARTS COLLEGE, DHARWAD
DEPARTMENT OF TOURISM STUDIES (UG/PG)

ADMISSION NOTIFICATION 2023-2024

The Karnatak Arts College, Dharwad invites applications for admission to the following courses

100% JOBS

COURSES OFFERED
1. BTTM - Bachelor of Tourism and Travel Management
2. B.Sc. in HM - Bachelor of Science in Hotel Management
3. Diploma in Hotel / Hospitality Services
One Year Career Program.

Eligibility : PUC II pass in Arts/Commerce/Science or Equivalent

Contact
Ph: 0836-2215344 / 2441655
E-mail: kcdmta@yahoo.co.in,
Website: www.kcdtourism.ac.in

ಅತೀ ಕಡಿಮೆ ಶುಲ್ಕ

Sd/- Principal, Karnatak Arts College, Dharwad
Sd/- Registrar, Karnatak University, Dharwad

ಮಹಾನಗರ ಪಾಲಿಕೆ, ವಿಜಯಪುರ
ನಂ:ಮನಪಾ/:ಲೋ.ವಿ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ- /2023-24 ದಿನಾಂಕ:19.05.2023

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **1) ಸನ್ 2022-23 ನೇ ಸಾಲಿನ ಮಹಾನಗರಪಾಲಿಕೆಯ ಅನುದಾನದಲ್ಲಿ 07 ಕಾಮಗಾರಿಗಳು ಮತ್ತು 2) ಸನ್ 2021-22 ನೇ ಸಾಲಿನ ಪಾಲಿಕೆಯ ನಿಧಿ ಶೇ. 24.10 ಯೋಜನೆಯಡಿಯಲ್ಲಿ 01 ಕಾಮಗಾರಿ** ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ-ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ **(https://www.eproc. karnataka.gov.in)** ನಲ್ಲಿ ಪ್ರಕಟಿಸಲಾಗಿದೆ.

1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 29.05.2023

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/08/ಕೆಎಸ್‌ಎಂಸಿಎ/2022-23

ಮಹಾನಗರ ಪಾಲಿಕೆ ಕಾರ್ಯಾಲಯ, ದಾವಣಗೆರೆ.
ನಂ:ದಾಮಪಾ:ಕಾಅ1:ಇ.ಟೆಂಡರ್:02:2023-24 ದಿನಾಂಕ: 17-05-2023

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2019-2020 ರಿಂದ 2023-24 ನೇ ಸಾಲಿನ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಎಂಜಿಎನ್‌ವಿವೈ) - ಪ್ಯಾಕೇಜ್ ನಂ.13 & 2019-2020 ರಿಂದ 2023-24 ನೇ ಸಾಲಿನ ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆ (ಎಂಜಿಎನ್‌ವಿವೈ) ಪ್ರೋತ್ಸಾಹಧನ - ಪ್ಯಾಕೇಜ್ ನಂ.14 ರ ಕಾಮಗಾರಿಗೆ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡಬಲ್ ಕವರ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು/ಏಜನ್ಸಿದಾರರು/ ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ www.eproc.karnataka.gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಮಹಾನಗರ ಪಾಲಿಕೆಯ ಕಛೇರಿಯ ವೆಬ್ ಸೈಟ್ www.davanagerecity.mrc.gov.in ರಲ್ಲಿ ಹಾಗೂ ಇ-ಪ್ರಕ್ಯೂರ್‌ಮೆಂಟ್ ಸಹಾಯಕ ದೂರವಾಣಿ ಸಂಖ್ಯೆ: +91-8046010000, +91-8068948777 ರಿಂದ ಮಾಹಿತಿ ಪಡೆಯಬಹುದು.

ಪ್ರೀ ಬಿಡ್ ಮೀಟಿಂಗ್ ದಿನಾಂಕ & ವೇಳೆ : 13-06-2023 ಸಮಯ : 11.00 ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ : 23-06-2023 ಸಮಯ : 16.30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ : 23-06-2023 ಸಮಯ : 17.00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ವೇಳೆ : 26-06-2023 ಸಮಯ : 11.00 ಆರ್ಥಿಕ ಬಿಡ್ ತೆರೆಯುವ ದಿನಾಂಕ & ವೇಳೆ: 27-06-2023 ಸಮಯ : 11.00

ವಾಸಾಇ/ದಾವಣಗೆರೆ/18/ ಕೆಎಸ್‌ಎಂಸಿಎ/2023-24
ಸಹಿ/- ಕಾರ್ಯಪಾಲಕ ಅಭಿಯಂತರರು (ಸಿವಿಲ್)ಮಹಾನಗರ ಪಾಲಿಕೆ, ದಾವಣಗೆರೆ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಮಾಸಂಅ ಇಲಾಖೆ, ಅಟಲ್ ಬಿಹಾರಿ ವಾಜಪೇಯಿ ಸಂಕೀರ್ಣ,
ಕೇಂದ್ರ ಕಛೇರಿ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು-560027. ಭಾರತ
ದೂರವಾಣಿ:080-22537481, ವೆಬ್‌ಸೈಟ್ : **www.mybmtc.in**
ಸಂಖ್ಯೆ:ಬೆಂಮಸಾಸಂ:ಕೇಕ:ಮಾಸಂಅ/ಎಸ್‌ಸಿಎಸ್‌ಪಿ/ಟಿಎಸ್‌ಪಿ/68/2023-24 ದಿನಾಂಕ: 18.05.2023

ಪ್ರಕಟಣೆ

ಗಿರಿಜನ ಉಪ ಯೋಜನೆ (ಟಿ.ಎಸ್.ಪಿ) ಯೋಜನೆಯಡಿ ಪರಿಶಿಷ್ಟ ಪಂಗಡ (ಎಸ್.ಟಿ)ಗಳ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು ಮತ್ತು ಭಾರಿ ವಾಹನ ಚಾಲನ ತರಬೇತಿ ನೀಡಿ ಪ್ರಾದೇಶಿಕ ಸಾರಿಗೆ ಕಛೇರಿಯಿಂದ **ಚಾಲನ ಅನುಜ್ಞಾಪತ್ರ/ಬ್ಯಾಡ್ಜ್** ನೀಡುವ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ. ಸದರಿ ತರಬೇತಿಯನ್ನು ಪಡೆಯಲು ಇಚ್ಛಿಸುವ ಪರಿಶಿಷ್ಟ ಪಂಗಡ (ಎಸ್.ಟಿ)ಗಳ ಅಭ್ಯರ್ಥಿಗಳು ಹೊಂದಿರಬೇಕಾದ ಕನಿಷ್ಠ ಅರ್ಹತೆಗಳು/ ಸಲ್ಲಿಸಬೇಕಾಗಿರುವ ದಾಖಲಾತಿಗಳ ವಿವರ ಕೆಳಕಂಡಂತೆ ಇರುತ್ತದೆ.

ಲಘು ವಾಹನ ಚಾಲನಾ ತರಬೇತಿ (ಕಾರ್/ಜೀಪ್):
- ಕನಿಷ್ಠ 18 ವರ್ಷ ವಯೋಮಿತಿ ತುಂಬಿರಬೇಕು. ಗರಿಷ್ಠ: 45 ವರ್ಷ.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಅಥವಾ ನೋಟರಿಯಿಂದ ಪ್ರಮಾಣ ಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ-5.

ಭಾರಿ ವಾಹನ ಚಾಲನಾ ತರಬೇತಿ (ಬಸ್):
- ಕನಿಷ್ಠ 20 ವರ್ಷಗಳ ವಯೋಮಿತಿ ಪೂರೈಸಿರಬೇಕು. ಗರಿಷ್ಠ: 45 ವರ್ಷ.
- ಲಘು ವಾಹನ ಚಾಲನಾ ಅನುಜ್ಞಾಪತ್ರ ಪಡೆದು ಒಂದು ವರ್ಷ ಪೂರೈಸಿರಬೇಕು.
- ಜನ್ಮ ದಿನಾಂಕದ ಬಗ್ಗೆ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣ ಪತ್ರ ಅಥವಾ ನೋಟರಿಯಿಂದ ಪ್ರಮಾಣ ಪತ್ರ.
- ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ.
- ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ-5.

❖ **ಅರ್ಹ ಎಸ್.ಟಿ ಅಭ್ಯರ್ಥಿಗಳಿಗೆ ಲಘು/ಭಾರಿ ವಾಹನ ಚಾಲನಾ ತರಬೇತಿ (30 ದಿನಗಳು) ಮತ್ತು ತರಬೇತಿಯ ಅವಧಿಯಲ್ಲಿ ವಸತಿ ಮತ್ತು ಊಟೋಪಚಾರದ ವ್ಯವಸ್ಥೆಯನ್ನು ಉಚಿತವಾಗಿ ನೀಡಲಾಗುತ್ತದೆ.**

ಮೇಲಿನ ಅರ್ಹತೆ ಹೊಂದಿದ್ದು, ಆಸಕ್ತಿ ಇರುವ **ಪರಿಶಿಷ್ಟ ಪಂಗಡದ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳು** ತಮ್ಮ ಮೂಲ ದಾಖಲೆ ಮತ್ತು 02 ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆ, ಒಂದನೆಯ ಮಹಡಿ, ಶಾಂತಿನಗರ ಬಸ್ ನಿಲ್ದಾಣ, ಬೆಂಗಳೂರು-560027 ಇಲ್ಲಿ **ದಿನಾಂಕ: 30.06.2023 ರವರೆಗೆ** ಹೆಸರು ನೋಂದಾಯಿಸಿಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಸಂಸ್ಥೆಯ ವೆಬ್‌ಸೈಟ್ **www.mybmtc.com** ನಿಂದ ಪಡೆಯಬಹುದಾಗಿದೆ. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಗಳು: 080-22537481, 7760991085, 7892529634, 7760576556, 7760991348, 7760979980, 7760991086.

ಸಹಿ/- ಮುಖ್ಯ ಕಾರ್ಮಿಕ ಮತ್ತು ಕಲ್ಯಾಣಾಧಿಕಾರಿ (ಮಾಸಂಅ), ಬೆಂ.ಮ.ಸಾ.ಸಂಸ್ಥೆ

ಪುರಸಭಾ ಕಾರ್ಯಾಲಯ, ಚಂದಾಪುರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560099
ದೂ.ಸಂ: 080-27832411 Email: itstaff_ulb_chandapura@yahoo.com

ಸಂಖ್ಯೆ: ಚಂ.ಪು.ಕಾ/ಪ.ಅ/ಕಸವಿ/ಸಿಆರ್/01/2023-24 ದಿನಾಂಕ: 20.05.2023

ಸಾರ್ವಜನಿಕ ಪ್ರಕಟಣೆ
("ನನ್ನ ಲೈಫ್ ನನ್ನ ಸ್ವಚ್ಛ ನಗರ") (Life Style for Environment))

ಚಂದಾಪುರ ಪುರಸಭೆ ವ್ಯಾಪ್ತಿಯ ಸಮಸ್ತ ನಾಗರೀಕರಿಗೆ ಈ ಮೂಲಕ. ತಿಳಿಯಪಡಿಸುವುದೇನೆಂದರೆ, ಸ್ವಚ್ಛ ಭಾರತ ಮಿಷನ್ ನಗರ-2.0 ಯೋಜನೆಯಡಿ ಮಾನ್ಯ ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಸುತ್ತೋಲೆಯಂತೆ ದಿನಾಂಕ: 20.05.2023 ರಿಂದ 05.06.2023 ರ ವರೆಗೆ "**ಮೇರಿ ಲೈಫ್ ಮೇರಾ ಸ್ವಚ್ಛ ಶಹರ್**" ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ, Reduce/ಕಡಿಮೆಗೊಳಿಸುವುದು, Re use/ಮರುಬಳಕೆ, Recycle/ಪುನರ್ ಬಳಕೆ (RRR) ಕೇಂದ್ರಗಳನ್ನು ಚಂದಾಪುರ ಪುರಸಭೆ ವ್ಯಾಪ್ತಿಯಲ್ಲಿ 2 ಸ್ಥಳಗಳಲ್ಲಿ ತೆರೆಯಲಾಗಿದ್ದು, ಸಾರ್ವಜನಿಕರು/ಎನ್.ಜಿ.ಓ./ಸ್ವಸಹಾಯ ಸಂಘಗಳು ಮತ್ತು ಸ್ವಯಂ ಸೇವಕರು ಹಾಗೂ ಎಲ್ಲಾ 23 ವಾರ್ಡುಗಳ ಸಾರ್ವಜನಿಕರು ಈ ಕೆಳಕಂಡ 6 ವಿವಿಧ ತ್ಯಾಜ್ಯವಸ್ತುಗಳನ್ನು RRR ಕೇಂದ್ರಕ್ಕೆ ದೇಣಿಗೆ ನೀಡುವುದರ ಮೂಲಕ ನೋಂದಣಿ ಮಾಡಿಕೊಳ್ಳುವುದು ಹಾಗೂ ಪ್ರಮಾಣ ಪತ್ರವನ್ನು ಪಡೆಯುವುದರ ಜೊತೆಗೆ ಪರಿಯಾಮವಾಗಿ ಪ್ರೋತ್ಸಾಹಕಗಳನ್ನು ಪಡೆಯಬಹುದಾಗಿದೆ. (ಹೆಚ್ಚಿನ ಮಾಹಿತಿಗಾಗಿ ಪುರಸಭೆಯ ಆರೋಗ್ಯ ಶಾಖೆಯಲ್ಲಿ ಕಚೇರಿ ವೇಳೆ ಮಾಹಿತಿ ಪಡೆಯಬಹುದಾಗಿದೆ).

(RRR) ಕೇಂದ್ರಗಳಿಗೆ ನೀಡಬೇಕಾದ ತ್ಯಾಜ್ಯ ವಸ್ತುಗಳು (6 ವಿಧ)

ತ್ಯಾಜ್ಯ ವಸ್ತುಗಳ ವಿವರ: ಪ್ರೋತ್ಸಾಹ: (1) ಆಟಿಕೆಗಳು: ಸ್ಟೇಷನರಿ ವಸ್ತುಗಳು (ಉದಾ: ಪರಿಸರ ಸ್ನೇಹಿ ಪೆನ್, ಮರು ಬಳಕೆಯ ಪುಸ್ತಕ). (2) ಬಟ್ಟೆ-ಹಳೆಯ ಜೀನ್ಸ್, ಸಮವಸ್ತ್ರ ಮತ್ತು ಸೀರೆಗಳು (ಮರುಬಳಕೆ ಮಾಡಬಹುದಾದ ಬಟ್ಟೆಗಳು): ಕಪ್ಪು ಚಿನ್ನ (ಸಾವಯವ ಗೊಬ್ಬರ. (3) ದಿನ ಪತ್ರಿಕೆ/ಮಾಸ ಪತ್ರಿಕೆಗಳು: ಲೇಖನ ಸಾಮಗ್ರಿಗಳು (ಉದಾ: ಪರಿಸರ ಸ್ನೇಹಿ ಪೆನ್, ಮರು ಬಳಕೆಯ ಪುಸ್ತಕ). (4) ಹಳೆಯ ಪುಸ್ತಕಗಳು: ಲೇಖನ ಸಾಮಗ್ರಿಗಳು (ಉದಾ: ಪರಿಸರ ಸ್ನೇಹಿ ಪೆನ್, ಮರು ಬಳಕೆಯ ಪುಸ್ತಕ). (5) ಪ್ಲಾಸ್ಟಿಕ್ ಚೀಲಗಳು / ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್‌ಗಳು: ಪ್ರತಿ 250 ಗ್ರಾಂ ಪ್ಲಾಸ್ಟಿಕ್ ಚೀಲಗಳಿಗೆ 1 ಕೆಜಿ ಸಾಮರ್ಥ್ಯದ ಬಟ್ಟೆಯ ಚೀಲ. (6) ಎಲೆಕ್ಟ್ರಾನಿಕ್ ವಸ್ತುಗಳು: ಡಿಜಿಟಲ್ ಪ್ರಮಾಣ ಪತ್ರ.

(RRR) ಕೇಂದ್ರಗಳ ವಿವರ:

(1) **(RRR) ಕೇಂದ್ರಗಳ ವಿಳಾಸ:** ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ-ಹೀಲಲಿಗೆ ರಂಗಮಂದಿರ: **ಕಾರ್ಯನಿರ್ವಹಿಸುವ ಅವಧಿ ಮತ್ತು ಸಮಯ:** ದಿನಾಂಕ: 20.05.2023 ರಿಂದ ದಿನಾಂಕ: 05.06.2023 ರ ವರೆಗೆ, ಸಮಯ ಬೆಳಿಗ್ಗೆ 9:00 ರಿಂದ ಮಧ್ಯಾಹ್ನ 1:00 ಗಂಟೆಯವರೆಗೆ. (2) ವಾರ್ಡ್ ನಂ. 15ರ ಚಂದಾಪುರ ವೃತ್ತ.

ಸಹಿ/- ಮುಖ್ಯಾಧಿಕಾರಿ ಪುರಸಭೆ, ಚಂದಾಪುರ
DIPR/CP/91/GREENFMC/2023-24

ಸಂಘರ್ಷ ಪರಿಹಾರಕ್ಕೆ ಸಹಕಾರ: ಝೆಲೆನ್‌ಸ್ಕಿಗೆ ಮನವರಿಕೆ

ಉಕ್ರೇನ್‌ಗೆ ಸಹಕಾರ: ಮೋದಿ

ಹಿರೋಷಿಮಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜೊತೆ ಮಾತುಕತೆ ನಡೆಸಿದರು.

ಇಲ್ಲಿ ನಡೆಯುತ್ತಿರುವ ಜಿ7 ಶೃಂಗ ಸಭೆಯಲ್ಲಿ ಜಪಾನ್‌ನ ಆಹ್ವಾನದ ಮೇರೆಗೆ ಝೆಲೆನ್‌ಸ್ಕಿ ಪಾಲ್ಗೊಂಡಿದ್ದಾರೆ. ಉಕ್ರೇನ್ ಮೇಲೆ ರಷ್ಯಾ ಯುದ್ಧ ಘೋಷಿಸಿ ಒಂದೂವರೆ ವರ್ಷ ಕಳೆದಿದ್ದು, ಆ ಬಳಿಕ ಈ ಇಬ್ಬರೂ ನಾಯಕರು ಮುಖಾಮುಖಿಯಾಗಿದ್ದು ಇದೇ ಮೊದಲು.

‘ಈ ಸಂಘರ್ಷವನ್ನು ನಾನು ರಾಜಕೀಯ ಹಾಗೂ ಆರ್ಥಿಕ ನೆಲೆಗಟ್ಟಿನಡಿ ನೋಡುವುದಿಲ್ಲ. ಮಾನವೀಯತೆಯ ತಳಹದಿ ಮೇಲೆ ನೋಡುತ್ತೇನೆ. ಸಂಘರ್ಷ ನಿವಾರಣೆಗೆ ಅಗತ್ಯ ಇರುವ ಎಲ್ಲಾ ನೆರವು, ಸಹಕಾರವನ್ನು ಭಾರತ ನೀಡಲಿದೆ’ ಎಂದು ಝೆಲೆನ್‌ಸ್ಕಿಗೆ ಮೋದಿ ಮನವರಿಕೆ ಮಾಡಿಕೊಟ್ಟರು.

‘ಈ ಯುದ್ಧ ಜಾಗತಿಕ ವಿಷಯವಾಗಿದೆ. ಹಲವು ರಾಷ್ಟ್ರಗಳ ಮೇಲೆ ಗಂಭೀರ ಪರಿಣಾಮ ಬೀರಿದೆ. ಉಕ್ರೇನ್‌ನಲ್ಲಿ ಓದುತ್ತಿದ್ದ ಭಾರತೀಯ ವೈದ್ಯಕೀಯ ವಿದ್ಯಾರ್ಥಿಗಳಿಗೂ ಇದರ ಬಿಸಿತಟ್ಟಿದ್ದು, ಅವರು ತಾಯ್ನಾಡಿಗೆ ಮರಳಿದ್ದಾರೆ. ಯುದ್ಧದಿಂದ ನೀವು ಮತ್ತು ಉಕ್ರೇನ್ ಪ್ರಜೆಗಳು ಅನುಭವಿಸುತ್ತಿರುವ ಯಾತನೆಯ ಅರಿವು ನನಗಿದೆ’ ಎಂದು ಮೋದಿ ಹೇಳಿದರು.

‘ನಾವು ದೂರವಾಣಿಯಲ್ಲಷ್ಟೇ ಮಾತುಕತೆ ನಡೆಸಿದ್ದವು. ಮುಖಾಮುಖಿ ಭೇಟಿಗೆ ಅವಕಾಶ ಲಭಿಸಿರಲಿಲ್ಲ. ಯುದ್ಧಕ್ಕೆ ಪರಿಹಾರ ಕಂಡು ಹಿಡಿಯುವ ಸಂಬಂಧ ಅಗತ್ಯವಿರುವ ಎಲ್ಲಾ ಸಹಕಾರಕ್ಕೆ ತಾವು ಬದ್ಧ’ ಎಂದು ಅವರು.

ಈ ನಿಯೋಗದಲ್ಲಿ ವಿದೇಶಾಂಗ ಸಚಿವ ಜೈಶಂಕರ್, ಭಾರತದ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಹಾಜರಿದ್ದರು.

ಜಪಾನ್, ವಿಯೆಟ್ನಾಂ, ಫ್ರಾನ್ಸ್, ಜರ್ಮನಿ ನಾಯಕರು ಹಾಗೂ ಕ್ವಾಡ್ ಮುಖ್ಯಸ್ಥರ ಜೊತೆ ಮೋದಿ ಮಾತುಕತೆ ನಡೆಸಿದರು.

ಮೋದಿ- ಬೈಡನ್ ಭೇಟಿ: ಇಲ್ಲಿ ಆರಂಭವಾಗಿರುವ ಜಿ-7 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಜೊ ಬೈಡನ್ ಅವರು ಮುಖಾಮುಖಿಯಾದರು. ಪರಸ್ಪರ ಶುಭಾಶಯ ವಿನಿಮಯ ಮಾಡಿಕೊಂಡ ಉಭಯ ನಾಯಕರು, ನಂತರ ಬಿಗಿದಪ್ಪಿಕೊಂಡು ಗಮನ ಸೆಳೆದರು.

ಮುಂದಿನ ತಿಂಗಳು ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ. ಹೀಗಾಗಿ ಉಭಯ ನಾಯಕರ ಇಂದಿನ ಭೇಟಿಗೆ ಮಹತ್ವ ಬಂದಿದೆ.

ಜಪಾನ್‌ನ ಹಿರೋಷಿಮಾದಲ್ಲಿ ನಡೆಯುತ್ತಿರುವ ಜಿ7 ಶೃಂಗ ಸಭೆಯಲ್ಲಿ ಪಾಲ್ಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ಶನಿವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಜೊತೆ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಯುದ್ಧ ಸ್ಥಗಿತಗೊಳಿಸಲು ರಷ್ಯಾಕ್ಕೆ ತಾಕೀತು

ಚೀನಾ ಮೇಲೆ ಒತ್ತಡ: ಉಕ್ರೇನ್‌ಗೆ ಜಿ7 ನಾಯಕರ ಬೆಂಬಲ ಘೋಷಣೆ

ಹಿರೋಷಿಮಾ (ಪಿಟಿಐ): ಉಕ್ರೇನ್ ಮೇಲಿನ ಮಿಲಿಟರಿ ಕಾರ್ಯಾಚರಣೆಯ ಸ್ಥಗಿತಕ್ಕೆ ರಷ್ಯಾ ಮೇಲೆ ಒತ್ತಡ ಹೇರುವಂತೆ ಚೀನಾಕ್ಕೆ ಜಿ7 ರಾಷ್ಟ್ರಗಳು ಒತ್ತಾಯಿಸಿವೆ.

ಶನಿವಾರ ಒಕ್ಕೂಟದ ನಾಯಕರು ಈ ಕುರಿತು ಜಂಟಿ ಹೇಳಿಕೆ ಬಿಡುಗಡೆಗೊಳಿಸಿದ್ದು, ‘ಚೀನಾಕ್ಕೆ ಹಾನಿ ಮಾಡುವ ಅಪೇಕ್ಷೆ ನಮಗಿಲ್ಲ. ಅದರೊಟ್ಟಿಗೆ ರಚನಾತ್ಮಕ ಹಾಗೂ ಸುಸ್ಥಿರ ಬಾಂಧವ್ಯವನ್ನು ಎದುರು ನೋಡುತ್ತಿದ್ದೇವೆ. ನಮ್ಮ ಕಾಳಜಿಯನ್ನಷ್ಟೇ ಅದರ ಮುಂದಿಡುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

‘ಉಕ್ರೇನ್ ಮೇಲೆ ನಡೆಸುತ್ತಿರುವ ಯುದ್ಧವನ್ನು ಕೂಡಲೇ ರಷ್ಯಾ ಸ್ಥಗಿತಗೊಳಿಸಬೇಕು. ಯಾವುದೇ ಷರತ್ತು ಇಲ್ಲದೆ ಮಿಲಿಟರಿ ಪಡೆಗಳನ್ನು ಸಂಘರ್ಷ ಪೀಡಿತ ನೆಲದಿಂದ ಹಿಂದಕ್ಕೆ ಕರೆಯಿಸಿಕೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

‘ವಿಶ್ವಸಂಸ್ಥೆಯ ಸನ್ನದುಗಳ ಅನ್ವಯ ಉಕ್ರೇನ್‌ನಲ್ಲಿ ಶಾಂತಿ ನೆಲೆಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಚೀನಾ ಕೈಗೊಳ್ಳುವ ಎಲ್ಲಾ ಕ್ರಮಗಳಿಗೆ ಒಕ್ಕೂಟವು ಸಂಪೂರ್ಣ ಸಹಕಾರ ನೀಡಲಿದೆ’ ಎಂದಿದ್ದಾರೆ.

ಜಾಗತಿಕ ಸವಾಲುಗಳ ಪರಿಹಾರಕ್ಕೆ ಒಕ್ಕೂಟ ಆದ್ಯತೆ ನೀಡಲಿದೆ. ಹವಾಮಾನ ಬದಲಾವಣೆ, ಜೀವವೈವಿಧ್ಯ, ದುರ್ಬಲ ರಾಷ್ಟ್ರಗಳಿಗೆ ಆರ್ಥಿಕ ನೆರವು, ಆರೋಗ್ಯ ಮತ್ತು ಆರ್ಥಿಕ ಸುಸ್ಥಿರತೆ ಬಗ್ಗೆ ಜಿ7 ರಾಷ್ಟ್ರಗಳೊಟ್ಟಿಗೆ ಚೀನಾದ ಸಹಕಾರವೂ ಬೇಕಿದೆ ಎಂದು ಪ್ರತಿಪಾದಿಸಿದ್ದಾರೆ.

ತೈವಾನ್‌ನನ್ನು ಸಮುದ್ರ ಮತ್ತು ವಾಯು ಸಂಚಾರಗಳಿಂದ ಕಟ್ಟಿ ಹಾಕುವ ಸಂಬಂಧ ಇತ್ತೀಚೆಗೆ ಚೀನಾವು ಈ ದ್ವೀಪ ರಾಷ್ಟ್ರದ ಸುತ್ತ ಸಮರಾಭ್ಯಾಸ ನಡೆಸಿದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಜಿ7 ನಾಯಕರು, ‘ತೈವಾನ್‌ಗೆ ಸಂಬಂಧಿಸಿದಂತೆ ಚೀನಾವು ಶಾಂತಿಯುತ ನಿರ್ಣಯ ಕೈಗೊಳ್ಳಬೇಕು’ ಎಂದು ಹೇಳಿದ್ದಾರೆ.

‘ಕಾನೂನಿನ ಚೌಕಟ್ಟಿನಲ್ಲಿ ದಕ್ಷಿಣ ಚೀನಾ ಸಮುದ್ರದ ಮೇಲೆ ಹಕ್ಕು ಮಂಡಿಸಲು ಚೀನಾಕ್ಕೆ ಅವಕಾಶವಿಲ್ಲ. ಈ ಭಾಗದಲ್ಲಿ ಮಿಲಿಟರಿ ಶಕ್ತಿ ಹೆಚ್ಚಳಕ್ಕೆ ಒತ್ತು ನೀಡಿರುವ ಕ್ರಮವೂ ಸರಿಯಲ್ಲ’ ಎಂದು ವಿರೋಧ ವ್ಯಕ್ತಪಡಿಸಿದ್ದಾರೆ.

ಟಿಬೆಟ್, ಹಾಂಗ್‌ಕಾಂಗ್ ಹಾಗೂ ಕ್ಸಿನ್‌ಜಿಯಾಂಗ್ ಪ್ರದೇಶದಲ್ಲಿ ಚೀನಾ ನಡೆಸುತ್ತಿರುವ ದಬ್ಬಾಳಿಕೆಯಿಂದ ಮಾನವ ಹಕ್ಕುಗಳು ಉಲ್ಲಂಘನೆಯಾಗುತ್ತಿರುವ ಬಗ್ಗೆ ನಾಯಕರು ಕಳವಳ ವ್ಯಕ್ತಪಡಿಸಿದ್ದಾರೆ.

ಜಿ7 ನಾಯಕರ ಹೇಳಿಕೆ ಬಗ್ಗೆ ಚೀನಾ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ. ಚೀನಾದ ಸರ್ಕಾರಿ ಸ್ವಾಮ್ಯದ ಕ್ಸಿನ್ಹುವಾ ನ್ಯೂಸ್ ಏಜೆನ್ಸಿಯು ತನ್ನ ಸಂಪಾದಕೀಯದಲ್ಲಿ ಕಟುವಾಗಿ ಟೀಕಿಸಿದೆ.

‘ಜಂಟಿ ಹೇಳಿಕೆಯು ಮಾಟಗಾತಿಯರ ತಂತ್ರದಂತಿದೆ. ನಮ್ಮನ್ನು ಬೆದರಿಸುವ ತಂತ್ರದ ಭಾಗವಾಗಿದೆ. ಈ ತಂತ್ರಕ್ಕೆ ಅಮೆರಿಕ ಮೊದಲು ನೀರೆರೆದಿದೆ. ಆದರೆ, ಹಲವು ವರ್ಷಗಳಿಂದ ಅಮೆರಿಕವು ಯಾವ ರೀತಿ ಚೀನಾವನ್ನು ಶೋಷಣೆಗೆ ಒಳಪಡಿಸಿದೆ ಎಂಬುದನ್ನು ಮಿತ್ರ ರಾಷ್ಟ್ರಗಳು ಮೊದಲು ಅರಿಯಬೇಕು’ ಎಂದು ಹೇಳಿದೆ.

ಗಾಂಧಿ ಪುತ್ಥಳಿ ಅನಾವರಣ

ಹಿರೋಷಿಮಾ(ಪಿಟಿಐ): ಜಿ7 ಶೃಂಗ ಸಭೆಯಲ್ಲಿ ಪಾಲ್ಗೊಂಡಿರುವ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಇಲ್ಲಿ ಮಹಾತ್ಮ ಗಾಂಧಿಯ ಪುತ್ಥಳಿಯನ್ನು ಅನಾವರಣಗೊಳಿಸಿದರು.

1945ರಲ್ಲಿ ಅಮೆರಿಕ ನಡೆಸಿದ ಪರಮಾಣು ಬಾಂಬ್ ದಾಳಿಗೆ ನಲುಗಿದ್ದ ಹಿರೋಷಿಮಾದಲ್ಲಿ ಶಾಂತಿ ಮತ್ತು ಅಹಿಂಸೆ, ಒಗ್ಗಟ್ಟಿನ ಪ್ರತೀಕವಾಗಿ ಈ ಪುತ್ಥಳಿ ಪ್ರತಿಷ್ಠಾಪಿಸಲಾಗಿದೆ. 42 ಇಂಚು ಎತ್ತರದ ಈ ಕಂಚಿನ ಪುತ್ಥಳಿಯ ನಿರ್ಮಾತೃ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ರಾಮ್ ವಂಜಿ ಸುತಾರ್. ಪ್ರತಿದಿನ ಸಾವಿರಾರು ಪ್ರವಾಸಿಗರು ಭೇಟಿ ನೀಡುವ ಮೊಟೊಯಾಸು ನದಿ ತೀರಕ್ಕೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಇದನ್ನು ಪ್ರತಿಷ್ಠಾಪಿಸಲಾಗಿದೆ.

ಬಳಿಕ ಮಾತನಾಡಿದ ಮೋದಿ, ‘ವಿಶ್ವದ ಪ್ರತಿಯೊಬ್ಬರಿಗೂ ಗಾಂಧೀಜಿ ಅವರ ಶಾಂತಿ ಮತ್ತು ಸಾಮರಸ್ಯ ಕುರಿತ ಸಂದೇಶಗಳು ದಾರಿದೀಪವಾಗಿವೆ’ ಎಂದರು.

ಜಪಾನ್ ಪ್ರಧಾನಿ ಫುಮಿಯೊ ಕಿಶಿದಾ ಕಳೆದ ಮಾರ್ಚ್‌ನಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಈ ವೇಳೆ ಮೋದಿ ನೀಡಿದ್ದ ಬೋಧಿ ವೃಕ್ಷವನ್ನು ಅವರು ಹಿರೋಷಿಮಾದಲ್ಲಿ ನೆಟ್ಟಿದ್ದಾರೆ. ಇದಕ್ಕೆ ಮೋದಿ ಅಭಿನಂದನೆ ಸಲ್ಲಿಸಿದ್ದಾರೆ.

ಪ್ರಧಾನಿ ಮೋದಿ ಅವರು ಮಹಾತ್ಮ ಗಾಂಧಿಯ ಪುತ್ಥಳಿ ಅನಾವರಣಗೊಳಿಸಿದರು –ಪಿಟಿಐ ಚಿತ್ರ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ನರಸಪ್ಪರೆಡ್ಡಿರವರು
ದಿನಾಂಕ:11–05–2023ನೇ ಗುರುವಾರ ಸಂಜೆ 06:11ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಇವರ
ವೈಕುಂಠ ಸಮಾರಾಧನೆಯನ್ನು
ದಿನಾಂಕ: 21–05–2023ನೇ ಭಾನುವಾರ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ದುಃಖಿತಪ್ತರು: ಶ್ರೀಮತಿ ಮತ್ತು ಶ್ರೀ ಎನ್. ಹೇಮಚಂದ್ರ (ಸತೀಶ್ ರೆಡ್ಡಿ) ಹಾಗೂ ಕುಟುಂಬ ವರ್ಗದವರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Cook

ಬೇಕಾಗಿದ್ದಾರೆ. ವೆಜ್ ಮತ್ತು ನಾನ್‌ವೆಜ್ ಅಡುಗೆ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು 30 ರಿಂದ 35 ಒಳಗೆ ಉತ್ತಮ ಸಂಬಳದೊಂದಿಗೆ. ಸ್ಥಳ: ರಾಜರಾಜೇಶ್ವರಿನಗರ ಬೆಂಗಳೂರು. ಆಸಕ್ತರು ಕೂಡಲೇ ಸಂಪರ್ಕಿಸಿ : 6364202857, 8951739998

WALK-IN INTERVIEW
CLUSTER / BRANCH MANAGER
• Min 4 Yrs Exp in TW Sales
• Team Handling and Good Dealer Management
Salary Negotiable
ORANGE RETAIL FINANCE INDIA PRIVATE LTD
Interview on 24th & 25th May 2023 @ Shakthi Sanvi Plaza, 1st Floor, Airport Road, Near Trishna Hotel, Padavinangady, Mangalore - 575 008.
Contact person: Karthikeyan J
87544 87254

50 ಎಕರೆ ಜಮೀನಿಗೆ ಫಾರಂ/ ಅಗ್ರಿಕಲ್ಚರಲ್ ಸೂಪರ್‌ವೈಸರ್ ಬೇಕಾಗಿದ್ದಾರೆ. ವೇತನರೂ. 18000/- ಉಚಿತ ವಸತಿಸೌಲಭ್ಯ. ಬಿಎಸ್ಸಿ ಅಗ್ರಿ ಅಥವಾ ಅನುಭವಿ ಅಭ್ಯರ್ಥಿಗಳು ಸಂಪರ್ಕಿಸಿ: 9108270569

Wanted

ಬೇಕಾಗಿದ್ದಾರೆ: ಅಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

ಬೇಕಾಗಿದ್ದಾರೆ: ಅಡಿಕೆ, ಕಾಫಿ ತೋಟದಲ್ಲಿ ಕೆಲಸಮಾಡಲು ನುರಿತ ಕೆಲಸಗಾರರು ಫ್ಯಾಮಿಲಿ ಬೇಕಾಗಿದ್ದಾರೆ. ಸ್ಥಳ: ಮೂಡಿಗೆರೆ ತಾಲೂಕು, ಉಚಿತ ವಸತಿ ವ್ಯವಸ್ಥೆಯಿದೆ. 9343342120

Hospital & Medical Jobs

URGENTLY REQUIRED NURSES IN HOSPITAL
7th Cross Road, Dasarahalli Circle, 5th Main Road, 775, 8th Cross Road, Near Veeresh Theater, MC Layout, Vijayanagar, Bengaluru - 560 040

Post	No.of Post	Qualification	Experience Required	Salary
“Staff Nurse” in Govt. (BBMP Bengaluru) on Contract	62	B.Sc. Nursing Recognized from Karnataka Nursing Council	Freshers eligible (No Experience Required)	Monthly CTC Rs. 23, 500/- P.M.,

OTHER BENEFITS: Salary revisions every 6-months, Only 8-hours Shift, Overtime Extra, Date of Interview - 19-05-2023 to 31-05-2023, Contact (Call or Whatsapp): Santosh - 8884398469, Mohd Shuaib - 7090608608, Madhav - 8073905797, Email ID-madhavmac@yahoo.co.in. Contract on M/s GA Digital Web Word Pvt.Ltd.(GAD), Bengaluru.

General

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತು ಸಪ್ಲೈಯರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ.ಸಂಪರ್ಕಿಸಿ: 8892491613, 9739013813

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

ನೇರ ನೇಮಕಾತಿ A Leading Construction Material Testing Laboratory “Structwel Designers & Consultants Pvt. Ltd”, ಪೀಣ್ಯ ಕೈಗಾರಿಕಾ ಎಸ್ಟೇಟ್‌ನಲ್ಲಿ ಕೆಳಗಿನ ಖಾಲಿ ಹುದ್ದೆಗಳಿಗೆ ನೇಮಕಾತಿ TECHNICIAN DCE/ ITI ಶಿಕ್ಷಣದೊಂದಿಗೆ ಕನಿಷ್ಠ 2 4 ವರ್ಷಗಳ ಅನುಭವ ಹೊಂದಿರಬೇಕು. DATA ENTRY OPERATOR ಯಾವುದೇ ಪದವಿಯೊಂದಿಗೆ ಕನಿಷ್ಠ 24 ವರ್ಷಗಳ ಅನುಭವ ಜೊತೆಗೆ ಕಂಪ್ಯೂಟರ್ ಕಾರ್ಯಾಚರಣೆಯ ಜ್ಞಾನವನ್ನು ಹೊಂದಿರಬೇಕು. SALES & RECOVERY ಯಾವುದೇ ಪದವಿಯೊಂದಿಗೆ ಕನಿಷ್ಠ 2 4 ವರ್ಷಗಳ ಅನುಭವ. ಸಂಪರ್ಕಿಸಿ: 7676344002, shalini.shetty@structwel.com

Part-Time Jobs

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ.ಕೊರಿಯರ್ ಇದೆ. 8050064329, 8050064330.

Teachers/ Professors

WANTED TEACHERS for High School English , Primary , Office Staff . 9916443317 9845634537.

PROPERTY CORNER

WANTED LAND
IRON / STEEL FOUNDARY IN KARNATAKA
A Bangalore-Based Pvt Ltd., Company is interested in the outright purchase of any Iron / Steel Foundry which is located in Karnataka preferably in any KIADB or Industrial Area having all the permission from the Government to Operate. Companies having a land area of 8 to 10 Acres and power sanction of 4000-5000 KVA on 33/132 KVA line.
Proposed Industries can be any running Industry or Sick industry where owners are interested in selling the company.
Interested parties may contact - Mr. Janaki Rama Reddy
Call: 95380 87449
E-Mail: reddy.rama1984@gmail.com

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

North

SALE- 30 x 40 site in Andhrahalli D group, North facing, 62 lakhs, 8867208808

South

NORTH FACING Plot measuring 1320 square feet for sale in Gubbalalu, Uttarahalli.Contact 9620491250/9900329649.

ಪ್ರವಾಸ

Travel

1.6.2023 ದೆಹಲಿ, ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ, 11.6.2023ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ,ನೈಮೀಶರಣ್ಯ, ಅಯೋಧ್ಯಾ, ಕಾಶಿ,ಗಯಾ 29.6.2023 ಅಮರ್‌ನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್(ಹನುಮಂತನಗರ) 9482435755, 9845035349

★ಶ್ರೇಯಸ್ ಟೂರ್ಸ್★ 15.06.2023 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಟಕ,ಮಯ್ಯಾರ್ ಸಹಿತ).20.06.2023 8ದಿನಗಳು ಕಾಶಿ ನೈಮಿಷಾರಣ್ಯ ಪ್ರಯಾಗ,ಗಯಾ,ಅಯೋಧ್ಯೆ ಇತರೆ.,10.07.2023 12ದಿನಗಳು ಅಮರನಾಥಯಾತ್ರಾ ಲೇ,ಲಡಾಖ್.,23.07.2023 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.20.06.2023 11ದಿನಗಳು ಚಂಡೀಗಡ್ ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ,ದೆಹಲಿ. 8073824856, 6366322639, 9206979202

Holiday Package Tours

25.5.2023, 4 ದಿನ. ಕದ್ರಿಮಂಜುನಾಥ, ಕಟೀಲು, ಮಲ್ಪೆಬೀಚ್, ಸ್ವಾಮಿಕೊರಗಜ್ಜ ಆದಿಸ್ಥಳ, ಪೊಳಲಿರಾಜರಾಜೇಶ್ವರಿ, ಧರ್ಮಸ್ಥಳ,ಸೌದಡ್ಕ, ಪಜಕಕ್ಷೇತ್ರ, ಮಂಗಳದೇವಿ ಇತ್ಯಾದಿ. 9481433157

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 22/06 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್. 01/06 ಗುರುವಾಯೂರು, ಕೊಚ್ಚಿನ್, ಆಲೆಪ್ಪಿ. 22/06 ಕಾಶಿ ಪ್ರವಾಸ. 9964527782, 9591017782

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣ, ಶತ್ರುಕಾಟ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 9844174018

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂಕ್ಷಿಪ್ತ ಸುದ್ದಿ

ಒಬಾಮ ಸೇರಿ ಅಮೆರಿಕದ 500 ಮಂದಿಗೆ ನಿರ್ಬಂಧ ಹೇರಿದ ರಷ್ಯಾ

ಮಾಸ್ಕೊ (ಎಪಿ): ಅಮೆರಿಕ ವಿಧಿಸಿರುವ ಹೊಸ ನಿರ್ಬಂಧಗಳಿಗೆ ಪ್ರತಿಯಾಗಿ, ರಷ್ಯಾ 500 ಮಂದಿ ಅಮೆರಿಕನ್ನರಿಗೆ ತನ್ನ ದೇಶ ಪ್ರವೇಶಿಸದಂತೆ ಶುಕ್ರವಾರ ನಿರ್ಬಂಧ ಹೇರಿದೆ. ಇದರಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಮತ್ತು ಹಾಸ್ಯನಟ ಕೋಲ್ಬರ್ಟ್ ಸಹ ಇದ್ದಾರೆ.

ನಿರ್ಬಂಧಕ್ಕೊಳಗಾದವರ ಪಟ್ಟಿ ಬಿಡುಗಡೆ ಮಾಡಿರುವ ರಷ್ಯಾದ ವಿದೇಶಾಂಗ ಸಚಿವಾಲಯವು ಯಾರೊಬ್ಬರ ವಿರುದ್ಧದ ದೂರನ್ನು ನಿರ್ದಿಷ್ಟವಾಗಿ ನಮೂದಿಸಿಲ್ಲ. ಆದರೆ, ‘ರಷ್ಯಾದ ಬಗ್ಗೆ ಭಯ ಹರಡಿರುವವರು, ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸಿದವರ ವಿರುದ್ಧ ನಿರ್ಬಂಧಗಳನ್ನು ಹೇರಲಾಗಿದೆ’ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ.

ಅಮೆರಿಕದ ಮೇಲ್ಮನೆ ಹಾಗೂ ಕೆಳಮನೆಯ 45 ಸದಸ್ಯರು, ಜೆ.ಡಿ. ವಾನ್ಸ್, ಕಾಟಿ ಬ್ರಿಟ್, ಎರಿಕ್ ಶ್ಮಿಟ್, ಅಮೆರಿಕದ ಮಾಜಿ ರಾಯಭಾರಿಗಳಾದ ಜಾನ್ ಟೆಫ್ಟ್ ಹಾಗೂ ಜಾನ್ ಹಂಟ್ಸ್‌ಮ್ಯಾನ್ ಅವರು ನಿರ್ಬಂಧದ ಪಟ್ಟಿಯಲ್ಲಿದ್ದಾರೆ.

ದಿ ವಾಲ್ ಸ್ಟ್ರೀಟ್ ಜರ್ನಲ್‌ನ ವರದಿಗಾರ ಇವಾನ್ ಗೆರ್‌ಷ್ಕೊವಿಚ್ ಅವರಿಗೆ ಕಾನ್ಸುಲೇಟ್ ಪ್ರವೇಶಕ್ಕೆ ಅನುಮತಿ ನೀಡಬೇಕು ಎಂಬ ಅಮೆರಿಕದ ವಿನಂತಿಯನ್ನೂ ರಷ್ಯಾ ತಿರಸ್ಕರಿಸಿದೆ ಎಂದು ಸಚಿವಾಲಯ ಹೇಳಿದೆ.

ಇಮ್ರಾನ್ ಬೆಂಬಲಿಗರ ಬಿಡುಗಡೆಗೆ ಆದೇಶ

ಲಾಹೋರ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ 123 ಬೆಂಬಲಿಗರನ್ನು ಬಿಡುಗಡೆಗೊಳಿಸಬೇಕೆಂದು ಲಾಹೋರ್ ಹೈಕೋರ್ಟ್ ಶನಿವಾರ ಆದೇಶಿಸಿದೆ.

ಮೇ 9ರಂದು ಇಮ್ರಾನ್ ಖಾನ್ ಅವರನ್ನು ಬಂಧಿಸಿದ ಬಳಿಕ ಪಂಜಾಬ್ ಪ್ರಾಂತ್ಯದಲ್ಲಿ ಭುಗಿಲೆದ್ದಿದ್ದ ಪ್ರತಿಭಟನೆ ವೇಳೆ ಈ ಬೆಂಬಲಿಗರನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು.

ಬಂಧನಕ್ಕೊಳಪಟ್ಟಿರುವ ತಮ್ಮ ಪಕ್ಷದ ಕಾರ್ಯಕರ್ತರನ್ನು ಬಿಡುಗಡೆಗೊಳಿಸಲು ಆದೇಶಿಸಬೇಕೆಂದು ಕೋರಿ, ಲಾಹೋರ್ ಹೈಕೋರ್ಟ್‌ಗೆ ಪಿಟಿಐ ನಾಯಕ ಫಾರುಕ್ ಹಬೀಬ್ ಅವರು ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನ್ವರುಲ್ ಹಕ್ ಅವರು, ಪಕ್ಷದ ಕಾರ್ಯಕರ್ತರನ್ನು ಯಾವುದೇ ವಿಳಂಬವಿಲ್ಲದೇ ಬಿಡುಗಡೆ ಮಾಡಬೇಕು ಎಂದು ಸರ್ಕಾರಕ್ಕೆ ಆದೇಶಿಸಿದ್ದಾರೆ ಎಂದು ದಿ ಡಾನ್ ಪತ್ರಿಕೆ ವರದಿ ಮಾಡಿದೆ.

ಟೈಟ್ಲರ್ ವಿರುದ್ಧ ಸಿಬಿಐ ಆರೋಪ ಪಟ್ಟಿ

ನವದೆಹಲಿ (ಪಿಟಿಐ): ‘ಇಲ್ಲಿನ ಪುಲ್ ಭಂಗಶ್ ಪ್ರದೇಶದಲ್ಲಿ ನಡೆದಿದ್ದ ಸಿಖ್ ವಿರೋಧಿ ದಂಗೆ ಸಂಬಂಧ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಕೇಂದ್ರೀಯ ತನಿಖಾ ದಳವು (ಸಿಬಿಐ) ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದೆ’ ಎಂದು ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಹತ್ಯೆಯ ಮರು ದಿನ (1984ರ ನವೆಂಬರ್ 1) ನಡೆದಿದ್ದ ದಂಗೆಯಲ್ಲಿ ಮೂವರು ಸಾವಿಗೀಡಾಗಿದ್ದರು. ಗುರುದ್ವಾರಕ್ಕೆ ಬೆಂಕಿ ಹಚ್ಚಲಾಗಿತ್ತು.

ಚಿನ್ನ, ಬೆಳ್ಳಿ ಧಾರಣೆ — ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹62,720
ಒಡವೆ ಚಿನ್ನ 1ಗ್ರಾಂ	₹5,770
ಬೆಳ್ಳಿ ಕೆ.ಜಿಗೆ	₹74,900

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹530

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹157
ಆರ್‌ಎಸ್‌ಎಸ್-5	₹151
ಗುಡ್ ಲಾಟ್	₹133

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹917 (915)
ಸೂರ್ಯಕಾಂತಿ (ರಿಫೈನ್ಡ್)	₹945 (945)
ಪಾಮೋಲಿನ್	₹894 (893)

ಕೆವಿಜಿ ಬ್ಯಾಂಕ್‌ಗೆ ₹40 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಧಾರವಾಡ: ‘ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ 2022-23ನೇ ಆರ್ಥಿಕ ವರ್ಷದಲ್ಲಿ ಶೇ 7.82ರ ಪ್ರಗತಿ ದರದಲ್ಲಿ ₹33,150 ಕೋಟಿ ವಹಿವಾಟು ನಡೆಸಿದ್ದು, ₹40.25ಕೋಟಿ ನಿವ್ವಳ ಲಾಭ ಹೊಂದಿದೆ’ ಎಂದು ಬ್ಯಾಂಕ್ ಅಧ್ಯಕ್ಷ ಶ್ರೀಕಾಂತ ಎಂ. ಭಂಡಿವಾಡ ತಿಳಿಸಿದರು.

‘2021-22ನೇ ಸಾಲಿನಲ್ಲಿ ಬ್ಯಾಂಕ್ ₹31.90ಕೋಟಿ ಲಾಭ ಗಳಿಸಿತ್ತು. ಈ ಬಾರಿ ಬ್ಯಾಂಕಿನ ಆದಾಯ ₹1264.56 ಕೋಟಿಗೆ ಹೆಚ್ಚಳವಾಗಿದೆ. ಠೇವಣಿ ಸಂಗ್ರಹದಲ್ಲಿ ಶೇ 6.03ರಷ್ಟು ಹೆಚ್ಚಳವಾಗಿದೆ. ಆ ಮೂಲಕ ಪ್ರತಿ ಉದ್ಯೋಗಿಯ ಸರಾಸರಿ ವಹಿವಾಟು ₹10.08 ಕೋಟಿಯಾಗಿದೆ. ಬ್ಯಾಂಕಿನ ಗ್ರಾಹಕರ ಸಂಖ್ಯೆಯೂ 88 ಲಕ್ಷ ಮೀರಿದೆ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಮೇ 19ರವರೆಗೆ ₹ 30,945 ಕೋಟಿ ಹೂಡಿಕೆ

ಎಫ್‌ಪಿಐ: ಹೆಚ್ಚಿದ ಒಳಹರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶದ ಷೇರುಪೇಟೆಗಳ ಬಗ್ಗೆ ಹೆಚ್ಚು ಭರವಸೆ ಹೊಂದಿದ್ದು, ಎಲ್ಲಾ ವಲಯಗಳಲ್ಲಿಯೂ ಬಂಡವಾಳ ಹೂಡಿಕೆ ಮಾಡಲು ಆರಂಭಿಸಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ಭಾರತದ ಆರ್ಥಿಕ ಬೆಳವಣಿಗೆ ಉತ್ತಮವಾಗಿರುವ ಮತ್ತು ಕಾರ್ಪೊರೇಟ್ ವಲಯದ ಗಳಿಕೆ ಹೆಚ್ಚಾಗುವ ನಿರೀಕ್ಷೆ ಇರುವುದರಿಂದ ವಿದೇಶಿ ಬಂಡವಾಳ ಒಳಹರಿವು ಮುಂದುವರಿಯುವ ಸಾಧ್ಯತೆ ಇದೆ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿದೇಶಿ ಹೂಡಿಕೆದಾರರು ಮೇ ತಿಂಗಳಿನಲ್ಲಿ ಷೇರುಗಳ ಖರೀದಿಗೆ ಹೆಚ್ಚು ಗಮನ ಹರಿಸಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಮೇ 19ರವರೆಗಿನ ವಹಿವಾಟಿನಲ್ಲಿ ಒಟ್ಟು ₹ 30,945 ಕೋಟಿ ಹೂಡಿಕೆ ಮಾಡಿದ್ದಾರೆ. ವಾಹನ, ವಾಹನ ಬಿಡಿಭಾಗಗಳು, ಬಂಡವಾಳ ಸರಕುಗಳು, ಎಫ್‌ಎಂಸಿಜಿ, ಆರೋಗ್ಯ ಸೇವೆ, ದೂರಸಂಪರ್ಕ, ರಿಯಾಲ್ಟಿ, ತೈಲ ಮತ್ತು ಅನಿಲ ವಲಯಗಳಲ್ಲಿ ಖರೀದಿ ನಡೆಸುತ್ತಿದ್ದಾರೆ. ಮೇ 19ರವರೆಗೆ ಹಣಕಾಸು ವಲಯದಲ್ಲೇ ₹ 8,382 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಐಸಿಐಸಿಐ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಕೋಟಕ್ ಬ್ಯಾಂಕ್, ಎಸ್‌ಬಿಐ ಮತ್ತು ಬಜಾಜ್ ಫೈನಾನ್ಸ್‌ನ ನಾಲ್ಕನೇ ತ್ರೈಮಾಸಿಕದ ಫಲಿತಾಂಶಗಳು ಈ ಕಂಪನಿಗಳಲ್ಲಿ ಹೂಡಿಕೆ ಹೆಚ್ಚಿಸುವಂತೆ ಉತ್ತೇಜನ ನೀಡಿವೆ ಎಂದೂ ಅವರು ತಿಳಿಸಿದರು.

ತಗ್ಗಲಿದೆ ಐಪಿಒ ಲಿಸ್ಟಿಂಗ್ ಕಾಲಮಿತಿ

ನವದೆಹಲಿ (ಪಿಟಿಐ): ಆರಂಭಿಕ ಸಾರ್ವಜನಿಕ ಹೂಡಿಕೆ (ಐಪಿಒ) ಪ್ರಕ್ರಿಯೆ ಪೂರ್ಣಗೊಂಡ ಬಳಿಕ ನಿರ್ದಿಷ್ಟ ಕಂಪನಿಯ ಷೇರು ಮಾರುಕಟ್ಟೆಯಲ್ಲಿ ಸ್ಥಾನ ಪಡೆದುಕೊಳ್ಳಲು (ಲಿಸ್ಟಿಂಗ್) ಸದ್ಯ ಇರುವ ಆರು ದಿನಗಳ ಕಾಲಮಿತಿಯನ್ನು ಮೂರು ದಿನಗಳಿಗೆ ತಗ್ಗಿಸಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿ (ಸೆಬಿ) ಉದ್ದೇಶಿಸಿದೆ.

ಕಾಲಮಿತಿಯನ್ನು ತಗ್ಗಿಸುವುದರಿಂದ ಕಂಪನಿ ಮತ್ತು ಹೂಡಿಕೆದಾರರಿಗೆ ಅನುಕೂಲ ಆಗಲಿದೆ ಎಂದು ಸೆಬಿ ತನ್ನ ಸಮಾಲೋಚನಾ ಪತ್ರದಲ್ಲಿ ತಿಳಿಸಿದೆ.

ಕಾಲಮಿತಿಯನ್ನು ಕಡಿಮೆ ಮಾಡುವ ಕುರಿತು ವಿಸ್ತೃತವಾದ ಪರೀಕ್ಷೆಯನ್ನು ನಡೆಸಿದ ಬಳಿಕ ಸೆಬಿಯು ಈ ನಿರ್ಧಾರಕ್ಕೆ ಬಂದಿದೆ. ಈ ಪ್ರಸ್ತಾವದ ಕುರಿತು ಸಾರ್ವಜನಿಕರು ತಮ್ಮ ಪ್ರತಿಕ್ರಿಯೆ ನೀಡಲು ಜೂನ್ 3ರವರೆಗೆ ಅವಕಾಶವನ್ನು ಸೆಬಿ ನೀಡಿದೆ.

ಜಿಯೋಜಿತ್‌ನಿಂದ ಫ್ಲಿಪ್ ಆ್ಯಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್, ಹೊಸ ಮೊಬೈಲ್ ಆ್ಯಪ್ ಫ್ಲಿಪ್ (FLIP) ಬಿಡುಗಡೆ ಮಾಡಿದೆ. ಈಗಾಗಲೇ ಇರುವ ‘SELFIE’ ಆ್ಯಪ್‌ಗೆ ಬದಲಾಗಿ ಈ ಆ್ಯಪ್ ಪರಿಚಯಿಸಿದೆ. ಸುಧಾರಿತ ವೈಶಿಷ್ಟ್ಯಗಳ ಮೂಲಕ ಸಮಗ್ರ ಮತ್ತು ಅನುಕೂಲಕರವಾದ ವಹಿವಾಟಿನ ಅನುಭವವನ್ನು ಹೊಸ ಆ್ಯಪ್ ನೀಡಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ವಿದೇಶದಲ್ಲಿ ಕ್ರೆಡಿಟ್, ಡೆಬಿಟ್ ಕಾರ್ಡ್ ಬಳಕೆ: ₹ 7 ಲಕ್ಷದವರೆಗೆ ತೆರಿಗೆ ಇಲ್ಲ

ನವದೆಹಲಿ (ಪಿಟಿಐ): ಹಣಕಾಸು ವರ್ಷವೊಂದರಲ್ಲಿ ವಿದೇಶದಲ್ಲಿ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ₹7 ಲಕ್ಷದವರೆಗೆ ವೆಚ್ಚ ಮಾಡಿದರೆ ಯಾವುದೇ ರೀತಿಯ ತೆರಿಗೆ ಪಾವತಿಸಬೇಕಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿದೆ.

₹7 ಲಕ್ಷಕ್ಕಿಂತ ಹೆಚ್ಚಿನ ವೆಚ್ಚಕ್ಕೆ ಜುಲೈ 1 ರಿಂದ ಶೇ 20ರಷ್ಟು ಮೂಲದಲ್ಲೇ ತೆರಿಗೆ ಕಡಿತ (ಟಿಸಿಎಸ್) ಆಗಲಿದೆ.

ಕೇಂದ್ರ ಸರ್ಕಾರವು ಈಚೆಗಷ್ಟೇ ವಿದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿ ಮಾಡುವ ವೆಚ್ಚವನ್ನು ಉದಾರೀಕೃತ ಪಾವತಿ ವ್ಯವಸ್ಥೆ (ಎಲ್‌ಆರ್‌ಎಸ್) ಅಡಿಯಲ್ಲಿ ತಂದಿದೆ. ಇದರಿಂದಾಗಿ ಜುಲೈ 1ರಿಂದ ವಿದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಸಿದರೆ ಅದಕ್ಕೆ ಶೇ 20ರಷ್ಟು ತೆರಿಗೆ ಕಟ್ಟಬೇಕಾಗುತ್ತದೆ. ಆದರೆ, ಕೇಂದ್ರದ ಈ ನಿರ್ಧಾರಕ್ಕೆ ತೀವ್ರ ವಿರೋಧ ವ್ಯಕ್ತವಾಗಿದ್ದು, ‘ತೆರಿಗೆ ಭಯೋತ್ಪಾದನೆ’ ಎಂದು ಕೆಲವರು ಟೀಕಿಸಿದ್ದಾರೆ. ಹೀಗಾಗಿ ₹7 ಲಕ್ಷದವರೆಗಿನ ಮೊತ್ತಕ್ಕೆ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಬಳಸಿದರೆ ಟಿಸಿಎಸ್ ಇಲ್ಲ ಎಂದು ಹಣಕಾಸು ಸಚಿವಾಲಯ ಸ್ಪಷ್ಟನೆ ನೀಡಿದೆ.

ವಿದೇಶದಲ್ಲಿ ಚಿಕಿತ್ಸೆ ಮತ್ತು ಶಿಕ್ಷಣಕ್ಕೆ ಮಾಡುವ ವೆಚ್ಚಕ್ಕೆ ಇರುವ ತೆರಿಗೆಯಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ ಎಂದು ಹೇಳಿದೆ. ಸದ್ಯ, ವಿದೇಶದಲ್ಲಿ ವೈದ್ಯಕೀಯ ಚಿಕಿತ್ಸೆ ಮತ್ತು ಶಿಕ್ಷಣಕ್ಕೆ ₹7 ಲಕ್ಷದವರೆಗೆ ಟಿಸಿಎಸ್‌ನಿಂದ ವಿನಾಯಿತಿ ಇದೆ. ₹7 ಲಕ್ಷಕ್ಕಿಂತ ಹೆಚ್ಚಿನ ಮೊತ್ತಕ್ಕೆ ಶೇ 5ರಷ್ಟು ಟಿಸಿಎಸ್ ಇದೆ. ಶಿಕ್ಷಣ ಸಾಲ ಪಡೆದಿರುವವರಿಗೆ ಟಿಸಿಎಸ್ ಶೇ 0.5ರಷ್ಟು ಆಗಲಿದೆ.

ವಿದೇಶದಲ್ಲಿ ಕ್ರೆಡಿಟ್ ಕಾರ್ಡ್ ಬಳಕೆಗೆ ಟಿಸಿಎಸ್ ವಿಧಿಸುವ ಮೂಲಕ ಸರ್ಕಾರವು ತೆರಿಗೆ ಭಯೋತ್ಪಾದನೆಯನ್ನು ಅಂತ್ಯಗೊಳಿಸುವ ಭರವಸೆಯಿಂದ ಹಿಂದೆ ಸರಿದಿದೆ ಎಂದು ಉದ್ಯಮಿ ಟಿ.ವಿ. ಮೋಹನ್‌ದಾಸ್ ಪೈ ಟೀಕಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ 20–5–2023

ಜಾವಾ 70/80(ಹೊಸ)	11950-12000
ಜಾವಾ 80/90(ಹೊಸ)	11450-11500
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1635)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	865 (860)
ಪಾಮ್ ವಾರದ ಡೆಲಿವರಿ	892 (891)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	60,700 (60,000)
ಬೆಳ್ಳಿ ಕೆ.ಜಿ	72,500 (71,800)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-40500
ಹಳತು	40000-53000
ಶಿರಸಿ	
ಬೆಟ್ಟೆ	41600-43399
ಬಿಳಿಗೋಟು	24299-32518
ಚಾಲಿ	35199-38258
ಕೆಂಪುಗೋಟು	28801-31021
ರಾಶಿ	43399-46728
ಸೊರಬ	
ಬಿಳಿಗೋಟು	28099-28899
ಚಾಲಿ	30989-36619
ಕೋಕ	14989-26989
ರಾಶಿ	37099-47508

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15350
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5975

ಪ್ಲೇ ಆಫ್ ಹಂತಕ್ಕೆ ಧೋನಿ ಬಳಗ

ಋತುರಾಜ್ ಗಾಯಕವಾಡ–ಡೆವೊನ್ ಕಾನ್ವೆ ಶತಕದ ಜೊತೆಯಾಟ; ಚೆನ್ನೈಗೆ 77 ರನ್ ಗೆಲುವು

ನವದೆಹಲಿ (ಪಿಟಿಐ): ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ ಟೂರ್ನಿಯಲ್ಲಿ ಪ್ಲೇ ಆಫ್ ಪ್ರವೇಶಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಆರಂಭಿಕ ಜೋಡಿ ಋತುರಾಜ್ ಗಾಯಕವಾಡ ಮತ್ತು ಡೆವೊನ್ ಕಾನ್ವೆ ಅವರ ಶತಕದ ಜೊತೆಯಾಟದಿಂದಾಗಿ ಚೆನ್ನೈ 77 ರನ್‌ಗಳಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಗೆದ್ದಿತು. ಇದರೊಂದಿಗೆ ಪ್ಲೇ ಆಫ್ ಪ್ರವೇಶಿಸಿದ ಎರಡನೇ ತಂಡವಾಗಿ ಹೊರಹೊಮ್ಮಿತು.

ಟಾಸ್ ಗೆದ್ದ ಚೆನ್ನೈ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ತಮ್ಮ ನಾಯಕನ ನಿರ್ಧಾರವನ್ನು ಸಮರ್ಥಿಸಿಕೊಳ್ಳುವಲ್ಲಿ ಬ್ಯಾಟರ್‌ಗಳು ಯಶಸ್ವಿಯಾದರು. ಋತುರಾಜ್ (79; 50ಎ, ಹಾಗೂ ಕಾನ್ವೆ (87; 52ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 141 ರನ್ ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 223 ರನ್ ಗಳಿಸಿತು.

ಅದಕ್ಕುತ್ತರವಾಗಿ ಡೆಲ್ಲಿ ಕ್ಯಾಪಿಟಲ್ಸ್ 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 146 ರನ್ ಗಳಿಸಿತು. ನಾಯಕ ಡೇವಿಡ್ ವಾರ್ನರ್ (86; 58ಎ) ಅವರ ಏಕಾಂಗಿ ಹೋರಾಟ ಮಾಡಿದರು. ಇನ್ನುಳಿದ ಆಟಗಾರರಿಂದ ದೊಡ್ಡ ಇನಿಂಗ್ಸ್ ಮೂಡಿಬರಲಿಲ್ಲ. ಚೆನ್ನೈ ತಂಡದ ದೀಪಕ್ ಚಾಹರ್ (22ಕ್ಕೆ3) ಪರಿಣಾಮಕಾರಿ ದಾಳಿ ನಡೆಸಿದರು. ಮಹೀಷ್ ತೀಕ್ಷಣ ಹಾಗೂ ಮಥೀಷ ಪಥಿರಾಣ ತಲಾ 2 ವಿಕೆಟ್ ಗಳಿಸಿದರು.

ಚೆನ್ನೈ ತಂಡದ ಡೆವೊನ್ ಕಾನ್ವೆ ಹಾಗೂ ಋತುರಾಜ್ ಗಾಯಕವಾಡ –ಪಿಟಿಐ ಚಿತ್ರ

ಹದಿನೈದನೇ ಓವರ್‌ನವರೆಗೂ ಆತಿಥೇಯ ತಂಡದ ಬೌಲರ್‌ಗಳಿಗೆ ಯಶಸ್ಸು ದೊರೆಯಲಿಲ್ಲ. ಋತುರಾಜ್ ಏಳು ಸಿಕ್ಸರ್ ಹಾಗೂ ಮೂರು ಬೌಂಡರಿ ಗಳಿಸಿದರೆ, ಕಾನ್ವೆ 11 ಬೌಂಡರಿ ಮತ್ತು ಮೂರು ಸಿಕ್ಸರ್ ಸಿಡಿಸಿದರು.

ಡೆಲ್ಲಿ ತಂಡದ ಯುವ ಬೌಲರ್ ಚೇತನ್ ಸಕಾರಿಯಾ ಅವರು ತಮ್ಮ ಓವರ್‌ನಲ್ಲಿ ಗಾಯಕವಾಡ ವಿಕೆಟ್ ಕಬಳಿಸಿ ಜೊತೆಯಾಟ ಮುರಿದರು. ಆದರೆ ಕ್ರೀಸ್‌ಗೆ ಬಂದ ಶಿವಂ ದುಬೆ ಮೂರು ಸಿಕ್ಸರ್‌ಗಳಿದ್ದ 22 ರನ್ ಗಳಿಸಿದರು. ರವೀಂದ್ರ ಜಡೇಜ 7 ಎಸೆತಗಳಲ್ಲಿ 20 ರನ್ ಹೊಡೆದರು. ದುಬೆ ಔಟಾದ ನಂತರ ಕ್ರೀಸ್‌ಗೆ ಬಂದ ಧೋನಿ ಅಜೇಯ ಐದು ರನ್ ಗಳಿಸಿದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 3ಕ್ಕೆ223 (20 ಓವರುಗಳಲ್ಲಿ)
ಋತುರಾಜ್ ಸಿ ರುಸೊ ಬಿ ಸಕಾರಿಯಾ 79 (50ಎ, 4x3, 6x7)
ಕಾನ್ವೆ ಸಿ ಅಮನ್ ಬಿ ನಾಕಿಯಾ 87 (52ಎ, 4x11, 6x3)
ದುಬೆ ಸಿ ಯಾದವ್ ಬಿ ಖಲೀಲ್ 22
ಧೋನಿ ಔಟಾಗದೇ 5 (4ಎ)
ಜಡೇಜ ಔಟಾಗದೇ 20 (7ಎ, 4x3, 6x1)
ಇತರೆ: 10 (ಬೈ 1, ವೈಡ್ 7, ನೋಬಾಲ್ 2)
ವಿಕೆಟ್ ಪತನ: 1–141 (ಋತುರಾಜ್ ಗಾಯಕವಾಡ್, 14.3), 2–195 (ಶಿವಂ ದುಬೆ, 17.6), 3– 195 (ಡೆವಾನ್ ಕಾನ್ವೆ, 18.2)
ಬೌಲಿಂಗ್: ಖಲೀಲ್ ಅಹ್ಮದ್ 4–0–45–1, ಲಲಿತ್ ಯಾದವ್ 2–0–32–0, ಅಕ್ಷರ್ ಪಟೇಲ್ 3–0–32–0, ಎನ್ರಿಚ್ ನಾಕಿಯಾ 4–0–43–1, ಚೇತನ್ ಸಕಾರಿಯಾ 4–0–36–1, ಕುಲದೀಪ್ ಯಾದವ್ 3–0–34–0

ಡೆಲ್ಲಿ ಕ್ಯಾಪಿಟಲ್ಸ್: 9ಕ್ಕೆ 146 (20 ಓವರುಗಳಲ್ಲಿ)
ಪ್ರಥ್ವಿ ಸಿ ರಾಯುಡು ಬಿ ದೇಶಪಾಂಡೆ 5 (7ಎ, 4x1)
ವಾರ್ನರ್ ಸಿ ಗಾಯಕವಾಡ್ ಬಿ ಪಥಿರಾಣ 86 (58ಎ, 4x7, 6x5)
ಸಾಲ್ಟ್ ಸಿ ರಹಾನೆ ಬಿ ಚಾಹರ್ 3 (6ಎ)
ರೂಸೊ ಬಿ ಚಾಹರ್ 0 (1ಎ)
ಧುಲ್ ಸಿ ದೇಶಪಾಂಡೆ ಬಿ ಜಡೇಜ 13 (15ಎ, 4x1)
ಅಕ್ಷರ್ ಸಿ ಗಾಯಕವಾಡ್ ಬಿ ಚಾಹರ್ 15 (8ಎ, 4x1, 6x1)
ಅಮನ್ ಸಿ ಅಲಿ ಬಿ ಪಥಿರಾಣ 7 (9ಎ, 4x1)
ಲಲಿತ್ ಸಿ ಅಲಿ ಬಿ ತೀಕ್ಷಣ 6 (12ಎ)
ನಾಕಿಯಾ ಔಟಾಗದೇ 0 (1ಎ)
ಕುಲದೀಪ್ ಎಲ್‌ಬಿಡಬ್ಲ್ಯು ತೀಕ್ಷಣ 0 (1ಎ)
ಸಕಾರಿಯಾ ಔಟಾಗದೆ 0
ಇತರೆ: 11 (ಲೆಗ್‌ಬೈ 3, ವೈಡ್ 8)
ವಿಕೆಟ್ ಪತನ: 1–5 (ಪ್ರಥ್ವಿ ಶಾ, 1.3,), 2–26 (ಫಿಲ್ ಸಾಲ್ಟ್, 4.4), 3–26 (ರೀಲಿ ರೂಸೊ, 4.5), 4–75 (ಯಶ್ ಧುಲ್, 10.5), 5–109 (ಅಕ್ಷರ್ ಪಟೇಲ್ 13.3), 6–131 (ಅಮನ್ ಹಕೀಂ ಖಾನ್, 16.1), 7–144 (ಡೇವಿಡ್ ವಾರ್ನರ್, 18.3), 8–146 (ಲಲಿತ್ ಯಾದವ್, 19.3), 9–146 (ಕುಲದೀಪ್ ಯಾದವ್, 19.4)
ಬೌಲಿಂಗ್: ದೀಪಕ್ ಚಾಹರ್ 4–0–22–3, ತುಷಾರ್ ದೇಶಪಾಂಡೆ 4–0–26–1, ಮಹೀಶ್ ತೀಕ್ಷಣ 4–1–23–2, ರವೀಂದ್ರ ಜಡೇಜ 4–0–50–1, ಮಥೀಶ್ ಪಥಿರಾಣ 4–0–22–2

ಪ್ಲೇ ಆಫ್‌ಗೆ ಕೃಣಾಲ್ ಬಳಗ; ಸೋಲಿನಲ್ಲೂ ರಿಂಕು ಮಿಂಚು

ಲಖನೌಗೆ ರೋಚಕ ಗೆಲುವು

ಕೋಲ್ಕತ್ತ (ಪಿಟಿಐ): ರಿಂಕು ಸಿಂಗ್ ಕೊನೆಯಲ್ಲಿ ಅಬ್ಬರದ ಆಟದ ಮೂಲಕ ಒತ್ತಡ ಹೇರಿದರಾದರೂ, ಕೋಲ್ಕತ್ತ ನೈಟ್ ರೈಡರ್ಸ್ ತಂಡದ ವಿರುದ್ಧ ಒಂದು ರನ್ನಿನ ರೋಚಕ ಜಯ ಸಾಧಿಸಿದ ಲಖನೌ ಸೂಪರ್ ಜೈಂಟ್ಸ್ ತಂಡ ಐಪಿಎಲ್ ಟೂರ್ನಿಯ 'ಪ್ಲೇ ಆಫ್'ನಲ್ಲಿ ಸ್ಥಾನ ಪಡೆಯಿತು.

ಶನಿವಾರ ರಾತ್ರಿ ಈಡನ್ ಗಾರ್ಡನ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಲಖನೌ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 176 ರನ್ ಗಳಿಸಿದರೆ, ಕೆಕೆಆರ್ 7 ವಿಕೆಟ್‌ಗಳಿಗೆ 175 ರನ್ ಪೇರಿಸಿತು. 17 ಪಾಯಿಂಟ್ಸ್ ಕಲೆಹಾಕಿದ ಕೃಣಾಲ್ ಪಾಂಡ್ಯ ಬಳಗ ಮೂರನೇ ಸ್ಥಾನದೊಂದಿಗೆ ಲೀಗ್ ವ್ಯವಹಾರ ಕೊನೆಗೊಳಿಸಿತು. ಸೋಲು ಅನುಭವಿಸಿದ ನಿತೀಶ್ ರಾಣಾ ಬಳಗ ಹೊರಬಿದ್ದಿತು.

ಈ ಹಿಂದೆ ಸತತ ಐದು ಸಿಕ್ಸರ್ ಹೊಡೆದು ಕೆಕೆಆರ್‌ಗೆ ಗೆಲುವು ತಂದುಕೊಟ್ಟಿದ್ದ ರಿಂಕು (ಅಜೇಯ 67, 33 ಎ., 4X6, 6X4) ಅವರು ಸೋಲಿನಲ್ಲೂ ಮಿಂಚಿದರು.

ಕೆಕೆಆರ್ ಗೆಲುವಿಗೆ ಕೊನೆಯ ಎರಡು ಓವರ್‌ಗಳಲ್ಲಿ 41 ರನ್‌ಗಳು ಬೇಕಿದ್ದವು. ನವೀನ್ ಉಲ್ ಹಕ್ ಬೌಲ್ ಮಾಡಿದ 19ನೇ ಓವರ್‌ನಲ್ಲಿ ಮೂರು ಬೌಂಡರಿ, ಒಂದು ಸಿಕ್ಸರ್ ಸೇರಿದಂತೆ ರಿಂಕು 20 ರನ್ ಕಲೆಹಾಕಿದರು.

ಯಶ್ ಠಾಕೂರ್ ಬೌಲ್ ಮಾಡಿದ ಅಂತಿಮ ಓವರ್‌ನಲ್ಲಿ 21 ರನ್‌ಗಳ ಅವಶ್ಯತೆಯಿತ್ತು. ಮೊದಲ ಮೂರು ಎಸೆತಗಳಲ್ಲಿ ಮೂರು ರನ್‌ಗಳು ಮಾತ್ರ ಬಂದವು. ಬಳಿಕದ ಮೂರು ಎಸೆತಗಳಲ್ಲಿ 18 ರನ್‌ಗಳು ಬೇಕಿದ್ದವು. ರಿಂಕು ಅವರು ಕ್ರಮವಾಗಿ 6, 4 ಮತ್ತು 6 ರನ್ ಹೊಡೆದರು. ಕೇವಲ ಒಂದು ರನ್‌ನಿಂದ ಸೋಲು ಎದುರಾಯಿತು.

ಲಖನೌ ಸೂಪರ್ ಜೈಂಟ್ಸ್ ತಂಡದ ನಿಕೊಲಸ್ ಪೂರನ್ –ಪಿಟಿಐ ಚಿತ್ರ

ರಿಂಕು ಮತ್ತು ಜೇಸನ್ ರಾಯ್ (45 ರನ್, 28 ಎ.) ಹೊರತುಪಡಿಸಿ ಕೆಕೆಆರ್ ತಂಡದ ಇತರ ಬ್ಯಾಟರ್‌ಗಳು ವಿಫಲರಾದರು. ರವಿ ಬಿಷ್ಣೋಯಿ ಮತ್ತು ಯಶ್ ಠಾಕೂರ್ ತಲಾ ಎರಡು ವಿಕೆಟ್ ಪಡೆದರು.

ಪೂರನ್ ಆಸರೆ: ಇದಕ್ಕೂ ಮುನ್ನ ಲಖನೌ ತಂಡ, ನಿಕೊಲಸ್ ಪೂರನ್ ಅವರ ಬಿರುಸಿನ ಅರ್ಧಶತಕ ನೆರವಿನಿಂದ ಹೋರಾಟದ ಮೊತ್ತ ಗಳಿಸಿತು. ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ನಿಕೊಲಸ್ ಪೂರನ್ 30 ಎಸೆತಗಳಲ್ಲಿ 58 ರನ್ ಗಳಿಸಿದರು. ಐದು ಸಿಕ್ಸರ್ ಮತ್ತು ನಾಲ್ಕು ಬೌಂಡರಿಗಳನ್ನು ಸಿಡಿಸಿದರು.

ಅವರು ಕ್ರೀಸ್‌ಗೆ ಬಂದಾಗ ಲಖನೌ ತಂಡವು 10 ಓವರ್‌ಗಳಲ್ಲಿ 73 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಆತಂಕದಲ್ಲಿತ್ತು. ಅಲ್ಲಿಯವರೆಗೂ ಕೋಲ್ಕತ್ತ ಬೌಲರ್‌ಗಳು ಸಾಧಿಸಿದ್ದ ಬಿಗಿಹಿಡಿತವನ್ನು ಪೂರನ್ ಸಡಿಲಗೊಳಿಸಿದರು.

ಪೂರನ್ ಹೊರತುಪಡಿಸಿದರೆ ಕ್ವಿಂಟನ್ ಡಿಕಾಕ್, ಪ್ರೇರಕ್ ಮಂಕಡ್ ಮತ್ತು ಆಯುಷ್ ಬಡೋನಿ ಅವರು ಅಲ್ಪ ಕೊಡುಗೆ ನೀಡಿದರು.

ಸಂಕ್ಷಿಪ್ತ ಸ್ಕೋರು: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 176 (ಕ್ವಿಂಟನ್ 28, ಮಂಕಡ್ 26, ಆಯುಷ್ 25, ಪೂರನ್ 58, ವೈಭವ್ ಅರೋರಾ 30ಕ್ಕೆ2, ಶಾರ್ದೂಲ್ ಠಾಕೂರ್ 27ಕ್ಕೆ2, ಸುನಿಲ್ ನಾರಾಯಣ 28ಕ್ಕೆ2)

ಕೋಲ್ಕತ್ತ ನೈಟ್ ರೈಡರ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 175 (ಜೇಸನ್ ರಾಯ್ 45, ವೆಂಕಟೇಶ್ ಅಯ್ಯರ್ 24, ರಿಂಕು ಸಿಂಗ್ ಔಟಾಗದೆ 67, ರವಿ ಬಿಷ್ಣೋಯಿ 23ಕ್ಕೆ 2, ಯಶ್ ಠಾಕೂರ್ 31ಕ್ಕೆ 2) ಫಲಿತಾಂಶ: ಲಖನೌ ಸೂಪರ್ ಜೈಂಟ್ಸ್‌ಗೆ 1 ರನ್ ಗೆಲುವು

ಆರೆಂಜ್ ಕ್ಯಾಪ್ (ಹೆಚ್ಚು ರನ್)		
ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	702

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)		
ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	23

ಮುಂಬೈಗೆ ದೊಡ್ಡ ಜಯ ಅಗತ್ಯ

ಮುಂಬೈ (ಪಿಟಿಐ): ಪ್ಲೇ ಆಫ್ ಅವಕಾಶಕ್ಕಾಗಿ ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ, ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಕೊನೆಯ ಸ್ಥಾನದಲ್ಲಿರುವ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ದೊಡ್ಡ ಗೆಲುವನ್ನು ದಾಖಲಿಸಲೇಬೇಕಾದ ಒತ್ತಡದಲ್ಲಿದೆ.

ಹೈದರಾಬಾದ್ ತಂಡಕ್ಕೆ ಪ್ಲೇ ಆಫ್ ಅವಕಾಶದಿಂದ ಈಗಾಗಲೇ ಮುಚ್ಚಿದೆ. ಲೀಗ್‌ನ ದ್ವಿತೀಯಾರ್ಧದಲ್ಲಿ ಗಮನಾರ್ಹ ಪ್ರದರ್ಶನ ನೀಡಿರುವ ಮುಂಬೈ ತಂಡ ವಾಂಖೆಡೆ ಕ್ರೀಡಾಂಗಣದಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿ ಕೊನೆಯ ಅವಕಾಶವನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡು ಪ್ಲೇ ಆಫ್ ಖಚಿತಪಡಿಸಿಕೊಳ್ಳಲು ಕಾತರದಿಂದ ಇದೆ.

ತವರಿನ ನೆಲದಲ್ಲಿ ನಾಲ್ಕು ಗೆದ್ದು, ಎರಡನ್ನು ಸೋತಿರುವ ರೋಹಿತ್ ಶರ್ಮಾ ಬಳಗ ನಿವ್ವಳ ರನ್ ದರದ (ಎನ್‌ಆರ್‌ಆರ್) ಕಡೆಯೂ ಲಕ್ಷ್ಯ ನೀಡಬೇಕಾಗಿದೆ. ಮುಂಬೈ 14 ಪಾಯಿಂಟ್ಸ್ ಸಂಗ್ರಹಿಸಿದ್ದು ಅದರ ನಿವ್ವಳ ರನ್ ದರ–0.128. ಇನ್ನೊಂದೆಡೆ ತನ್ನೆಲ್ಲಾ ಪಂದ್ಯಗಳನ್ನು ಮುಗಿಸಿರುವ ರಾಜಸ್ಥಾನ ಕೂಡ 14 ಪಾಯಿಂಟ್ಸ್ ಗಳಿಸಿದ್ದು ಅದರ ರನ್ ದರ (0.148) ಮುಂಬೈಗಿಂತ ಉತ್ತಮವಾಗಿದೆ. ಹೀಗಾಗಿ ದೊಡ್ಡ ಜಯ ಅನಿವಾರ್ಯ.

ಪ್ರಸ್ತುತ ನಾಲ್ಕನೇ ಸ್ಥಾನದಲ್ಲಿರುವ ಆರ್‌ಸಿಬಿ ಮತ್ತು ಐದನೇ ಸ್ಥಾನದಲ್ಲಿರುವ ರಾಜಸ್ತಾನ ತಂಡಗಳು ಮುಂಬೈಗಿಂತ ಉತ್ತಮ ರನ್ ರೇಟ್ ಹೊಂದಿದೆ. ಭಾನುವಾರದ ಪಂದ್ಯಗಳಲ್ಲಿ ಆರ್‌ಸಿಬಿ ಮತ್ತು ಮುಂಬೈ ತಂಡಗಳು ತಮ್ಮ ತಮ್ಮ ಪಂದ್ಯಗಳಲ್ಲಿ ಜಯಗಳಿಸಿದರೆ, ಆಗ ರನ್ ದರ ನಿರ್ಣಾಯಕವಾಗಲಿದೆ. ಸೋತರೆ ಮುಂಬೈಗೆ ಪ್ಲೇಆಫ್ ಬಾಗಿಲು ಮುಚ್ಚಿದಂತೆ.

ಈಗಾಗಲೇ ಮೊದಲ ಮೂರು ಸ್ಥಾನಗಳು ನಿರ್ಧಾರವಾಗಿದ್ದು, ನಾಲ್ಕನೇ ಸ್ಥಾನ ಯಾರಿಗೆ ಎಂಬುದು ಭಾನುವಾರ ಸ್ಪಷ್ಟವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30.

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	13	9	4	0	18	0.835
ಚೆನ್ನೈ	14	8	5	1	17	0.652
ಲಖನೌ	14	8	5	1	17	0.284
ಬೆಂಗಳೂರು	13	7	6	0	14	0.180
ರಾಜಸ್ಥಾನ	14	7	7	0	14	0.148
ಮುಂಬೈ	13	7	6	0	14	-0.128
ಕೋಲ್ಕತ್ತ	14	6	8	0	12	-0.239
ಪಂಜಾಬ್	14	6	8	0	12	-0.304
ಡೆಲ್ಲಿ	14	5	9	0	10	-0.808
ಹೈದರಾಬಾದ್	13	4	9	0	8	-0.558

ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಆರ್‌ಸಿಬಿಗೆ ಗುಜರಾತ್ ಸವಾಲು; ವಿರಾಟ್, ಮ್ಯಾಕ್ಸ್‌ವೆಲ್ ಮೇಲೆ ನಿರೀಕ್ಷೆ

ಡುಪ್ಲೆಸಿ ಬಳಗಕ್ಕೆ ಪ್ಲೇಆಫ್ ಕನಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಫಫ್ ಡುಪ್ಲೆಸಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ಬಳಗವು ಇಪ್ಪತ್ತನಾಲ್ಕು ದಿನಗಳ ನಂತರ ತವರಿನಂಗಳಕ್ಕೆ ಮರಳಿದೆ.

ಈ ಅವಧಿಯಲ್ಲಿ ಬೇರೆ ಬೇರೆ ತಾಣಗಳಲ್ಲಿ ಆಡಿದ ಐದು ಪಂದ್ಯಗಳಲ್ಲಿ ಮೂರರಲ್ಲಿ ಜಯಿಸಿ ಎರಡರಲ್ಲಿ ಸೋತಿದೆ. ಅಂಕಪಟ್ಟಿಯಲ್ಲಿ ಸದ್ಯ ನಾಲ್ಕನೇ ಸ್ಥಾನದಲ್ಲಿದೆ. ಆದರೂ ಪ್ಲೇ ಆಫ್ ಪ್ರವೇಶ ಇನ್ನೂ ಖಚಿತವಾಗಿಲ್ಲ. ಅದರಿಂದಾಗಿ ಭಾನುವಾರ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಆರ್‌ಸಿಬಿಯು ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ವಿರುದ್ಧ ಜಯಿಸುವುದು ಮಹತ್ವದ್ದಾಗಿದೆ. ಇದೇ ಕಾರಣಕ್ಕೆ ಈ ಪಂದ್ಯವು ಕುತೂಹಲದ ಕಣಜವಾಗಿದೆ.

ಈ ಕೌತುಕವನ್ನು ಕಣ್ತುಂಬಿಕೊಳ್ಳಲು ಆರ್‌ಸಿಬಿ ಅಭಿಮಾನಿಗಳ ದಂಡು ಕ್ರೀಡಾಂಗಣದತ್ತ ಚಿತ್ತ ನೆಟ್ಟಿದೆ. ಗ್ಯಾಲರಿಗಳು ಭರ್ತಿಯಾಗುವ ನಿರೀಕ್ಷೆ ಇದೆ. ಆದರೆ, ಆರ್‌ಸಿಬಿ ಬಳಗದಲ್ಲಿ ಒತ್ತಡವಿರುವುದಂತೂ ದಿಟ. ಏಕೆಂದರೆ, ಈಗಾಗಲೇ ನಾಲ್ಕರ ಹಂತಕ್ಕೆ ಲಗ್ಗೆ ಇಟ್ಟಿರುವ ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಬಳಗವನ್ನು ಸೋಲಿಸಿದರೆ ಪ್ಲೇ ಆಫ್ ಹಾದಿ ಸುಗಮವಾಗಲಿದೆ. ಆದರೆ ಇದು ಸುಲಭವಲ್ಲ.

ಗುಜರಾತ್ ತಂಡದ ನಾಯಕ ಹಾರ್ದಿಕ್ ಪಾಂಡ್ಯ ಮತ್ತು ಆರ್‌ಸಿಬಿ ತಂಡದ ವಿರಾಟ್ ಕೊಹ್ಲಿ ಅಭ್ಯಾಸ ನಡೆಸಿದರು –ಪ್ರಜಾವಾಣಿ ಚಿತ್ರಗಳು /ರಂಜು ಪಿ

ಬೆಂಗಳೂರು ತಂಡವು ಕಳೆದ 13 ಪಂದ್ಯಗಳಲ್ಲಿ ಮೂವರು ಬ್ಯಾಟರ್‌ಗಳ ಆಟದ ಮೇಲೆಯೇ ಅವಲಂಬಿತವಾಗಿದೆ. ನಾಯಕ ಫಫ್ (702 ರನ್), ಹೋದ ಪಂದ್ಯದಲ್ಲಿ ಶತಕ ಗಳಿಸಿದ ವಿರಾಟ್ ಕೊಹ್ಲಿ (538 ರನ್) ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ (389 ರನ್) ಅವರೇ ತಂಡದ ನೊಗವನ್ನು ಎಳೆದಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಿಂದ ನಿರೀಕ್ಷಿತ ಸಾಮರ್ಥ್ಯ ಮೂಡಿಬಂದಿಲ್ಲ.

'ಟೂರ್ನಿಯುದ್ದಕ್ಕೂ ಅಗ್ರ ಮೂವರು ಹೆಚ್ಚು ಹೊತ್ತು ಕ್ರೀಸ್‌ನಲ್ಲಿದ್ದು, ರನ್‌ಗಳನ್ನು ಗಳಿಸಿದ್ದಾರೆ. ಅದರಿಂದಾಗಿ ಮಧ್ಯಮ ಕ್ರಮಾಂಕದವರಿಗೆ ಹೆಚ್ಚು ಬ್ಯಾಟಿಂಗ್ ಅವಕಾಶ ಸಿಕ್ಕಿಲ್ಲ. ಆದ್ದರಿಂದ ಇದನ್ನು ತಂಡದ ದೌರ್ಬಲ್ಯವೆಂದು ಹೇಳಲಾಗದು' ಎಂದು ಅರ್‌ಸಿಬಿ ನಿರ್ದೇಶಕ ಮೈಕ್ ಹೆಸನ್ ಹೇಳಿದರು.

ಆರಂಭಿಕ ಪಂದ್ಯಗಳಲ್ಲಿ ಮಿಂಚಿದ್ದ ವೇಗಿ ಮೊಹಮ್ಮದ್ ಸಿರಾಜ್ ಕಳೆದ ಕೆಲವು ಪಂದ್ಯಗಳಲ್ಲಿ ಮಂಕಾಗಿದ್ದಾರೆ. ಆದರೆ, ವೇಯ್ನ್ ಪಾರ್ನೆಲ್, ಮೈಕೆಲ್ ಬ್ರೇಸ್‌ವೆಲ್ ಹಾಗೂ ವಣಿಂದು ಹಸರಂಗಾ ಕೆಲವು ಪಂದ್ಯಗಳಲ್ಲಿ ಆಸರೆಯಾಗಿದ್ದಾರೆ. ಗುಜರಾತ್ ತಂಡದಲ್ಲಿ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ (576 ರನ್) ಭರ್ಜರಿ ಫಾರ್ಮ್‌ನಲ್ಲಿದ್ದಾರೆ. ವೃದ್ಧಿಮಾನ್ ಸಹಾ, ಸಾಯಿ ಸುದರ್ಶನ್ ಹಾಗೂ ಮಿಲ್ಲರ್ ಅವರು ಮಧ್ಯಮ ಕ್ರಮಾಂಕದ ಭರವಸೆಯ ಆಟಗಾರರಾಗಿದ್ದಾರೆ. ಸ್ಪಿನ್ನರ್ ರಶೀದ್ ಖಾನ್ ಎದುರಾಳಿ ಬ್ಯಾಟರ್‌ಗಳಿಗೆ ಸಿಂಹಸ್ವಪ್ನರಾಗಿದ್ದಾರೆ. ಅಲ್ಲದೇ ಬ್ಯಾಟಿಂಗ್‌ನಲ್ಲಿಯೂ ಅಬ್ಬರಿಸುತ್ತಿದ್ದಾರೆ. ಇವರೆಲ್ಲರೂ ಆತಿಥೇಯ ಬೌಲರ್‌ಗಳಿಗೆ ಕಠಿಣ ಸವಾಲೊಡ್ಡುವ ಸಾಧ್ಯತೆ ಇದೆ.

ಪಂದ್ಯ ಆರಂಭ: ರಾತ್ರಿ 7.30

ಮಳೆಯಿಂದಾಗಿ ಅಭ್ಯಾಸ ವಿಳಂಬ

ಶನಿವಾರ ಸಂಜೆ ಸುಮಾರು 25 ನಿಮಿಷಗಳ ಕಾಲ ರಭಸದ ಮಳೆ ಸುರಿಯಿತು. ಇದರಿಂದಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಭ್ಯಾಸ ವಿಳಂಬವಾಗಿ ಆರಂಭವಾಯಿತು.

ಸಂಜೆ 6 ರಿಂದ ರಾತ್ರಿ 9ರವರೆಗೆ ಅಭ್ಯಾಸ ನಡೆಸಬೇಕಿತ್ತು. ಮಳೆ ಬಂದಿದ್ದರಿಂದ 6.45ಕ್ಕೆ ತಂಡವು ಕ್ರೀಡಾಂಗಣಕ್ಕೆ ಬಂದಿಳಿಯಿತು.

ಪಂದ್ಯ ನಡೆಯುವ ಭಾನುವಾರವೂ ಮಳೆ ಸುರಿಯುವ ಸಾಧ್ಯತೆ ಇದೆ.

ಪಿಚ್ ಹೇಗಿದೆ?: ಕಳೆದ ಪಂದ್ಯಗಳಲ್ಲಿ ಇಲ್ಲಿಯ ಪಿಚ್‌ನಲ್ಲಿ ರನ್‌ಗಳ ಹೊಳೆ ಹರಿದಿದೆ. ತವರಿನ ಹಾಗೂ ಪ್ರವಾಸಿ ತಂಡಗಳ ಬ್ಯಾಟರ್‌ಗಳು ಅಬ್ಬರಿಸಿದ್ದಾರೆ. ವೇಗಿ ಸಿರಾಜ್ ಇಲ್ಲಿ ಹೆಚ್ಚು ಯಶಸ್ವಿಯಾಗಿದ್ದಾರೆ. ಈ ಪಂದ್ಯದಲ್ಲಿಯೂ ಬ್ಯಾಟರ್‌ಗಳು ಅಬ್ಬರಿಸುವ ಸಾಧ್ಯತೆ ಹೆಚ್ಚು.

ಟಾಸ್ ಗೆದ್ದವರು ಫೀಲ್ಡಿಂಗ್ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆಯೇ ಹೆಚ್ಚು.

'ಸುಪ್ರೀಂ' ಆದೇಶ ಮರುಪರಿಶೀಲನೆ; ಕೇಂದ್ರ ಅರ್ಜಿ

ದೆಹಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತ ತೀರ್ಪು • ಸುಗ್ರೀವಾಜ್ಞೆ ಪ್ರಶ್ನಿಸಿ ಮೇಲ್ಮನವಿ– ಎಎಪಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿ ದೆಹಲಿಯ ಆಡಳಿತಾರೂಢ ಎಎಪಿ ಮತ್ತು ಕೇಂದ್ರ ಸರ್ಕಾರದ ಮಧ್ಯೆ ಮತ್ತೊಂದು ಸುತ್ತಿನ ಸಂಘರ್ಷ ಆರಂಭವಾಗಿದೆ.

ಪೊಲೀಸ್, ಸಾರ್ವಜನಿಕ ಸುವ್ಯವಸ್ಥೆ ಹಾಗೂ ಭೂಮಿ ಹೊರತುಪಡಿಸಿ, ಇತರ ಅಧಿಕಾರಿಗಳ ನೇಮಕ ಹಾಗೂ ವರ್ಗಾವಣೆ ಸೇರಿದಂತೆ ಉಳಿದ ಅಧಿಕಾರಗಳನ್ನು ದೆಹಲಿ ಸರ್ಕಾರಕ್ಕೆ ನೀಡಿ ಮೇ 11ರಂದು ಪ್ರಕಟಿಸಿದ್ದ ತೀರ್ಪನ್ನು ಮರುಪರಿಶೀಲಿಸಬೇಕು ಎಂದು ಕೇಂದ್ರವು ಸುಪ್ರೀಂ ಕೋರ್ಟ್‌ಗೆ ಅರ್ಜಿ ಹಾಕಿದೆ.

ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣವನ್ನು ಲೆಫ್ಟಿನೆಂಟ್ ಗವರ್ನರ್ ಅವರಿಗೆ ನೀಡಿ ಶುಕ್ರವಾರ ಸುಗ್ರೀವಾಜ್ಞೆ ಹೊರಡಿಸಿದ ಬೆನ್ನಲ್ಲೇ, ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ.

ಇನ್ನೊಂದೆಡೆ, ಸುಗ್ರೀವಾಜ್ಞೆ ಹೊರಡಿಸಿರುವ ಕೇಂದ್ರದ ನಡೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋಗುವುದಾಗಿ ಆಡಳಿತಾರೂಢ ಎಎಪಿ ಹೇಳಿದೆ.

ಅರವಿಂದ ಕೇಜ್ರಿವಾಲ್ ನೇತೃತ್ವದ ಸರ್ಕಾರ ಸುಸೂತ್ರವಾಗಿ ಕಾರ್ಯ ನಿರ್ವಹಿಸುವುದು ಕೇಂದ್ರಕ್ಕೆ ಇಷ್ಟವಿಲ್ಲ ಎಂಬುದು ಅದು ಹೊರಡಿಸಿರುವ ಈ ಸುಗ್ರೀವಾಜ್ಞೆಯಿಂದ ಸ್ಪಷ್ಟವಾಗುತ್ತದೆ
ಸಂಜಯ್ ಸಿಂಗ್
ಎಎಪಿಯ ರಾಜ್ಯಸಭಾ ಸದಸ್ಯ

ಬೇಸಿಗೆ ರಜೆ ಕಾರಣ 6 ವಾರ ಸುಪ್ರೀಂ ಕೋರ್ಟ್ ಕಲಾಪಗಳು ಇರುವುದಿಲ್ಲ. ಇದೇ ಸಮಯವನ್ನು ನೋಡಿಯೇ ಕೇಂದ್ರ ಉದ್ದೇಶಪೂರ್ವಕವಾಗಿ ಸುಗ್ರೀವಾಜ್ಞೆ ಹೊರಡಿಸಿದೆ
ಆತಿಶಿ ಮಾರ್ಲೆನಾ
ದೆಹಲಿ ಶಿಕ್ಷಣ ಸಚಿವೆ

'ಕೇಂದ್ರ ಮಂಡಿಸಿದ್ದ ಅಹವಾಲನ್ನು ಪರಿಗಣಿಸುವಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು ವಿಫಲವಾಗಿದೆ. ದೋಷಗಳಿರುವುದು ಸ್ಪಷ್ಟವಾಗಿದೆ' ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಸಲ್ಲಿಸಿರುವ ಮರುಪರಿಶೀಲನಾ ಅರ್ಜಿಯಲ್ಲಿ ಹೇಳಲಾಗಿದೆ.

ಸುಗ್ರೀವಾಜ್ಞೆಯಲ್ಲಿ ಏನಿದೆ?: ಕೇಂದ್ರ ಸರ್ಕಾರ ಹೊರಡಿಸಿರುವ ಸುಗ್ರೀವಾಜ್ಞೆಯಂತೆ, 'ರಾಷ್ಟ್ರ ರಾಜಧಾನಿ ನಾಗರಿಕ ಸೇವಾ ಪ್ರಾಧಿಕಾರ'ವನ್ನು ರಚಿಸಲಾಗುತ್ತದೆ. ದೆಹಲಿ ಸರ್ಕಾರದ ಮುಖ್ಯಮಂತ್ರಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದು, ಮುಖ್ಯ ಕಾರ್ಯದರ್ಶಿ, ಗೃಹ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಅವರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಈ ಇಬ್ಬರೂ ಅಧಿಕಾರಿಗಳನ್ನು ಕೇಂದ್ರವೇ ನೇಮಿಸುತ್ತದೆ.

ಪ್ರಾಧಿಕಾರ ಕೈಗೊಳ್ಳುವ ನಿರ್ಣಯವನ್ನು ಮತಕ್ಕೆ ಹಾಕಬೇಕು. ಬಹುಮತದ ಆಧಾರದ ಮೇಲೆ ನಿರ್ಣಯವನ್ನು ಅಂಗೀಕರಿಸಬೇಕು. ಒಂದು ವೇಳೆ ಯಾವುದೇ ವಿಷಯ ಕುರಿತು ಭಿನ್ನಾಭಿಪ್ರಾಯ ಕಂಡುಬಂದಲ್ಲಿ ಲೆಫ್ಟಿನೆಂಟ್ ಗವರ್ನರ್ ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಸುಗ್ರೀವಾಜ್ಞೆಯಲ್ಲಿ ಹೇಳಲಾಗಿದೆ.

ಕೋರ್ಟ್ ಆದೇಶಕ್ಕೆ ಅನುಗುಣವಾಗಿ ಸುಗ್ರೀವಾಜ್ಞೆ: ಬಿಜೆಪಿ

ನವದೆಹಲಿ (ಪಿಟಿಐ): ದೆಹಲಿಯ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಹೊರಡಿಸಿರುವುದನ್ನು ಬಿಜೆಪಿ ಶನಿವಾರ ಸಮರ್ಥಿಸಿಕೊಂಡಿದೆ.

'ಈ ಸುಗ್ರೀವಾಜ್ಞೆಯು, ದೆಹಲಿಯ ಸೇವಾ ವಿಷಯಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಹಾಗೂ ಸಂವಿಧಾನದ ಆಶಯಗಳಿಗೆ ಅನುಗುಣವಾಗಿಯೇ ಇದೆ. ದೆಹಲಿಯ ಸಾಮಾನ್ಯ ಪ್ರಜೆಯ ಹಿತದೃಷ್ಟಿಯಿಂದಲೂ ಇಂಥ ಕ್ರಮ ತೆಗೆದುಕೊಳ್ಳಲಾಗಿದೆ' ಎಂದು ಬಿಜೆಪಿ ವಕ್ತಾರ ಗೌರವ ಭಾಟಿಯಾ ಸುದ್ದಿಗೋಷ್ಠಿಯಲ್ಲಿ ಹೇಳಿದರು. 'ದೆಹಲಿಯು ಕೇಂದ್ರಾಡಳಿತ ಪ್ರದೇಶ. ಇದರ ಆಡಳಿತಕ್ಕೆ ಸಂಬಂಧಿಸಿ ಸಂವಿಧಾನದ '239ಎಎ' ವಿಧಿಯಡಿ ಸಂಸತ್‌ಗೆ ಅಧಿಕಾರ ನೀಡಲಾಗಿದೆ. ದೆಹಲಿ ಎಂಬುದು 'ಅರವಿಂದ ಕೇಜ್ರಿವಾಲ್ ಪ್ರದೇಶ'ವಲ್ಲ. ಇಲ್ಲಿ ಸಂವಿಧಾನದ ಪ್ರಕಾರವೇ ಆಡಳಿತ ನಡೆಯುತ್ತದೆ' ಎಂದು ವಾಗ್ದಾಳಿ ನಡೆಸಿದರು.

'ಕೇಂದ್ರದ ವಿರುದ್ಧ ಮಹಾ ರ‍್ಯಾಲಿ'

ನವದೆಹಲಿ (ಪಿಟಿಐ): ಸೇವಾ ವಿಷಯಗಳ ವಿಚಾರವಾಗಿ ಸುಗ್ರೀವಾಜ್ಞೆ ಹೊರಡಿಸಿರುವ ಕೇಂದ್ರ ಸರ್ಕಾರದ ನಡೆ ವಿರುದ್ಧ 'ಮಹಾ ರ‍್ಯಾಲಿ' ಆಯೋಜಿಸಿ, ಜನರ ಬಳಿ ಹೋಗುತ್ತೇವೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಸುಗ್ರೀವಾಜ್ಞೆ ಹೊರಡಿಸಿರುವುದು ಒಕ್ಕೂಟ ವ್ಯವಸ್ಥೆ ಮೇಲಿನ ದಾಳಿಯಾಗಿದೆ. ಸಂಬಂಧಪಟ್ಟ ಮಸೂದೆಗೆ ರಾಜ್ಯಸಭೆಯಲ್ಲಿ ಅಂಗೀಕಾರ ದೊರೆಯದಂತೆ ಮಾಡಲು ವಿವಿಧ ಪಕ್ಷಗಳ ನಾಯಕರೊಂದಿಗೆ ಚರ್ಚೆ ನಡೆಸಲಾಗುವುದು' ಎಂದರು. 'ಈ ವಿಷಯದಲ್ಲಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನೊಂದಿಗೆ ನೇರ ಸಂಘರ್ಷಕ್ಕೆ ಇಳಿದಿದೆ. ಸೇವಾ ವಿಷಯಗಳಿಗೆ ಸಂಬಂಧಪಟ್ಟ ತೀರ್ಪನ್ನು ಬುಡಮೇಲು ಮಾಡುವ ಸಲುವಾಗಿಯೇ, ಸುಪ್ರೀಂ ಕೋರ್ಟ್‌ನ ರಜೆ ಆರಂಭಗೊಂಡ ಕೆಲವೇ ಗಂಟೆಗಳಲ್ಲಿ ಈ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ ಎಂದು ಆರೋಪಿಸಿದರು.

ಆರ್ಥಿಕತೆ ಮೇಲಿಲ್ಲ ಪ್ರತಿಕೂಲ ಪರಿಣಾಮ: ಪನಗರಿಯಾ

ನವದೆಹಲಿ (ಪಿಟಿಐ): ₹2 ಸಾವಿರ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವ ನಿರ್ಧಾರದಿಂದ ದೇಶದ ಆರ್ಥಿಕತೆಯ ಮೇಲೆ ಯಾವುದೇ ರೀತಿಯ ಪ್ರತಿಕೂಲ ಪರಿಣಾಮ ಇಲ್ಲ ಎಂದು ನೀತಿ ಆಯೋಗದ ಮಾಜಿ ಉಪಾಧ್ಯಕ್ಷ ಅರವಿಂದ ಪನಗರಿಯಾ ಮತ್ತು ಮಾಜಿ ಹಣಕಾಸು ಕಾರ್ಯದರ್ಶಿ ಸುಭಾಷ್ ಚಂದ್ರ ಗರ್ಗ್ ಅಭಿಪ್ರಾಯಪಟ್ಟಿದ್ದಾರೆ.

₹2 ಸಾವಿರದ ನೋಟುಗಳನ್ನು ಕಡಿಮೆ ಮುಖಬೆಲೆಯ ನೋಟುಗಳೊಂದಿಗೆ ಬದಲಿಸಿಕೊಳ್ಳುವ ಅಥವಾ ಬ್ಯಾಂಕ್‌ನಲ್ಲಿ ಠೇವಣಿ ಇಡುವ ಅವಕಾಶ ಇದೆ. ಹೀಗಾಗಿ ಹಣದ ಪೂರೈಕೆಗೆ ಅಡ್ಡಿಯಾಗುವುದಿಲ್ಲ ಎಂದು ಪನಗರಿಯಾ ಹೇಳಿದ್ದಾರೆ.

ಹಣವನ್ನು ಅಕ್ರಮವಾಗಿ ಸಾಗಿಸುವುದನ್ನು ಇನ್ನಷ್ಟು ಕಷ್ಟವಾಗಿಸುವುದು ಈ ನಿರ್ಧಾರದ ಹಿಂದಿನ ಉದ್ದೇಶವಾಗಿದೆ ಎಂದೂ ಅವರು ತಿಳಿಸಿದ್ದಾರೆ.

ಸದ್ಯ ದೇಶದಲ್ಲಿ ಚಲಾವಣೆಯಲ್ಲಿ ಇರುವ ನೋಟುಗಳಲ್ಲಿ ₹2 ಸಾವಿರದ ನೋಟುಗಳ ಪ್ರಮಾಣವು ಶೇ 10.8ರಷ್ಟು ಮಾತ್ರವೇ ಇದೆ. ಬಹುಶಃ ಅದರಲ್ಲಿ ಹೆಚ್ಚಿನ ಪಾಲು ಅಕ್ರಮ ವಹಿವಾಟುಗಳಿಗೆ ಬಳಕೆಯಾಗುತ್ತಿದೆ ಎಂದು ಪನಗರಿಯಾ ಹೇಳಿದ್ದಾರೆ.

ಪ್ರತಿಪಕ್ಷಗಳ ಟೀಕೆ: ಆರ್‌ಬಿಐ ನಿರ್ಧಾರವನ್ನು ವಿರೋಧ ಪಕ್ಷಗಳ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಮಮತಾ ಬ್ಯಾನರ್ಜಿ, ಉದ್ಧವ್ ಠಾಕ್ರೆ ಮತ್ತಿತರರು ಟೀಕಿಸಿದ್ದಾರೆ.

'ನೋಟು ರದ್ದತಿಯ ತೀರ್ಮಾನ ಕೈಗೊಳ್ಳುವ ಮೂಲಕ ನೀವು ಆರ್ಥಿಕತೆಯನ್ನು ಅಧೋಗತಿಗೆ ತಳ್ಳಿದಿರಿ. ನಿಮ್ಮ ತಪ್ಪು ನಿರ್ಧಾರದಿಂದಾಗಿ ಇಡೀ ಅಸಂಘಟಿತ ವಲಯವೇ ನಾಶವಾಗಿ ಹೋಗಿತ್ತು. ಇದರಿಂದಾಗಿ ಕೋಟ್ಯಂತರ ಉದ್ಯೋಗ ನಷ್ಟವೂ ಉಂಟಾಗಿತ್ತು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟ್ವೀಟ್ ಮಾಡಿದ್ದಾರೆ.

ನೋಟು ರದ್ದತಿ ಅಲ್ಲ: ಗರ್ಗ್

ಆರ್‌ಬಿಐ ಕರೆನ್ಸಿ ನೋಟುಗಳನ್ನು ಹಿಂಪಡೆಯುವುದು ನೋಟು ರದ್ದತಿ ಆಗುವುದಿಲ್ಲ. ಕರೆನ್ಸಿ ನೋಟುಗಳ ಕಾನೂನು ಮಾನ್ಯತೆ ರದ್ದು ಮಾಡುವ ಅಧಿಕಾರ ಇರುವುದು ಕೇಂದ್ರ ಸರ್ಕಾರಕ್ಕೇ ಹೊರತು ಆರ್‌ಬಿಐಗೆ ಅಲ್ಲ. ಹೀಗಾಗಿ ₹2 ಸಾವಿರ ಮುಖಬೆಲೆಯ ನೋಟುಗಳ ಕಾನೂನು ಮಾನ್ಯತೆಯು ಮುಂದುವರಿಯಲಿದೆ ಎಂದು ಸುಭಾಷ್ ಚಂದ್ರ ಗರ್ಗ್ ಸ್ಪಷ್ಟಪಡಿಸಿದ್ದಾರೆ.

'ಲವ್ ಜಿಹಾದ್' ವಿರುದ್ಧದ ಆತ್ಮರಕ್ಷಣೆಗಾಗಿ ಕಠಾರಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಲ್ಲಿನ ಕಚ್ ಜಿಲ್ಲೆಯಲ್ಲಿ ಶುಕ್ರವಾರ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ 'ಲವ್ ಜಿಹಾದ್' ವಿರುದ್ಧದ ಆತ್ಮರಕ್ಷಣೆಗಾಗಿ 530 ಮಹಿಳೆಯರಿಗೆ ಕಠಾರಿಗಳನ್ನು ವಿತರಿಸಲಾಗಿದೆ.

ದ್ವೇಷಭಾಷಣದ ಆರೋಪದಲ್ಲಿ ಬಂಧಿಯಾಗಿ ಪ್ರಸ್ತುತ ಜಾಮೀನಿನ ಮೇರೆಗೆ ಹೊರಗಿರುವ ಬಲಪಂಥೀಯ ಕಾರ್ಯಕರ್ತೆ ಕಾಜಲ್ ಹಿಂದೂಸ್ತಾನಿ ಕೂಡಾ ಈ ಕಾರ್ಯಕ್ರಮದ ಭಾಗವಾಗಿದ್ದರು ಎನ್ನಲಾಗಿದೆ. ಕಚ್ ಜಿಲ್ಲೆಯಲ್ಲಿ 3 ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ಸುಮಾರು 700 ಮಹಿಳೆಯರು, ಬಿಜೆಪಿ ಶಾಸಕರು ಸೇರಿದಂತೆ ಸ್ಥಳೀಯ ರಾಜಕಾರಣಿಗಳು ಪಾಲ್ಗೊಂಡಿದ್ದರು ಎಂದು ಮೂಲಗಳು ತಿಳಿಸಿವೆ.

'ಆತ್ಮರಕ್ಷಣೆಯ ಭಾಗವಾಗಿ ಬಳಸಲು ಮಹಿಳೆಯರಿಗೆ ನಾವು 530 ಕಠಾರಿಗಳನ್ನು ಹಸ್ತಾಂತರಿಸಿದ್ದೇವೆ. ಇದು 'ಲವ್ ಜಿಹಾದ್' ವಿರುದ್ಧ ಹೋರಾಡಲು ಆಯೋಜಿಸಿದ್ದ ಕಾರ್ಯಕ್ರಮವಾಗಿತ್ತು' ಎಂದು ಕಚ್ ಕಡ್ವಾ ಪಾಟೀದಾರ್ ಸಮಾಜದ ಪ್ರಧಾನ ಕಾರ್ಯದರ್ಶಿ ಹರ್‌ಸುಖ್ ರುಡಾನಿ 'ಪ್ರಜಾವಾಣಿ'ಗೆ ದೂರವಾಣಿ ಮೂಲಕ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಿಬಿಐ ವಿಚಾರಣೆಗೆ ವಾಂಖೆಡೆ ಹಾಜರು

ಮುಂಬೈ (ಪಿಟಿಐ): 'ಮಾದಕ ವಸ್ತು ನಿಯಂತ್ರಣ ಬ್ಯೂರೊದ (ಎನ್‌ಸಿಬಿ) ಮುಂಬೈ ವಲಯದ ಮಾಜಿ ಮುಖ್ಯಸ್ಥ ಸಮೀರ್ ವಾಂಖೆಡೆ ಅವರು ಸಿಬಿಐ ವಿಚಾರಣೆಗೆ ಶನಿವಾರ ಹಾಜರಾದರು. ಅವರನ್ನು ಅಧಿಕಾರಿಗಳು 5 ಗಂಟೆಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಿದ್ದರು' ಎಂದು ಅಧಿಕಾರಿಗಳು ತಿಳಿಸಿದರು.

ಮಿಗ್–21 ವಿಮಾನಗಳ ಹಾರಾಟ ತಾತ್ಕಾಲಿಕ ಸ್ಥಗಿತ

ನವದೆಹಲಿ (ಪಿಟಿಐ): 'ಭಾರತೀಯ ವಾಯುಪಡೆಯು (ಐಎಎಫ್) ಸುಮಾರು 50, ಮಿಗ್–21 ಯುದ್ಧ ವಿಮಾನಗಳ ಹಾರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ತೀರ್ಮಾನಿಸಿದೆ' ಎಂದು ಮೂಲಗಳು ಶನಿವಾರ ತಿಳಿಸಿವೆ.

ಎರಡು ವಾರಗಳ ಹಿಂದೆ ಮಿಗ್–21 ವಿಮಾನವೊಂದು ರಾಜಸ್ಥಾನದ ಹನುಮಾನಗಢದ ಮನೆಯೊಂದರ ಮೇಲೆ ಪತನವಾಗಿತ್ತು. ಘಟನೆಯಲ್ಲಿ ಮನೆಯಲ್ಲಿದ್ದ ಮೂವರು ಮಹಿಳೆಯರು ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

'ಎಲ್ಲಾ ಮಿಗ್ ವಿಮಾನಗಳನ್ನೂ ತಾಂತ್ರಿಕ ಪರಿಶೀಲನೆಗೆ ಕಳುಹಿಸಲಾಗುತ್ತದೆ' ಎಂದು ಮೂಲಗಳು ಹೇಳಿವೆ.

9 ಗಂಟೆಗೂ ಹೆಚ್ಚು ಕಾಲ ಅಭಿಷೇಕ್ ವಿಚಾರಣೆ

ಕೋಲ್ಕತ್ತ (ಪಿಟಿಐ): ಕೇಂದ್ರೀಯ ತನಿಖಾ ದಳವು (ಸಿಬಿಐ) ಶಿಕ್ಷಕರ ನೇಮಕಾತಿ ಹಗರಣ ಸಂಬಂಧ, ಟಿಎಂಸಿ ನಾಯಕ ಅಭಿಷೇಕ್ ಬ್ಯಾನರ್ಜಿ ಅವರನ್ನು ಶನಿವಾರ 9 ಗಂಟೆಗಳಿಗೂ ಹೆಚ್ಚು ಕಾಲ ವಿಚಾರಣೆಗೆ ಒಳಪಡಿಸಿದೆ.

ವಿಚಾರಣೆ ಎದುರಿಸಿ ಹೊರಬಂದ ಬಳಿಕ ಮಾತನಾಡಿದ ಅಭಿಷೇಕ್, 'ಸಿಬಿಐ ಅಧಿಕಾರಿಗಳು ಒಂಬತ್ತುವರೆ ಗಂಟೆ ನನ್ನ ವಿಚಾರಣೆ ನಡೆಸಿದ್ದಾರೆ. ಇದರಿಂದ ಸಮಯ ವ್ಯರ್ಥವಾಯಿತೇ ವಿನಃ ಯಾರಿಗೂ ಪ್ರಯೋಜನವಾಗಲಿಲ್ಲ. ವಿಚಾರಣೆ ವೇಳೆ ಅಧಿಕಾರಿಗಳಿಗೆ ಎಲ್ಲಾ ಬಗೆಯ ಸಹಕಾರ ನೀಡಿದ್ದೇನೆ' ಎಂದಿದ್ದಾರೆ.

'ನಾನು ದೆಹಲಿ ದೊರೆಗಳ ಸಾಕು ನಾಯಿಯಾಗಲು ನಿರಾಕರಿಸಿದ್ದೆ. ಹೀಗಾಗಿಯೇ ನನ್ನನ್ನು ಈ ಪ್ರಕರಣದಲ್ಲಿ ಗುರಿಯಾಗಿಸಲಾಗಿದೆ' ಎಂದು ದೂರಿದ್ದಾರೆ.

'ಬಿಜೆಪಿಯವರಿಗೆ ತಲೆಬಾಗದ ಟಿಎಂಸಿ ನಾಯಕರಿಗೆ ಕಿರುಕುಳ ನೀಡಲಾಗುತ್ತಿದೆ. ಬಿಜೆಪಿಯ ಅನೇಕ ನಾಯಕರ ವಿರುದ್ಧ ಗಂಭೀರ ಆರೋಪಗಳಿವೆ. ಹೀಗಿದ್ದರೂ ಅವರ ವಿರುದ್ಧ ಯಾವುದೇ ತನಿಖೆ ನಡೆಸುತ್ತಿಲ್ಲ' ಎಂದು ಆರೋಪಿಸಿದ್ದಾರೆ.

ಭಾಗಶಃ ದೋಷಾರೋಪ ಪಟ್ಟಿ ಸಲ್ಲಿಕೆ 21ನೇ ವಿಧಿಗೆ ವಿರುದ್ಧ: 'ಸುಪ್ರೀಂ'

ನವದೆಹಲಿ (ಪಿಟಿಐ): ತನಿಖೆಯ ಯಾವುದೋ ಒಂದು ಅಂಶವನ್ನು ಉಲ್ಲೇಖಿಸಿ,ಭಾಗಶಃ ದೋಷಾರೋಪ ಪಟ್ಟಿ ಸಲ್ಲಿಸುವುದು ಸಂವಿಧಾನದ 21ನೇ ವಿಧಿಗೆ ವಿರುದ್ಧವಾದುದು. ಇದು, 'ಡಿಫಾಲ್ಟ್ ಜಾಮೀನು' ಪಡೆಯಲು ಆರೋಪಿಯು ಹೊಂದಿರುವ ಹಕ್ಕನ್ನು ಕಸಿಯುತ್ತದೆ ಎಂದು ದೆಹಲಿ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಭ್ರಷ್ಟಾಚಾರ ಆರೋಪದಡಿ ಸಿಬಿಐನಿಂದ ಬಂಧಿತರಾಗಿರುವ ಅವಿನಾಶ್ ಜೈನ್ ಎಂಬವರಿಗೆ 'ಡಿಫಾಲ್ಟ್ ಜಾಮೀನು' ನೀಡಿದ ಸಂದರ್ಭದಲ್ಲಿ ನ್ಯಾಯಮೂರ್ತಿ ಅಮಿತ್ ಶರ್ಮಾ ಈ ಮಾತು ಹೇಳಿದರು.ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ, ಆರೋಪಿಯು ಕಾನೂನುಬದ್ಧವಾಗಿ ತಂತಾನೆ ಪಡೆಯಬಹುದಾದ ಜಾಮೀನಿಗೆ 'ಡಿಫಾಲ್ಟ್ ಜಾಮೀನು' ಎನ್ನಲಾಗುತ್ತದೆ.

'ಆರೋಪಿಯ ವಿರುದ್ಧ ಭ್ರಷ್ಟಾಚಾರ ತಡೆ ಕಾಯ್ದೆಯಡಿ ಪ್ರಕರಣ ದಾಖಲಿಸಿರುವ ಸಿಬಿಐ, ತನಿಖೆಯನ್ನೇ ಪೂರ್ಣಗೊಳಿಸಿಲ್ಲ. ಆದರೂ, ಅದು ದೋಷಾರೋಪ ಪಟ್ಟಿ ಸಲ್ಲಿಸಲು ಮುಂದಾಗಿದೆ' ಎಂದು ಹೈಕೋರ್ಟ್ ಹೇಳಿದೆ.

ಆರೋಪಿ ಪರ ಹಿರಿಯ ವಕೀಲ ವಿಕಾಸ್ ಪಾಹ್ವಾ ವಾದ ಮಂಡಿಸಿದರು.

ಕೆಸಿಎಂಸಿ ಸಭೆಯಲ್ಲಿ ಟ್ರಸ್ಟ್‌ನ ಕಾರ್ಯದರ್ಶಿ ಪ್ರಶಾಂತ ಅಯ್ಯಂಗಾರ್ ಮಾತನಾಡಿದರು. ಜ್ಯೋತ್ಸ್ನಾ ಶ್ರೀಕಾಂತ ಶಾಸ್ತ್ರಿ, ಆರ್.ಎಸ್. ನಂದಕುಮಾರ್, ಶ್ರೀಕಾಂತ್, ನಾಗಮಣಿ ಶ್ರೀನಾಥ್, ರಮಾ, ವಸಂತ ಮಾಧವಿ ಭಾಗವಹಿಸಿದ್ದರು.

ನಾದದಲೆಗಾಗಿ ನೊಂದವರ ಸೊಲ್ಲು

ನಿರ್ವಹಣೆ: ಉಮಾ ಅನಂತ್

ಕರ್ನಾಟಕ ಶಾಸ್ತ್ರೀಯ ಸಂಗೀತ ಸಾಮವೇದ ಕಾಲದಿಂದಲೂ ಅಸ್ಮಿತೆ ಕಾಪಾಡಿಕೊಂಡು ಬಂದಿದೆ. ವಾಗ್ಗೇಯಕಾರರು, ಘನ ವಿದ್ವಾಂಸರು ಈ ಸಾಂಪ್ರದಾಯಿಕ ಸಂಗೀತಕ್ಕೆ ಹೆಚ್ಚಿನ ಗಮನಕೊಟ್ಟು ಪೊರೆಯುತ್ತಾ ಬಂದಿದ್ದಾರೆ. ಲಯಬದ್ಧ, ಶಾಸ್ತ್ರಸಮ್ಮತ ಸಂಗೀತ ಕಛೇರಿಗಳು ಕಾಲಾಂತರದಲ್ಲಿ ವಿಶ್ವಮಟ್ಟದಲ್ಲೂ ಛಾಪು ಮೂಡಿಸಿದವು.

ಇಂದಿಗೂ ಕರ್ನಾಟಕ ಶಾಸ್ತ್ರೀಯ ಸಂಗೀತ ವಿಶಿಷ್ಟ ಶೈಲಿಯಿಂದ ಕೇಳುಗರನ್ನು ಸೆಳೆಯುತ್ತಿದೆ. ಆದರೂ ಪ್ರತಿಷ್ಠಿತ ಉತ್ಸವಗಳಲ್ಲಿ, ವೇದಿಕೆಗಳಲ್ಲಿ ಕಲಾವಿದರಿಗೆ ಅವಕಾಶ ಮರೀಚಿಕೆಯಾಗುತ್ತಿದೆ ಎನ್ನುವ ಸೊಲ್ಲು ಎದ್ದಿದೆ. ಸರ್ಕಾರಿ ಉತ್ಸವಗಳಲ್ಲಿ ಹೊರನಾಡಿನ ಕಲಾವಿದರಿಗೆ ಅಧಿಕ ಸಂಭಾವನೆ ನೀಡಿ ಅವಕಾಶ ಕಲ್ಪಿಸಿಕೊಡುತ್ತಿರುವುದು, ಕರ್ನಾಟಕ ಸಂಗೀತವನ್ನು ನಿರ್ಲಕ್ಷಿಸುವುದಕ್ಕೆ ಇಲ್ಲಿನ ಕಲಾವಿದರಿಗೆ ಸಹಜವಾಗಿಯೇ ಅಸಮಾಧಾನವಿದೆ.

ಹಿರಿಯ ಕರ್ನಾಟಕ ಸಂಗೀತ ಕಲಾವಿದರೆಲ್ಲ ಒಟ್ಟಾಗಿ ಕರ್ನಾಟಕ ಶಾಸ್ತ್ರೀಯ ಸಂಗೀತ ಒಕ್ಕೂಟ ಟ್ರಸ್ಟ್ (ಕೆಸಿಎಂಸಿ ಟ್ರಸ್ಟ್) ಅನ್ನು ಬೆಂಗಳೂರಿನಲ್ಲಿ ಹುಟ್ಟುಹಾಕಿ ಈಚೆಗೆ ಸಭೆ ನಡೆಸಿದರು. ಟ್ರಸ್ಟ್‌ನ ಮೊದಲ ಸಭೆ ಇದು. ಕಲಾವಿದರಾದ ಸುಮಾ ಸುಧೀಂದ್ರ, ನಾಗಮಣಿ ಶ್ರೀನಾಥ್, ಆರ್.ಎಸ್. ನಂದಕುಮಾರ್, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಪ್ರಶಾಂತ್ ಅಯ್ಯಂಗಾರ್, ವಸಂತ ಮಾಧವಿ, ಟಿ.ಎಸ್. ಸತ್ಯವತಿ, ಎಂ.ಎಸ್. ಶೀಲಾ, ಜ್ಯೋತ್ಸ್ನಾ ಶ್ರೀಕಾಂತ್, ಪಿ. ರಮಾ ಸೇರಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪ್ರಮುಖರು ಇಲ್ಲಿ ಬಹು ಮುಖ್ಯ ಚರ್ಚೆ ನಡೆಸಿ, ನಿರ್ಣಯಗಳನ್ನು ಕೈಗೊಂಡರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ಪಡೆದು ನಡೆಸುವ ಸಂಗೀತ ಕಛೇರಿಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರಿಗೆ ಶೇ 80ರಷ್ಟು ಅವಕಾಶ ನೀಡಬೇಕು, ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಅವಕಾಶ ನೀಡಬೇಕು, ಪ್ರಶಸ್ತಿಗಳಿಗೂ ಪರಿಗಣಿಸಬೇಕು, ಸ್ವಜನ ಪಕ್ಷಪಾತವನ್ನು ತಡೆಯಬೇಕು, ಆಕಾಶವಾಣಿಯಲ್ಲಿ ನಡೆಯುವ ಧ್ವನಿ ಪರೀಕ್ಷೆಯಲ್ಲಿ ಪಾರದರ್ಶಕತೆ ತರಬೇಕು. ಈ ಬಗ್ಗೆ ನವದೆಹಲಿಯ ಕೇಂದ್ರಕ್ಕೂ ಪತ್ರ ಬರೆಯಬೇಕು ಎಂಬುದು ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು. ಕರ್ನಾಟಕ ಶಾಸ್ತ್ರೀಯ ಸಂಗೀತಗಾರರ ಈ ಹೊತ್ತಿನ ಒಳದನಿ ಏನು ಎನ್ನುವುದರನ್ನು ಅರಿಯಲು ‘ಭಾನುವಾರದ ಪುರವಣಿ’ ಕೆಲವರನ್ನು ಮಾತಿಗೆಳೆಯಿತು. ಅದರ ಸಾರ ಇಲ್ಲಿದೆ.

ನಿರ್ಲಕ್ಷ್ಯ ಬೇಡ; ಅವಕಾಶ ಕೊಡಿ...

ನಾಗಮಣಿ ಶ್ರೀನಾಥ್, ಗಾಯಕಿ

ಸಂಗೀತ ಕಲಾವಿದರ ಕ್ಷೇಮಾಭಿವೃದ್ಧಿಗಾಗಿ ಈ ವೇದಿಕೆ ಶುರು ಮಾಡಿದೆವು. ಇದರಲ್ಲಿ ಒಂಬತ್ತು ಜನ ಸದಸ್ಯರಿದ್ದೇವೆ. ನಮ್ಮ ಬೇಡಿಕೆಯಿಷ್ಟೆ: ಸಂಗೀತ ಸಮ್ಮೇಳನ, ಉತ್ಸವಗಳಲ್ಲಿ ಕರ್ನಾಟಕ ಸಂಗೀತ ಕಲಾವಿದರನ್ನು ನಿರ್ಲಕ್ಷ್ಯ ಮಾಡಬೇಡಿ ಎಂಬುದು. ಹಾಗೆಂದು ಹೊರರಾಜ್ಯದ ಕಲಾವಿದರನ್ನು ಕರೆಸೋದು ಬೇಡ ಅಂತಲ್ಲ. ಕರ್ನಾಟಕ ಸರ್ಕಾರದ ಸಂಸ್ಕೃತಿ ಇಲಾಖೆ, ಸರ್ಕಾರದ ಹಣ, ಕೇಂದ್ರದ ಹಣ, ಪ್ರಾಯೋಜಕರ ಹಣ ಪಡೆದು ಹೊರಗಡೆ ಕಲಾವಿದರಿಗೆ ಶೇ 80ರಷ್ಟು ಅವಕಾಶ ಕೊಡ್ತಾರೆ. ನಮಗೆ ಶೇ 20ರಷ್ಟು ಕೊಡುವುದು ಯಾವ ನ್ಯಾಯ? ಕನಿಷ್ಠ ಶೇ 50ರಷ್ಟು ಅವಕಾಶವಾದ್ರೂ ನಮಗೆ ಕೊಡಿ ಅಂತ ನಮ್ಮ ಬೇಡಿಕೆ.

ರಾಮೋತ್ಸವದಂಥ ಕಾರ್ಯಕ್ರಮ ತಿಂಗಳು ಪೂರ್ತಿ ನಡೆಯುತ್ತೆ. ಒಂದು ತಿಂಗಳ 30 ಕಛೇರಿಗಳಲ್ಲಿ 15 ದಿನ ನಮಗೆ ಕೊಡಿ ಎಂಬುದು ನಮ್ಮ ಮನವಿ. 50 ವರ್ಷ ಸಂಗೀತಕ್ಕಾಗಿ ಸೇವೆ ಸಲ್ಲಿಸಿದ ಕಲಾವಿದರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡದಿದ್ದರೆ ಹೇಗೆ?

ಕೇಂದ್ರ ಸಂಗೀತ ಅಕಾಡೆಮಿಯ ಎಕ್ಸಿಕ್ಯುಟಿವ್ ಬೋರ್ಡ್ ಮೆಂಬರ್ ನಾನು. ಬಹಳಷ್ಟು ಕಲಾವಿದರಿಗೆ ಇದುವರೆಗೆ ಕೇಂದ್ರ ಪ್ರಶಸ್ತಿ ಸಿಕ್ಕಿರಲೇ ಇಲ್ಲ. ನಾನು ಈ ವರ್ಷ ಜೋರಾಗಿ ಧ್ವನಿ ಎತ್ತಿ ರಾಜ್ಯದ 24 ಕಲಾವಿದರಿಗೆ ಪ್ರಶಸ್ತಿ ಕೊಡಿಸಿರುವೆ. ಕೇಂದ್ರ ಅಕಾಡೆಮಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಪ್ರಶಸ್ತಿಗಳನ್ನು ಕೊಟ್ಟೇ ಇರಲಿಲ್ಲ. ಈ ವರ್ಷ ಒಟ್ಟಿಗೇ ಕೊಟ್ಟಿದೆ. ಸುಗಮ ಸಂಗೀತ, ಕರ್ನಾಟಕ ಸಂಗೀತ, ನಾಟಕ. ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಸಾಧಕರಿಗೆ ಅದರಲ್ಲೂ 70 ವರ್ಷ ಮೇಲ್ಪಟ್ಟವರಿಗೆ ಪ್ರಶಸ್ತಿ ಕೊಡಿಸಿದ್ದೀವಿ.

ಸದ್ಯ ಕೆಸಿಎಂಸಿ ಒಮ್ಮತದಿಂದ ಕರ್ನಾಟಕ ಕಲಾವಿದರ ಪರವಾಗಿ ಕೆಲಸ ಮಾಡ್ತೀವಿ. ಕನ್ನಡನಾಡಿನ ಎಲ್ಲ ಹಿರಿಯ ಕಿರಿಯ ಕಲಾವಿದರು ನಮ್ಮೊಂದಿಗೆ ಕೈಜೋಡಿಸ್ತಾ ಇದ್ದಾರೆ. ಇದು ಸಂತೋಷದ ವಿಷಯ.

ಅರ್ಹತೆಗೆ ತಕ್ಕ ಅವಕಾಶ ಕೊಡಿ..

ವಾರಿಜಾಶ್ರೀ ವೇಣುಗೋಪಾಲ್

ಗಾಯಕಿ, ಕೊಳಲು ವಾದಕಿ

ಇಲ್ಲಿನ ಕಲಾವಿದರಿಗೆ ಅವಕಾಶ ಸಿಗುತ್ತಿಲ್ಲ ಎಂಬ ತಕರಾರು ಸರಿಯಾಗಿಯೇ ಇದೆ. ಇಂದು ಸಂಗೀತ ಕ್ಷೇತ್ರದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಸಂಗೀತಗಾರರನ್ನು ಅಳೆಯುವ ಮಾನದಂಡ ಎಂದರೆ ಸೋಷಿಯಲ್ ಮೀಡಿಯಾದಲ್ಲಿ ಎಷ್ಟು ಮಂದಿ ಫಾಲೋವರ್ಸ್ ಇದ್ದಾರೆ, ಕಛೇರಿ ನಡೆಸಿದರೆ ಎಷ್ಟು ಜನರನ್ನು ಸೇರಿಸುವ ಸಾಮರ್ಥ್ಯವಿದೆ ಎಂಬುದೇ ಆಗಿದೆ ಹೊರತು ಕಲಾವಿದರ ಸಾಧನೆ, ಮನೋಧರ್ಮ, ಶ್ರಮ, ಪ್ರತಿಭೆ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಕಡಿಮೆ ಆಗಿದೆ.

ಹೊರರಾಜ್ಯದ ಕಲಾವಿದರ ಬಗ್ಗೆ ತಿಳಿದುಕೊಳ್ಳುವ ಆಸಕ್ತಿ ಹೆಚ್ಚಿದೆ. ಹೀಗಾಗಿ ಉತ್ಸವಗಳಲ್ಲಿ ಜನ ಸೇರ್ತಾರೆ. ಯೋಗ್ಯತೆ, ಅರ್ಹತೆ ಇರುವ ಕಲಾವಿದರಿಗೆ ಸಮಾನವಾಗಿ ಅವಕಾಶ ನೀಡಬೇಕು. ಪ್ರಶಸ್ತಿಗಳೂ ಅಷ್ಟೆ. ಜೀವಮಾನದುದ್ದಕ್ಕೂ ಸಂಗೀತವನ್ನೇ ಉಸಿರಾಗಿಸಿಕೊಂಡು ಬಂದ ಕಲಾವಿದ ಅತ್ಯಂತ ಅರ್ಹನಾಗಿದ್ದರೂ ತನ್ನ ಇಳಿ ವಯಸ್ಸಿನವರೆಗೂ ಒಂದು ಪ್ರಶಸ್ತಿಗಾಗಿ ಕಾಯಬೇಕು. ಅಷ್ಟು ಹೊತ್ತಿಗೆ ಆತನಿಗೆ ಪ್ರಶಸ್ತಿ ಪಡೆಯುವ ಉತ್ಸಾಹವೇ ಹೋಗಿರುತ್ತದೆ. ಒಬ್ಬ ಉತ್ತಮ ಕಲಾವಿದ ಮೃತಪಟ್ಟ ನಂತರ ಪ್ರಶಸ್ತಿ ಕೊಟ್ಟರೆ ಏನು ಪ್ರಯೋಜನ? ನಮ್ಮವರೇ ಸ್ಥಳೀಯ ಕಲಾವಿದರನ್ನು ಗುರುತಿಸದಿದ್ದರೆ ಅಸಮಾಧಾನ ಆಗುವುದು ಸಹಜ ಅಲ್ಲವೇ?

ಇಂದಿನ ಕಾಲಘಟ್ಟದಲ್ಲಿ ಸಂಗೀತದಲ್ಲಿ ಹೊಟ್ಟೆಹೊರೆಯುತ್ತೇನೆ ಎಂದರೆ ಅದು ಸಾಧ್ಯವೇ ಇಲ್ಲ. ಯಾರಾದರೂ ನಿಮ್ಮ ಪ್ರೊಫೆಷನ್ ಏನು? ಎಂದು ಕೇಳಿದಾಗ ‘ಮ್ಯೂಸಿಕ್ ಆರ್ಟಿಸ್ಟ್’ ಎಂದು ಉತ್ತರಿಸಿದರೆ ‘ಹೊಟ್ಟೆಗೆ ಏನು ಮಾಡ್ತೀರಾ?’ ಎಂದು ಪ್ರಶ್ನಿಸುವ ಕಾಲ ಇದು. ಇಲ್ಲಿನ ಸಂಗೀತಗಾರರಿಗೆ ಅವಕಾಶ, ಹಣ, ಗಳಿಕೆ ಎಲ್ಲದರಲ್ಲೂ ಅನ್ಯಾಯವೇ ಆಗುತ್ತಿರುವುದರಿಂದಲೇ ಈ ಸಮಸ್ಯೆ ಎದುರಾಗಿರುವುದು.

ಬ್ರೆಜಿಲ್, ಯುರೋಪ್, ಅಮೆರಿಕದಂತಹ ದೇಶಗಳಲ್ಲಿ ಸಂಗೀತಗಾರರಿಗೆ ಉತ್ತಮ ಗಳಿಕೆ ಇದೆ. ಸಂಗೀತ ಎಂದರೆ ಶಾಸ್ತ್ರೀಯ, ಸಿನಿಮಾ ಎಂಬ ಭೇದವೇ ಅಲ್ಲಿಲ್ಲ. ವಿವಿಗಳಲ್ಲಿ ಕೂಡ ಈಗ ಗಣಿತ, ವಿಜ್ಞಾನದ ಜೊತೆಗೆ ಸಂಗೀತವನ್ನು ಒಂದು ಐಚ್ಛಿಕ ವಿಷಯವಾಗಿ ಕಲಿಸುವ ಪರಿಪಾಟ ಅಲ್ಲಿದೆ. ಇದರಿಂದ ಸಂಗೀತ ಅಳಿದುಹೋಗಲು ಸಾಧ್ಯವೇ ಇಲ್ಲ. ಇಂಥ ವ್ಯವಸ್ಥೆ ನಮ್ಮಲ್ಲೂ ಆಗಬೇಕು.

ಗಮಕ, ಹರಿಕಥೆಗಳೂ ಉಳಿಯಲಿ...

ಆನೂರು ಅನಂತಕೃಷ್ಣ ಶರ್ಮ, ಮೃದಂಗ ವಿದ್ವಾಂಸರು

ಕರ್ನಾಟಕ ಸಂಗೀತ ಕಲಾವಿದರಿಗೆ ಸರ್ಕಾರಿ ಉತ್ಸವಗಳಲ್ಲಿ ಅವಕಾಶಗಳು ಸಿಗುತ್ತಿಲ್ಲ ಎಂಬ ಕೊರಗು ಇಂದು, ನಿನ್ನೆಯದಲ್ಲ. ಹಲವಾರು ವರ್ಷಗಳಿಂದ ನಾವೆಲ್ಲ ಇದನ್ನು ಹೇಳುತ್ತಲೇ ಬಂದಿದ್ದೇವೆ. ದಸರಾ ಉತ್ಸವ, ಹಂಪಿ ಉತ್ಸವಗಳಂಥ ವಿಜೃಂಭಣೆಯ ಸಂಗೀತ ಹಬ್ಬದಲ್ಲಿ ಬಾಲಿವುಡ್, ಸ್ಯಾಂಡಲ್‌ವುಡ್ ಹಾಡು ಹಾಡುವವರಿಗೆ ಮೊದಲ ಆದ್ಯತೆ ಇದೆ. ಇಂಥ ಪ್ರತಿಷ್ಠಿತ ವೇದಿಕೆಗಳಲ್ಲಿ ಕರ್ನಾಟಕ ಸಂಗೀತ ಕಲಾವಿದರ ಹೆಸರುಗಳೇ ಕಾಣಸಿಗಲ್ಲ. ಜಿಲ್ಲಾ ಉತ್ಸವಗಳಲ್ಲೂ ಸಿನಿಮಾ ಸಂಗೀತಕ್ಕೇ ಮೊದಲ ಮಣೆ. ಇದು ಯಾಕೆ ಹೀಗೆ?

ನಾವು ಕೇಳಿದರೆ ‘ನಿಮ್ಮ ಸಂಗೀತಕ್ಕೆ ಜನ ಬರಲ್ಲ’ ಎಂಬ ಉತ್ತರ ಬರುತ್ತದೆ. ಹಾಗಾದರೆ ಶಾಸ್ತ್ರೀಯ ಸಂಗೀತಕ್ಕೆಂದೇ ಪ್ರತ್ಯೇಕ ವೇದಿಕೆ ನಿರ್ಮಾಣ ಮಾಡಲಿ. ಅಭಿರುಚಿ ಇರುವವರು ಬಂದೇ ಬರುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ‘ಪ್ರಾಯೋಜಕರಿಗೆ ಅವರು ಹೇಳಿದ ಕಲಾವಿದರನ್ನೇ ಕರೆಸಿ ಹಾಡಬೇಕೆಂದಿದೆ. ಹಾಗಾಗಿ ಶಾಸ್ತ್ರೀಯ ಸಂಗೀತಕ್ಕೆ ಅವಕಾಶ ಸಿಗಲ್ಲ’ ಎನ್ನುತ್ತಾರೆ. ಸರ್ಕಾರ ಲಕ್ಷಾಂತರ ರೂಪಾಯಿ ಅನುದಾನ ಕೊಟ್ಟು ನಡೆಸುವ ಕಾರ್ಯಕ್ರಮಗಳಲ್ಲಿ ಕಳೆದ ನಲವತ್ತೈದು ವರ್ಷಗಳಿಂದ ಇರುವ ನಮ್ಮಂಥ ಹಿರಿಯ ಕಲಾವಿದರಿಗೆ ಅವಕಾಶ ಸಿಗದಿದ್ದರೆ ಹೇಗೆ?

ಬರೀ ಶಾಸ್ತ್ರೀಯ ಸಂಗೀತಕ್ಕೇ ಕೊಡಬೇಕೆಂದಿಲ್ಲ. ಇತರ ಪ್ರಕಾರಗಳಾದ ಗಮಕ, ಹರಿಕಥೆ, ಭರತನಾಟ್ಯ ಮುಂತಾದವುಗಳಿಗೂ ಅವಕಾಶ ನೀಡಲಿ ಎಂಬುದು ನನ್ನ ಕಳಕಳಿ.

ರಾಜ್ಯದಾದ್ಯಂತ ಪ್ರತಿಭಾನ್ವೇಷಣೆ



ಪ್ರಶಾಂತ್ ಅಯ್ಯಂಗಾರ್, ವೈಣಿಕ

ಕರ್ನಾಟಕ ಸಂಗೀತ ಕಲಾವಿದರ ಕುಂದುಕೊರತೆ ನೀಗಿಸುವುದು, ಸಂಗೀತ ಶಾಸ್ತ್ರ, ಸಂಪ್ರದಾಯ ಕಾಪಾಡುವುದು, ಸ್ವಜನ ಪಕ್ಷಪಾತವನ್ನು ತಡೆಯುವುದು, ನಾವು ಪರಕೀಯವಾಗಿ ಜೀವನ ಸಾಗಿಸುವಂತಾಗಿರುವುದು... ಇವೇ ಮುಂತಾದ ಹಲವು ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿಯೇ 2021ರ ಅಕ್ಟೋಬರ್‌ನಲ್ಲಿ ಕರ್ನಾಟಕ ಕ್ಲಾಸಿಕಲ್ ಮ್ಯೂಸಿಕ್ ಕನ್‌ಫೆಡರೇಷನ್ (kcmc) ಸಂಸ್ಥೆ ಶುರು ಮಾಡಿದೆವು. ಈ ಸಂಸ್ಥೆಯಲ್ಲಿ ಒಂಬತ್ತು ಮಂದಿ ಪದಾಧಿಕಾರಿಗಳಿದ್ದೇವೆ. ಮೊದಲ ಕಾರ್ಯಕ್ರಮದಲ್ಲಿ 100 ಕಲಾವಿದರಿಗೆ ಅವಕಾಶ ನೀಡಿದ್ದೆವು. ಬೆಂಗಳೂರಿನ ವಸಂತಪುರದಲ್ಲಿ ರಾಮೋತ್ಸವ ಕಛೇರಿ ನಡೆಸಿಕೊಟ್ಟೆವು. ಆಕಾಶವಾಣಿಯ ಅಮೃತವರ್ಷಿಣಿ ಚಾನಲ್ ಸ್ಥಗಿತಗೊಂಡಾಗ ಇದರ ವಿರುದ್ಧ ದನಿ ಎತ್ತಿದೆವು. ಹೊಸ ಪ್ರತಿಭೆಗಳಿಗೆ ಅವಕಾಶ ಕೊಡುವ ತೀರ್ಮಾನ ಕೈಗೊಂಡೆವು.

ಇನ್ನು ಮುಂದೆಯೂ ಅನೇಕ ಕಾರ್ಯಕ್ರಮ ಹಾಕಿಕೊಳ್ಳುವ ಉದ್ದೇಶ ನಮಗಿದೆ. ಮುಖ್ಯವಾಗಿ ನಮ್ಮ ಕಲಾವಿದರಿಗೆ ಸರ್ಕಾರ ನಡೆಸುವ ಉತ್ಸವಗಳಲ್ಲಿ ಶೇ 80ರಷ್ಟು ಅವಕಾಶ ಕೊಡಿಸಬೇಕು ಎಂಬುದು ನಮ್ಮ ಬೇಡಿಕೆ. ನಮ್ಮ ಸಂಘಟನೆ ಬಲಪಡಿಸುವ ಸಲುವಾಗಿ ಮುಂದೆ ಹಾಸನ, ಮೈಸೂರು ಮಂಗಳೂರಿಗಳಲ್ಲಿ ಸಭೆ ನಡೆಸುವ ಉದ್ದೇಶವಿದೆ. ಇದಕ್ಕಾಗಿ 'ಸಂಗೀತಗಾರರ ಏಕೀಕರಣ' ಆಗಬೇಕು. ರಾಜ್ಯದಾದ್ಯಂತ ಹೊಸ ಪ್ರತಿಭೆಗಳ ಅನ್ವೇಷಣೆ ನಡೆಸುತ್ತೇವೆ,

ನಮಗೆ ಆಗುತ್ತಿರುವ ಅನ್ಯಾಯ ಸರಿಪಡಿಸುವ ಮಹತ್ತರ ಉದ್ದೇಶ ಸಂಸ್ಥೆಗಿದೆ. ಇದಕ್ಕಾಗಿ ಎಲ್ಲ ಕಲಾವಿದರು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ.

ಮತ್ತಷ್ಟು ಸಂಗೀತಗಾರರ ಮಾತು 11ನೇ ಪುಟದಲ್ಲಿ...

ಅಡಗದ ಗೌರಿಯ ದನಿಗೆ ಗೌರವ

‘ಗೌರಿ’ ಸಾಕ್ಷ್ಯಚಿತ್ರಕ್ಕೆ ಮಾಂಟ್ರಿಯಲ್‌ನ ದಕ್ಷಿಣ ಏಷ್ಯಾ ಚಿತ್ರೋತ್ಸವದಲ್ಲಿ 2023ರ ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿ ಸಂದಿದೆ. ಈ ಸಾಕ್ಷ್ಯಚಿತ್ರ ಮಾಡಿದ ಬಗೆಯನ್ನು ಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಅವರು ಈ ಸಂದರ್ಶನದಲ್ಲಿ ತೆರೆದಿಟ್ಟಿದ್ದಾರೆ.

ಚಿತ್ರೀಕರಣದ ಸಂದರ್ಭದಲ್ಲಿ ಕವಿತಾ



ಕವಿತಾ ಹಾಗೂ ಗೌರಿ ಲಂಕೇಶ್-ಪ್ರಾಯಕಾಲದ ಫೋಟೊ

ಸಂದರ್ಶನ: ಪ್ರತಿಭಾ ನಂದಕುಮಾರ್

ಚಿತ್ರ ನಿರ್ದೇಶಕಿ ಕವಿತಾ ಲಂಕೇಶ್ ಅವರು ನಿರ್ದೇಶಿಸಿದ ‘ಗೌರಿ’ ಸಾಕ್ಷ್ಯಚಿತ್ರಕ್ಕೆ ಮಾಂಟ್ರಿಯಲ್‌ನ ದಕ್ಷಿಣ ಏಷ್ಯಾ ಚಿತ್ರೋತ್ಸವ 2023ರ ಅತ್ಯುತ್ತಮ ಸಾಕ್ಷ್ಯಚಿತ್ರ ಪ್ರಶಸ್ತಿ ನೀಡಲಾಗಿದೆ. ಇದು ಈ ಸಾಕ್ಷ್ಯಚಿತ್ರಕ್ಕೆ ಸಂದ ಎರಡನೇ ಅಂತರರಾಷ್ಟ್ರೀಯ ಪ್ರಶಸ್ತಿ- 2022ರಲ್ಲಿ ಟೊರಾಂಟೋ ಮಹಿಳಾ ಚಿತ್ರೋತ್ಸವದಲ್ಲಿ ಅತ್ಯುತ್ತಮ ಮಾನವ ಹಕ್ಕು ಚಿತ್ರ ಪ್ರಶಸ್ತಿ ನೀಡಲಾಗಿತ್ತು. ಈ ಚಿತ್ರ ಆಮ್‌ಸ್ಟರ್ಡಾಮ್‌ನ ಫ್ರೀ ಪ್ರೆಸ್ ಅನ್ ಲಿಮಿಟೆಡ್ ನಿಯೋಜಿಸಲಾದ ಸಾಕ್ಷ್ಯಚಿತ್ರ.

ಈ ಪ್ರಶಸ್ತಿಯಿಂದ ಸಂತೋಷ ಪಡಬೇಕೋ ದುಃಖ ಪಡಬೇಕೋ ತಿಳಿಯದಂತಹ ಮಿಶ್ರ ಭಾವೋದ್ವೇಗ ಗೌರಿ ಮತ್ತು ಕವಿತಾ ಇಬ್ಬರನ್ನೂ ಬಲ್ಲವರನ್ನು ಆವರಿಸಿಕೊಳ್ಳುತ್ತದೆ.

ತನ್ನ ಬೌದ್ಧಿಕ ಚಿಂತನೆ, ಸಾಮಾಜಿಕ ಕಳಕಳಿ, ದಿಟ್ಟತನಕ್ಕಾಗಿಯೇ ಅನ್ಯಾಯವಾಗಿ ಹತ್ಯೆಗೀಡಾದ ಗೌರಿ ಲಂಕೇಶ್; ಮಾನಸಿಕವಾಗಿ ಜರ್ಜರಿತಳಾದರೂ, ದೈಹಿಕವಾಗಿ ಅಡಗಿಸಿದರೂ ವಿಶ್ವದಲ್ಲಿ ಗೌರಿಯ ಧ್ವನಿ ಅಡಗದಂತೆ ಕಾಪಿಡುವ ನಿರಂತರ ಪ್ರಯತ್ನದಲ್ಲಿದ್ದಾರೆ ತಂಗಿ ಕವಿತಾ ಲಂಕೇಶ್. ಈ ಸಂದರ್ಶನದುದ್ದಕ್ಕೂ ಕವಿತಾ ಲಂಕೇಶ್ ಅಕ್ಕನ ಬಗ್ಗೆ ಹೆಮ್ಮೆ, ತನ್ನ ದುಃಖ, ಸಂಕಟ, ಅಳು, ಹತಾಶೆ, ಅದರ ನಡುವೆಯೇ ಅವಳ ಧ್ವನಿಯನ್ನು ಉಳಿಸಿಕೊಂಡು ಬರುವ ಛಲ ಎಲ್ಲ ಭಾವನಾತ್ಮಕ ಪದರಗಳನ್ನು ದಾಟಿಸಿದರು. ಆ ಭಾವಸಮುದ್ರದ ಕೆಲವು ಕ್ಷಣಗಳು ಇಲ್ಲಿವೆ. ಇದು ಬೆಂಗಳೂರಿನಲ್ಲಿ ಒಂದೇ ಪ್ರದರ್ಶನ ಕಂಡಿದೆ. ಹೆಚ್ಚು ಜನರು ಬೇಗನೆ ನೋಡುವಂತಾಗಲಿ.

- **ಈ ಸಾಕ್ಷ್ಯಚಿತ್ರದ ಅಗತ್ಯದ ಕುರಿತು ಹೇಳಿ. ನಿಮ್ಮ ಉದ್ದೇಶ ಏನಿತ್ತು ಇದನ್ನು ಮಾಡುವಾಗ?**

ಗೌರಿಯನ್ನು ಸೈಲೆಂಟ್ ಮಾಡಿದರು. ಆದರೆ ಅವಳ ಧ್ವನಿಗೆ ಸಾವಿಲ್ಲ ಎನ್ನುವುದನ್ನು ಹೇಳಬೇಕಿತ್ತು. ಅವಳನ್ನು ಸುಮ್ಮನಾಗಿಸಲು ಅವಳ ಹತ್ಯೆ ಮಾಡಿದರು. ಅದಕ್ಕೂ ಮೊದಲು ಅವಳು ಮಾತನಾಡಬಾರದು, ದನಿ ಎತ್ತಬಾರದು ಎಂದು ಅವಳ ಮೇಲೆ ಬಹಳ ಒತ್ತಡ ತಂದರು. ಅವಳು ಯಾವುದಕ್ಕಾಗಿ ಹೋರಾಡುತ್ತಿದ್ದಳೋ ಅದರ ಬಗ್ಗೆ ಸ್ಪಷ್ಟಪಡಿಸುವ ಅಗತ್ಯ ಇತ್ತು ನನಗೆ. ಅವಳಿಗೆ ನಕ್ಸಲರ ಜೊತೆ ಸಂಬಂಧ ಇದೆ ಅಂತ ಆರೋಪಿಸಿದರು. ಅವಳು ನಿಜವಾಗಿ ಹೇಳಿದ್ದು ನಕ್ಸಲರನ್ನು ಹಿಂಸೆ ಬಿಟ್ಟು ಬನ್ನಿ, ಡೆಮಾಕ್ರಟಿಕ್ ಆಗಿ ಹೋರಾಡಿ ಅಂತ. ಇದೆಲ್ಲ ಹೋರಾಟ ಅವಳು ಒಬ್ಬಳೇ ಮಾಡಲಿಲ್ಲ, ಅವಳ ಜೊತೆ ಗಿರೀಶ ಕಾರ್ನಾಡ, ಮರುಳಸಿದ್ದಪ್ಪ, ದೊರೆಸ್ವಾಮಿ, ಪ್ರೊ. ಶ್ರೀಧರ್ ಮುಂತಾದವರೆಲ್ಲ ಇದ್ದರು. ನನಗೆ ಗೌರಿಯ ನಿಲುವಿನ ಬಗ್ಗೆ ಸ್ಪಷ್ಟತೆ ಕೊಡಬೇಕಿತ್ತು.

- **ಅದು ಕಷ್ಟಸಾಧ್ಯದ ಪ್ರಯತ್ನ. ಇಲ್ಲಿ ನಿಮಗೆ ಎದುರಾದ ಮೊದಲ ಅಡಚಣೆ ಯಾವುದು, ನಿಮ್ಮ ಅನುಭವ ಏನಿತ್ತು?**

ನನ್ನ ಮೇಲೇ ನನಗಿದ್ದ ಸಂದೇಹ! ಇದನ್ನು ಮಾಡಲು ನನಗೆ ಸಾಧ್ಯವಾ, ಗೌರಿಯ ಜೊತೆ ನಡೆದ ಆ ಘೋರ ಪಾತಕವನ್ನು ಮತ್ತೆ ಅನುಭವಿಸುವ ಕ್ಷೋಭೆಯನ್ನು ನಾನು ತಡೆದುಕೊಳ್ಳಬಲ್ಲೆನಾ ಅನ್ನುವ ಸಂಶಯ ಇತ್ತು. ಆದರೆ ಪ್ರತಿದಿನ, ವಾರ ತಿಂಗಳಿಗೊಂದೆರಡು ಸಲ ಜಗತ್ತಿನ ಯಾವಯಾವುದೋ ಮೂಲೆಗಳಿಂದ ಜನ ಫೋನ್ ಮಾಡುತ್ತಲೇ ಇರುತ್ತಾರೆ. ಒಂದು ಫೋಟೋ ಕೊಡಿ, ಇಲ್ಲಿ ಗೌರಿಗೆ ಒಂದು ಆನರ್ ಇಟ್ಟುಕೊಂಡಿದ್ದೇವೆ, ಅವಳ ಹೆಸರಿನಲ್ಲಿ ಪ್ರಶಸ್ತಿ ಕೊಡುತ್ತಿದ್ದೇವೆ, ಇನ್ನೆಲ್ಲೋ ಸೆಮಿನಾರ್ ಇಟ್ಟುಕೊಂಡಿದ್ದೇವೆ, ಒಂದು ಸಂದರ್ಶನ ಕೊಡಿ ಅಂತ ಜನ ಗೌರಿಯನ್ನು ನೆನಪಿಸಿಕೊಳ್ಳುತ್ತಲೇ ಇರುತ್ತಾರೆ. ಹಾಗಾಗಿ ಗೌರಿ ಕೆಲಸ ಮಾಡಿದ ಜಾಗಗಳು, ಜನರನ್ನು ಭೇಟಿ ಮಾಡಿ ಅವರ ಮಾತುಗಳನ್ನು ದಾಖಲಿಸೋಣಾ ಅನ್ನಿಸಿತು. ಅಲ್ಲಿಂದ ಶುರುವಾಯಿತು.

- **ಆಮ್‌ಸ್ಟರ್ಡಾಮ್‌ನ ‘ಫ್ರೀ ಪ್ರೆಸ್ ಅನ್‌ಲಿಮಿಟೆಡ್’ ನಿಧಿ ನೆರವು ದೊರೆತಿದ್ದು ಹೇಗೆ?**

ಆಮ್‌ಸ್ಟರ್‌ಡ್ಯಾಮ್‌ನ ‘ಫ್ರೀ ಪ್ರೆಸ್ ಅನ್‌ಲಿಮಿಟೆಡ್’ ಅವರು ಪತ್ರಿಕಾ ಸ್ವಾತಂತ್ರ್ಯ ಕುರಿತ ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಅರ್ಜಿ ಆಹ್ವಾನಿಸಿದ್ದರು. ಎಲ್ಲಾ ಕಡೆಗಳಿಂದಲೂ ಬೇಕಾದಷ್ಟು ಅರ್ಜಿಗಳು ಬಂದಿರುತ್ತವೆ ಅಂತ ಸುಮ್ಮನಾಗಿದ್ದೆ. ನಂತರ ನೋಡೋಣ ಅಂತ ಅರ್ಜಿ ಹಾಕಿದೆ. ಜಗತ್ತಿನ ಹಲವಾರು ಕಡೆಗಳಿಂದ ಸಾವಿರಾರು ಅರ್ಜಿಗಳು ಬಂದಿದ್ದರಲ್ಲಿ ನಾಲ್ಕು ಅರ್ಜಿಯನ್ನು ಮಾತ್ರ ಆರಿಸಿದ್ದರು- ಅದರಲ್ಲಿ ಗೌರಿ ಕೂಡ ಒಂದು. ಪ್ರಪೋಸಲ್ ಸಿದ್ಧಪಡಿಸಲು ನಾನು ಗೌರಿಯ ಜೊತೆ ಸಾಕಷ್ಟು ಕೆಲಸ ಮಾಡಿದ್ದ ಕ್ಯಾಮರಾಮನ್ ದೀಪು, ಗೌರಿಯನ್ನು ನಿಕಟವಾಗಿ ತಿಳಿದಿದ್ದ ತೀಸ್ತಾ ಸಟಲ್ವಾಡ್, ಪತ್ರಕರ್ತ ಆದಿತ್ಯ ಭಾರದ್ವಾಜ್ ಇವರ ಸಹಾಯ ಪಡೆದೆ. ಸ್ಕ್ರಿಪ್ಟ್ ಸಿದ್ಧಪಡಿಸಲು ಐದು ತಿಂಗಳು ಬೇಕಾಯಿತು. ನಮಗೆ ಅವರು ಪ್ರಾಜೆಕ್ಟ್ ಮಂಜೂರು ಮಾಡಿದಾಗ ಕೋವಿಡ್ ಲಾಕ್‌ಡೌನ್ ಇತ್ತು. ನಾವು ಹಲವಾರು ಕಡೆ ಶೂಟಿಂಗ್ ಮಾಡಬೇಕಿತ್ತು, ಬೇರೆ ಬೇರೆ ಜನರನ್ನ ಸಂದರ್ಶನ ಮಾಡಬೇಕಿತ್ತು. ದೆಹಲಿ, ಬೆಂಗಳೂರು, ಚಿಕ್ಕಮಗಳೂರು, ದಿಡ್ಡಳ್ಳಿ ಹೀಗೆ ಹಲವಾರು ಕಡೆ ಪ್ರಯಾಣ ಮಾಡಬೇಕಿತ್ತು.

- **ಇಡೀ ಪ್ರಕ್ರಿಯೆಯಲ್ಲಿ ನಿಮಗೆ ಗೊತ್ತಿಲ್ಲದ ಗೌರಿ ಸಿಕ್ಕಿದ್ಲಾ?**

ಅವಳು ಯಾವ ಥರ ಬದುಕಿದ್ದಳು, ಯಾವ ರೀತಿಯಲ್ಲಿ ಜನಗಳ ಮನಸ್ಸನ್ನು ತಲುಪಿದ್ದಳು ಅನ್ನೋದು ಗೊತ್ತಾಯ್ತು. ನಾನು ಯಾವಾಗಲೂ ಅವಳಿಗೆ ಕಂಪ್ಲೇಂಟ್ ಮಾಡ್ತಿದ್ದೆ, ಮನೆಯವರಿಗೆ ಟೈಮ್ ಕೊಡಲ್ಲ ಅಂತ. ಈಶಾನ ಕರಕೊಂಡು ಹೋಗು, ನನ್ನ ಜೊತೆ ಟೈಮ್ ಕಳಿ ಅಂತೆಲ್ಲಾ. ಈಗ ಅನ್ನಿಸಿದೆ, ನಾನು ಎಷ್ಟು ಸಿಲ್ಲಿಯಾಗಿದ್ದೆ ಅಂತ. ಸಮಾಜದಲ್ಲಿ ನಾನು, ನನ್ನ ಕುಟುಂಬ ಅಂತ ಬದುಕುವವರ ನಡುವೆ ಬೇರೆಯವರಿಗಾಗಿ ಬದುಕುವ ಜನರ ಅಗತ್ಯ ಇದೆ. ಅವಳು ಈ ಮಿತಿಗಳನ್ನೆಲ್ಲ ಮೀರಿದ್ದಳು. ವೈಯಕ್ತಿಕ ಅಗತ್ಯಗಳನ್ನು ಮೀರಿದ್ದಳು. ಸ್ವಾರ್ಥದ ಬದುಕು ಅಲ್ಲದ ವಿಸ್ತಾರ ಬದುಕನ್ನು ಅವಳು ಅಪ್ಪಿಕೊಂಡಿದ್ದಳು.

ಹಾಗಂತ ನನಗೆ ಅವಳನ್ನು ಪೆಡಸ್ಟಲ್‌ನಲ್ಲಿ ಇಟ್ಟು ಹೊಗಳುವ, ಈಗೋ ಸೆಂಟ್ರಿಕ್ ದೃಷ್ಟಿಕೋನ ಮಾತ್ರ ಬೇಕಿರಲಿಲ್ಲ. ಅವಳನ್ನು ಒಬ್ಬ ಮನುಷ್ಯಳಾಗಿ ತೋರಿಸಬೇಕಿತ್ತು. ಮೇಕಿಂಗ್ ಹರ್ ಹ್ಯುಮನ್. ಅವಳನ್ನು ಟೀಕಿಸಿ, ಅವಳ ಚಿಂತನೆ, ನಡೆಗಳನ್ನು ಟೀಕಿಸಿ ಅಂತಲೂ ಹೇಳಿದೆ. ಫಣಿರಾಜ್ ಅವರು ಒಂದು ಮಾತು ಹೇಳಿದ್ದಾರೆ- ಗೌರಿ ಹೇಳಿದ್ದರಲ್ಲಿ ತಪ್ಪಿರಲಿಲ್ಲ, ಹೇಳಿದ ರೀತಿಯಲ್ಲಿ ತಪ್ಪಿತ್ತು ಅಂತ. ಅದರಲ್ಲೂ ಇಂಗ್ಲಿಷ್ ಮಾಧ್ಯಮದಲ್ಲಿ ಕೆಲಸ ಮಾಡಿ ಬಂದು ಕನ್ನಡ ಭಾಷೆಯ ಸೂಕ್ಷ್ಮಗಳನ್ನು ತಿಳಿಯದೇ ಬ್ರಾಷ್ ಆಗಿ ಮಾತಾಡಿಬಿಡುತ್ತಿದ್ದಳು. ಅರ್ಧ ಗಂಟೆ ಆದಮೇಲೆ ಫೋನ್ ಮಾಡಿ ಸಾರಿ ಹಾಗೆ ಮಾತಾಡಬಾರದಿತ್ತು ಅಂತ ಕ್ಷಮೆ ಕೇಳುತ್ತಿದ್ದಳು.

- **ಈ ಪ್ರಶಸ್ತಿಯ ಸೈಟೇಷನ್‌ನಲ್ಲಿ ಒಂದು ಮಾತು ಹೇಳಿದ್ದಾರೆ ‘A “J’accuse” docu-thriller’ ಅಂತ. ಡಾಕ್ಯೂ ಥ್ರಿಲ್ಲರ್ ಅಂತ ಯಾಕೆ ಅದನ್ನು ಕರೆದಿದ್ದಾರೆ?**

ಯಾಕೆಂದರೆ ತನಿಖಾ ದಳದವರ ಸಂದರ್ಶನದಲ್ಲಿ ಇಡೀ ಹತ್ಯೆಯ ಬಗ್ಗೆ ಮತ್ತು ತನಿಖೆಯ ಬಗ್ಗೆ ವಿವರಣೆ ಇದೆ. ತನಿಖಾ ಅಧಿಕಾರಿ ಬಿ.ಕೆ. ಸಿಂಗ್ ಅವರ ಸಂದರ್ಶನ ಇದೆ. ಅವರು ಹೇಗೆ ಹತ್ಯೆ ಮಾಡಿದ ಗುಂಪಿನಲ್ಲಿ ಪರಸ್ಪರ ಒಬ್ಬರಿಗೊಬ್ಬರು ಗೊತ್ತೇ ಇರಲಿಲ್ಲ, ಹೇಗೆ ಪ್ಲಾಟ್ ಮಾಡಿದರು, ಹೇಗೆ ಅದನ್ನು ಎಕ್ಸಿಕ್ಯೂಟ್ ಮಾಡಿದರು ಅಂತ ವಿವರಿಸಿದ್ದು ಒಂದು ಚಕ್ರವ್ಯೂಹದ ತರಹ ಇದೆ. ಆದಿತ್ಯ ಇಡೀ ತನಿಖೆಯ ಬಗ್ಗೆ ಪುಸ್ತಕ ಬರೆದಿದ್ದಾರೆ. ಅವರ ಮಾತುಗಳು, ನಾನು ಅದನ್ನು ನನ್ನ ದೃಷ್ಟಿಕೋನದಿಂದ ಹೆಣೆದ ರೀತಿ ಬಹಳ ಫೋರ್ಸ್‌ಫುಲ್ ಆಗಿದೆ. ಚಿತ್ರ ಪ್ರಾರಂಭವಾಗುವುದೇ ಪ್ರಮೋದ್ ಮುತಾಲಿಕ್ ‘ಗೌರಿಯನ್ನು ಬೆತ್ತಲೆ ಮಾಡಿ ಮೇಲೆ ನಿಲ್ಲಿಸಬೇಕು’ ಅಂತ ಕರೆ ಕೊಡುವ ವಿಡಿಯೊದಿಂದ.

- **ಆಮ್‌ಸ್ಟರ್ಡಾಮ್‌ನಲ್ಲಿ ಇದರ ಮೊದಲ ಪ್ರದರ್ಶನವಾದಾಗ ನೀವು ಹೋಗಿದ್ರಿ. ‘ಫ್ರೀ ಪ್ರೆಸ್ ಅನ್‌ಲಿಮಿಟೆಡ್’ ಅವರ ಮತ್ತು ಅಲ್ಲಿಯ ಪ್ರೇಕ್ಷಕರ ಪ್ರತಿಕ್ರಿಯೆ ಹೇಗಿತ್ತು?**

ಎಲ್ಲರೂ ಬಹಳ ಎಮೋಷನಲ್ ಆಗಿದ್ದರು. ಜೊತೆಗೆ ಶಾಕ್‌ನಿಂದ ಸ್ಥಂಭೀಭೂತರಾದರು. ಬೇರೆ ಬೇರೆ ದೇಶಗಳಿಂದ ಜನರು ಬಂದಿದ್ದರು. ಕೆಲವರು ಅತ್ತುಬಿಟ್ಟರು. ‘ಫ್ರೀ ಪ್ರೆಸ್ ಅನ್‌ಲಿಮಿಟೆಡ್’ ಅವರು ಬಹಳ ಇಷ್ಟಪಟ್ಟರು.

ಮಗನ ಕಣ್ಣಲ್ಲಿ ಶ್ರೀನಿವಾಸಮೂರ್ತಿ @75

ಶ್ರೀನಿವಾಸಮೂರ್ತಿ

ನಟ ಶ್ರೀನಿವಾಸಮೂರ್ತಿ ಅವರಿಗೀಗ 75ರ ಹರೆಯ! ಹುಟ್ಟುಹಬ್ಬದ ಸಂಭ್ರಮದಲ್ಲೇ ಸತತವಾಗಿ ಎರಡು ನಾಟಕಗಳಲ್ಲಿ ಅಭಿನಯಿಸಿದ್ದು ಅವರ ಜೀವನೋತ್ಸಾಹಕ್ಕೆ ಹಿಡಿದ ಕನ್ನಡಿ. ನಟರೂ ಆಗಿರುವ ಅವರ ಮಗ ತಂದೆಯ ವ್ಯಕ್ತಿಚಿತ್ರವನ್ನು ಇಲ್ಲಿ ಕಟ್ಟಿಕೊಟ್ಟಿದ್ದಾರೆ.

ನವೀನಕೃಷ್ಣ

ಸಂಜೆ ಮೂಡಣದ ಕಾಮನ ಬಿಲ್ಲಿನಂತೆ ಕಣ್ಣು ತುಂಬುತ್ತದೆ ಅಪ್ಪನ ನೆನಪು. ನಾನು ಒಂದನೇ ತರಗತಿಯಲ್ಲಿದ್ದಾಗ ಅವರ ನಾಟಕ ನೋಡಿದ್ದು ಮಸುಕಾಗಿ ನೆನಪಿದೆ. ಅವರ ರಂಗತಂಡ ಬೇರೆ ಬೇರೆ ಊರುಗಳಿಗೂ ಹೋಗಿ ನಾಟಕ ಆಡುತ್ತಿತ್ತು. ಅದರ ಸಂಭಾವನೆಯೇ ನಮಗೆ ಆಧಾರವಾಗಿತ್ತು. 'ಸದಾರಮೆ'ಯನ್ನು ಸಿಕ್ಕಾಪಟ್ಟೆ ಸಾರಿ ಆಡಿದ್ದಾರೆ.

ಸದಾರಮೆ ನಾಟಕದಲ್ಲಿ ಅಪ್ಪ-ಮಗ

ಏನು ಅದೃಷ್ಟವೋ ಏನೋ ನಾನೂ 'ಸದಾರಮೆ'ಗೆ ಮೊದಲು ಬಣ್ಣ ಹಚ್ಚಿದೆ. ಅಪ್ಪನ ಜೊತೆ ರಂಗವನ್ನು ಹಂಚಿಕೊಂಡೆ. ಅದು ತೀರ ಆಕಸ್ಮಿಕ. ಬೆಂಗಳೂರಿನ ವಿ.ವಿ. ಪುರಂನಲ್ಲಿ ಗಣೇಶೋತ್ಸವಕ್ಕೋ ಅಥವಾ ರಾಜ್ಯೋತ್ಸವಕ್ಕೂ ಆ ನಾಟಕ ಆಡುತ್ತಿದ್ದರು. ನಾನು ಅದನ್ನು ನೋಡಲು ಹೋಗಿದ್ದೆ. ಪಾತ್ರಧಾರಿಯೊಬ್ಬರು ಹುಷಾರಿಲ್ಲದೆ ಬರಲಿಲ್ಲ. ಅದು ಸದಾರಮೆ ಗಂಡನ ಪಾತ್ರ. ನಾಟಕ ಶುರುವಾಗುವ ಹೊತ್ತಿಗೆ ಅಪ್ಪ, ನನ್ನನ್ನು ಕರೆದು ನೀನೇ ಮಾಡು ಅಂದರು. ನನಗೆ ಏನೂ ಗೊತ್ತಿಲ್ಲ ಅಂದೆ. ಬಣ್ಣ ಹಚ್ಚಿಕೊಂಡು ರಂಗಕ್ಕೆ ಬಾ. ಉಳಿದದ್ದೆಲ್ಲ ಸದಾರಮೆ ನೋಡಿಕೊಳ್ಳುತ್ತಾಳೆ ಎಂದರು. ನಾಲ್ಕಾರು ಡೈಲಾಗ್ ಕಲಿತು ಅಪ್ಪ ಹೇಳಿದಂತೆ ಮಾಡಿದೆ. ಪ್ರದರ್ಶನ ಚೆನ್ನಾಗಿಯೇ ಆಯಿತು.

ಅಪ್ಪ ಅಭಿನಯಿಸುತ್ತಿದ್ದ 'ವೈಶಂಪಾಯನ ಸರೋವರ', 'ಬೇಡರ ಕಣ್ಣಪ್ಪ' ಅದ್ಭುತ ನಾಟಕಗಳು. 'ವೈಶಂಪಾಯನ ಸರೋವರ'ದಲ್ಲಿ ಅಪ್ಪನೇ ದುರ್ಯೋಧನ. ಅವರ ಪಾತ್ರ ಅಮೋಘವಾಗಿತ್ತು ಎಂದು ಈಗಲೂ ಅನಿಸುತ್ತದೆ.

ಮುಂಗೋಪಿ ಅಪ್ಪ ಕಂಡರೆ ಭಯ

ಅಪ್ಪನದು ಸಿಡುಕಿನ ಸ್ವಭಾವ. ಈಗಲೂ ಹಾಗೆಯೇ ಇದ್ದಾರೆ. ಮೊದಲೆಲ್ಲ ಮಾತನಾಡಿಸಲೂ ಭಯ ಆಗ್ತಿತ್ತು. ವಾರದಲ್ಲಿ ಒಂದು ದಿನ ನಮ್ಮನ್ನೆಲ್ಲ ಹೋಟೆಲ್‌ಗೆ ತಪ್ಪದೇ ಕರೆದುಕೊಂಡು ಹೋಗುತ್ತಿದ್ದರು. ನನಗೆ ಆಗ ಚೈನೀಸ್ ತಿನಿಸು ತುಂಬ ಇಷ್ಟ. ಬೇಕಾಗಿದ್ದನ್ನು ಬೇಕಾದಷ್ಟು ತಿನ್ನಬಹುದಿತ್ತು. ಒಮ್ಮೆ ಯಾವುದೋ ಸಿನಿಮಾ ಚಿತ್ರೀಕರಣಕ್ಕೆ ಆಫ್ರಿಕಾಕ್ಕೆ ಹೋಗಿದ್ದರು. ದೊಡ್ಡ ಸೂಟ್‌ಕೇಸ್ ತುಂಬ ಚಾಕೊಲೇಟ್ ತಂದಿದ್ದರು. ಆಗ ಚಾಕೊಲೇಟ್-ಬಿಸ್ಕೇಟ್ ತುಂಬ ಇಷ್ಟಪಡುತ್ತಿದ್ದೆ. ಯಾವತ್ತೂ ಅದಕ್ಕೆ ಕಡಿಮೆ ಮಾಡಲಿಲ್ಲ. ಓದಿನ ವಿಷಯದಲ್ಲಿ ಮಾತ್ರ ರಾಜಿ ಇರಲಿಲ್ಲ. ನಮ್ಮನ್ನು ಬಿಗಿಯಾಗಿ ಇಟ್ಟಿದ್ದರು. ಹಟ ಮಾಡಿದರೆ ಚೆನ್ನಾಗಿ ಒದೆಯುತ್ತಿದ್ದರು.

75ರ ಪ್ರಾಯದಲ್ಲೂ ಅಪ್ಪನಿಗೆ ರಂಗ ಪ್ರೇಮ ಸ್ವಲ್ಪವೂ ಉಡುಗಿಲ್ಲ. 'ಸದಾರಮೆ', 'ತರಕಾರಿ ಚೆನ್ನಿ' ನಾಟಕವನ್ನು ಈಚೆಗೆ ಆಡಿದರು. ನನಗೂ ಒಂದು ಪಾತ್ರವನ್ನು ಮಾಡಲು ಆಗುತ್ತಾ ಎಂದು ಕೇಳಿದರು. ಸಮಯ ಇಲ್ಲದ ಕಾರಣಕ್ಕೆ ಮಾಡಲಿಲ್ಲ. ತಾಲೀಮು ಇಲ್ಲದೆ ಅಭಿನಯಿಸಲು ಸಾಧ್ಯ ಇರಲಿಲ್ಲ. ಅಪ್ಪ ಒಂದೆರಡು ತಿಂಗಳಿನಿಂದ ತಾಲೀಮು ಮಾಡುತ್ತಲೇ ಇದ್ದರು.

ಬದನೆಕಾಯಿ ಎಣ್ಣೆಗಾಯಿಯಲ್ಲಿ ಎತ್ತಿದ ಕೈ

ನಾನು ನೋಡಿದಾಗಿನಿಂದಲೂ ಅಪ್ಪನ ದಿನಚರಿ ಬದಲಾಗಿಲ್ಲ. ಇವತ್ತೇನೂ ಕೆಲಸ ಇಲ್ಲ ಎಂದು ತಡವಾಗಿ ಎದ್ದಿದ್ದನ್ನು ಯಾವತ್ತೂ ಕಂಡಿಲ್ಲ. ನಿತ್ಯ ಬೆಳಿಗ್ಗೆ 6 ಗಂಟೆಗೇ ಏಳುತ್ತಾರೆ. ಸಮಯದ ಶಿಸ್ತನ್ನು ಚಾಚೂತಪ್ಪದೆ ಪಾಲಿಸುತ್ತಾರೆ. ವಾಕ್ ಮುಗಿಸಿ ಸ್ನಾನದ ನಂತರ ಪೂಜೆ. ಪೂಜೆ ಮತ್ತು ಧ್ಯಾನಕ್ಕೆ ಒಂದು ಗಂಟೆ ಬೇಕು. ತಿಂಡಿ ಮುಗಿಸಿ ತಮ್ಮ ರೂಮಿಗೆ ಹೋಗಿ ಪುಸ್ತಕ ಹಿಡಿದರೆ ಮಧ್ಯಾಹ್ನದ ತನಕ ಏಳುವುದಿಲ್ಲ. ಮಧ್ಯಾಹ್ನ ಊಟ ಮಾಡಿ ಸ್ವಲ್ಪ ಹೊತ್ತು ವಿಶ್ರಮಿಸುತ್ತಾರೆ. ಹೊತ್ತು ಇಳಿಯುತ್ತಿದ್ದಂತೆ ಕಾಫಿ ಕುಡಿದು ಮತ್ತೆ ಓದಲು ಕುಳಿತರೆ ರಾತ್ರಿ ಊಟಕ್ಕೇ ಏಳುವುದು. ನಂತರ ಸಣ್ಣ ವಾಕ್ ಮಾಡಿ ಮಲಗುತ್ತಾರೆ.

ಸಾರ್ಥಕ್ಯ

ಮೊದಲೆಲ್ಲ ಮಾಂಸಾಹಾರವನ್ನು ತುಂಬ ಇಷ್ಟಪಡುತ್ತಿದ್ದರು. ಈಗ ಅಗಿಯುವುದು ಕಷ್ಟ ಅಂತ ತಿನ್ನುವುದಿಲ್ಲ. ಅಮ್ಮ (ಪುಷ್ಪಾ) ತುಂಬ ಚೆನ್ನಾಗಿ ಅಡುಗೆ ಮಾಡುತ್ತಾರೆ. ಅವರ ಕೈ ರುಚಿಯನ್ನು ಚಪ್ಪರಿಸಿ ಸವಿಯುತ್ತಾರೆ. ಅಮ್ಮನ ಮಸಾಲೆ ದೋಸೆ ತುಂಬ ಫೇಮಸ್. ಸಿನಿಮಾ ರಂಗದಲ್ಲಿಯೂ ಅದರ ಸುವಾಸನೆ ಹಬ್ಬಿದೆ. ಅನೇಕರು ಅಮ್ಮನ ದೋಸೆ ಸವಿಯಲು ಬರುತ್ತಿದ್ದರು. ಊಟೋಪಚಾರದಲ್ಲಿ ಯಾವುದನ್ನೂ ಅಪ್ಪ ನಿರಾಕರಿಸುತ್ತಿರಲಿಲ್ಲ.

ಅಡುಗೆ ಮಾಡುವುದರಲ್ಲಿ ಅಪ್ಪ ಕಡಿಮೆ ಇಲ್ಲ. ಬದನೆಕಾಯಿ ಎಣ್ಣೆಗಾಯಿ ಮಾಡಿದರೆ ಒಂದು ಚಪಾತಿ ಹೆಚ್ಚು ತಿನ್ನಿಸುತ್ತದೆ. ವಿವಿಧ ತರಕಾರಿ ಹಾಕಿ ಸಾರು ಮಾಡುತ್ತಾರೆ. ಅಮ್ಮ ಮಾಡಿದ ಸಾಂಬಾರ್ ಪುಡಿಯನ್ನೇ ಹಾಕಿದರೂ ಅಮ್ಮನ ಸಾರಿಗಿಂತ ಬೇರೆಯದೇ ರುಚಿಯನ್ನು ಕೊಡುತ್ತಿದ್ದರು.

'ಹೀರೊ ಆಗಿ ಪ್ರವೇಶ ಮಾಡಬೇಕಿತ್ತು'

ಚಿಕ್ಕವನಿದ್ದಾಗಲೇ ನಾನೂ ಡಾನ್ಸ್ ಕಲಿಯುತ್ತಿದ್ದೆ. ಅದೆಲ್ಲ ಅಪ್ಪನ ಪ್ರೋತ್ಸಾಹದ ಕುರುಹು. ಸಂಗೀತಕ್ಕೂ ಸೇರಿಸಿದರು. ನಾನೇನಾದಾರೂ ಸಿನಿಮಾ ಕ್ಷೇತ್ರಕ್ಕೆ ಬರ್ತೀನಿ ಅಂದರೆ, ಎಲ್ಲ ತಯಾರಿ ಮಾಡಿಕೊಂಡು ಬಾ ಎನ್ನುತ್ತಿದ್ದರು. ಅವರು ನಾನು ಓದಿ ಒಳ್ಳೆಯ ಉದ್ಯೋಗಕ್ಕೆ ಹೋಗಬೇಕು ಎಂದು ಆಸೆಪಟ್ಟಿದ್ದರು. ನಾನು ಸಂಗೀತ-ಭರತನಾಟ್ಯವನ್ನು ಅರ್ಧಕ್ಕೆ ಬಿಟ್ಟೆ. ಪಿಯುಸಿಯಲ್ಲಿ ಒಂದು ವಿಷಯದಲ್ಲಿ ಫೇಲ್ ಆಗಿದ್ದೆ. ಆ ಬಿಡುವಿನಲ್ಲಿ 'ಚಂದಮಾಮ ಚಕ್ಕುಲಿಮಾಮ' ಧಾರಾವಾಹಿಯಲ್ಲಿ ಅವಕಾಶ ಸಿಕ್ಕಿತು. ಮನೆಯಲ್ಲಿ ಯಾರಿಗೂ ತಿಳಿಸದೆ ನಟಿಸಿದೆ. ಮೊದಲ ಕಂತಿನಲ್ಲಿ ನೋಡಿದಾಗ ಒಂದು ಮಾತು ಹೇಳಿದರು. ಅದು ಈಗಲೂ ನಿಜ ಎಂದೇ ಅನ್ನಿಸುತ್ತದೆ.

'ಯಾವಾಗ ಮಾಡಿದೆ; ಇದನ್ನು ಯಾಕೆ ಮಾಡಿದೆ? ಚೆನ್ನಾಗಿಯೇ ಮಾಡಿದ್ದೀಯಾ. ಆದರೆ ಹೀರೊ ಆಗಿ ನಿನ್ನನ್ನು ಪ್ರವೇಶ ಮಾಡಿಸಬೇಕು ಎಂದುಕೊಂಡಿದ್ದೆ. ನಿನ್ನ ಭವಿಷ್ಯದ ವೃತ್ತಿಜೀವನಕ್ಕೆ ಇದರಿಂದ ತೊಂದರೆ ಆಗುತ್ತದೆ' ಎಂದಿದ್ದರು. ಆಗದು ತಲೆಗೆ ಹೋಗಿರಲಿಲ್ಲ.

ನಿರೂಪಣೆ: ರಾಘವೇಂದ್ರ ಕೆ. ತೊಗರ್ಸಿ

ಪ್ರಶಂಸಿಸುವುದರಲ್ಲಿ ಮುಂದು

ಅಪ್ಪ ಜನಿಸಿದ್ದು ಚಿಕ್ಕಬಳ್ಳಾಪುರ ಸಮೀಪದ ಜಡಲತಿಮ್ಮನಹಳ್ಳಿಯಲ್ಲಿ. ಬಾಲ್ಯದಿಂದಲೂ ಅವರಿಗೆ ನಾಟಕದ ಗೀಳು. ಅವರ ನಾಟಕ ನೋಡಿ ನಿರ್ದೇಶಕ ಸಿದ್ದಲಿಂಗಯ್ಯನವರು 'ಹೇಮಾವತಿ' ಸಿನಿಮಾದಲ್ಲಿ ಅವಕಾಶ ನೀಡಿದರು. ಅದೇ ಅವರ ಮೊದಲ ಸಿನಿಮಾ. ಯಾವುದೇ ಸಿನಿಮಾ-ನಾಟಕ ನೋಡಿದರೂ ಮನೋಜ್ಞವಾಗಿ ನಟಿಸಿದವರನ್ನು ಮುಕ್ತವಾಗಿ ಪ್ರಶಂಸಿಸುತ್ತಾರೆ. ಅವರಿಗೆ ಫೋನ್ ಮಾಡಿ ಮೆಚ್ಚುಗೆ ಸೂಚಿಸುತ್ತಾರೆ. ನನ್ನ ತಂದೆ ಮನೆ-ತೆರೆಯಲ್ಲೂ ಹೀರೊ. ಕಲೆಯನ್ನು ಪೂಜನೀಯ ಭಾವದಿಂದ ಪ್ರೀತಿಸುವ ಅವರು, ಅದರ ಅಮೃತವನ್ನು ನನಗೂ ಧಾರೆ ಎರೆದಿದ್ದಾರೆ. ತಮ್ಮ ಕಲಾ ಜೀವನಕ್ಕೆ 50 ವರ್ಷ. ಅವರಿಗೀಗ 75ರ ಪ್ರಾಯ. ವೃತ್ತಿ ಬದುಕಿನಷ್ಟೇ ವೈಯಕ್ತಿಕ ಬದುಕಿನಲ್ಲೂ ಸೊಗಸನ್ನು ತುಂಬಿದ್ದಾರೆ. 75ನೇ ಹುಟ್ಟುಹಬ್ಬ ರಂಗಭೂಮಿಯಲ್ಲೇ ನೆರವೇರಬೇಕು ಎನ್ನುವ ಅವರ ಅದಮ್ಯ ಅಭಿಲಾಷೆಯಂತೆ ಎರಡು ನಾಟಕಗಳನ್ನು ಆಡಿದ್ದಾರೆ.

ಮಂಜಮ್ಮ ಜೋಗತಿ ಬದುಕಿಗೆ ರಂಗಕನ್ನಡಿ

ವಿಕ್ರಮ ಬಿ. ಕೆ.

ಮಂಜಮ್ಮ ಜೋಗತಿ ಅವರ ಬದುಕಿನ ಅಧ್ಯಾಯಗಳನ್ನು ರಂಗರೂಪಕ್ಕೆ ಅಳವಡಿಸಿ, ಬೇಲೂರು ರಘುನಂದನ್ ಅವರು ನಿರ್ದೇಶಿಸಿದ್ದಾರೆ. ಬರೀ ಮನೋರಂಜನೆಯಾಗದ ಈ ರಂಗಪ್ರಯೋಗವು ಮನಃಪರಿವರ್ತನೆಗೆ ಪ್ರೇರಣೆಯೂ ಆಗುವುದು ಗಮನಾರ್ಹ.

ತಲೆಮೇಲೆ ಹೊತ್ತ ದೇವಿ ಹೆಣ್ಣು, 'ನಾನು ನಿಂತಿರೋದು ಭೂಮಿ ತಾಯಿಯ ಮೇಲೆ, ಆಕೆ ಕೂಡ ಹೆಣ್ಣು, ನಡುವೆ ಇರುವ ನಾನು ಯಾರು' ಎಂದು ಪ್ರಶ್ನಿಸುವ ಈ ನಾಟಕ ಕನ್ನಡದಲ್ಲಿ ಬಹಳ ಹಿಂದೆಯೇ ಬರಬೇಕಿತ್ತು.

ಮಂಜುನಾಥ್ ಶೆಟ್ಟಿ, ಮಂಜಮ್ಮ ಜೋಗತಿ ಆಗಿ 'ಮಾತಾ' ಆಗುವ ಜಾನಪದ ಕಲೆಗಾರ್ತಿಯ ಜೀವನವನ್ನುಎಂಬತ್ತು ನಿಮಿಷಗಳಲ್ಲಿ ರಂಗದ ಮೇಲೆ ನಡೆಯುವ ನಾಟಕವಾಗಿ ರೂಪಾಂತರಿಸಲಾಗಿದೆ.

ಮಂಜಮ್ಮನವರ ಮಾವ ಗಾಂಧಿ ಶೆಟ್ಟಿ ಅವರನ್ನು ರಂಗದ ಮೇಲೆ ಕರೆ ತಂದ ಪರಿ ಬೇಲೂರು ರಘುನಂದನ್ ಅವರ ನಿರ್ದೇಶನದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವ ಹಾಗೆ ಮಾಡುತ್ತದೆ.

ಓಣಿಯ ಗುಡಿಸಲಿನ ಮನೆಗೆ ಬೆಂಕಿ ಬಿದ್ದಾಗ, ತೊಟ್ಟಿಲು ತೂಗುತ್ತಿರುವ ಮಂಜಮ್ಮ ಅವರ ತಾಯಿ ಕೂಸನ್ನು ಅಲ್ಲಿಯೇ ಬಿಟ್ಟು ಮೊದಲು ಮಾತು ಬಾರದ ಬೆಕ್ಕಿನ ಮರಿಗಳನ್ನು ರಕ್ಷಿಸಿದ ಘಟನೆ- ತಾಯಿತನದ ಬಗ್ಗೆ ಅಷ್ಟೇ ಅಲ್ಲ ಜಾತಿ, ಲಿಂಗ, ಮೀರಿ ಶುದ್ಧ ಮನಸ್ಸಿನಿಂದ ಬಾಳುವ ಸಂದೇಶ ಸಾರುತ್ತದೆ. ಬೆಳಕು, ಸಂಗೀತದ ಮೂಲಕ ಇಡೀ ನಾಟಕದ ಕಟ್ಟೆ ಒಂದು ದೊಡ್ಡ ಕನ್ನಡಿಯಾಗುತ್ತದೆ.

ಮಂಜಮ್ಮನವರ ಬಹಳಷ್ಟು ಭಾಷಣಗಳಲ್ಲಿ ಕೇಳಿ ತಿಳಿದುಕೊಂಡಿದ್ದು ಇಷ್ಟು: ಅವರು 'ಕಲೆಯೇ ಬದುಕು' ಎಂದು ನಂಬಿ ಬದುಕಿದ್ದಾರೆ. ಆದರೆ ಅವರು ಕಲೆಗಾರ್ತಿ ಆಗಿದ್ದು ಹೇಗೆ, ಯಾರು ಯಾರು ಅವರನ್ನು ಕಲೆ ಅನುಭವಿಸಲು ಅನುವು ಮಾಡಿಕೊಟ್ಟಿರಬಹುದು ಎನ್ನುವ ಪ್ರಶ್ನೆಗಳಿಗೆ ಉತ್ತರ ಹುಡುಕಲು ಹೊರಟ ರಘುನಂದನ್ ಅದನ್ನು ಸಮರ್ಥವಾಗಿ ರಂಗದ ಮೇಲೆ ಸಾಧಿಸಿದ್ದಾರೆ. ಮಂಜಮ್ಮನವರ ತಾಯಿ ಬುರ್ಖಾ ಧರಿಸಿ ಯಾರಿಗೂ ತಿಳಿಯದ ಹಾಗೆ ಚಿತ್ರಮಂದಿರಕ್ಕೆ ಹೋಗಿ ಸಿನಿಮಾ ನೋಡುವ ಸಂದರ್ಭವಿದೆ. ಹೆಣ್ಣಿಗೆ ಸಮಾಜ ಹಾಕಿದ ನಿಬಂಧನೆಗಳನ್ನು ಎತ್ತಿ ತೋರಿಸುತ್ತಾ, ಬುರ್ಖಾದ ಒಳಗೆ ಇರುವ ಸೀರೆ, ಹೆಣ್ಣಿನ ಒಳಗಿರುವ ಆಸೆಯನ್ನು ರೂಪಕವಾಗಿ ತೋರುವ ಬಗೆ ಗಮನಾರ್ಹ.

ಮಂಜಮ್ಮನವರ ಪಾತ್ರದಲ್ಲಿ ಅರುಣ್ ಕುಮಾರ್

ಕತ್ತಲೆಯಲ್ಲಿ ಮೈ ಮೇಲೆ ಎರಗುವ ಸೈಕಲ್‌ನ ಗಾಲಿ ಇಲ್ಲಿ ಕಾಲಚಕ್ರ, ಮುಟ್ಟಿನ ಬಟ್ಟೆ ಎಂಬುದು ಹೆಣ್ಣಿನ ಬದುಕಿನ ರೈಲನ್ನು ಗಕ್ಕನೆ ನಿಲ್ಲಿಸುವ ಅಂಕುಶ, ಜೋಗತಿ ಸಂಪ್ರದಾಯದ ಭಕ್ತಿ ಮತ್ತು ಹಿಜಡಾ ಸಂಪ್ರದಾಯದ ಲಿಂಗ ಪರಿವರ್ತನೆ ಇವೆಲ್ಲವುಗಳ ಬಗ್ಗೆ ನಾಟಕ ಹೇಳುತ್ತದೆ. ಹುಲಿಗೆಮ್ಮ ತಾಯಿಯಾಗಿದ್ದಾಗಲೇ ಚೆನ್ನಾಗಿದ್ದಳು, ದೇವಿಯಾದ ಕೂಡಲೇ ನಮ್ಮಿಂದ ದೂರಾದಳು. ಗುಡಿಯಾಗಿದ್ದಾಗ ನಾವು ಒಳಗಿದ್ದೆವು, ಅರ್ಚಕರೆಂದು ಬಂದು ದೇವಸ್ಥಾನವಾದ ಕೂಡಲೇ ನಾವು ಹೊರಗೆ ಬಂದೆವು ಎನ್ನುವುದು ಬದಲಾಗುತ್ತಿರುವ ಸಮಾಜ ಮತ್ತು ಭಕ್ತರಿಂದ ದೂರಾದ ದೇವರನ್ನು ತೋರಿಸುತ್ತವೆ. ದೇವರೆಂದರೆ ಭರವಸೆ. ಅದೇ ಇಲ್ಲದೇ ಬದುಕು ಇನ್ನಷ್ಟು ಕೇಡು ಕಾಣುತ್ತದೆ. ಈಗಿನ ಮಾತೆಯರ ಪಾಡು ಹೇಗಿದೆಯೋ? ಅನಿಸುತ್ತದೆ.

ಅರುಣ್ ಕುಮಾರ್ ಅವರು ಮಂಜಮ್ಮ ಜೋಗತಿಯವರ ಬದುಕಿನ ಎಲ್ಲವನ್ನೂ ಎಡಬಿಡದೇ ನಮ್ಮ ಕಣ್ಣ ಮುಂದೆ ಕಟ್ಟಿಕೊಡುವ ಬಗೆ ಚೆನ್ನಾಗಿದೆ. ಮಂಜಮ್ಮ ಜೋಗತಿ ಅವರ ಪಾತ್ರ ಮಾಡಿದ ಅರುಣ್ - ಇಂತಹ ಅದ್ಭುತ ನಟ ಎಂದು ಗೊತ್ತಾಗುತ್ತದೆ.

ಸಂಗೀತ ಸಂಯೋಜನೆಯನ್ನು ಸವಿತಕ್ಕ ಮಾಡಿದ್ದಾರೆ. ಅವರ ಗಟ್ಟಿ ದನಿ ನಾಟಕಕ್ಕೆ ಬೇಕಾದ ಶಕ್ತಿಯನ್ನು ಸಂಗೀತದ ಮೂಲಕ ಬೆರೆಸುತ್ತಾರೆ. ಹಿಂದೆ ಆಗಾಗ ಬರುವ ಚೌಡಿಕಿ ಪದಗಳು, ಹುಲಿಗೆಮ್ಮನ ಜಾತ್ರೆಯನ್ನು ಬರೀ ಒಬ್ಬ ನಟ ರಂಗದ ಮೇಲೆ ಯಶಸ್ವಿಯಾಗಿ ತೋರಿಸಲು ಸಾಧ್ಯವಾಗಲು ಸಂಗೀತ ಮುಖ್ಯ ಕಾರಣ ಆಗುತ್ತದೆ.

ಅರುಣ್ ಜೋಳದ ಕೂಡ್ಲಿಗಿ ಬರೆದಿರುವ 'ನಡುವೆ ಸುಳಿವ ಹೆಣ್ಣು', ಡಾ ಚಂದ್ರಪ್ಪ ಸೊಬಟಿ ಅವರು ಬರೆದಿರುವ 'ಮಂಜಮ್ಮ ಜೋಗತಿ' ನಾಟಕ ಮತ್ತು ಹಲವೆಡೆ ಮಂಜಮ್ಮನವರು ಆಡಿದ ಮಾತುಗಳು ಮತ್ತು ಕೊಟ್ಟ ಸಂದರ್ಶನಗಳನ್ನು ಮೂಲವಾಗಿ ಇಟ್ಟುಕೊಂಡು ನಾಟಕವನ್ನು ಕಟ್ಟಿದ್ದಾರೆ ನಿರ್ದೇಶಕರು.

'ಮಾತಾ' ನಾಟಕ ಬರೀ ಮನೋರಂಜನೆಗೆ ಅಲ್ಲ; ಮನಃಪರಿವರ್ತನೆಗೆ ಪ್ರೇರಣೆಯೂ ಹೌದು.

ಕಥೆ
ಮೂಲ ಮಲಯಾಳಂ: ಕಮಲಾದಾಸ್
ಕನ್ನಡಕ್ಕೆ: ಕೆ.ಕೆ.ಗಂಗಾಧರನ್
ಅವರ
ಸಹೃದಯರು
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಅಜಯ್ ಅಂಗಡಿ
ಅವರ
ಅವಳು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ನಾದದಲೆಗಾಗಿ ನೊಂದವರ ಸೊಲ್ಲು

10ನೇ ಪುಟದಿಂದ...

ಸಂಗೀತ ಕಲೆಯನ್ನು ಪೋಷಿಸಿ...

ಎಂ.ಎಸ್. ಶೀಲಾ, ಗಾಯಕಿ

ನಮ್ಮ ಸಂಗೀತ ಕಲೆ ಒಂದೆರಡು ದಿನಗಳಲ್ಲಿ ಬರುವಂಥದ್ದಲ್ಲ. ಹಲವಾರು ವರ್ಷಗಳಿಂದ, ಹುಟ್ಟಿದಾರಭ್ಯ ಸಂಗೀತ ಮನೆತನದಲ್ಲೇ ಬೆಳೆದು ಕಲೆಯನ್ನು ಪೋಷಿಸಿ, ಉಳಿಸಿ ಬೆಳೆಸಿಕೊಂಡು ಬಂದಿದ್ದೇವೆ, ನಮ್ಮಂಥವರಿಗೆ ಅವಕಾಶವೇ ಇಲ್ಲ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ಉತ್ಸವಗಳಲ್ಲಿ ನಮಗೆ ಅವಕಾಶವೇ ಸಿಗೋದಿಲ್ಲ. ಹಿಂದೂಸ್ತಾನಿ ಸಂಗೀತ ಕಲಾವಿದರಿಗೂ ಅವಕಾಶ ಸಿಗುತ್ತಿದೆ. ಹೊರನಾಡ ಕಲಾವಿದರನ್ನು ಕರೆಸಲೇ ಬಾರದು ಎಂದು ನಾನು ಹೇಳಲ್ಲ. ಆದರೆ ಅವರೂ ನಮ್ಮನ್ನು ಕರೆಸಿ ಹಾಡಿಸಬೇಕಲ್ಲ? ಹಾಗೆ ಮಾಡ್ತಾರೆಯೇ? ಖಂಡಿತ ಇಲ್ಲ. ಹೀಗಿರುವಾಗ ನಾವು ಎಲ್ಲಿಗೆ ಹೋಗಬೇಕು?

ಸರ್ಕಾರ ನಡೆಸಿದ ಉತ್ಸವದಲ್ಲಿ ಎಷ್ಟು ಕರ್ನಾಟಕ ಸಂಗೀತ ಕಲಾವಿದರಿಗೆ ಅವಕಾಶ ಸಿಕ್ಕಿತ್ತು? ಬಹಳ ಕಡಿಮೆ. ಎಲ್ಲ ಉತ್ಸವಗಳಲ್ಲಿ ನಮ್ಮ ಕಲಾವಿದರಿಗೆ ಅವಕಾಶವೇ ಇಲ್ಲ. ಹೊರನಾಡಿನ ಕಲಾವಿದರನ್ನು ಕರೆಸಿ ಲಕ್ಷಗಟ್ಟಲೆ ಸಂಭಾವನೆ ಕೊಟ್ಟು ಅವಕಾಶ ಕೊಡ್ತಾರೆ. ನಮ್ಮ ಕಲಾವಿದರಿಗೆ ಪ್ರೋತ್ಸಾಹ ಕೊಡಬೇಕಾದದ್ದು ಸರ್ಕಾರದ ಕರ್ತವ್ಯ ಅಲ್ಲವೇ? ಇನ್ನು ಖಾಸಗಿ ಸಂಘ ಸಂಸ್ಥೆಗಳು ಯಾರನ್ನು ಬೇಕಾದರೂ ಕರೆಸಲಿ. ಇದಕ್ಕೆ ನಮ್ಮ ಅಭ್ಯಂತರ ಇಲ್ಲ. ಏಕೆಂದರೆ ಅದು ಅವರ ಇಚ್ಛೆ. ನಾವು ಅವಕಾಶ ಕೊಡಿ ಅಂತ ಮನವಿ ಮಾಡಿಕೊಳ್ಳಬಹುದೇ ಹೊರತು ಬೇಡಿಕೆ ಇಡೋದಕ್ಕೆ ಆಗಲ್ಲ.

ಕರ್ನಾಟಕ ಸಂಗೀತದಲ್ಲಿ ಎಷ್ಟೋ ಸಾಧಕರಿದ್ದಾರೆ. ನಮ್ಮಲ್ಲಿ ಏನು ಕೊರತೆ ಇದೆ? ನಮ್ಮ ಕನ್ನಡಿಗರಿಗೆ ಸ್ವಾಭಿಮಾನ ಕಡಿಮೆ, ಸಂಕೋಚ ಹೆಚ್ಚು. ನಮಗೆ ಅವಕಾಶ ಸಿಗಬೇಕು ಎಂದಾದರೆ ಅದು ಕೆಸಿಎಂಸಿಯಿಂದಷ್ಟೇ ಸಾಧ್ಯವಾಗಬೇಕಷ್ಟೆ.

ವಾದ್ಯಗಾರರಿಗೂ ಸಿಗಲಿ ಅವಕಾಶ

ಜ್ಯೋತ್ಸ್ನಾ ಶ್ರೀಕಾಂತ್, ಪಿಟೀಲು ವಾದಕಿ

ಕರ್ನಾಟಕ ಶಾಸ್ತ್ರೀಯ ಗಾಯಕರಿಗೆ, ವಾದ್ಯ ಸಂಗೀತಗಾರರ ಬಗ್ಗೆ ಸಂಸ್ಕೃತಿ ಇಲಾಖೆ ಮಲತಾಯಿ ಧೋರಣೆ ಅನುಸರಿಸುತ್ತಿರುವುದು ಎಷ್ಟೋ ವರ್ಷಗಳಿಂದ ನಡೆಯುತ್ತಲೇ ಇದೆ. ಇದರ ವಿರುದ್ಧ ದನಿ ಎತ್ತಿದರೂ ಅದು ನೀರ ಮೇಲೆ ಮಾಡಿದ ಹೋಮದಂತಾಗುತ್ತಿತ್ತು. ಆದರೆ ಈಗ ಎಲ್ಲ ಸಂಗೀತಗಾರರು ಒಟ್ಟಾಗಿದ್ದೇವೆ. ನಮಗೆ ಸಿಗಬೇಕಾದ ಅವಕಾಶಗಳನ್ನು ಹೋರಾಟದ ಮೂಲಕ ಗಳಿಸಿಕೊಳ್ಳಬೇಕಾಗಿದೆ.

ಈಗ ನಮ್ಮ ಬೇಡಿಕೆ ಸರ್ಕಾರಿ ಉತ್ಸವಗಳಲ್ಲಿ ಶೇ 80ರಷ್ಟು ಕರ್ನಾಟಕ ಸಂಗೀತ ಕಲಾವಿದರಿಗೆ ನೀಡಬೇಕು. ಅದರಲ್ಲಿ ಸರೀ ಅರ್ಧದಷ್ಟು ವಾದ್ಯಗಾರರಿಗೂ ನೀಡಬೇಕು. ಅಲ್ಲದೆ ನಶಿಸಿಹೋಗುವಂಥ ನಾಗಸ್ವರ, ಜಲತರಂಗದಂತಹ ವಾದ್ಯ ನುಡಿಸುವ ಕಲಾವಿದರಿಗೆ ಅವಕಾಶ ಕೊಡಬೇಕು ಎಂಬುದು.

ವೀಣೆ ಕಲಾವಿದರಿಗೂ ಅಷ್ಟೆ. ಅವಕಾಶವೇ ಇಲ್ಲ. ಎಲ್ಲೂ ವೀಣೆ ಕಛೇರಿ ನಡೆಸುವುದೇ ಇಲ್ಲ. ಹಾಗಾದರೆ ಪ್ರತಿಭಾವಂತ ವಾದ್ಯ ಕಲಾವಿದರು ಎಲ್ಲಿ ಹೋಗಬೇಕು? ಹೊರರಾಜ್ಯದವರಿಗೆ ವಿಶೇಷ ಮಣೆ ಹಾಕುವ ನಮ್ಮ ಇಲಾಖೆ, ಇಲ್ಲಿನ ಕಲಾವಿದರನ್ನು ಕಡೆಗಣಿಸುವುದೇಕೆ ಎಂಬುದೇ ಅರ್ಥವಾಗುತ್ತಿಲ್ಲ.

ಮುನ್ನೋಟ 21-05-2023 ರಿಂದ -27-05-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನೂತನ ವ್ಯವಹಾರವನ್ನು ಆರಂಭಿಸುವ ಯೋಚನೆಯಲ್ಲಿರುವವರು ಅದರ ಸಾಧಕ ಬಾಧಕಗಳನ್ನು ಸರಿಯಾಗಿ ತಿಳಿಯಿರಿ. ಹಣ್ಣಿನ ವ್ಯಾಪಾರಸ್ಥರಿಗೆ ಉತ್ತಮ ವ್ಯಾಪಾರವಿರುತ್ತದೆ. ಆಸ್ತಿ ಮಾರಾಟದಿಂದ ಉತ್ತಮ ಲಾಭ ಪಡೆಯುವಿರಿ. ಕಷ್ಟಕಾಲದಲ್ಲಿ ಆಪ್ತರ ಸಹಾಯ ದೊರೆಯುತ್ತದೆ. ವೃತ್ತಿಯಲ್ಲಿ ಮುಂದಿನ ಅಭಿವೃದ್ಧಿ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ನಿಮ್ಮ ವ್ಯವಹಾರಗಳಲ್ಲಿ ಉಂಟಾಗಿರುವ ಸಮಸ್ಯೆಗಳಿಗೆ ತಜ್ಞರ ಬಳಿ ಸಲಹೆ ಪಡೆಯುವುದು ಉತ್ತಮ. ವಿದ್ಯುತ್ ಉಪಕರಣಗಳನ್ನು ತಯಾರಿಸುವವರಿಗೆ ಬೇಡಿಕೆ ಬರುತ್ತದೆ. ನಿತ್ಯಬಳಕೆಯ ಯಂತ್ರೋಪಕರಣಗಳು ಅಥವಾ ವಾಹನಗಳು ರಿಪೇರಿಗೆ ಬರುವ ಸಾಧ್ಯತೆಗಳಿವೆ. ಧನ ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಹಾಯ ಸಿಗುವುದೆಂಬ ನಂಬಿಕೆಯಲ್ಲಿ ನಿಮ್ಮ ಅಂತರಾಳವನ್ನು ಇತರರ ಮುಂದೆ ತೋಡಿಕೊಳ್ಳಬೇಡಿ. ಮಿಶ್ರ ಲೋಹಗಳ ವ್ಯಾಪಾರಿಗಳಿಗೆ ಹೆಚ್ಚಿನ ಬೇಡಿಕೆ ಬರುತ್ತದೆ. ಮಿತ್ರವರ್ಗದವರ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುವ ಅವಕಾಶ ದೊರೆಯುತ್ತದೆ. ಗುಡಿಗಾರಿಕೆಯನ್ನು ಮಾಡುವವರಿಗೆ ಬೇಡಿಕೆ ಹೆಚ್ಚಿ ಸಂಪಾದನೆಯಾಗುತ್ತದೆ. ಆರಕ್ಷಕ ಸಿಬ್ಬಂದಿಗೆ ಕೆಲಸದ ಒತ್ತಡ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಕಟವರ್ತಿಗಳಿಂದ ನೂತನ ವ್ಯವಹಾರದ ಬಗ್ಗೆ ಪ್ರಸ್ತಾಪ ಬರಬಹುದು. ಕಾರ್ಮಿಕರೊಡನೆ ವ್ಯವಹರಿಸುವಾಗ ಸಂಯಮ ಬಹಳ ಅಗತ್ಯ. ಮಕ್ಕಳ ಓದಿನ ಬಗ್ಗೆ ಹೆಚ್ಚಿನ ಗಮನಹರಿಸುವಿರಿ. ಕೃಷಿಕರಿಗೆ ಕಾಡು ಪ್ರಾಣಿಗಳಿಂದ ತೊಂದರೆ ಬರುವ ಸಾಧ್ಯತೆ ಇದೆ. ಆಹಾರ ಶೈಲಿಯಿಂದ ಅನಾರೋಗ್ಯ ಉಂಟಾಗುವ ಸಾಧ್ಯತೆ ಇದೆ. ನಿಮ್ಮ ಮಾತಿನ ಚತುರತೆಯಿಂದ ಜನರ ಮನಸ್ಸನ್ನು ಗೆಲ್ಲುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಕುಟುಂಬ ವರ್ಗದಲ್ಲಿ ಸಣ್ಣ ಪುಟ್ಟ ವಿವಾದಗಳು ಬಂದರೂ ಅದನ್ನು ಮಾತಿನಿಂದ ಬಗೆಹರಿಸಿಕೊಳ್ಳಿರಿ. ತಂದೆಯಿಂದ ಆಧ್ಯಾತ್ಮಿಕ ವಿದ್ಯೆಯನ್ನು ಕಲಿಯುವ ಅವಕಾಶ ಸಿಗುತ್ತದೆ. ಇಲಾಖೆ ಪರೀಕ್ಷೆ ಕಟ್ಟಿರುವವರಿಗೆ ಶುಭ ಸುದ್ದಿ ಇರುತ್ತದೆ. ದನ ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ಸ್ನೇಹಿತರೊಂದಿಗೆ ನಡೆಸಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಕ್ರಯ ವಿಕ್ರಯ ಮಾಡುವವರಿಗೆ ಉತ್ತಮ ವ್ಯವಹಾರ ನಡೆಯುತ್ತದೆ,ಎಚ್ಚರಿಕೆ ವಹಿಸಿದಲ್ಲಿ ಹೆಚ್ಚಿನ ಲಾಭ ಪಡೆಯಬಹುದು. ಇಂದಿನ ಪರಿಸ್ಥಿತಿಗಳಿಗೆ ತಕ್ಕಂತೆ ಹೊಸ ಯೋಜನೆಯನ್ನು ರೂಪಿಸುವುದು ಒಳ್ಳೆಯದು. ಮನೆಪಾಠ ಮಾಡುವವರಿಗೆ ಹೆಚ್ಚಿನ ಶಿಷ್ಯರು ದೊರಕುವರು. ಮನೆಯ ಅಲಂಕಾರಗಳಿಗಾಗಿ ವಸ್ತುಗಳನ್ನು ಕೊಳ್ಳುವಿರಿ. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಪರಿಶ್ರಮದಿಂದ ಹೆಚ್ಚು ಸಂಪಾದನೆ ಮಾಡುವ ಯೋಗವಿದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸರ್ಕಾರಿ ನೌಕರರಿಗೆ ಅಪೇಕ್ಷಿತ ಸ್ಥಳಕ್ಕೆ ವರ್ಗಾವಣೆ ದೊರೆಯುವ ಸಂದರ್ಭವಿದೆ. ದಿನಸಿ ವ್ಯಾಪಾರಿಗಳಿಗೆ ಹೆಚ್ಚು ವ್ಯವಹಾರ ನಡೆಯುತ್ತದೆ. ಆಲಸ್ಯ ನಿಮ್ಮನ್ನು ಈ ವಾರ ಕಾಡಬಹುದು. ಇವತ್ತಿನ ಮಟ್ಟಿಗೆ ಹೆಚ್ಚಿನ ಆಲಸ್ಯತನ ಬೇಡ. ವಾಹನಗಳ ಬಿಡಿ ಭಾಗಗಳನ್ನು ಮಾರಾಟ ಮಾಡುವವರ ವ್ಯವಹಾರ ವಿಸ್ತರಿಸುತ್ತದೆ. ಹಳೆಯ ವಾಹನಗಳನ್ನು ರಿಪೇರಿ ಮಾಡುವವರಿಗೆ ಬಿಡುವಿಲ್ಲದ ಕೆಲಸವಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಜನರ ಸಂಪರ್ಕದಿಂದ ಕೆಲವರಿಗೆ ರಾಜಕೀಯ ಪ್ರವೇಶದ ಯೋಗವಿದೆ. ಹಿರಿಯರ ಶಿಫಾರಸಿನ ಮೇಲೆ ಉದ್ಯೋಗ ದೊರೆಯುವ ಸಂದರ್ಭವಿದೆ. ಕಾರ್ಯ ಸಾಧನೆಗಾಗಿ ಹೆಚ್ಚು ಒತ್ತಡ ಮಾಡಿಕೊಂಡು ಆರೋಗ್ಯ ವ್ಯತ್ಯಾಸ ಮಾಡಿಕೊಳ್ಳಬೇಡಿರಿ. ಆರ್ಥಿಕ ಸ್ಥಿತಿಯು ಸಾಮಾನ್ಯ ಗತಿಯಲ್ಲಿರುತ್ತದೆ. ಸಾಂಬಾರು ಪದಾರ್ಥಗಳ ಬೆಳೆಗಾರರಿಗೆ ಉತ್ತಮ ಬೆಳೆಬರುವ ಯೋಗವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಬರಹಗಾರರಿಗೆ ಉತ್ತಮ ಬರವಣಿಗೆಯನ್ನು ಬರೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ವಿದ್ಯಾಭ್ಯಾಸದಲ್ಲಿ ಸ್ವಲ್ಪ ಉದಾಸೀನವನ್ನು ತೋರುತ್ತಿದ್ದವರು ಈಗ ಹೆಚ್ಚಿನ ಶ್ರದ್ಧೆಯನ್ನು ವಹಿಸುವರು. ವಿದೇಶದಲ್ಲಿರುವವರು ಹೆಚ್ಚಿನ ವಿದ್ಯೆಯನ್ನು ಓದಲು ಅವಕಾಶ ದೊರೆಯುತ್ತದೆ. ಆಹಾರವನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯವಹಾರ ನಡೆಯುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಜೀವನದಲ್ಲಿ ಹೊಸದೊಂದು ಅಧ್ಯಾಯ ಆರಂಭವಾಗಲಿದೆ. ನಿಮ್ಮಲ್ಲಿ ಹುದುಗಿರುವ ಪ್ರತಿಭೆ ಮತ್ತು ಕೌಶಲಗಳನ್ನು ತೋರಿಸಲು ಉತ್ತಮ ಅವಕಾಶ ದೊರೆಯುತ್ತದೆ. ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ ನಡೆಯುತ್ತದೆ. ಹಣದ ಒಳಹರಿವು ಸಾಮಾನ್ಯವಾಗಿ ಇರುತ್ತದೆ. ಕೃಷಿಯಿಂದ ಹೆಚ್ಚಿನ ಲಾಭವನ್ನು ರೈತರು ಕಾಣಬಹುದು. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವನ್ನು ಪಡೆಯುವ ಯೋಗವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸವಾಲಾಗಿರುವ ಕೆಲವು ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಆಲೋಚನೆ ಮಾಡುವಿರಿ. ಯುವಕರು ಮುಂದೆ ಸಾಗಬೇಕಾದ ದಾರಿಯನ್ನು ನಿರ್ಧರಿಸಲು ಹಾಗೂ ಉದ್ಯೋಗಕ್ಕೆ ಸೇರಲು ಸೂಕ್ತ ಮಾರ್ಗದರ್ಶನ ಪಡೆಯಬೇಕಾಗುತ್ತದೆ. ಶಸ್ತ್ರಚಿಕಿತ್ಸೆಯನ್ನು ಮಾಡುವ ವೈದ್ಯರಿಗೆ ಬೇಡಿಕೆ ಹೆಚ್ಚುತ್ತದೆ. ಮಾರಾಟ ಸಂಸ್ಥೆಗಳನ್ನು ನಡೆಸುತ್ತಿರುವವರು ತಮ್ಮ ಕ್ಷೇತ್ರ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಕೆಲಸ ಕಾರ್ಯದ ಒತ್ತಡದಿಂದ ಕುಟುಂಬದ ಕಡೆ ಗಮನ ಕಡಿಮೆಯಾಗದಿರಲಿ. ಕಚೇರಿಯಲ್ಲಿ ಬೇಸರ ತರುವಂತಹ ಘಟನೆಗಳು ನಡೆಯಬಹುದು. ಹಣದ ಒಳಹರಿವು ನಿರೀಕ್ಷೆಯ ಮಟ್ಟಕ್ಕೆ ಬರಬಹುದು. ಹೂಡಿಕೆ ವಿಚಾರದಲ್ಲಿ ಎಚ್ಚರ ವಹಿಸಿರಿ, ಹೂಡಿಕೆ ಹಣ ವ್ಯತ್ಯಾಸವಾಗುವ ಸಾಧ್ಯತೆಗಳಿವೆ. ಪಾಲುದಾರಿಕೆಯ ವ್ಯವಹಾರಗಳಲ್ಲಿ ಬಹಳಯಶಸ್ಸು ಇರುವುದಿಲ್ಲ.

ಪದಬಂಧ 2790



ಮೇಲಿನಿಂದ ಕೆಳಕ್ಕೆ

1. ರಾಗ ದ್ವೇಷಗಳ ಬಿಟ್ಟು ಹಾಡುತ್ತಾ ಹೊರಟವ 3
2. ಅರಣ್ಯ ಸಂಪತ್ತನ್ನು ಕಾಪಾಡುವವ 5
3. ಪಾಲಿಸಬೇಕಾದ ನಡವಳಿಕೆ ಮತ್ತು ಅದಕ್ಕೆ ಸಂಬಂಧಿಸಿದ ಕಟ್ಟಳೆ 5
4. ಹಿಂದಿ ಭಾಷೆಯಲ್ಲಿ 'ಇರುವ' ಸುಲ್ತಾನನ ಬೇಗಂ 3
6. ಪಾಠ ಮಾಡುವ ಮೇಷ್ಟ್ರು 3
8. ನೂರರಲ್ಲಿ ಕಿಣಕಿಣಿಸುವ ಗೆಜ್ಜೆ 3
10. ನೀತಿ ನಡವಳಿಕೆಗಾಗಿ ಹುಟ್ಟಿಬಂದ ಪಾಂಡವಾಗ್ರಜ 3
11. ಹೊಸದಾದ ಒಂಭತ್ತನೆಯದು 3
14. ತಲೆಕೆಳಕಾದ ವಾಸ ವ್ಯವಸ್ಥೆ 3
13. ಎತ್ತರದಿಂದ ಕೆಳಕ್ಕೆ ಹಾರು 3
16. ಚೆನ್ನಾಗಿ ಪಳಗಿದ 3
17. ಯಾವ ವಿಧವಾದ ನೀತಿ ತರ್ಕವಿಲ್ಲದ 5
18. ನಾಚಿಕೆಯಿಂದ ತಲೆಕೆಳಗು ಮಾಡಿದ ಸುಸಂಸ್ಕೃತ 5
19. ಹೆಜ್ಜೆಯ ಮೇಲೊಂದು ಹೆಜ್ಜೆಯನಿಕ್ಕುತ ವಿರಳವಾಗಿ ಬರುವ ಹಣದೊಡತಿ 3
21. ಮುಳ್ಳಿನಂತೆ ಒದಗಿಬರುವ ಅಡ್ಡಿ 3
23. ಕೆಳಗಿಂದ ಮೇಲೆ ಕಾಣಿಸುವ ಮೊಗ 3

ಎಡದಿಂದ ಬಲಕ್ಕೆ

1. ಚುನಾವಣೆಯಲ್ಲಿ ಗೆದ್ದವರ ಗೆಲುವಿನ ಸಂಭ್ರಮಾಚರಣೆ 5
3. ಜಲದಲ್ಲಿ ವಾಸಮಾಡುವ ಅಶ್ವ 5
5. ಬೆಟ್ಟ ಮತ್ತು ಬೆಟ್ಟದ ತುದಿ 5
7. ಪ್ರತಿ ದಿನವೂ ಹೊಚ್ಚ ಹೊಸದು 5
9. ಬಾಹುಬಲಕ್ಕೆ ಹೆಸರಾದ ದ್ವಿತೀಯ ವರ್ಣ 3
10. ಜೊತೆಯಾಗಿರುವ ಹಣ ಮತ್ತು ಬಂಗಾರ 5
12. ಸದಾ ಮನಸ್ಸಿಗೆ ಆಹ್ಲಾದ ತರುವ ನೆನಪು 5
15. ಮಂದಿಯಿಂದ ಒಪ್ಪಿಗೆಯಾಗಿ ಬಂದ ಓಟು 5
18. ಪಾಂಡವರಲ್ಲಿ ಕೊನೆಯಿಬ್ಬರು ಒಟ್ಟಿಗೆ ಸೇರಿದಾಗ ಜಾತಿಯಿಲ್ಲದ ದೈವವಾಗಬಹುದು 5
20. ಗತಿಯಲ್ಲಿ ಶೀಘ್ರ 3
21.ಹಾಡುಗಾರಿಕೆಯಲ್ಲಿ ನಡುಗುವ ಧ್ವನಿ 5
22. ಇದು ಬೃಹತ್ ಸಂಧಿಕೂಟ 5
24. ಊಹೆಗೂ ನಿಲುಕದಂತಹುದು 5
25. ದೇವಾಲಯದ ಮೂರ್ತಿಗಳಿಗೆ ವರ್ಷಕ್ಕೊಮ್ಮೆ ನಡೆಯುವ ವಿವಾಹ ಸಂಭ್ರಮ 5

ಪದಬಂಧ ಉತ್ತರ -2789

ಮೇಲಿಂದ ಕೆಳಕ್ಕೆ

1. ರಾಮರಾಮ 2.ಪರಮಗತಿ 3.ನವಿಲುಕೋಸು 4.ಮತಗಟ್ಟೆ 8.ಹಾಗಲಕಾಯಿ 10.ಮೊನಚುಮಾತು 11. ಜಾತಕ 13.ನಿಮಿರಿ 14.ಸಂಕುಲ 17.ಗಣನಾಯಕ 18.ಮತಯಾಚನೆ 19.ತಾರಾಗಣ 21.ರಿಸ್ತೇದಾರ

ಎಡದಿಂದ ಬಲಕ್ಕೆ

1. ಪವನ 5.ಯಮಕಿಂಕರ 6.ವಿಷಯಾಂತರ 7.ಮಹಾಯಾಗ 9.ಕೋಳಿಮೊಟ್ಟೆ 12.ತಿನಿಸು 15.ತಬಲ 16.ಚುರುಕು 17.ಗರಿಮ 19.ತಾಯಿಋಣ 20.ತರಾತುರಿ 22.ರಾಗಸಂಚಯ 23.ಚರಣದಾಸ 24.ಕಲ್ಪನೆ

ನಿರ್ಭೀತೆ ನಜ್ಮಾ

ವಿಜಯಪುರದಲ್ಲಿ ಇದೇ ತಿಂಗಳ 27, 28ರಂದು ನಡೆಯಲಿರುವ 'ಮೇ ಸಾಹಿತ್ಯ ಮೇಳ' ಉದ್ಘಾಟಿಸಲಿರುವ ನಜ್ಮಾ ಬಾಂಗಿ ನಾಲ್ಕು ದಶಕಗಳ ಹಿಂದೆಯೇ ಸಾಂಪ್ರದಾಯಿಕ ಮನಸ್ಥಿತಿಗಳನ್ನೆಲ್ಲ ಎದುರು ಹಾಕಿಕೊಂಡು ಬದುಕಿದವರು. ಅವರೊಂದಿಗಿನ ಈ ಸಂವಾದ, ಹೆಣ್ಣುಮಕ್ಕಳು ಗಟ್ಟಿಯಾಗಿ ನಿಲ್ಲಲು ಸ್ಫೂರ್ತಿಯಂತಿದೆ. ಅವರ ಬದುಕಿನ ಪುಟಗಳು ಸಿನಿಮೀಯವಷ್ಟೆ ಅಲ್ಲ, ಆಸಕ್ತಿಕರವೂ ಹೌದು.

ಡಾ.ಎಚ್.ಎಸ್.ಅನುಪಮಾ

ಸಂದರ್ಶನ

ದಂಡಿಯಾಗಿ ಭಾರತೀಯ ಸಿನಿಮಾಗಳು ತಯಾರಾಗುತ್ತಿದ್ದ 1982ನೇ ಇಸವಿಯಲ್ಲಿ ಬಿಜಾಪುರದ ಮುಸ್ಲಿಂ ಯುವತಿ ನಜ್ಮಾ ಬಾಂಗಿ ಥಿಯೇಟರಿಗೆ ಹೋಗಿ ಸಿನಿಮಾ ನೋಡಿ ಮೂಲಭೂತವಾದಿಗಳ ಕೆಂಗಣ್ಣಿಗೆ ಗುರಿಯಾದಳು. ಅವಳ ವಿರುದ್ಧ ಫತ್ವಾ ಹೊರಟಿತು. ಇಸ್ಲಾಮಿನಲ್ಲಿ ಮಹಿಳೆಗೆ ಮನರಂಜನೆಗೆ ಅವಕಾಶವಿಲ್ಲವೇ? ಧರ್ಮದ ಚೌಕಟ್ಟಿನೊಳಗೆ ಭಾರತೀಯ ಮುಸ್ಲಿಂ ಮಹಿಳೆಯ ಸಾಂವಿಧಾನಿಕ ಹಕ್ಕುಗಳ ಪರಿಸ್ಥಿತಿ ಏನು? ಮುಂತಾದ ಪ್ರಶ್ನೆಗಳು ಮುನ್ನೆಲೆಗೆ ಬಂದವು. ಬಾನು ಮುಷ್ತಾಕ್, ಸಾರಾ ಅಬೂಬಕರ್ ಎಂಬಿಬ್ಬರು ಘಟನೆಗೆ ಪ್ರತಿಕ್ರಿಯಿಸಿ ಕನ್ನಡದ ಪ್ರಮುಖ ಲೇಖಕಿಯರಾಗಿ ಬೆಳೆದರು. ಬಳಿಕ ನಜ್ಮಾ ಎಲ್ಲಿರುವರು, ಹೇಗಿರುವರೆಂದು ನಾವು ಹಲವರು ಕುತೂಹಲಗೊಂಡಿದ್ದೆವು. ಇತ್ತೀಚೆಗೆ ಒಂಬತ್ತನೇ ಮೇ ಸಾಹಿತ್ಯ ಮೇಳವನ್ನು ಉದ್ಘಾಟಿಸಲು ಅವರನ್ನು ಕರೆಯಲೇಬೇಕೆಂದು ಶೋಧ ನಡೆಸಿ ಬಿಜಾಪುರದಲ್ಲಿ ಭೇಟಿಯಾದೆವು. ಅಕ್ಕನೊಂದಿಗೆ ವಾಸಿಸುತ್ತಿರುವ ಎಪ್ಪತ್ತೊಂದರ ಆಸುಪಾಸಿನ ಅವಿವಾಹಿತೆ ನಜ್ಮಾ 'ಸೋಲಾ ಬರಸ್ ಕೀ ಲಡ್ಕೀ ಹ್ಲೂಂ ಮೈ' ಎನ್ನುತ್ತ, ಹಿಜಾಬ್-ಬುರ್ಖಾ ಧರಿಸದೇ ಬಾಬ್‌ಕಟ್‌ನಲ್ಲಿ ದಿಟ್ಟ ಮಹಿಳೆಯಾಗಿ ಕಂಡರು. ಅವರೊಡನೆ ನಡೆಸಿದ ಮಾತುಕತೆಯ ಸಾರಾಂಶ ಇಲ್ಲಿದೆ:

• ಮನೆತನದ ಹಿನ್ನೆಲೆ, ಓದು?

ನನ್ನ ತಂದೆ ಎ.ಎಸ್.ಬಾಂಗಿ ವಿಜಯಪುರದವರು. ಭಾರತೀಯ ಪುರಾತತ್ವ ಇಲಾಖೆಯಲ್ಲಿ 40 ವರ್ಷ ಗೋಳಗುಮ್ಮಟದ ಕಸ್ಟೋಡಿಯನ್ ಆಗಿದ್ದರು. ನಮ್ಮದು ಆದಿಲ್‌ಶಾಹಿಗಳಿಗೆ ಹತ್ತಿರವಿದ್ದ ಕುಟುಂಬ. ಒಮ್ಮೆ ಆದಿಲ್‌ಶಾಹಿಗಳೊಡನೆ ನಮ್ಮ ಹಿರೀಕರೊಬ್ಬರು ಬೇಟೆಗೆ ಹೋದರು. ನಮಾಜಿನ ಸಮಯದಲ್ಲಿ ಕಾಡಿನಲ್ಲೇ ಅಜಾನ್ ಕೂಗಿದರು. ಅರಸರಿಗೆ ಖುಷಿಯಾಗಿ ಬಾಂಗಿ ಅನ್ನುವ ಬಿರುದು ಕೊಟ್ಟು, ಕೃಷಿ ಭೂಮಿಯನ್ನು ಇನಾಮು ಕೊಟ್ಟರು. ಅಮ್ಮ ಫಾತಿಮುನ್ನಿಸಾ ಹೈದರಾಬಾದಿನವರು. ತುಂಬ ಸಾಂಪ್ರದಾಯಸ್ಥೆ. ಬಿಲ್‌ಕುಲ್ ಮನೆ ಬಿಟ್ಟು ಹೊರಗೆ ಬರಲಿಲ್ಲ. ನಾನು ಓದಿದ್ದು ಬಿಜಾಪುರದಲ್ಲೇ. ಹೈಸ್ಕೂಲಿನವರೆಗೆ ಉರ್ದು ಮೀಡಿಯಂ. ಆಮೇಲೆ ಬಿ.ಎಸ್ಸಿ ಸಿಬಿಜಡ್ ಓದಿದೆ. ನನ್ನಿಬ್ಬರು ಸೋದರರು, ನಾಲ್ವರು ಸೋದರಿಯರು. ಪ್ರವಾದಿಯವರ ಹೇಳಿಕೆಯಂತೆ ನನ್ನ ತಾಯ್ತಂದೆಯರು ಮಕ್ಕಳೆಲ್ಲರಿಗೂ ಪದವಿ ಶಿಕ್ಷಣ ಕೊಡಿಸಿದರು. ಅಂಜುಮನ್ ಸಂಸ್ಥೆಯಲ್ಲಿ ಶಿಕ್ಷಕಿಯಾದೆ. ಬಿ.ಎಡ್ ಕಟ್ಟಿ ಎಲ್‌ಎಲ್‌ಬಿನೂ ಕಟ್ಟಿದೆ. ತಂದೆಗೆ ಅನಾರೋಗ್ಯವಾಗಿ ಓದು ಮುಂದುವರಿಯಲಿಲ್ಲ.

• ಈ ದಿಟ್ಟತನ, ರೂಢಿ ಮುರಿದು ಬದುಕುವಿಕೆ ಹೇಗೆ ಸಾಧ್ಯವಾಯಿತು?

ಮೊದಲಿಂದ ನಾನು 'ಒಂಥರಾ'. ತುಂಬ ಜಗಳಗಂಟಿ. ಎಷ್ಟು ನಗಿಸ್ತೀನೋ ಅಷ್ಟೇ ಹಠ ಹಿಡೀತಿದ್ದೆ. ನನಗಿಷ್ಟ ಬಂದಂತೆ ಮಾಡುತ್ತಿದ್ದೆ. ಬುರ್ಖಾ ತೊಡು, ತಲೆಗೆ ಬಟ್ಟೆ ಸುತ್ತಿಕೋ ಅಂತ ಅಮ್ಮ ಒತ್ತಾಯ ಮಾಡಿದರೂ ಕ್ಯಾರೇ ಅನ್ನಲಿಲ್ಲ. ಅಪ್ಪ ನನ್ನಿಷ್ಟದಂತೆ ಇರಲಿಕ್ಕೆ ಸಪೋರ್ಟ್ ಮಾಡಿದರು. ಕೋಎಜುಕೇಶನ್ ಕಾಲೇಜಿನಲ್ಲಿ ಓದಿದೆ. ಸ್ಟೂಡೆಂಟ್ಸ್ ಯೂನಿಯನ್ ಲೀಡರಾಗಿದ್ದೆ. ಯಾರಿಗೂ, ಯಾವುದಕ್ಕೂ ಹೆದರ್ತಾ ಇರಲಿಲ್ಲ. ನಾವು ಸರಿ ದಾರಿಯಲ್ಲಿರುವಾಗ ಯಾಕೆ ಹೆದರಬೇಕು? ಒಂದ್ಸಲ ಯಾರೋ ಹಿಂದಿನಿಂದ ಚುಡಾಯಿಸಿದ್ರು ಅಂತ ಲೂನಾ ನಿಲ್ಲಿಸಿ, ಚಪ್ಲಿ ತಗಂಡು ಹೊಡೆದು ಬಂದಿದೀನಿ. ಬಿಜಾಪುರದಲ್ಲಿ ಲೂನಾ ಓಡಿಸಿದ ಮೊದಲ ಹೆಣ್ಣುಮಗಳು ನಾನು.

• 1982ನೇ ಇಸವಿ ಬಗೆಗೆ ಹೇಳಿ.

ಏನಂತ ಹೇಳೋದು?! ಕೆಲವು ಹೆಣ್ಣುಮಕ್ಕಳಿಗೆ ಸಿನಿಮಾ ಹುಚ್ಚು ಹಿಡಿದಿತ್ತು. ಟಾಕೀಸಲ್ಲಿ ಪರ್ದಾ ಕಟ್ಟಿಸಿ, ಕದ್ದುಮುಚ್ಚಿ ಸೆಕೆಂಡ್ ಶೋಗೆ ಹೋಗೋರು. ಮಸಾಲೆ ಸಿನಿಮಾನೂ ನೋಡೋರು. ಸಿನಿಮಾ ಹರಾಂ. ಹೆಂಗಸರು ಸಿನಿಮಾ ನೋಡದಂತೆ ಬಿಗಿ ಮಾಡೋದು ಹೇಗಂತ ಕೆಲವರಿಗೆ ತಲೆಬಿಸಿಯಾಗಿಬಿಟ್ಟಿತ್ತು. ಆಗ 'ಲಾ ಖುದಾ' ಸಿನಿಮಾ ಲಕ್ಷ್ಮಿ ಥಿಯೇಟರಿಗೆ ಬಂತು. ಹೋದೆ. ಯಾರೋ ನಮ್ಮ ಜನರನ್ನ ಕರೆಸಿದರು. ಟಿಕೆಟ್ ಕೊಟ್ಟವನು ಬಂದು ಮನೆಗೋಗವ್ವ ಅಂತ ಕೈಮುಗಿದ. ನಾನು ಹೋಗಲಿಲ್ಲ. ಹೊರಗೆ ಗಲಾಟೆ ಶುರುವಾಯ್ತು. ಥಿಯೇಟರಿನ ಮ್ಯಾನೇಜರ್ ಬಂದು, 'ಮನೆಗೆ ಹೋಗರಿ ಮೇಡಂ' ಅಂತ ಕೈಮುಗಿದ. 'ನಾನು ಸಿನಿಮಾ ನೋಡಲಿಕ್ಕೆ ಟಿಕೆಟ್ ತಗೊಂಡಿದಿನಿ. ನೋಡೇ ನೋಡ್ತಿನಿ. ಅವ್ರು ಗಲಾಟೆ ಮಾಡ್ತಿದ್ರೆ ಪೊಲೀಸರನ್ನ ಕರೆಸಿ' ಅಂತ ಹಠ ಹಿಡಿದು ಸಿನಿಮಾ ನೋಡಿದೆ. ಹೊರಗೆ ಬಂದ್ರೆ ಗಲಾಟೆ. 'ಸಿನಿಮಾ ಕೆಟ್ಟದು, ನೋಡಬಾರ್ದು' ಅಂದರು. 'ಕೆಟ್ಟದಾದ್ರೆ ಮುಸ್ಲಿಂ ಗಂಡಸರೆಲ್ಲ ಸಿನಿಮಾ ನೋಡತಾರಲ್ಲ? ಹೀರೋ, ಹೀರೋಯಿನ್‌ಗಳಲ್ಲಿ ಎಷ್ಟೊಂದು ಜನ ಮುಸ್ಲಿಮರೇ ಇದಾರಲ್ವಾ?' ಅಂದೆ. 'ಉಲ್ಟಾ ಮಾತಾಡ್ಬೇಡ. ಥಿಯೇಟ್ರನ್ನೇ ಬಂದ್ ಮಾಡಸ್ತೀವಿ' ಅಂದ್ರು. 'ಕೆಟ್ಟದನ್ನೆಲ್ಲ ಬಂದ್ ಮಾಡ್ಸದಾದ್ರೆ ಮೊದ್ಲು ಹೆಂಡದ ಅಂಗ್ಡಿ ಬಂದ್ ಮಾಡ್ಸಿ' ಅಂದೆ. ಅವ್ರಿಗೆ ಕೆರಳೋಯ್ತು. 'ಮರ್ಯಾದಸ್ಥರ ಮನಯೊಳಗೆ ಕಾಣ್ತೀ. ಜಮಾತಿಂದ ಹೊರಗಾಕಿಸ್ತೀವಿ' ಅಂದ್ರು. ಗದ್ದಲ ಶುರುವಾಯ್ತು. ಪೋಲೀಸರೇ ನನ್ನನ್ನ ಮನೆಗೆ ಬಿಟ್ಟರು. ಮರುದಿನ ಶಾಲೆಗೆ ಹೋಗ್ಬೇಕು ಅಂತ ಹೊರಗೆ ಬಂದ್ರೆ, ಒಂದು ಪುಂಡರ ಗುಂಪೇ ಜಮಾಯಿಸಿದೆ! ಅಪ್ಪನಿಗೆ ಸಖತ್ ಸಿಟ್ಟು ಬಂತು. ಸ್ಟೇಷನ್ನಿಗೆ ಹೋದೆವು. ಪೊಲೀಸ್ ಕಾವಲು ಹಾಕಿದರು. ಶಾಲೆಗೆ ಹೋಗಕ್ಕೂ, ಬರಕ್ಕೂ ಜೊತೆಗೆ ಪೊಲೀಸರು.

• ಯಾರೂ ಬೆಂಬಲ ಕೊಡಲಿಲ್ವಾ?

ಕೊಟ್ಟಿದಾರೆ. ಈ ಘಟನೆ ಬಗ್ಗೆ ಎಲ್ಲಾ ಕಡೆ ಸುದ್ದಿ ಬಂತು. ಒಂದು ಕನ್ನಡ ಪೇಪರ್ ಇಡೀ ಪುಟ ಸುದ್ದಿ ಹಾಕಿದೆ. 'ಬಿಬಿಸಿ', 'ವಾಷಿಂಗ್ಟನ್ ಪೋಸ್ಟ್'ನಲ್ಲೂ ಸುದ್ದಿ ಬಂತು. ಒಂದು ಪತ್ರಿಕೇಲಿ, (ಲಂಕೇಶ್ ಪತ್ರಿಕೆ ಅನಿಸುತ್ತೆ), 'ಧರ್ಮದ ಗುತ್ತಿಗೆ ಹಿಡಿದ ಮೂಲಭೂತವಾದಿಗಳನ್ನು ಎದುರಿಸಿ, ತಾರತಮ್ಯ ಪ್ರತಿಭಟಿಸಿ, ಅವಿವಾಹಿತ ಯುವತಿ ಸಿನಿಮಾ ನೋಡಿ ಹೋರಾಟ ಮಾಡಿದಳು' ಅಂತ ಬರೆದುಬಿಟ್ಟಿದ್ರು. ಧರ್ಮನ ಎದುರು ಹಾಕ್ಕೊಳಲಿಕ್ಕೆ ಅಂತ ಸಿನಿಮಾ ನೋಡಿರಲಿಲ್ಲ. ನೋಡಬೇಕನಿಸಿ ನೋಡಿದ್ದೆ ಅಷ್ಟೆ. ಇದ್ದಕ್ಕಿದ್ದಂಗೆ ವಿಲನ್ ಆಗಿಬಿಟ್ಟಿದ್ದೆ.

• ಕೆಲಸ ಮಾಡಕ್ಕೆ ಕಷ್ಟವಾಗಲಿಲ್ವಾ?

ಹೆಜ್ಜೆಹೆಜ್ಜೆಗೂ ಕಷ್ಟ ಆಯ್ತು. ವಸ್ತ್ರಸಂಹಿತೆ ಬೇರೆ ಅನುಸರಿಸ್ತಾ ಇರಲಿಲ್ಲವಲ್ಲ. ಮಕ್ಕಳನ್ನು ನನ್ನ ವಿರುದ್ಧ ಎತ್ತಿಕಟ್ಟಿ ಸಸ್ಪೆಂಡ್ ಮಾಡಿದರು. ಒಂದೇ ತಿಂಗಳಲ್ಲಿ ಖುದ್ದು ಪ್ರಧಾನಿಯೇ ಸಸ್ಪೆನ್ಶನ್ ರದ್ದುಗೊಳಿಸಿದರು. ಆದರೆ ಇಲ್ಲಿಂದ ಅಲ್ಲಿಗೆ, ಅಲ್ಲಿಂದ ಇಲ್ಲಿಗೆ ಫುಟ್ಬಾಲಿನಂತೆ ಓಡಾಡಿದೆ. ಪಾಠ ಮಾಡಕ್ಕೆ ತರಗತಿಗಳನ್ನೇ ಕೊಡಲಿಲ್ಲ. ಸಂಬಳ ಬರಲಿಲ್ಲ. ಪದೇಪದೇ, ರಾತ್ರೋರಾತ್ರಿ ಮನೆಯ ನೀರಿನ ಪೈಪ್ ಯಾರೋ ಒಡೀತಿದ್ದರು. ಅಷ್ಟಾದರೂ 12 ವರ್ಷ ಕೆಲಸ ಮಾಡಿ ಕೊನೆಗೆ ವಿಆರೆಸ್ ತಗೊಂಡೆ.

ನಜ್ಮಾ ಬಾಂಗಿ

• ಪ್ರೀತಿ, ಪ್ರೇಮ, ಮದುವೆ ಅಂತೆಲ್ಲ..

ನೋ ನೋ ನೋ. ಇಷ್ಟು ಜೋರಿರೋ ಹೆಂಗ್ಸನ್ನ ಯಾವ ಗಂಡಸಾದ್ರೂ ಲವ್ ಮಾಡ್ತಾನಾ? ಮನೆಯಲ್ಲಿ ಮದುವೆಯ ಮಾತಿರ್ತಿತ್ತು. ಅಕ್ಕಂದಿರ, ಅಣ್ಣಂದಿರ ಮದುವೆ ಆಗಿತ್ತು. ನಾನು ಮಾತ್ರ ಗಟ್ಟಿಯಾಗಿ 'ಒಲ್ಲೆ' ಅಂದೆ. 'ಮದುವೆಯಾಗಿ ಬಾಳೆಲ್ಲ ಗುಲಾಮಗಿರಿ ಮಾಡಕ್ಕೆ ಸಾಧ್ಯನೇ ಇಲ್ಲ. ನನ್ನಿಷ್ಟದಂತೆ ಇರೋಕೆ ಬಿಡೋವಂತಾ ಗಂಡು ಸಿಕ್ಕರಷ್ಟೇ ಮದುವೆ' ಅಂದೆ. ಅದು ಅಸಾಧ್ಯ ಅಂತ ಮನೆಯವರು ಸುಮ್ಮನಾದ್ರು.

• ಕೆಲಸವಿಲ್ಲದೇ ಮನೆಯಲ್ಲಿರಲು ಬೇಸರ ಆಗಲಿಲ್ಲವೆ?

ಬೇಸರ ಕಳೆಯಲಿಕ್ಕೆ ಒಂದೇಸಮ ಓದಿದೆ. ಮಹಿಳಾ ಸಂಘಟನೆಗಳಲ್ಲಿ ಸ್ವಲ್ಪ ಪಾಲ್ಗೊಂಡೆ. ಅಟ್ಟದಲ್ಲಿದ್ದ ಹಿರೀಕರ ದಫ್ತರಗಳನ್ನು ತೆಗೆದೆ. ನನ್ನೊಬ್ಬ ಹಿರೀಕರು ಹಕೀಮರಾಗಿದ್ದರು. ಅವರ ಹಕೀಮತಿಯ ಪುಸ್ತಕಗಳನ್ನ ಓದಿ ಔಷಧ ಕೊಡಲಿಕ್ಕೆ ಶುರು ಮಾಡಿದೆ. ಮನೆಯ ತಾಪತ್ರಯ ಹೇಳಿಕೊಂಡು ಬಂದವರಿಗೆ ಧೈರ್ಯ ಹೇಳಿ ತಾಯಿತ ಮಾಡಿಕೊಟ್ಟೆ.

• ಅಂದು ಬುರ್ಖಾ ತೊಡದೇ ಇದ್ದದ್ದನ್ನು ಸಮಾಜ ಸಹಿಸಿತೇ?

ಅವತ್ತು ಬಾಳ ಜನ ಬುರ್ಖಾ ಹಾಕ್ತಾ ಇರಲಿಲ್ಲ. ಅದನ್ನು ಕಂಪಲ್ಸರಿ ಅಂತ ಎಲ್ಲೂ ಹೇಳಿಲ್ಲ. ದೇಹವನ್ನು ಸೆಕ್ಸಿ ಆಗಿ ತೋರಿಸದಂತೆ ಸಡಿಲ ಬಟ್ಟೆ ಹಾಕಬೇಕು ಎನ್ನುವುದು ಬುರ್ಖಾ ಹಿಂದಿದ್ದ ಉದ್ದೇಶ. ನಾನು ಎಂದಿಗೂ ಬುರ್ಖಾ ತೊಟ್ಟಿಲ್ಲ, ತೊಡುವುದೂ ಇಲ್ಲ. ನನ್ನ ಬಟ್ಟೆ ಎಷ್ಟು ಸಡಿಲ ಇದೆಯೆಂದರೆ ಇದೇ ಬುರ್ಖಾದಂತೆ ಕವರ್ ಮಾಡುತ್ತದೆ. ಹಿಜಾಬ್‌ನಾದ್ರೂ ಹಿಂದಿನಿಂದ ಎಳೆಯಬಹುದು. ಆದ್ರೆ ನನ್ನ ಬಾಬ್‌ಕಟ್ ಯಾರೂ ಎಳೆಯಲಿಕ್ಕಾಗಲ್ಲ. ಪರ್ಫೆಕ್ಟ್ ಅಲ್ವಾ

• ಇಸ್ಲಾಂನಲ್ಲಿ ಮಹಿಳೆಯರಿಗೆ ಸ್ವಾತಂತ್ರ್ಯವಿಲ್ಲ ಎನ್ನುತ್ತಾರಲ್ಲ?

ಇದೆ, ಆದರೆ ಅಪಾರ್ಥ ಮಾಡಿಕೊಂಡಿರೋದರಿಂದ ಕೆಲವೆಡೆ ಇಲ್ಲ. ಏನಿದೆ ಏನಿಲ್ಲ ಅಂತ ನಾವೇ ಓದಿ ಅರ್ಥ ಮಾಡ್ಕೋಬೇಕು. ಯಾರೋ ಹೇಳಿದ್ದನ್ನ ನಂಬಿ ಅನುಸರಿಸದೇ ಸ್ವತಃ ಯೋಚಿಸಿ ತಿಳಿದುಕೋಬೇಕು.

• ನೀವಿಬ್ರೇ ಮನೇಲಿದೀರ, ಭಯ ಅನಿಸಲ್ಲವೆ?

ಅನ್ಯಾಯ ಮಾಡಿದರಷ್ಟೇ ಭಯ ಪಡಬೇಕು. ನಾವು ಯಾರಿಗೂ ಅನ್ಯಾಯ ಮಾಡಿಲ್ಲ. ನಮಗ್ಯಾಕೆ ಭಯ? ಇರುವಷ್ಟು ದಿನ, ಯಾರಿಗೂ ತೊಂದರೆ ಕೊಡದೆ, ಆಸೆ ಪಡದೆ, ನಾಲ್ಕು ಜನರ ಕಣ್ಣೀರು ಒರೆಸಿ ಕೊನೆಗೆ ನಡೆದುಬಿಡೋದು.

ಏನೆನ್ನುವುದು?: ಮದುವೆಯೆಂಬ ಆತ್ಯಂತಿಕ ಹೆಣ್ಣು ಗುರಿಯನ್ನು ಮುಟ್ಟಲೊಲ್ಲದೆ ಏಕಾಂಗಿಯಾಗಿ, ಸಂತೋಷವಾಗಿ ಬದುಕುವ ಹೆಣ್ಣುಗಳ ಬಗೆಗೆ ಸಮಾಜಕ್ಕೆ ತೀವ್ರ ಅಸಡ್ಡೆಯಿರುತ್ತದೆ. ಸಣ್ಣ ಕಾರಣ ಸಿಕ್ಕರೂ ಅವರ ಬಗೆಗೆ ನೂರೊಂದು ಕತೆಗಳು ಹುಟ್ಟಿಕೊಳ್ಳುತ್ತವೆ. ಅಂಥ ಎಲ್ಲ ಕೇಳಬಾರದ್ದನ್ನು ಕೇಳಿಯೂ ತನ್ನಿಷ್ಟದಂತೆ ಬದುಕಿ ತೋರಿಸುತ್ತಿರುವ ಅಪರೂಪದ ಮಹಿಳೆ ನಜ್ಮಾರ ಪ್ರತಿದಿನವೂ ಹೋರಾಟದ ಗಾಥೆಯೇ. ಅಷ್ಟಾದರೂ ರಾಜಕಾರಣದ ಪ್ರತಿ ಆಗುಹೋಗುಗಳ ಬಗೆಗೂ ಅಪ್‌ಡೇಟ್ ಆಗಿದ್ದಾರೆ. ತಮ್ಮನ್ನೇ ತಾವು ಲೇವಡಿ ಮಾಡಿಕೊಳ್ಳುತ್ತಾರೆ. ಅವರ ದೇಹಭಾಷೆಯಲ್ಲಿ ತುಂಟತನ, ನಗೆಚಾಟಿಕೆ, ಮುಕ್ತ ಅಭಿವ್ಯಕ್ತಿ ಹಾಸುಹೊಕ್ಕಾಗಿವೆ. ಮನೆಯೆದುರಿನ ಒಂಟಿಮರದ ಹಾಗೆ ದೃಢವಾಗಿ, ಚಲನಶೀಲವಾಗಿ ಬದುಕಿರುವ ಅವರ ಸರಳ, ನಿರ್ಭೀತ ನಡವಳಿಕೆ ಘನತೆಯ ಬದುಕಿಗೊಂದು ಮಾದರಿಯಾಗಿದೆ. ❖

ಮೊದಲ ಓದು

ಮಹಿಳಾ ಅಧ್ಯಯನದ ನೆನಪಿನ ಸುರುಳಿ

ಸ್ವಾತಂತ್ರ್ಯಪೂರ್ವ ಮತ್ತು ನಂತರದ ಕಾಲಘಟ್ಟಗಳಲ್ಲಿ ದೇಶದ ಮಹಿಳಾ ಚಳವಳಿಯ ಸ್ಥಿತ್ಯಂತರಗಳಿಗೆ ನೇರವಾಗಿ ಸಾಕ್ಷಿಯಾದವರಲ್ಲಿ ವೀಣಾ ಮಜುಂದಾರ್ ಪ್ರಮುಖರು. ಸ್ವಾತಂತ್ರ್ಯ ಚಳವಳಿಯಲ್ಲಿ ಗಳಿಸಿದ ಹಕ್ಕುಗಳನ್ನು ಗಟ್ಟಿಗೊಳಿಸಲು ನಡೆದ ಭಾರತದ ಮಹಿಳಾ ಚಳವಳಿಯ ಭಾಗವಾಗಿ ಇದ್ದುಕೊಂಡೇ ಮಹಿಳಾ ಅಧ್ಯಯನದ ಮೂಲಸೆಲೆಯಾಗಿ ಗುರುತಿಸಿಕೊಂಡವರು ಅವರು. ಪಶ್ಚಿಮ ಬಂಗಾಳದ ಮಧ್ಯಮ ವರ್ಗದಲ್ಲಿ ಜನಿಸಿ, ರಾಜ್ಯಶಾಸ್ತ್ರದ ಅಧ್ಯಾಪಕಿಯಾಗಿ, ಯುಜಿಸಿಯಲ್ಲಿ ಉನ್ನತ ಶಿಕ್ಷಣದ ಯೋಜನೆಗಳಿಗೆ ಸಾಂಸ್ಥಿಕ ನೀತಿ ನಿಯಮ ರೂಪಿಸುವ ಅಧಿಕಾರಶಾಹಿಯ ಭಾಗವಾಗುವವರೆಗಿನ ಅವರ ಬದುಕೇ ಅಧ್ಯಯನಾಸಕ್ತರಿಗೆ ಒಂದು ಮಾದರಿ.

'ಭಾರತದ ಮಹಿಳಾ ಚಳವಳಿಯ ದಾಖಲಾತಿದಾರಳು ನಾನು' ಎಂದು ತಮ್ಮನ್ನು ಕರೆದುಕೊಳ್ಳುವ ವೀಣಾ, ತಮ್ಮ 83ನೇ ವರ್ಷದಲ್ಲಿ ಆತ್ಮಕಥನ 'ಮೆಮೊರೀಸ್ ಆಫ್ ಎ ರೋಲಿಂಗ್ ಸ್ಟೋನ್' ಹೊರತರುತ್ತಾರೆ. ಅದನ್ನೀಗ 'ಉರುಳುವ ಕಲ್ಲಿನ ನೆನಪಿನ ಸುರುಳಿ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ ಸಾಹಿತಿ ಡಾ. ಎನ್. ಗಾಯತ್ರಿ.

ದಶಕಗಳ ಹೋರಾಟದ ಬಳಿಕವೂ ಸಮಾನತೆ ಎಂಬುದು ಮರೀಚಿಕೆಯೇ ಆಗಿರುವ ಈ ಹೊತ್ತಿನಲ್ಲಿ, ಅಂತಹದ್ದೊಂದು ಹೋರಾಟಕ್ಕೆ ಪುನರ್ ಚಾಲನೆ ನೀಡುವ ದಿಸೆಯಲ್ಲಿ ಈ ಪುಸ್ತಕದ ಓದು ಅರ್ಥಪೂರ್ಣ ಎನಿಸುತ್ತದೆ. ಮಹಿಳಾ ಅಧ್ಯಯನಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಇರುವ ದಾಖಲೆಗಳ ಕೊರತೆಯನ್ನು ನೀಗಿಸುವ ದೃಷ್ಟಿಯಿಂದಲೂ ಈ ಪುಸ್ತಕ ಸಕಾಲಿಕವಾಗಿದೆ. ❖



ಪು: 268
₹320

ಉರುಳುವ ಕಲ್ಲಿನ ನೆನಪಿನ ಸುರುಳಿ
ಲೇ: ವೀಣಾ ಮಜುಂದಾರ್,
ಅನುವಾದ: ಡಾ.ಎನ್. ಗಾಯತ್ರಿ
ಪ್ರ: ಕ್ರಿಯಾ ಮಾಧ್ಯಮ ಪ್ರೈವೇಟ್ ಲಿಮಿಟೆಡ್
ಸಂ: 9036082005

ಮನುಷ್ಯತ್ವಕ್ಕೆ ಮುಖ ಮಾಡುವ ಬರಹಗಳು



ಪು: 112
₹100

ಮನುಷ್ಯ ಜಾತಿ ತಾನೊಂದೆ ವಲಂ
ಲೇ:ಬರಗೂರು ರಾಮಚಂದ್ರಪ್ಪ
ಪ್ರ:ಜನ ಪ್ರಕಾಶನ
ಸಂ: 9632329955

'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಪ್ರಸಿದ್ಧ ನುಡಿಯನ್ನೇ ಶೀರ್ಷಿಕೆಯಾಗಿ ಹೊಂದಿರುವ ಬರಗೂರರ ನೂತನ ಕೃತಿ ಮನುಷ್ಯ ಧರ್ಮವನ್ನು ತಿಳಿಸಿಕೊಡುವ ಕಿರು ಲೇಖನಗಳ ಸಂಗ್ರಹ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಮಾತು ಸಾರ್ವಕಾಲಿಕ ಆದರ್ಶವಾದ ಒಂದು ಮೌಲ್ಯವೇ ಆಗಿದೆ. ಧರ್ಮಕ್ಕೊಂದು ಕಾವ್ಯ, ರಾಜಕಾರಣಕ್ಕೊಂದು ಕಾವ್ಯವನ್ನು ಕಟ್ಟಿಕೊಟ್ಟ ಪಂಪ, ಧರ್ಮ ಮತ್ತು ರಾಜಕಾರಣಗಳನ್ನು ಬೆರೆಸಬಾರದೆಂಬ ಆದರ್ಶವನ್ನು ತನ್ನ ಕಾವ್ಯಾಭಿವ್ಯಕ್ತಿಯ ವಿಂಗಡನೆಯ ವಿಧಾನದಲ್ಲೇ ಅನುಷ್ಠಾನಕ್ಕೆ ತಂದಿದ್ದಾನೆ' ಎಂದು ಬರಗೂರರು ಲೇಖಕರ ನುಡಿಯಲ್ಲೇ ಹೇಳುತ್ತಾರೆ.

ಕೃತಿಯಲ್ಲಿ ಒಟ್ಟು 15 ಲೇಖನಗಳಿವೆ. 'ಬೇರೆ ಬೇರೆ ಸಂದರ್ಭದಲ್ಲಿ ಬರೆದ ಲೇಖನಗಳಿವು' ಎಂಬುದನ್ನು ಲೇಖಕರು ಪ್ರಾರಂಭದಲ್ಲಿಯೇ ಹೇಳುತ್ತಾರೆ. 'ಮನುಷ್ಯರು ಬೇಕಾಗಿದ್ದಾರೆ, ಹುಡುಕೋಣ ಬನ್ನಿ' ಎಂಬ ಮೊದಲ ಲೇಖನದಲ್ಲಿ, ದೇವರು ಮತ್ತು ಮನುಷ್ಯರ ಸಂಬಂಧವನ್ನು ನಿರ್ವಚಿಸುವ ಮತ್ತು ಪ್ರತ್ಯೇಕಿಸುವ ಚಿಂತನಾ ಪರಂಪರೆಯುಳ್ಳ ದೇಶದಲ್ಲಿ ಮನುಷ್ಯರು ಮೂಲೆಗುಂಪಾಗುತ್ತಿರುವ ಕುರಿತಾಗಿನ ಕಳಕಳಿ ಕಾಣುತ್ತದೆ. ದೇಹ ರಾಜಕಾರಣದ ದಾಳವಾಗಿ ಮಹಿಳೆ ಶೋಷಿತಳಾಗುತ್ತಿರುವ ಕುರಿತಾದ ಕಳಕಳಿಯೊಂದು ಕೃತಿಯಲ್ಲಿ ಕಾಣಿಸುತ್ತದೆ. ದ್ವೇಷದಿಂದ ಮುಕ್ತ ದೇಶದ ಕನಸು ಕೃತಿಯಲ್ಲಿ ಕಾಣುತ್ತದೆ. ಒಟ್ಟಾರೆಯಾಗಿ ಜಾತಿ, ಧರ್ಮ, ದೇವರು, ಆಚರಣೆಗಳಿಂದಾಗಿ ಮರೆಯಾಗುತ್ತಿರುವ ಮಾನವೀಯತೆಯ ಕುರಿತಾದ ಕಳಕಳಿ ಇಡೀ ಕೃತಿಯಲ್ಲಿ ಅಭಿವ್ಯಕ್ತವಾಗಿದೆ. ಬರಗೂರರ ಆಳವಾದ ಚಿಂತನೆ, ಸುಲಲಿತ ಬರವಣಿಗೆ, ಗಟ್ಟಿಯಾದ ಆಶಯ ಅವರೆಲ್ಲ ಕೃತಿಗಳಂತೆ ಇದರಲ್ಲಿಯೂ ಗಟ್ಟಿಯಾಗಿದೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

1. ಇಲ್ಲಿ ಕೊಟ್ಟಿರುವ ಒಂಭತ್ತು ವೃತ್ತಗಳಲ್ಲಿ ಮೂರು 7, ಮೂರು 8 ಹಾಗೂ ಮೂರು 9ಗಳನ್ನು ತುಂಬಿ ಕೆಳಗಿನ 999 ಉತ್ತರಕ್ಕೆ ಸರಿಯಾಗುವಂತೆ ಒಂದು ಸಂಕಲನ ಲೆಕ್ಕ ರಚಿಸಬಲ್ಲಿರಾ?

⑦ ⑦ ⑦ ⑧ ⑧ ⑧ ⑨ ⑨ ⑨

			○
+			○
		○	○
		○	○
	○	○	○
	9	9	9

2. ಚಿಕ್ಕಲೆಕ್ಕ: ಮರಳಿ ಮೂಲ ಸಂಖ್ಯೆಗೆ

153 ಇದೊಂದು ಸ್ವಾರಸ್ಯಕರ ಸಂಖ್ಯೆ

ಈ ಸಂಖ್ಯೆಯ ಎಲ್ಲ ಅಂಕಿಗಳನ್ನು ಸ್ಥಾನಬಂಧದಿಂದ ಬೇರ್ಪಡಿಸಿ ಪ್ರತಿ ಅಂಕಿಗೂ ಮೂರನೆ ಘಾತಕ್ಕೆ ಏರಿಸಿ ಅವುಗಳನ್ನು ವಿಸ್ತರಿಸಿ ಕೂಡಿಸಿದರೆ ಮತ್ತೆ ಮೂಲ ಸಂಖ್ಯೆ 153ಕ್ಕೆ ಬರುತ್ತದೆ.

ಹೀಗೆ: 153

$1^3+5^3+3^3$

$= 1+125+27$

$= 153$

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಎರಡು ಅಕ್ಷರಗಳಿಗೆ ಪಕ್ಕದಲ್ಲಿ ನೀಡಲಾದ ಸುಳಿವು ಆಧರಿಸಿ ನಾಲ್ಕು ಅಕ್ಷರಗಳ ಅರ್ಥಬದ್ಧ ಪದ ರಚಿಸಿ

1			ಯೋ	ಗ	ಯೋಗದಿಂದಾದ ಪ್ರಯೋಜನ
2			ಬಿ	ಡಿ	ಬಿಡಿ ಎಂದಾಗ ಮಾಡಿದ ಅವಸರ
3			ಮಿ	ಡಿ	ಮಿಡಿ ಹರಿದಾಗ ಉಂಟಾದ ಸಿಟ್ಟು
4			ಗಿ	ರಿ	ಗಿರಿಯಲ್ಲಿ ಮಾಡಿದ ಬಂಧನ
5			ವಾ	ರ	ವಾರಕ್ಕೊಮ್ಮೆ ಬರುವ ಅಕ್ಕಸಾಲಿಗ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಪದಪಟ್ಟಿಯಿಂದ ಸೂಕ್ತವಾದ ಎರಡು ಪದಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟ ಅಕ್ಷರಗಳ ಆಚೆ-ಈಚೆ ಜೋಡಿಸಿದರೆ ಮತ್ತೊಂದು ಐದಕ್ಷರದ ಅರ್ಥಬದ್ಧ ಪದವಾಗುತ್ತದೆ. ಯಾವ ಅಕ್ಷರಕ್ಕೆ ಯಾವ ಪದಗಳು ಹೊಂದಿಸಿರಿ

ಸರ	ಗಜ	ಮನೆ	ಹಣ್ಣು
ಕರ	ಗಾನ	ರಣ	ಹರಿ
ದಾರ	ಗರ	ನೇರ	ಸರಿ
ಹಯ	ಕರಿ	ಉಪ	ಬನ
ಗೌರಿ	ಗಣ	ದನ	ರಾಜು

1		ಳೆ	
2		ಬ	
3		ಶಂ	
4		ವ	
5		ಡಿ	
6		ಕೇ	
7		ಶಂ	
8		ಲ	
9		ಕ	
10		ತಿ	

ನಿಮ್ಮ ಪದ ಸಂಪತ್ತಿಗೆ ಸವಾಲ್

ಇಲ್ಲಿ ಕೊಟ್ಟಿರುವ ಮಧ್ಯದ ಒಂದಕ್ಷರ-ಒತ್ತಕ್ಷರಕ್ಕೆ ಹಿಂದೊಂದು ಮುಂದೊಂದು ಒತ್ತಕ್ಷರ ಸೇರಿಸಿ ಮೂರು ಒತ್ತಕ್ಷರ ಪದ ರಚಿಸಬಲ್ಲಿರಾ?

1		ಹ್ಮಾ	
2		ತ್ಯಾ	
3		ತ್ಯ	
4		ತ್ಸಂ	
5		ಹ್ಮ	
6		ದ್ಧಾ	
7		ಹ್ಮೇಂ	
8		ಶ್ನಾ	
9		ತ್ಕ	
10		ಕೃ	

ಡಶ್ಗು ಚಕ್ಕು ಕೇಳ್ರಪ್ಪ ಕಥೆಯ | ಮೊಟ್ಟೆಯಲ್ಲ ಚೆಂಡು!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಅದಲು ಬದಲು ಕಂಚಿ ಕದಲು...

ಇಲ್ಲಿ ಕೊಟ್ಟಿರುವ ಪದದ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ

1. ಸತಿ ಸಾರಲು = ____________
2. ರಮಣನ ಜನ = ____________
3. ಗುಳಿಗೆ ಮಾಡಿ = ____________
4. ಗಣಿ ತಜ್ಞ = ____________

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ:
1.ಆಕ್ರಮಣ 2.ಕೋಸಂಬರಿ 3.ಕನಿಕರ 4.ಸರಾಸರಿ 5.ಕಳಕಳಿ

ಅದಲು ಬದಲು ಕಂಚಿ ಕದಲು:
1.ಹಾಸ್ಯದರಸ 2.ಪಾಟಿಕವಚ 3.ದಡಾನಬಿಡಿ 4.ರಮಾಮನವಿ

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಅಕ್ಷರ ಎಂ. ಎಸ್.
ಮೈಸೂರು

ಆಯುಷ್.ಎಂ.ಎನ್, ಕೊಪ್ಪಳ

ಪ್ರತೀಕ್ಷಾ ಜೋಯ್ಸ್
ಆನಂದಪುರ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ)

2022-23 ಸಾಲಿನ ಎಸ್.ಎಸ್.ಎಲ್ ಸಿ ಪರೀಕ್ಷೆಯಲ್ಲಿ ಸಾಧನೆಗೈದ ವಿದ್ಯಾರ್ಥಿಗಳು

3 ಬಾರಿ 625/625 ಪಡೆದ ರಾಜ್ಯದ ಏಕೈಕ ಶಾಲೆ

|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ ||

SINCE 1992

ಶ್ರೀ ರಾಮಕೃಷ್ಣ ವಿದ್ಯಾನಿಕೇತನ (ರಿ) ವಸತಿ ಶಾಲೆ , ಗೋಪಾಳ , ಶಿವಮೊಗ್ಗ

ಸತತವಾಗಿ 17 ನೇ ಬಾರಿ 100% ಫಲಿತಾಂಶ ನೀಡಿ, 2022-23 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು

ದಿಶಾ ಶೆಣೈ 620 / 625

ರೋಹಿಣಿ ಬಿ 620 / 625

ವಿಷಯವಾರು 100ಕ್ಕೆ 100 ಅಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ

ಕನ್ನಡ	-	20
ಇಂಗ್ಲೀಷ್	-	11
ಹಿಂದಿ	-	09
ಸಂಸ್ಕೃತ	-	04
ಗಣಿತ	-	05
ವಿಜ್ಞಾನ	-	05
ಸಮಾಜ ವಿಜ್ಞಾನ	-	04

9845560531 , 9480109422 , 9035937423 www.sriramakrishnagurukula.in @sri_ramakrishna_vidyaniketana

ವಿಷಯವಾರು 100ಕ್ಕೆ 100 ಅಂಕ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ

ಕನ್ನಡ	-	03
ಹಿಂದಿ	-	03
ಗಣಿತ	-	01

ಶ್ರೇಣಿ : A+ - 25 , A - 30 , B+ - 06

|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ ||

ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ.)

SINCE 1992

ಶ್ರೀ ರಾಮಕೃಷ್ಣ ಗುರುಕುಲ ವಸತಿ ಶಾಲೆ , ಅನುಪಿನಕಟ್ಟೆ, ಶಿವಮೊಗ್ಗ

2022-23 ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು

ದಿಶಾಂತ್ ಸಭಾವಟ್ 605 / 625

ಚೇತನ್ ಕುಮಾರ್ ಕೆ ವಿ 601 / 625



Office Number : 9148795602

9845560531 , 9480109422 , 9035937423 , 9113057071 www.sriramakrishnagurukula.in @sri_ramakrishna_vidyaniketana

|| ಹರಿ ಓಂ ತತ್ಸತ್ ಓಂ ಶ್ರೀ ರಾಮಕೃಷ್ಣಾಯತೇ ನಮಃ ||

Since 1992

ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ.)

ಶ್ರೀ ರಾಮಕೃಷ್ಣ ಗುರುಕುಲ ಆಂಗ್ಲ ಮಾಧ್ಯಮ ವಸತಿ ಶಾಲೆ ಹಾಲ್ಕುಣೆ ಜೋಡಿ.

2022 - 23ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು

ಸುನೈನಾ ಎಸ್ 577/625

8970879298 , 9108473548 , 9845560531 , 8073900563

Since 1992

ಶ್ರೀ ರಾಮಕೃಷ್ಣ ವಿದ್ಯಾಶ್ರಮ ಟ್ರಸ್ಟ್ (ರಿ)

ಶ್ರೀ ರಾಮಕೃಷ್ಣ ಆಂಗ್ಲ ಮಾಧ್ಯಮ ಪ್ರೌಢಶಾಲೆ

ಬಿ.ಆರ್.ವಿ ಮಾಡೆಲ್ ಸ್ಕೂಲ್, ತ್ಯಾಗರಾಜನಗರ , ಶೃಂಗೇರಿ

100% Result

2022 - 23ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅದ್ವಿತೀಯ ಸಾಧನೆಗೈದ ವಿದ್ಯಾರ್ಥಿಗಳು

ರಜತ್ . ಡಿ 573/625

8722636866 , 9845560531 , 8073900563

ADMISSIONS OPEN !!

LKG TO 10TH STD

ACROSS ALL BRANCHES

ಪ್ರವೇಶ ಪ್ರಾರಂಭವಾಗಿದೆ

9845560531 , 8073900563 , 9035937423

ಈ ಅತ್ಯುತ್ತಮ ಫಲಿತಾಂಶಕ್ಕೆ ಸಹಕರಿಸಿದ ವಿದ್ಯಾರ್ಥಿಗಳಿಗೆ, ಪೋಷಕರಿಗೆ ಮತ್ತು ಶಿಕ್ಷಕ ವೃಂದದವರಿಗೆ ಆಡಳಿತ ಮಂಡಳಿಯ ಅಭಿನಂದನೆಗಳು.

ಎರಡು ತಿಂಗಳಲ್ಲಿ ಎರಡನೇ ಚಿನ್ನ ಗೆದ್ದ ಓಜಸ್– ಜ್ಯೋತಿ ಜೋಡಿ

ವಿಶ್ವಕಪ್ ಆರ್ಚರಿ: ಪ್ರಥಮೇಶ್‌ಗೆ ಚಿನ್ನ

ಶಾಂಘೈ (ಪಿಟಿಐ): ಹದಿಹರೆಯದ ಬಿಲ್ಗಾರ ಪ್ರಥಮೇಶ್ ಜಾವಕರ್ ವೃತ್ತಿ ಜೀವನದ ದೊಡ್ಡ ಅನಿರೀಕ್ಷಿತ ಫಲಿತಾಂಶದಲ್ಲಿ ವಿಶ್ವದ ಅಗ್ರಮಾನ್ಯ ಗುರಿಕಾರ, ನೆದರ್ಲೆಂಡ್ಸ್‌ನ ಮೈಕ್ ಸ್ಲೊಸೆರ್ ಅವರನ್ನು ಸೋಲಿಸಿ ವಿಶ್ವಕಪ್ ಸ್ಟೇಜ್ 2 ಆರ್ಚರಿಯ ವೈಯಕ್ತಿಕ ಕಾಂಪೌಂಡ್ ವಿಭಾಗದಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡರು. ಇದು ಪ್ರಥಮೇಶ್‌ಗೆ ವಿಶ್ವಕಪ್‌ನಲ್ಲಿ ಪ್ರಥಮ ಚಿನ್ನ.

ಇನ್ನೊಂದೆಡೆ, ಯಶಸ್ಸಿನ ಓಟವನ್ನು ಮುಂದುವರಿಸಿದ ಓಜಸ್ ದೇವತಾಳೆ ಮತ್ತು ಜ್ಯೋತಿ ಸುರೇಖಾ ವೆಣ್ಣಂ ಜೋಡಿ ಸತತ ಎರಡನೇ ವಿಶ್ವ ಕಪ್‌ನಲ್ಲೂ ಚಿನ್ನದ ಪದಕ ಗೆದ್ದುಕೊಂಡಿತು. ಕಾಂಪೌಂಡ್ ಮಿಕ್ಸೆಡ್ ಡಬಲ್ಸ್ ಫೈನಲ್‌ನಲ್ಲಿ ಇವರಿಬ್ಬರು, ಅಗ್ರ ಶ್ರೇಯಾಂಕದ ದಕ್ಷಿಣ ಕೊರಿಯಾ ಸ್ಪರ್ಧಿಗಳನ್ನು ಅಚ್ಚರಿಯ ರೀತಿಯಲ್ಲಿ ಸೋಲಿಸಿದರು.

ಮಹಾರಾಷ್ಟ್ರದ ಬುಲ್ಡಾಣಾದ ಪ್ರಥಮೇಶ್ ಬಾಣ ಪ್ರಯೋಗದಲ್ಲಿ ಅಮೋಘ ಪ್ರದರ್ಶನ ನೀಡಿದರು. ಕೊರಿಯಾದ ಕಿಮ್ ಜೊಂಘೊ ಮತ್ತು ಚೊಯ್ ಯೊಂಗಿ ಅವರನ್ನು ಸೋಲಿಸಿದ್ದ ಭಾರತದ ಬಿಲ್ಗಾರ ಫೈನಲ್‌ನಲ್ಲಿ ಡಚ್ ಸ್ಪರ್ಧಿಯನ್ನು 149–148 ಅಂತರದಿಂದ ಸೋಲಿಸಿದರು. 15 ಬಾಣಗಳ ಪ್ರಯೋಗದಲ್ಲಿ ಒಮ್ಮೆ ಮಾತ್ರ 19 ವರ್ಷದ ಭಾರತದ ಸ್ಪರ್ಧಿ ಗುರಿ ತಪ್ಪಿದರು. ಮೊದಲ ನಾಲ್ಕು ಎಂಡ್‌ಗಳಲ್ಲಿ ಇಬ್ಬರೂ ಸಮನಾಗಿಯೇ ಸಾಗಿದ್ದರು. ಅಂತಿಮ ಎಂಡ್‌ನಲ್ಲಿ ಸ್ಲೊಸೆರ್ ಎಡವಿದರು.

ಪ್ರಥಮೇಶ್ –ಎಸ್‌ಎಐ ಟ್ವಿಟರ್ ಚಿತ್ರ

ಟರ್ಕಿಯ ಅಂಟಾಲ್ಯದಲ್ಲಿ ತಿಂಗಳ ಹಿಂದೆ ನಡೆದ ವಿಶ್ವಕಪ್ ಸ್ಟೇಜ್ 1ನಲ್ಲೂ ಓಜಸ್– ಜ್ಯೋತಿ ಚಿನ್ನದ ಪದಕ ಕೊರಳಿಗೆ ಹಾಕಿಕೊಂಡಿತ್ತು. ಮಹಾರಾಷ್ಟ್ರದ ಓಜಸ್ ಮತ್ತು ಆಂಧ್ರದ ಜ್ಯೋತಿ ಜೋಡಿ ತೀವ್ರ ಹೋರಾಟದ ಫೈನಲ್‌ನಲ್ಲಿ 156–155 ರಿಂದ ಅಗ್ರ ಶ್ರೇಯಾಂಕದ ಕಿಮ್ ಜೊಂಘೊ ಮತ್ತು ಓಹ್ ಯೂಹ್ಯಿನ್ ಜೋಡಿಯ ಮೇಲೆ ಜಯಗಳಿಸಿತು.

ಆದರೆ ಒಲಿಂಪಿಕ್ಸ್‌ನಲ್ಲಿ ಕಾಂಪೌಂಡ್ ವಿಭಾಗದ ಸ್ಪರ್ಧೆಗಳು ನಡೆಯುವುದಿಲ್ಲ. ರಿಕರ್ವ್ ವಿಭಾಗದ ಸ್ಪರ್ಧೆಗಳು ನಡೆಯುತ್ತವೆ.

‘ವಿಶ್ವ ಕಪ್ ಉದ್ದಕ್ಕೂ ನಮ್ಮ ಸಮನ್ವಯತೆ ಮತ್ತು ಶೂಟಿಂಗ್ ವೈಖರಿ ಅತ್ಯುತ್ತಮ ಮಟ್ಟದಲ್ಲಿತ್ತು. ಫೈನಲ್‌ನಲ್ಲೂ ನಮ್ಮ ಗುರಿ ತಪ್ಪದಂತೆ ಎಚ್ಚರ ವಹಿಸಿದೆವು’ ಎಂದು ವಿಜಯವಾಡದ ಜ್ಯೋತಿ ಹೇಳಿದರು.ಅಂಟಾಲ್ಯದಲ್ಲಿ ನಡೆದ ಮೊದಲ ಸ್ಟೇಜ್‌ನ ವೈಯಕ್ತಿಕ ವಿಭಾಗದಲ್ಲೂ ಜ್ಯೋತಿ ಅವರು ಚಿನ್ನದ ಪದಕ ಗೆದ್ದುಕೊಂಡಿದ್ದರು.

ಇನ್ನು ಎರಡು ತಿಂಗಳಲ್ಲಿ ಬರ್ಲಿನ್‌ನಲ್ಲಿ ನಡೆಯಲಿರುವ ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲೂ ಜ್ಯೋತಿ ಚಿನ್ನದ ಪದಕ ಗೆಲ್ಲುವ ದೊಡ್ಡ ಕನಸನ್ನು ಹೊಂದಿದ್ದಾರೆ. ‘ವಿಶ್ವ ಚಾಂಪಿಯನ್‌ಷಿಪ್ ನಮ್ಮ ಪಾಲಿಗೆ ಮಹತ್ವಪೂರ್ಣವದುದು. ಚಿನ್ನ ಗೆಲ್ಲುವುದು ನಮ್ಮ ವಿಶ್ವಾಸವನ್ನು ವೃದ್ಧಿಸಲಿದೆ. ಇದೇ ವೇಗ ಮುಂದುವರಿಸಲು ಕಾತರರಾಗಿದ್ದೇವೆ’ ಎಂದು ಜ್ಯೋತಿ ಹೇಳಿದರು.

ವಿಶ್ವ ಟೆನ್‌ ಕೆ ಓಟ: ಕೂಟ ದಾಖಲೆ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘ ಅಂತರದ ಓಟದಲ್ಲಿ ಪ್ರಾಬಲ್ಯ ಹೊಂದಿರುವ ಆಫ್ರಿಕಾದ ಅಥ್ಲೀಟ್‌ಗಳು ಭಾನುವಾರ ಇಲ್ಲಿ ನಡೆಯಲಿರುವ ಟಿಸಿಎಸ್ ವಿಶ್ವ ಟೆನ್‌ ಕೆ ಓಟದಲ್ಲಿ ಹೊಸ ಕೂಟ ದಾಖಲೆ ಸ್ಥಾಪಿಸುವ ವಿಶ್ವಾಸದಲ್ಲಿದ್ದಾರೆ.

ಉದ್ಯಾನನಗರಿಯಲ್ಲಿ ಚೊಚ್ಚಲ ಟೆನ್‌ ಕೆ ಓಟ 2008 ರಲ್ಲಿ ನಡೆದಿತ್ತು. ಅಲ್ಲಿಂದ ಇಲ್ಲಿಯವರೆಗೆ ನಡೆದಿರುವ 13 ಆವೃತ್ತಿಗಳಲ್ಲಿ ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಮೊದಲ ಮೂರು ಸ್ಥಾನಗಳಿಗೆ ಕೆನ್ಯಾ, ಇಥಿಯೋಪಿಯಾ ಮತ್ತು ಉಗಾಂಡದ ಸ್ಪರ್ಧಿಗಳ ನಡುವೆಯೇ ಪೈಪೋಟಿ ನಡೆದಿದೆ.

ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಈ ಬಾರಿ ಕೆನ್ಯಾದ 13 ಮತ್ತು ಇಥಿಯೋಪಿಯದ 16 ಅಥ್ಲೀಟ್‌ಗಳು ಕಣದಲ್ಲಿದ್ದಾರೆ. ಇಲ್ಲಿನ ಕೂಟ ದಾಖಲೆ ಕೆನ್ಯಾದ ನಿಕೋಲಸ್ ಕಿಪ್ಕೊರಿರ್ ಕಿಮೆಲಿ ಹೆಸರಲ್ಲಿದೆ. ಕಳೆದ ವರ್ಷ ಅವರು 27 ನಿಮಿಷ, 38 ಸೆಕೆಂಡುಗಳಲ್ಲಿ ಗುರಿ ಸಾಧಿಸಿ ಹೊಸ ದಾಖಲೆಯೊಂದಿಗೆ ಅಗ್ರಸ್ಥಾನ ಪಡೆದುಕೊಂಡಿದ್ದರು. ಮಹಿಳೆಯರ ವಿಭಾಗದ ದಾಖಲೆಯನ್ನು 30 ನಿಮಿಷ 35 ಸೆ.ಗಳಲ್ಲಿ ಗುರಿ ತಲುಪಿದ ಕೆನ್ಯಾದ ಐರಿನ್ ಚೆಪ್ಟಾಯ್ ಅವರು ಹೊಂದಿದ್ದಾರೆ. ಎರಡೂ ಕೂಟ ದಾಖಲೆಗಳು ಕಳೆದ ವರ್ಷ ಮೂಡಿಬಂದಿದ್ದವು.

ನಿಕೋಲಸ್ ಕಿಪ್ಕೊರಿರ್ ಕಿಮೆಲಿ

ಕಳೆದ ಕೆಲದಿನಗಳಲ್ಲಿ ಬಿಸಿಲಿನಿಂದ ನಗರದ ತಾಪಮಾನ ಹೆಚ್ಚಿತ್ತು. ಶನಿವಾರ ಸಂಜೆ ಉತ್ತಮ ಮಳೆಯಾಗಿದ್ದರಿಂದ ತಾಪಮಾನ ಅಲ್ಪ ಇಳಿಕೆಯಾಗಿದೆ. ಇದರಿಂದ ಅಥ್ಲೀಟ್‌ಗಳಿಗೆ ಹಿತಕರ ವಾತಾವರಣದಲ್ಲಿ ಓಡುವ ಅವಕಾಶ ಲಭಿಸಿದೆ.

₹ 21.55 ಲಕ್ಷ ನಗದು ಬಹುಮಾನ: ಪುರುಷರ ಮತ್ತು ಮಹಿಳೆಯರ ವಿಭಾಗಗಳಲ್ಲಿ ಚಾಂಪಿಯನ್ ಆಗುವವರು ತಲಾ ₹ 21.55 ಲಕ್ಷ ನಗದು ಬಹುಮಾನ ಪಡೆಯಲಿದ್ದಾರೆ. ಹೊಸ ಕೂಟ ದಾಖಲೆ ಸ್ಥಾಪಿಸಿದರೆ ಬೋನಸ್ ರೂಪದಲ್ಲಿ ₹ 6.6 ಲಕ್ಷ ಲಭಿಸಲಿದೆ. ಹೆಚ್ಚಿನ ಬಹುಮಾನ ಮೊತ್ತ ಕೂಡಾ ಓಟಗಾರರಿಗೆ ಉತ್ತಮ ಪ್ರದರ್ಶನ ನೀಡುವಂತೆ ಉತ್ತೇಜಿಸಲಿದೆ.

ಭಾರತದ ಸ್ಪರ್ಧಿಗಳಲ್ಲಿ ಪುರುಷರ ವಿಭಾಗದಲ್ಲಿ ಮುರಳಿ ಕುಮಾರ್ ಮತ್ತು ಉತ್ತಮ್ ಚಾಂದ್ ಅವರು ಆಕರ್ಷಣೆಯಾಗಿದ್ದಾರೆ. ಪ್ರವೀಣ್, ಹರ್ಮನ್‌ಜೋತ್ ಸಿಂಗ್ ಮತ್ತು ಕಿರಣ್ ಮಾತ್ರೆ ಅವರೂ ಕಣದಲ್ಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಪ್ರೀನು ಯಾದವ್, ಪ್ರೀತಿ ಲಂಬಾ ಮತ್ತು ಕವಿತಾ ಯಾದವ್ ಅವರ ನಡುವೆ ಪೈಪೋಟಿ ಏರ್ಪಡುವ ಸಾಧ್ಯತೆಯಿದೆ.

ಎಲೀಟ್ ವಿಭಾಗದಲ್ಲಿ 98 ವೃತ್ತಿಪರ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ. ಓಪನ್ ಟೆನ್‌ ಕೆ, ಅಂಗವಿಕಲರು, ಹಾಗೂ ಹಿರಿಯ ನಾಗರಿಕರು ಮತ್ತು ಮಜಾ ರನ್ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಒಟ್ಟು 27 ಸಾವಿರ ಮಂದಿ ಭಾಗವಹಿಸಲಿದ್ದಾರೆ. ಮಕ್ಕಳಿಂದ ಹಿಡಿದು, 90 ವರ್ಷದ ಹಿರಿಯರು ಕೂಡಾ ಹೆಸರು ನೋಂದಾಯಿಸಿದ್ದಾರೆ.

ಸ್ಟೀಪಲ್‌ಚೇಸ್ ಪಾರುಲ್‌ಗೆ ಅಗ್ರಸ್ಥಾನ

ನ್ಯೂಯಾರ್ಕ್ (ಪಿಟಿಐ): ಭಾರತದ ಪಾರುಲ್ ಚೌಧರಿ, ನ್ಯೂಯಾರ್ಕ್‌ನಲ್ಲಿ ನಡೆದ ಟ್ರ್ಯಾಕ್ ನೈಟ್ ಅಥ್ಲೆಟಿಕ್ ಕೂಟದ ಮಹಿಳೆಯರ 3,000 ಮೀ. ಸ್ಟೀಪಲ್‌ಚೇಸ್ ಓಟದಲ್ಲಿ ಅಗ್ರಸ್ಥಾನ ಪಡೆದಿದ್ದಾರೆ. ಇದು ಈ ಋತುವಿನಲ್ಲಿ ಅವರ ಮೊದಲ ಪ್ರಶಸ್ತಿ. ಪ್ರಸ್ತುತ ಅಮೆರಿಕದಲ್ಲಿ ತರಬೇತಿ ಪಡೆಯುತ್ತಿರುವ 28 ವರ್ಷದ ಪಾರುಲ್ 9ನಿ.41.88 ಸೆ.ಗಳಲ್ಲಿ ಕ್ರಮಿಸಿದರು. ಇದು ಅವರ ಶ್ರೇಷ್ಠ ವೈಯಕ್ತಿಕ ಸಾಧನೆಗಿಂತ (9ನಿ.38.09 ಸೆ.) ಮೂರು ಸೆಕೆಂಡು ಹೆಚ್ಚು. ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಈ ಕಾಲಾವಧಿ ದಾಖಲಿಸಿದ್ದರು.

ಖಾಪ್‌ಗಳ ನಿರ್ಧಾರ ಕಠಿಣವಾಗಬಹುದು: ಕುಸ್ತಿಪಟು ವಿನೇಶಾ ಫೋಗಟ್ ಎಚ್ಚರಿಕೆ

ನವದೆಹಲಿ (ಪಿಟಿಐ): ಲೈಂಗಿಕ ಕಿರುಕುಳ ಪ್ರಕರಣದ ಆರೋಪಿ, ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಕ್ರಮ ಕೈಗೊಳ್ಳುವಲ್ಲಿ ನಿಷ್ಕ್ರಿಯತೆ ಪ್ರತಿಭಟಿಸಿ ಭಾನುವಾರ ಕೈಗೊಳ್ಳಲಿರುವ ನಿರ್ಧಾರವು ದೇಶದ ಹಿತಾಸಕ್ತಿಗೆ ಪೂರಕವಾಗದೇ ಹೋಗಬಹುದು ಎಂದು ಧರಣಿನಿರತ ಕುಸ್ತಿಪಟುಗಳು ಎಚ್ಚರಿಸಿದ್ದಾರೆ.

ಪ್ರತಿಭಟನೆಯ ಮುಂದಿನ ಸ್ವರೂಪ ಹೇಗಿರಬೇಕೆಂಬುದನ್ನು ಖಾಪ್ ಪಂಚಾಯತ್ ನಿರ್ಧಾರಕ್ಕೆ ಕೈಬಿಡಲು ಪೈಲ್ವಾನರು ನಿರ್ಧರಿಸಿದ್ದು, ಮೇ 21ರ ಗಡುವನ್ನು ವಿಧಿಸಿದ್ದಾರೆ.

ಏ. 23ರಿಂದ ಕುಸ್ತಿಪಟುಗಳು ಜಂತರ್ ಮಂಥರ್‌ನಲ್ಲಿ ಧರಣಿ ನಡೆಸುತ್ತಿದ್ದಾರೆ. ಒಬ್ಬ ಬಾಲಕಿ ಸೇರಿದಂತೆ ಏಳು ಮಂದಿ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಪೈಲ್ವಾನರು ಬ್ರಿಜ್ ಭೂಷಣ್ ವಿರುದ್ಧ ಆರೋಪ ಮಾಡಿದ್ದಾರೆ.

ವಿನೇಶಾ ಫೋಗಟ್

‘ದೆಹಲಿಯಲ್ಲಿ ಕಳೆದ ವರ್ಷ ನಡೆದ ರೈತರ ಪ್ರತಿಭಟನೆಯ ರೀತಿಯಲ್ಲೇ ಖಾಪ್‌ಗಳು ಹೋರಾಟದ ನಿರ್ಧಾರ ಕೈಗೊಳ್ಳಬಹುದು ಎಂದು ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತೆ ವಿನೇಶಾ ಫೋಗಟ್ ತಿಳಿಸಿದರು. ರೈತರ ಹೋರಾಟ ಸುಮಾರು 13 ತಿಂಗಳ ಕಾಲ ನಡೆದಿತ್ತು.

‘ಭಾನುವಾರ ನಮ್ಮ ಹಿರಿಯರು ಕೈಗೊಳ್ಳುವ ನಿರ್ಧಾರ ದೊಡ್ಡ ಪ್ರಮಾಣದಲ್ಲಿರಬಹುದು. ಅದು ದೇಶದ ಹಿತಾಸಕ್ತಿಗೆ ಗಾಸಿಯನ್ನು ಉಂಟುಮಾಡಲೂಬಹುದು’ ಎಂದು ವಿನೇಶಾ ಅವರು ಜಂತರ್ ಮಂಥರ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಬಜರಂಗ್ ಪೂನಿಯಾ ಮಾತನಾಡಿ, ಕುಸ್ತಿಪಟುಗಳ ಯಾತನೆಯ ಬಗ್ಗೆ ಅರಿವು ಮೂಡಿಸಲು ಮೇ 23ರಂದು ಇಂಡಿಯಾ ಗೇಟ್‌ನಲ್ಲಿ ಮೊಂಬತ್ತಿ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮಹಿಳಾ ಹಾಕಿ: ಭಾರತಕ್ಕೆ ಮತ್ತೆ ಸೋಲು

ಅಡಿಲೇಡ್ (ಪಿಟಿಐ): ಭಾರತ ಮಹಿಳಾ ತಂಡದವರು ಆಸ್ಟ್ರೇಲಿಯಾ ವಿರುದ್ಧದ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ಪ್ರಬಲ ಹೋರಾಟ ನಡೆಸಿದರೂ, 2–3 ಗೋಲುಗಳಿಂದ ಸೋತರು.

ಶನಿವಾರ ನಡೆದ ಪಂದ್ಯದಲ್ಲಿ ಟಾಟಮ್ ಸ್ಟಿವರ್ಟ್ (12 ಮತ್ತು 45ನೇ ನಿ.) ಅವರು ಆತಿಥೇಯ ತಂಡಕ್ಕೆ ಎರಡು ಗೋಲುಗಳನ್ನು ತಂದಿತ್ತರೆ, ಮತ್ತೊಂದು ಗೋಲನ್ನು ಪಿಪಾ ಮಾರ್ಗನ್ (38ನೇ ನಿ.) ಗಳಿಸಿದರು. ಭಾರತದ ಪರ ಸಂಗೀತಾ ಕುಮಾರಿ (13) ಮತ್ತು ಗುರ್ಜಿತ್ ಕೌರ್ (17) ಅವರು ಚೆಂಡನ್ನು ಗುರಿ ಸೇರಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೂರನೇ ಸ್ಥಾನದಲ್ಲಿರುವ ಆಸ್ಟ್ರೇಲಿಯಾ ತಂಡ ಈ ಗೆಲುವಿನ ಮೂಲಕ ಮೂರು ಪಂದ್ಯಗಳ ಸರಣಿಯಲ್ಲಿ 2–0 ಯಿಂದ ಮುನ್ನಡೆ ಸಾಧಿಸಿದೆ. ರ‍್ಯಾಂಕಿಂಗ್‌ನಲ್ಲಿ 8ನೇ ಸ್ಥಾನದಲ್ಲಿರುವ ಭಾರತ ತಂಡ, ಮೊದಲ ಪಂದ್ಯವನ್ನು 2–4 ಗೋಲುಗಳಿಂದ ಸೋತಿತ್ತು.

ಬೆಂಗಳೂರು ರೇಸ್

ಎಲ್ವೆನೋರ್ ಗೆಲ್ಲುವ ನಿರೀಕ್ಷೆ

ವಾರ್ ಹ್ಯಾಮರ್ ಮಿಲಿಯನ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಲ್ವೆನೋರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಬೈ ದಿ ಬುಕ್ 5, ರೊರಿಟೊ 3. ಡಲ್ಲಾಸ್ ಡ್ರಿಫ್ಟರ್ 1
2ನೇ ರೇಸ್: ಪಾವರೊಟ್ಟಿ 1, ಎಂಪೈರ್ ಆಫ್ ಡ್ರೀಮ್ಸ್ 2, ಮೆರೂನ್ 7
3ನೇ ರೇಸ್: ನೆಜಿಯಾ 9, ರಾಯಲ್ ಮೈಸೂರು 3, ಸಸ್ಸಿ 10
4ನೇ ರೇಸ್: ಲಾಸ್ಟ್ ವಿಶ್ 2, ಡಿಸ್‌ರಪ್ಟರ್ 5, ಅಶ್ವಮಗಧೀರ 4
5ನೇ ರೇಸ್: ಎಲ್ವೆನೋರ್ 1, ಆಸ್ಪೀಶಿಯಸ್ ಕ್ವೀನ್ 3, ವೈಕಿಕಿ 2
6ನೇ ರೇಸ್: ಸೇಕ್ರೆಡ್ ಕ್ರಿಯೇಟರ್ 11, ಬೆಲ್ವೆಡಿರ್ 10, ಮಿಸ್ಟರ್ ಹಂಬಲ್ 9
7ನೇ ರೇಸ್: ಅಲ್ಸಿಡಸ್ ಸಿನರ್ಜಿ 3, ಅಗೆರಾ 2, ವೈಟ್ ರೋಸಸ್ 6

ಉತ್ತಮ ಬೆಟ್: ಅಲ್ಸಿಡಸ್ ಸಿನರ್ಜಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ಫವಾದ್‌ಗೆ ಕೊಕ್: ಸ್ಪಷ್ಟನೆ

ನವದೆಹಲಿ (ಪಿಟಿಐ): ಕನಿಷ್ಠ ಅರ್ಹತಾ ಮಾನದಂಡ (ಎಂಇಆರ್) ಪೂರೈಸದ ಕಾರಣ ಹೆಸರಾಂತ ಅಶ್ವಾರೋಹಿ ಪಟು ಫವಾದ್ ಮಿರ್ಜಾ ಅವರನ್ನು ಏಷ್ಯನ್ ಗೇಮ್ಸ್ ಸಂಭವನೀಯರ ಪಟ್ಟಿಯಲ್ಲಿ ಸೇರ್ಪಡೆ ಮಾಡಲಾಗಿಲ್ಲ ಎಂದು ಈಕ್ವೆಸ್ಟ್ರಿಯನ್ ಫೆಡರೇಷನ್ ಆಫ್ ಇಂಡಿಯಾ (ಇಎಫ್‌ಐ) ಶನಿವಾರ ಸ್ಪಷ್ಟಪಡಿಸಿದೆ.

‘ತಮ್ಮನ್ನು ಮಾನದಂಡಗಳಿಗೆ ಒಳಪಡಿಸದೇ ನೇರವಾಗಿ ಸಂಭವನೀಯರ ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ 31 ವರ್ಷದ ಮಿರ್ಜಾ ಕೇಳಿದ್ದರು. ಆದರೆ ನಾವು ನಿಯಮಗಳಿಗೆ ಬದ್ಧರಾಗಿದ್ದು, ನ್ಯಾಯಸಮ್ಮತವಾಗಿ ನಡೆದುಕೊಳ್ಳಬೇಕಾಗಿದೆ’ ಎಂದು ಇಎಫ್‌ಐ ಮಹಾ ಕಾರ್ಯದರ್ಶಿ ಕರ್ನಲ್ ಜೈವೀರ್ ಸಿಂಗ್ ಹೇಳಿದ್ದಾರೆ.

ಇಎಫ್‌ಐ ಮತ್ತು ಭಾರತ ಕ್ರೀಡಾ ಪ್ರಾಧಿಕಾರವನ್ನು ಸಂಪರ್ಕಿಸಿದ್ದನ್ನು ಸುದ್ದಿಸಂಸ್ಥೆಗೆ ಖಚಿತಪಡಿಸಿರುವ ಫವಾದ್, ‘ತಾವು ಈಗಾಗಲೇ ಹೆಸರು ಮಾಡಿದ್ದು, ಅರ್ಹತಾ ಮಾನದಂಡ ಪರಿಗಣಿಸದೇ ಪಟ್ಟಿಯಲ್ಲಿ ತಮ್ಮ ಸೇರ್ಪಡೆ ಮಾಡಿದರೆ ಅದು ಹಿಂಬಾಗಿಲ ಪ್ರವೇಶವಾಗುವುದಿಲ್ಲ’ ಎಂದಿದ್ದರು.

ಆಯ್ಕೆಯು ಹಿಂದಿನ ಪ್ರದರ್ಶನಗಳ ಆಧಾರದ ಮೇಲೆ ನಡೆಯಬಾರದು. ಪಟ್ಟಿ ದೊಡ್ಡದಿದ್ದು, ಟ್ರಯಲ್ಸ್ ನಡೆಸದೇ ಆಯ್ಕೆ ಮಾಡುವುದು ಸಾಕಷ್ಟು ಶ್ರಮ ಹಾಕಿರುವ ಇತರ ರೈಡರ್‌ಗಳ ದೃಷ್ಟಿಯಿಂದ ಸರಿ ಎನಿಸುವುದಿಲ್ಲ ಎಂದು ಜೈವೀರ್ ಅವರ ವಾದವಾಗಿದೆ.

ಸಂಕ್ಷಿಪ್ತ ಸುದ್ದಿಗಳು

ಅಜಿತ್‌ಪಾಲ್‌ಗೆ ಪತ್ನಿವಿಯೋಗ

ನವದೆಹಲಿ (ಪಿಟಿಐ): ಹಾಕಿ ದಂತಕತೆ ಅಜಿತ್ ಪಾಲ್ ಸಿಂಗ್ ಅವರ ಪತ್ನಿ ಕಿರಣ್ ಅಜಿತ್‌ಪಾಲ್ ಸಿಂಗ್ (69) ಅವರು ಅಲ್ಪಕಾಲದ ಅನಾರೋಗ್ಯದ ನಂತರ ಶುಕ್ರವಾರ ರಾತ್ರಿ ನಿಧನರಾದರು. ಕಿರಣ್ ಅವರು ರಾಷ್ಟ್ರ ಮಟ್ಟದ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಆಗಿದ್ದರು.

ಭಾನುವಾರ ಅಂತ್ಯಕ್ರಿಯೆ ನಡೆಯಲಿದೆ ಎಂದು ಅಜಿತ್ ಪಾಲ್ ಸಿಂಗ್ ತಿಳಿಸಿದ್ದಾರೆ. ಅಜಿತ್ ಪಾಲ್ 1975ರಲ್ಲಿ ವಿಶ್ವಕಪ್ ಹಾಕಿ ಪ್ರಶಸ್ತಿ ಗೆದ್ದ ಭಾರತ ತಂಡದ ನಾಯಕರಾಗಿದ್ದರು.

ನಿವೃತ್ತಿ ಪ್ರಕಟಿಸಿದ ಚೆನ್ ಲಾಂಗ್

ಬೀಜಿಂಗ್ (ಎಎಫ್‌ಪಿ): ಚೀನಾದ ಬ್ಯಾಡ್ಮಿಂಟನ್ ದಿಗ್ಗಜ ಚೆನ್ ಲಾಂಗ್ ಅವರು ಶನಿವಾರ ಕ್ರೀಡಾ ಬದುಕಿಗೆ ವಿದಾಯ ಘೋಷಿಸಿದ್ದಾರೆ. 34 ವರ್ಷದ ಚೆನ್ ಅವರು ಎರಡು ಬಾರಿ (2014 ಮತ್ತು 2015) ವಿಶ್ವ ಚಾಂಪಿಯನ್ ಆಗಿದ್ದರು.

2016 ರಿಯೊ ಒಲಿಂಪಿಕ್ಸ್‌ನಲ್ಲಿ ಸಿಂಗಲ್ಸ್ ಸ್ವರ್ಣ ಗೆದ್ದುಕೊಂಡಿದ್ದ ಚೆನ್ ಲಾಂಗ್, 2021ರಲ್ಲಿ ನಡೆದ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿಯ ಪದಕ ವಿಜೇತರಾಗಿದ್ದರು. ನಂತರ ಅವರು ಆಟದಿಂದ ದೂರವಾಗಿದ್ದರೂ, ಅಧಿಕೃತವಾಗಿ ವಿದಾಯ ಘೋಷಿಸಿರಲಿಲ್ಲ. 2012ರ ಲಂಡನ್ ಒಲಿಂಪಿಕ್ಸ್‌ನಲ್ಲಿ ಅವರು ಕಂಚಿನ ಪದಕ ಪಡೆದಿದ್ದರು.



ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

Grand Flea Market Presents

ಬೆಂಗಳೂರು ಉತ್ಸವ

Bengaluru Utsava

Art, Craft, Handloom & Lifestyle Exhibition

Date:

19th May 2023 to 28th May 2023

Timings: 11:00 AM to 7:00 PM

(10 Days Exhibition)

Art & Craft | Handicraft | Clothings

Fashion Accessories | Home Decor & More

Live Performance Details

Puppet Show Live
21st May 2023, Sunday
Timing: 5 PM - 6:30 PM

The Shadow Show Live
27th May 2023, Saturday
Timing: 5.30 PM - 7 PM

Chandamelam Live
28th May 2023, Sunday
Timing: 5 PM - 6:30 PM

Venue: Karnataka Chitrakala Parishath, Kumara Krupa Road, Bengaluru

Contact : 6364685716 / 9036658774

100+ Shopping Stalls | Live Performance | 10 Days Exhibition | Free Entry

PRM/KA/RERA/1250/307/PR/191213/003061
NPA/L.A.O.57/2016-17

laksh PROPERTIES expect the best

SIRIMANE SERENITY

ಎಲೈಟ್ ವರ್ಗಕ್ಕೆ

ಸೊಗಸಾದ ಯೋಜನೆ

35ಕ್ಕೂ ಹೆಚ್ಚಿನ ಆಧುನಿಕ ಮತ್ತು ಲಕ್ಷುರಿ ಸೌಲಭ್ಯಗಳು

ಕಡಿಮೆ ವೆಚ್ಚದ ಗ್ರಾಹಕ ಸ್ನೇಹಿ ಹೂಡಿಕೆ

Ready for Registration & Construction

NH-4 ಡಿ-ಮಾರ್ಟ್ ನಿಂದ ಕೇವಲ 900 ಮೀಟರ್ ಅಂತರದಲ್ಲಿ.

ನೆಲಮಂಗಲ, ಬೆಂಗಳೂರು

Scan QR code for Walk-through Video

BMRDA RERA APPROVED

ಎಲ್ಲಾ ಪ್ರಮುಖ ಬ್ಯಾಂಕ್‌ಗಳಿಂದ ಸಾಲ ಲಭ್ಯವಿದೆ

BOOK NOW

Scan QR code for Location

More information call us +91 90719 94529

www.lakshproperties.com VISIT OUR WEBSITE

SREE SENIOR HOMES

Stage IV: RERA Reg. No.: PRM/KA/RERA/1267/375/PR/210302/003973

Sharadindu

The Finest, award-winning Retirement Commune

Thonnuru Road, Pandavapura (close to Mysuru)

Stage IV – the last block now open for booking.

Spacious, stand-alone low-rise apartments costing

RS. 46,35,500/-

including one car-parking slot.

(GST and other statutory and legal expenses, floor-rise not included)

Limited Fabulous Offer

Get 5%- 15% discount*.

*Terms and conditions apply. Contact Sree Senior Homes for details

When it comes to services, Sharadindu combines excellence with economy

Central veg kitchen & dining | House Keeping | On-site Clinic | 24x7 Water and Power | 24x7 security under CCTV surveillance | Club House

Office: Sree Senior Homes
S-615, Manipal Centre,
47, Dickenson Road, Bengaluru - 560042
Ph: 080-4212 7041, 4853 2606
www.sreeseniorhomes.in

Call : +91 99000 31256/99000 31257

Email: sales@sreeseniorhomes.in

Project Approved By: भारतीय स्टेट बैंक State Bank of India, LIC HFL

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಕ್ಲಾಸಿಫೈಡ್ಸ್ PROPERTY CORNER

